ಇಂದಿನ ಹವಾಮಾನ

ದಕ್ಷಿಣ ಕನ್ನಡ 27⁰ 24⁰ | ಉಡುಪಿ 27⁰ 25⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 29, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಕಟೀಲು ಶಾಲೆಯ ಮಕ್ಕಳಿಗಾಗಿ ದಾಸರ ಪದ ಗಾಯನ ತರಬೇತಿ



ಪುಟ 5

ಕೇಂದ್ರದ ಯೋಜನೆಗೆ ರಾಜ್ಯ ಸರ್ಕಾರ ವಿರೋಧ: ಅಶ್ವಿನಿ

ತುಂಬಿ ತುಳುಕುವ ಪ್ರಯಾಣಿಕರು | ಹೆಚ್ಚುವರಿ ಬಸ್‌ಗೆ ಹೆಚ್ಚಿದ ಬೇಡಿಕೆ

ಪೀಕ್ ಅವರ್ ಪೀಕಲಾಟ!

ಒಂದೇ ಬಸ್‌ನಲ್ಲಿ 150 ಮಂದಿ | ಎಚ್ಚರ ತಪ್ಪಿದರೆ ಬದುಕು ಚಿಂದಿ







ಸಂಗಮ ವಿಶೇಷ

ಬಂಟ್ವಾಳ: ಈ ಚಿತ್ರಗಳು ಬಿ.ಸಿ. ರೋಡಿನಲ್ಲಿ ಬೆಳಗ್ಗೆ ಸಂಜೆ ಪೀಕ್ ಅವರ್‌ನಲ್ಲಿ ಕಂಡುಬರುವ ದೃಶ್ಯಗಳು.. ಸರಕಾರ ಶಕ್ತಿ ಯೋಜನೆಯಲ್ಲಿ ಮಹಿಳೆಯರು ಸೇರಿದಂತೆ ವಿದ್ಯಾರ್ಥಿನಿ, ವಿದ್ಯಾರ್ಥಿಗಳಿಗೂ ಉಚಿತ ಪ್ರಯಾಣ ವ್ಯವಸ್ಥೆಯ ಪರಿಣಾಮ ಪ್ರತಿಯೊಂದು ಕೆಎಸ್ಸಾರ್ಟಿಸಿ ಬಸ್‌ಗಳು ತುಂಬಿ ತುಳುಕುತ್ತದೆ.

ಹಾಗಂತ ಶಕ್ತಿಯೋಜನೆ ಜಾರಿಯಲ್ಲಿ ಇಲ್ಲದಿದ್ದಾಗ ಟಿಕೆಟ್ ಪಡೆದೆ ಸಂಚರಿಸುವಾಗ ಮಂಗಳೂರು– ಧರ್ಮಸ್ಥಳ– ಪುತ್ತೂರು ರೂಟ್‌ನಲ್ಲಿ ಸಂಚರಿಸುವ ಕೆಎಸ್ಸಾರ್ಟಿಸಿ ಬಸ್‌ನಲ್ಲಿ ಇಂತಹ ಸ್ಥಿತಿ ಇರಲಿಲ್ಲವೇ ಎಂದು ಯಾರಾದರೂ ಭಾವಿಸಿದ್ದರೆ ಅದು ತಪ್ಪು. ಹಿಂದೆಯೂ ಈ ಸ್ಥಿತಿ ಇತ್ತು.. ಈಗಂತು ಒಂದಿಷ್ಟು ಜಾಸ್ತಿಯೇ ಆಗಿದೆ ಅಷ್ಟೆ!

ಶಕ್ತಿ ಯೋಜನೆಯಿಂದ ಸಂಖ್ಯೆ ಹೆಚ್ಚು

ಮಂಗಳೂರು– ಧರ್ಮಸ್ಥಳ– ಪುತ್ತೂರು– ಉಪ್ಪಿನಂಗಡಿ ಸಹಿತ ವಿವಿಧೆಡೆ ಸಾಕಷ್ಟು ಸಂಖ್ಯೆಯಲ್ಲಿ ಸರಕಾರಿ ಮಾತ್ರವಲ್ಲ ಖಾಸಗಿ ಬಸ್‌ಗಳು ಕೂಡಾ ಓಡಾಡುತ್ತಿದ್ದು, ಇದೀಗ ಸರಕಾರದ ಶಕ್ತಿಯೋಜನೆ ಜಾರಿಯಿಂದಾಗಿ ಮಹಿಳೆಯರು, ವಿದ್ಯಾರ್ಥಿ– ವಿದ್ಯಾರ್ಥಿನಿಯರು ಹೆಚ್ಚಾಗಿ ಸರಕಾರಿ ಬಸ್‌ನ್ನೇ ಅವಲಂಬಿಸುತ್ತಾರೆ. ಗಂಡಸರು, ಕೆಲ ಮಹಿಳೆಯರ ಸಹಿತ ತುರ್ತಾಗಿ ತೆರಳುವವರು ಖಾಸಗಿ ಸಿಸಿ ಬಸ್‌ಗಳಲ್ಲೇ ಸಂಚರಿಸುತ್ತಾರೆ. ಈ ಪೈಕಿ ಮಂಗಳೂರು– ಧರ್ಮಸ್ಥಳ ರೂಟಿನಲ್ಲಿ ಕೆಎಸ್ಸಾರ್ಟಿಸಿ ಬಸ್ ಸಂಚಾರ ಮಾತ್ರ ಅತ್ಯಂತ ಕಳಪೆ ಪ್ರದರ್ಶನ!

ಬಸ್‌ನಲ್ಲಿ ಕಾಣಬಹುದು ನಿತ್ಯ ನೂಕುನುಗ್ಗಲು

ಬೆಳಗ್ಗಿನ ಹೊತ್ತು ಬಿ.ಸಿ. ರೋಡ್‌ನಿಂದ ಮಂಗಳೂರಿಗೆ ಸರಕಾರಿ ಬಸ್ಸಿನಲ್ಲಿ ಪ್ರಯಾಣಿಕರು ಮಧ್ಯೆ ಉಸಿರುಗಟ್ಟಿಕೊಂಡು, ಇಲ್ಲವೇ ನೇತಾಡಿಕೊಂಡು ಸಂಚರಿಸಬೇಕು. ಇದು ಪ್ರಯಾಣಿಕರ ನಿತ್ಯದ ಗೋಳು. ಬಸ್ ಹತ್ತಲು ನೂಕುನುಗ್ಗಲಿನ ದೃಶ್ಯವನ್ನು ಕಾಣಬಹುದಾಗಿದೆ. ಈ ಬಗ್ಗೆ ಕೆಎಸ್ಸಾರ್ಟಿಸಿ ಅಧಿಕಾರಿಗಳಿಗೆ ಅರಿವಿದ್ದರೂ ಹೆಚ್ಚವರಿ ಬಸ್ ಓಡಿಸುವ ಪ್ರಯತ್ನ ಮಾಡುತ್ತಿಲ್ಲ

ಇದು ಇಲ್ಲಿನ ದಶಕದ ಸಮಸ್ಯೆ

ಈ ರೂಟಿನಲ್ಲಿ ಕೆಎಸ್ಸಾರ್ಟಿಸಿ ಬಸ್ ಸಂಚಾರದ ಅವ್ಯವಸ್ಥೆ ಇವತ್ತು, ನಿನ್ನೆ ಹುಟ್ಟಿಕೊಂಡದ್ದಲ್ಲ. ದಶಕದ ಸಮಸ್ಯೆ, ಈ ರೂಟಿನಲ್ಲಿ ಕೆಎಸ್ಸಾರ್ಟಿಸಿ ಅಧಿಕಾರಿಗಳು ರಸ್ತೆಗಿಳಿದು ಸಮಸ್ಯೆಯ ವಾಸ್ತವಾಂಶ ಅರಿತುಕೊಂಡು ಸರಿಯಾಗಿ ಸಾರಿಗೆ ವ್ಯವಸ್ಥೆ ಕಲ್ಪಿಸಿದರೆ ಬಂಗಾರದ ಬಟ್ಟಲಲ್ಲಿ ಲಾಭ ಪಡೆಯಬಹುದಾಗಿದೆ. ಆದರೆ ಇಲ್ಲಿನ ಅಧಿಕಾರಿಗಳಿಗೆ ಇದು ಬೇಕಾಗಿಲ್ಲ ಎಂಬುದು ಈ ರೂಟಿನ ನಿತ್ಯ ಪ್ರಯಾಣಿಕರ ಅಭಿಪ್ರಾಯ. ಎಂಬುದೇ ದುರ್ದೈವದ ಸಂಗತಿ ಎಂದು ಸಾರ್ವಜನಿಕ ವಲಯದಿಂದ ದೂರು ಕೇಳಿಬರುತ್ತಿದೆ.

ಒಂದೇ ಬಸ್‌ನಲ್ಲಿ 100ಕ್ಕೂ ಅಧಿಕ ಪ್ರಯಾಣಿಕರು

ಬೆಳಗ್ಗೆ ಧರ್ಮಸ್ಥಳ ರೂಟ್‌ನಲ್ಲಿ ಮಂಗಳೂರಿಗೆ ಸಂಚರಿಸುವ ಬಸ್‌ನಲ್ಲಿ 150ಕ್ಕೂ ಅಧಿಕ ಪ್ರಯಾಣಿಕರಿರುತ್ತಾರೆ. 60 ರಿಂದ 70ರಷ್ಟು ಮಂದಿ ಪ್ರಯಾಣಿಕರು ಸಂಚರಿಸಬಹುದಾದ ಈ ಬಸ್‌ನಲ್ಲಿ ಅಕ್ಷರಶಃ ಕುರಿಗಳಂತೆ ಪ್ರತಿನಿತ್ಯ ಪ್ರಯಾಣಿಕರನ್ನು ಅನಿವಾರ್ಯವಾಗಿ ತುಂಬಿಸಿಕೊಂಡು ಸಂಚರಿಸುತ್ತಿದೆ. »ಪುಟ 3

ಗುಜರಿಯಾಗಿವೆ ಇಲ್ಲಿ ಓಡುವ ಹಲವು ಬಸ್‌ಗಳು

ಮಂಗಳೂರು- ಧರ್ಮಸ್ಥಳ ಟ್ರಿಪ್ ನಡೆಸುತ್ತಿರುವ ಅನೇಕ ಬಸ್ ಗಳು ತೀರಾ ಹಳೆಯದಾಗಿದ್ದು, ಕೆಲವೊಮ್ಮೆ ದಾರಿ ಮಧ್ಯೆ ಕೆಟ್ಟು ನಿಂತು ಪ್ರಯಾಣಿಕರು, ವಿದ್ಯಾರ್ಥಿಗಳು ಪರದಾಟ ನಡೆಸಲು ಕಾರಣವಾಗುತ್ತಿವೆ.ಈ ರೂಟಿನಲ್ಲಿ ಎಲ್ಲಾದರೂ ಒಂದೆಡೆ ಪ್ರತಿದಿನ ಎಂಬಂತೆ ಬಸ್ ಕೆಟ್ಟು ನಿಂತಿರುವುದನ್ನು ಕಾಣಬಹುದಾಗಿದೆ.

ಪ್ರಯಾಣಿಕರಿಗೆ ಕಾಡುತ್ತದೆ ಸಿಂಗಲ್ ಡೋರ್‌ನ ಸಮಸ್ಯೆ

ಮಂಗಳೂರು- ಧರ್ಮಸ್ಥಳ ರೂಟ್‌ನಲ್ಲಿ ಹೆಚ್ಚಾಗಿ ಸಿಂಗಲ್ ಡೋರ್ ಬಸ್‌ಗಳನ್ನು ಓಡಿಸಲಾಗುತ್ತಿದೆ. ಚಾಲಕ ಬಳಿ ನಿಂತಿದ್ದ ಪ್ರಯಾಣಿಕ ತಾನು ಇಳಿಯಬೇಕಾದ ಸ್ಥಳದಲ್ಲಿ ಇಳಿಯಬೇಕಾದರೆ 100ಕ್ಕೂ ಅಧಿಕ ಪ್ರಯಾಣಿಕರನ್ನು ದಾಟಿ ಬಾಗಿಲ ಬಳಿ ಬರಲು ಕನಿಷ್ಠ 10 ನಿಮಿಷ ತಗಲುತ್ತದೆ.ಅಷ್ಟರವರೆಗೆ ಎಲ್ಲಾ ಪ್ರಯಾಣಿಕರ ಸಮಯ ವ್ಯರ್ಥ, ನಿಗದಿತ ಸ್ಥಳಕ್ಕೆ ಅವರು ತಲುಪಬೇಕಾದಲ್ಲಿ ತಲುಪಲು ಸಾಧ್ಯವಾಗದ ಉದಾಹರಣೆಯು ಇದೆ.

ಸುತ್ತಮುತ್ತ

ಕರಾವಳಿಯಲ್ಲಿ ಮತ್ತೆ ಮುಂಗಾರು ಚುರುಕು: ಹಲವೆಡೆ ಉತ್ತಮ ಮಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸಹಿತ ಕರಾವಳಿ ಭಾಗದಲ್ಲಿ ಮುಂಗಾರು ಮತ್ತೆ ಒಂದಿಷ್ಟು ಚುರುಕಾಗಿದೆ. ಭಾನುವಾರ ವಿವಿಧ ಕಡೆಗಳಲ್ಲಿ ಮಳೆಯಾಗಿದ್ದು, ರೈತಾಪಿವರ್ಗದಲ್ಲಿ ಆಶಾಭಾವನೆ ಮೂಡಿಸಿದೆ. ಕಳೆದ ಕೆಲವು ದಿನಗಳಿಂದ ಸಂಪೂರ್ಣ ಮರೆಯಾಗಿದ್ದ ಮಳೆ ಎಲ್ಲೆಡೆ ಆತಂಕವನ್ನು ಹುಟ್ಟುಹಾಕಿತ್ತು. ಇದೀಗ ಚಿತ್ರಣ ಬದಲಾಗಿದ್ದು, ಸುರಿಯುತ್ತಿರುವ ಮಳೆ ವಾತಾವರಣದ ತಾಪಮಾನದಲ್ಲಿ ಕೂಡಾ ಇಳಿಕೆಗೆ ಕಾರಣವಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಅತೀ ಹೆಚ್ಚು ಮಳೆ ಪ್ರಮಾಣ

ಮಂಗಳೂರು: ಭಾನುವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ ಹಿಂದಿನ 24 ತಾಸುಗಳ ಅವಧಿಯಲ್ಲಿ ಕರಾವಳಿಯಲ್ಲೇ ಅತೀ ಹೆಚ್ಚು 4 ಸೆಂ.ಮೀ. ಮಳೆ ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ದಾಖಲಾಗಿದೆ.

ಎಲ್ಲೆಲ್ಲಿ ಎಷ್ಟೆಷ್ಟು ಮಳೆ?

ಇದೇ ಅವಧಿಯಲ್ಲಿ ಕೋಟದಲ್ಲಿ 2 ಸೆಂ.ಮೀ., ಬ್ರಹ್ಮಾವರ, ಉಡುಪಿ ನಗರ, ಕೊಡಗಿನ ಭಾಗಮಂಡಲ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ತಲಾ ಒಂದು ಸೆಂ.ಮೀ. ಮಳೆ ದಾಖಲಾಗಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಕೆಲವಡೆ ಇಂದು ಗಾಳಿ ಸಹಿತ ಭಾರೀ ಮಳೆ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವು ಕಡೆಗಳಲ್ಲಿ ಇಂದು ಗಂಟೆಗೆ 50 ಕಿಮೀ ವೇಗದ ಗಾಳಿಯ ಸಹಿತ ಕೆಲವೆಡೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಪಡುಕರೆಯಲ್ಲಿ ಕಿಡಿಗೇಡಿ ಕೃತ್ಯ | ಕಾನೂನು ಕ್ರಮಕ್ಕೆ ಆಗ್ರಹ

ಕಸದ ತೊಟ್ಟಿಯನ್ನೇ ಕಡಲಿಗೆ ಕಿತ್ತೆಸೆದರು

ಕೋಟ: ಇಲ್ಲಿನ ಮಣೂರು ಪಡುಕರೆಯ ಸಮುದ್ರ ತೀರದಲ್ಲಿ ಗೀತಾನಂದ ಫೌಂಡೇಶನ್ ಅಳವಡಿಸಿದ್ದ ಬೃಹತ್ ಗಾತ್ರದ ಕಸದತೊಟ್ಟಿಯನ್ನು ಕಿಡಿಗೇಡಿಗಳು ಕಿತ್ತು ಸಮುದ್ರಕ್ಕೆ ಎಸೆದಿರುವ ಘಟನೆ ಶನಿವಾರ ನಡೆದಿದೆ.

ಪ್ಲಾಸ್ಟಿಕ್ ಮುಕ್ತ ಬೀಚ್ ಉದ್ದೇಶವಿತ್ತು

ಪ್ಲಾಸ್ಟಿಕ್ ಮುಕ್ತ ಬೀಚ್ ನಿರ್ಮಿಸುವ ಉದ್ದೇಶದಿಂದ ಸುಮಾರು ಎರಡು ವರ್ಷಗಳ ಹಿಂದೆ ಇಲ್ಲಿನ ಕೋಟ ಗ್ರಾಮ ಪಂಚಾಯತ್ ಸಹಯೋಗದಲ್ಲಿ ಗೀತಾನಂದ ಫೌಂಡೇಶನ್ ಭೂಮಿ ಮಾದರಿಯಲ್ಲಿ ಈ ಬೃಹತ್ ಗಾತ್ರದ ಕಸದತೊಟ್ಟಿಯನ್ನು ಅಳವಡಿಸಿತ್ತು. ಈ ಕಸದತೊಟ್ಟಿ ಸ್ವಚ್ಛತೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಬೀಚ್‌ಗೆ ಆಗಮಿಸುವ ಪ್ರವಾಸಿಗರು, ಸ್ಥಳೀಯರಿಗೆ ಕಸ ವಿಲೇವಾರಿ ಮಾಡಲು ಅನುಕೂಲವಾಗಿತ್ತು. ಕಸದತೊಟ್ಟಿ ಅಳವಡಿಕೆ ಬಳಿಕ ಬೀಚ್ ಸುತ್ತ ಮುತ್ತ ಸ್ವಚ್ಛತೆ ಕಾಪಾಡಲ್ಪಟ್ಟಿತ್ತು. »ಪುಟ 3



ಕಾನೂನು ಕ್ರಮಕ್ಕೆ ಆಗ್ರಹ

ಕಿಡಿಗೇಡಿಗಳ ಈ ದುಷ್ಕೃತ್ಯವನ್ನು ಗೀತಾನಂದ ಫೌಂಡೇಶನ್ ಸೇರಿದಂತೆ ಇಲ್ಲಿನ ವಿವಿಧ ಪರಿಸರ ಸಂಘಟನೆಗಳು ತೀವ್ರವಾಗಿ ಖಂಡಿಸಿವೆ. ತಪ್ಪಿತಸ್ಥರನ್ನು ಶೀಘ್ರ ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳುವಂತೆ ಸ್ಥಳೀಯ ಆಡಳಿತ ಹಾಗೂ ಪೊಲೀಸರಿಗೆ ಆಗ್ರಹಿಸಿವೆ.

ಬೀಚ್ ಅಭಿವೃದ್ಧಿಗೆ ‘ಗೀತಾನಂದ’ ಕೊಡುಗೆ

ಇಲ್ಲಿನ ಪಡುಕರೆ ಬೀಚ್ ಅನ್ನು ಮಾದರಿ ಪ್ರವಾಸಿ ತಾಣವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಗೀತಾನಂದ ಫೌಂಡೇಶನ್ ಕಳೆದ ಹಲವು ವರ್ಷಗಳಿಂದ ನಿರಂತರವಾಗಿ ಸ್ವಚ್ಛತಾ ಅಭಿಯಾನಗಳನ್ನು ನಡೆಸುತ್ತಿದೆ. ಕಡಲ ತೀರದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಬೆಂಚ್‌ಗಳು, ಕಸದ ತೊಟ್ಟಿಗಳು ಸೇರಿದಂತೆ ಪ್ರವಾಸಿಗರಿಗಾಗಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಫೌಂಡೇಶನ್ ಒದಗಿಸುತ್ತಿದ್ದು ಜನಮನ್ನಣೆಯನ್ನು ಗಳಿಸಿದೆ. ಮಣೂರು ಪಡುಕರೆ ಬೀಚ್‌ನ ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತೆಗೆ ಕೂಡಾ ಫೌಂಡೇಶನ್ ವಿಶೇಷ ಆದ್ಯತೆ ನೀಡುತ್ತಿದೆ.

ಕಾಸರಗೋಡು ಜಿಲ್ಲೆಯಲ್ಲಿ ಗಾಯದ ಮೇಲೆ ಬರೆ | ಸಂಕಷ್ಟಕ್ಕೆ ತುಂಬಿತು ತಿಂಗಳು ಮೂರು

ಎಂಡೋ ಸಂತ್ರಸ್ತರ ಪಿಂಚಣಿ, ಔಷಧ ವಿತರಣೆ ಸ್ಥಗಿತ

ಕಾಸರಗೋಡು: ಜಿಲ್ಲೆಯ ಎಂಡೋಸಲ್ಫಾನ್ ಸಂತ್ರಸ್ತರಿಗೆ ಇದುವರೆಗೆ ಸರ್ಕಾರದಿಂದ ಸಿಗುತ್ತಿದ್ದ ಮಾಸಿಕ ಪಿಂಚಣಿ ಕಳೆದ ಮೂರು ತಿಂಗಳಿಂದ ಸ್ಥಗಿತಗೊಂಡಿದ್ದು, ಇದರಿಂದಾಗಿ ಇಲ್ಲಿನ ಎಂಡೋ ಸಂತ್ರಸ್ತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪಿಂಚಣಿ ಹಣ ಸಿಗದಿರುವುದರಿಂದ ಅವರ ಜೀವನ ನಿರ್ವಹಣೆಯೇ ದುಸ್ತರವಾಗಿದೆ.

ಉಚಿತ ಔಷಧಗಳ ಪೂರೈಕೆಯೂ ಸ್ಥಗಿತ

ಇದರ ಜೊತೆಗೆ ‘ನೀತಿ’ ಮೆಡಿಕಲ್ ಸ್ಟೋರ್‌ಗಳ ಮೂಲಕ ವಿತರಿಸಲಾಗುತ್ತಿದ್ದ ಉಚಿತ ಔಷಧಗಳ ಪೂರೈಕೆಯೂ ಕೂಡಾ ಸ್ಥಗಿತಗೊಂಡಿದ್ದು, ಚಿಕಿತ್ಸೆ ಪಡೆಯುವುದೂ ಸಂತ್ರಸ್ತರಿಗೆ ಕಷ್ಟಕರವಾಗಿದೆ. ಈ ಎರಡು ಬೆಳವಣಿಗೆಗಳಿಂದಾಗಿ ಎಂಡೋ ಬಾತರು ಸಮಸ್ಯೆಯ ಸುಳಿಯಲ್ಲಿ ಸಿಲುಕಿದ್ದಾರೆ.



ಪಾವತಿ ಮಾರ್ಚ್ ತಿಂಗಳಲ್ಲಿಯೇ ಕೊನೆ...

ಎಂಡೋ ಪೀಡಿತರಿಗೆ ಕೊನೆಯ ತಿಂಗಳ ಪಿಂಚಣಿ ಮೊತ್ತ ಮಾರ್ಚ್‌ನಲ್ಲಿ ಬಂದಿತ್ತು. ಆದಾದ ಬಳಿಕ ಹಣ ಬಂದಿಲ್ಲ. ಪಿಂಚಣಿ ಮೊತ್ತದಲ್ಲೇ ಜೀವನ ನಡೆಸುತ್ತಿರುವ ಅನೇಕ ಕುಟುಂಬಗಳು ಇಲ್ಲಿವೆ. ಈಗ ಅವರೆಲ್ಲರೂ ದಿಕ್ಕು ತೋಚದಾಂತಾಗಿದ್ದಾರೆ.

ಮುಂದೇನು ಎಂಬ ಚಿಂತೆ

ಒಂದೆಡೆ ಮಾಸಿಕ ಪಿಂಚಣಿ ಬಂದಿಲ್ಲ, ಇನ್ನೊಂದೆಡೆ ಉಚಿತ ಔಷಧವೂ ಸಿಗುತ್ತಿಲ್ಲ. ಚಿಕಿತ್ಸೆ ಹಾಗೂ ಜೀವನೋಪಾಯಕ್ಕೆ ಮುಂದೇನು ಎಂಬ ಚಿಂತೆ ಇಲ್ಲಿನ ಎಂಡೋ ಸಂತ್ರಸ್ತರದ್ದಾಗಿದೆ.

ಬಾಕಿಯಿರಿಸಿದೆ 44 ಲಕ್ಷ ರೂ.ಹಣ

ಉಚಿತವಾಗಿ ಔಷಧಗಳನ್ನು ವಿತರಿಸುವ ನೀತಿ ಮೆಡಿಕಲ್ ಸ್ಟೋರ್‌ಗಳಿಗೆ ಕೇರಳ ಸರಕಾರ ಸುಮಾರು 44 ಲಕ್ಷ ರೂ.ಗಳಿಗೂ ಹೆಚ್ಚು ಹಣ ಇನ್ನೂ ಪಾವತಿಸಲು ಬಾಕಿಯಿದೆ. ಇತ್ತೀಚೆಗೆ ಮಂಡನೆಯಾದ ಯುಡಿಎಫ್ ಸರಕಾರದ ಬಜೆಟ್‌ನಲ್ಲಿ ಸಂತ್ರಸ್ತರ ನೋಡಿಕೊಳ್ಳುವ ಬಗ್ಗೆ ಘೋಷಿಸಲಾಗಿತ್ತು. ಆದ್ದರಿಂದ ಈ ಸಮಸ್ಯೆ ಪರಿಹಾರಕ್ಕೆ ಸರಕಾರವು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ. ಸರಕಾರದ ಈ ವಿಳಂಬ ಧೋರಣೆಯನ್ನು ಎಂಡೋಸಲ್ಫಾನ್ ಹೋರಾಟ ಸಮಿತಿ ಪದಾಧಿಕಾರಿಗಳು ತೀವ್ರ ಟೀಕಿಸಿದ್ದಾರೆ.

ಕೋರ್ಟ್ ಆದೇಶವಿದೆ...

ಕಾಸರಗೋಡು ಜಿಲ್ಲೆಯ 11 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಎಂಡೋ ಪೀಡಿತರಿಗೆ ಕೋರ್ಟ್ ನಿರ್ದೇಶನದಂತೆ ಅಗತ್ಯದ ಸೌಲಭ್ಯ ಒದಗಿಸಬೇಕಾಗಿದೆ. ಆದರೆ ಕೇರಳ ಸರಕಾರ ಬೇಜವಾಬ್ದಾರಿತನ ಪ್ರದರ್ಶಿಸುತ್ತಿದೆ ಎಂಬ ಆರೋಪವಿದೆ.

ಸುತ್ತಮುತ್ತ

ಇಂದು ಕಾರ್ಯಾಗಾರ, ಪುಸ್ತಕ ಬಿಡುಗಡೆ

ಕಾಸರಗೋಡು: ಕುಟುಂಬಶ್ರೀ ಕಾಸರಗೋಡು ಜಿಲ್ಲಾ ಮಿಷನ್‌ನ ಒಂದು ವರ್ಷದ ಅಭಿವೃದ್ಧಿ ಯೋಜನಾ ಕಾರ್ಯಾಗಾರ ಮತ್ತು ಪುಸ್ತಕ ಬಿಡುಗಡೆ ಸಮಾರಂಭವು ಜೂ.29ರಂದು ಬೆಳಗ್ಗೆ 10 ಗಂಟೆಗೆ ಕಾಸರಗೋಡು ನಗರಸಭೆಯ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ. ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಕಾರ್ಯಾಗಾರವನ್ನು ಉದ್ಘಾಟಿಸಲಿದ್ದಾರೆ. ಕಾಸರಗೋಡು ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ ಅಧ್ಯಕ್ಷತೆ ವಹಿಸಲಿದ್ದಾರೆ. ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡು, ಬ್ಲಾಕ್ ಪಂಚಾಯತ್ ಅಧ್ಯಕ್ಷ ಅಬ್ದುಲ್ಲ ಕುಂಞ ಚೆರ್ಕಳ, ಮಾಜಿ ಶಾಸಕರಾದ ಎಂ.ರಾಜಗೋಪಾಲನ್, ಇ.ಚಂದ್ರಶೇಖರನ್, ಸಿ.ಎಚ್.ಕುಂಞಂಬು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಪಶುವೈದ್ಯಕೀಯ ಹುದ್ದೆಗೆ ನೇಮಕಾತಿ: ಸಂದರ್ಶನ

ಕಾಸರಗೋಡು: ಪಶುವೈದ್ಯಕೀಯ ಶಸ್ತ್ರಚಿಕಿತ್ಸಕರ ಹುದ್ದೆಗೆ ನೇಮಕಕ್ಕಾಗಿ ಪಶುಸಂಗೋಪನಾ ಇಲಾಖೆಯು ಜೂ.30 ರಂದು ಮಧ್ಯಾಹ್ನ 2 ಗಂಟೆಗೆ ವಿದ್ಯಾನಗರದ ಸಿವಿಲ್ ಸ್ಟೇಷನ್‌ನಲ್ಲಿರುವ ಜಿಲ್ಲಾ ಪಶುಸಂಗೋಪನಾ ಕಚೇರಿಯಲ್ಲಿ ಸಂದರ್ಶನ ನಡೆಸಲಿದೆ. ಮಂಜೇಶ್ವರ ಮತ್ತು ನೀಲೇಶ್ವರ ಬ್ಲಾಕ್‌ಗಳಲ್ಲಿ ನೇಮಕಾತಿ ನಡೆಯಲಿದೆ. ಪಶುವೈದ್ಯಕೀಯ ವಿಜ್ಞಾನದಲ್ಲಿ ಪದವಿ ಮತ್ತು ಕೇರಳ ಪಶುವೈದ್ಯಕೀಯ ಮಂಡಳಿ ನೋಂದಣಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 04994 255483 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಕೋರ್ಸ್: ಅರ್ಜಿ ಆಹ್ವಾನ

ಕಾಸರಗೋಡು: ತೃಕ್ಕರಿಪ್ಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಕಂಪ್ಯೂಟರ್, ಬಯೋಮೆಡಿಕಲ್, ಇಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಅಪ್ಲಿಕೇಶನ್ ಮತ್ತು ವ್ಯವಹಾರ ನಿರ್ವಹಣಾ ಇಂಜಿನಿಯರಿಂಗ್ ವಿಭಾಗದಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಈಗಾಗಲೇ ಅರ್ಜಿಗಳನ್ನು ಸಲ್ಲಿಸಿದವರು ಜೂ.29 ರಂದು ನಡೆಯಲಿರುವ ಸ್ಪಾಟ್ ಪ್ರವೇಶಕ್ಕೆ ಹಾಜರಾಗಬೇಕು. ಐಟಿಐ, ಕೆಜಿಸಿಇ ಕೋಟಾದಲ್ಲಿ ಪ್ರವೇಶ ಬಯಸುವವರು ಜೂ.29 ರಂದು ಬೆಳಗ್ಗೆ 10 ಗಂಟೆಯ ಮೊದಲು ಮತ್ತು ಪ್ಲಸ್ ಟು (ವಿಜ್ಞಾನ), ವಿಎಚ್‌ಎಸ್‌ಇ ವಿಭಾಗದಲ್ಲಿ ಪ್ರವೇಶ ಬಯಸುವವರು ಅದೇ ದಿನ ಬೆಳಗ್ಗೆ 11 ಗಂಟೆಯ ಮೊದಲು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ 04672211400, 9496830958, 9496690222, 9446771690 ಸಂಪರ್ಕಿಸಬಹುದು ಎಂದು ಕಾಲೇಜಿನ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

ಲೇಖನ ಸ್ಪರ್ಧೆ ಆಯೋಜನೆ

ಕುಂಬಳೆ: ಇಶಲ್ ಗ್ರಾಮ ಹಾಗೂ ಕಾಲ್ಚೆಂಡಾಟ ಎಂಬ ವಿಷಯದಲ್ಲಿ ಮೊಗ್ರಾಲ್ ದೇಶೀಯ ವೇದಿಕೆ ನಡೆಸಿದ ಜಿಲ್ಲಾಮಟ್ಟದ ಲೇಖನ ಸ್ಪರ್ಧೆಯಲ್ಲಿ ರವೀಂದ್ರನ್ ಪಾಡಿ ಪ್ರಥಮ ಸ್ಥಾನ ಪಡೆದಿದ್ದಾರೆ. ಸುರೇಂದ್ರನ್ ಚೀಮೇನಿ ದ್ವಿತೀಯ ಸ್ಥಾನ ಮತ್ತು ಅಬೂಬಕ್ಕರ್ ಮೊಗ್ರಾಲ್ ತೃತೀಯ ಸ್ಥಾನ ಗಳಿಸಿದ್ದಾರೆ. ವಾಚನಾ ವಾರಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸ್ಪರ್ಧಾ ವಿಜೇತರಿಗೆ ನಗದು ಬಹುಮಾನಗಳನ್ನು ವಿತರಿಸಲಾಯಿತು.

ಅರ್ಜಿ ಆಹ್ವಾನ

ಕಾಸರಗೋಡು: ಕೇಂದ್ರ ಸರ್ಕಾರದ ನೆರವಿನಡಿ ಕೃಷಿಕರಿಗೆ ವಿವಿಧ ಯಾಂತ್ರೋಪಕರಣಗಳಿಗೆ ಸಬ್ಸಿಡಿ ಸೌಲಭ್ಯವನ್ನು ಘೋಷಿಸಲಾಗಿದ್ದು, ಈ ನಿಟ್ಟಿನಲ್ಲಿ ಕೇರಳ ಸರಕಾರವು ಜುಲೈ 1ರಿಂದ ಆಗಸ್ಟ್ 3ರ ವರೆಗೆ ಸೌಲಭ್ಯ ಪಡೆಯುವ ರೈತರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಈ ಯೋಜನೆಯಡಿ ಕೃಷಿ ಯಂತ್ರೋಪಕರಣಗಳು ಮತ್ತು ಉಪಕರಣಗಳ ಖರೀದಿಗೆ ಹಾಗೂ ಕೊಯ್ಲು, ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಚಟುವಟಿಕೆಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳ ಖರೀದಿಗೆ ಸಬ್ಸಿಡಿ ಸಹಾಯ ಒದಗಿಸಲಾಗುತ್ತದೆ. ವೈಯಕ್ತಿಕ ರೈತರು ಘಟಕ ವೆಚ್ಚದ ಶೇಕಡಾ 40 ರಿಂದ ಶೇಕಡಾ 50ರಷ್ಟು ಸಬ್ಸಿಡಿ ಸಹಾಯಕ್ಕೆ ಅರ್ಹರು. ರೈತ ಗುಂಪುಗಳು, ಸ್ವಸಹಾಯ ಗುಂಪುಗಳು ರೈತ ಉತ್ಪಾದಕ ಸಂಸ್ಥೆಗಳು, ವ್ಯಕ್ತಿಗಳು ಮತ್ತು ಪಂಚಾಯತ್‌ಗಳು ಕಸ್ಟಮ್ ನೇಮಕಾತಿ ಕೇಂದ್ರಗಳನ್ನು ಸ್ಥಾಪಿಸಲು ಶೇಕಡಾ 40ರಷ್ಟು ಆರ್ಥಿಕ ಸಹಾಯಕ್ಕೆ ಅರ್ಹರು. ಹೆಚ್ಚಿನ ವಿವರಗಳಿಗೆ 8943568123, 90481 83643, 9495082339, 9349050800, 8921896168, 97478 41883 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

50ಕ್ಕೂ ಅಧಿಕ ಸಿಬ್ಬಂದಿಗಳ ಹುದ್ದೆಗಳು ಖಾಲಿ | ಆಸ್ಪತ್ರೆಗೆ ಭೇಟಿ ನೀಡುವವರ ಸಂಖ್ಯೆ ಮತ್ತಷ್ಟು ದ್ವಿಗುಣ

ರೋಗ ಗ್ರಸ್ತವಾದ ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆ!

ಕಾಸರಗೋಡು: ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯು ಒಂದಲ್ಲಾ ಒಂದು ಸಮಸ್ಯೆಯಿಂದ ಬಳಲುತ್ತಿದೆ. ಈ ಆಸ್ಪತ್ರೆಯಲ್ಲಿ ಬರೋಬ್ಬರಿ 50ಕ್ಕೂ ಅಧಿಕ ಹುದ್ದೆಗಳು ಖಾಲಿಯಿದ್ದು, ಅದರ ಜೊತೆಗೆ ಸ್ಥಳಾವಕಾಶದ ಕೊರತೆಯಿಂದ ರೋಗಿಗಳು, ಅವರ ಸಂಬಂಧಿಕರು ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ತೊಂದರೆ ಅನುಭವಿಸುತ್ತಿದ್ದಾರೆ.

ಎಲ್ಲಾ ರೀತಿಯ ಚಿಕಿತ್ಸೆ, ಔಷಧಿಗಳಿಗಾಗಿ ಕಾಸರಗೋಡು ಜನತೆ ಕಾಸರಗೋಡು ಜನರಲ್ ಆಸ್ಪತ್ರೆಯನ್ನೇ ಆಶ್ರಯಿಸುತ್ತಿದ್ದಾರೆ. ಆದರೆ ಇಲ್ಲಿ ಮಾತ್ರ ಮೂಲಸೌಕರ್ಯ ಹಾಗೂ ಸಿಬ್ಬಂದಿಗಳ ಕೊರತೆ ಕಾಡುತ್ತಿದೆ. ಈ ಬಗ್ಗೆ ಹಲವು ಬಾರಿ ಸಂಬಂಧಪಟ್ಟ ಜನಪ್ರತಿನಿಧಿಗಳಿಗೂ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬ ಆರೋಪವು ಸಾರ್ವಜನಿಕ ವಲಯದಿಂದ ಕೇಳಿಬಂದಿದೆ.

ದಿನನಿತ್ಯ ಸಾವಿರಾರು ಮಂದಿ ಭೇಟಿ

ಮಳೆಗಾಲ ಆರಂಭಗೊಂಡಿರುವುದರಿಂದ ಜ್ವರ, ಶೀತ ಬಾಧಿತರ ಸಂಖ್ಯೆ ಹೆಚ್ಚಿದೆ. ದಿನನಿತ್ಯ ಸಂಖ್ಯೆ ಸಾವಿರಾರು ಮಂದಿ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾರೆ. ಓ.ಪಿ. ವಿಭಾಗಗಳು, 9 ಸ್ಪೆಷಾಲಿಟಿ ವಿಭಾಗ, ಒಂದು ಸೂಪರ್ ಸ್ಪೆಷಾಲಿಟಿ ವಿಭಾಗ ದಿನಂಪ್ರತಿ ತುಂಬಿ ತುಳುಕುತ್ತಿವೆ.



ಹಲವು ಹುದ್ದೆಗಳು ಖಾಲಿ!

ಸಮಾಲೋಚನೆ, ಶಸ್ತ್ರಚಿಕಿತ್ಸೆ ವಿಭಾಗಗಳಲ್ಲಿ ಅಗತ್ಯದ ವೈದ್ಯರಿಲ್ಲದೆ ಆಸ್ಪತ್ರೆಯು ನಲುಗುತ್ತಿದೆ. 6 ಸಹಾಯಕ ಸರ್ಜನ್‌ಗಳು, ಇಬ್ಬರು ಸಮಾಲೋಚಕರು, 1 ಹಿರಿಯ ಸಮಾಲೋಚಕರು, ಒಬ್ಬ ಸಹಾಯಕ ನಿರ್ದೇಶಕರ ಹುದ್ದೆಗಳು ತೆರವಾಗಿವೆ. ನ್ಯೂರೋಲಾಜಿ ಸೂಪರ್ ಸ್ಪೆಷಾಲಿಟಿ ವಿಭಾಗದ ವೈದ್ಯರು ರಜೆಯಲ್ಲಿ ತೆರಳಿ ಒಂದು ತಿಂಗಳಾದರೂ ಬದಲಿ ನೇಮಕಾತಿ ಮಾಡಲಾಗಿಲ್ಲ. ನರ್ಸಿಂಗ್ ವಿಭಾಗವೊಂದರಲ್ಲೇ ಬರೋಬ್ಬರಿ 21 ಹುದ್ದೆಗಳು ಖಾಲಿಬಿದ್ದಿವೆ. ಎಲ್ಲಾ ವಿಭಾಗಗಳನ್ನು ಸೇರಿಸಿದಾಗ ಒಟ್ಟು 50ಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕಾತಿ ನಡೆಸಬೇಕಾಗಿದೆ.

ಬಜೆಟ್‌ನ ಅನುದಾನ ಬಿಡುಗಡೆಗೆ ಮೀನಮೇಷ

ಆಸ್ಪತ್ರೆಯ ಅಭಿವೃದ್ಧಿಗಾಗಿ ಮುಂಗಡಪತ್ರದಲ್ಲಿ ಮೀಸಲಿರಿಸಿದ 1.75 ಕೋಟಿ ರೂ.ಗಳಲ್ಲಿ 40 ಲಕ್ಷ ರೂ. ಮಾತ್ರವೇ ಇದುವರೆಗೆ ಲಭಿಸಿದೆ. ಔಷಧ, ವಿವಿಧ ಉಪಕರಣಗಳಿಗಾಗಿ ಅರ್ಧಕ್ಕೂ ಹೆಚ್ಚು ಅನುದಾನ ಖರ್ಚಾಗಿರುವುದರಿಂದ ಶೀಘ್ರ ಆರ್ಥಿಕ ನೆರವು ಒದಗಿಸದಿದ್ದರೆ ಮುಂಬರುವ ತಿಂಗಳುಗಳಲ್ಲಿ ಔಷಧ ಇತ್ಯಾದಿಗಳಿಗೆ ತೀವ್ರ ಕೊರತೆ ಎದುರಾಗಲಿದೆ. ಆಸ್ಪತ್ರೆಯಲ್ಲಿ ಕೀಮೋಥೆರಪಿ ಸೌಲಭ್ಯ ಇದೆಯಾದರೂ ಔಷಧಿಗಳು ಫಾರ್ಮಸಿಯಲ್ಲಿ ಲಭಿಸುತ್ತಿಲ್ಲ.

ಕಟ್ಟಡ ಶಿಥಿಲ: ಈಗ ಆನ್‌ಲೈನ್‌ನಲ್ಲೇ ತರಗತಿ!

ಕಾಸರಗೋಡು ಜನರಲ್ ಆಸ್ಪತ್ರೆಯ ಆವರಣದಲ್ಲಿ ಜೂನಿಯರ್ ಪಬ್ಲಿಕ್ ಹೆಲ್ತ್ ನರ್ಸ್ (ಜೆಪಿಎಚ್‌ಎನ್) ತರಬೇತಿ ತರಗತಿಗಳು ಆಫ್‌ಲೈನ್ ಮೂಲಕ ನಡೆಯುತ್ತಿಲ್ಲ. ಹಳೆಯ ಕಟ್ಟಡದ ಮೇಲ್ಛಾವಣಿಯ ಹಲಗೆಗಳು ಬಿದ್ದು ಮೂರು ವಾರಗಳು ಕಳೆದಿವೆ. ಆದ್ದರಿಂದ ತರಗತಿಗಳು ಪ್ರಸ್ತುತ ಆನ್‌ಲೈನ್ ಮೂಲಕ ನಡೆಯುತ್ತಿವೆ. ಕಟ್ಟಡಕ್ಕೆ ಫಿಟ್‌ನೆಸ್ ಸರ್ಟಿಫಿಕೇಟ್ ಲಭಿಸದ ಕಾರಣ ತರಗತಿಗಳು ಆನ್‌ಲೈನ್ ಮೂಲಕವೇ ಮುಂದುವರಿಯುವ ಸಾಧ್ಯತೆಯಿದೆ.

ಪೂರ್ಣಗೊಳ್ಳದ ನೂತನ ಕಟ್ಟಡ ಕಾಮಗಾರಿ

ವರ್ಷಗಳಿಂದ ಎದುರಿಸುತ್ತಿರುವ ಸ್ಥಳ ಸೌಕರ್ಯ ಕೊರತೆಯು ಜನರಲ್ ಆಸ್ಪತ್ರೆಯ ಇನ್ನೊಂದು ಸಮಸ್ಯೆಯಾಗಿದೆ. ಪ್ರಸ್ತುತ ಆಸ್ಪತ್ರೆಯು ಕಾರ್ಯಾಚರಿಸುತ್ತಿರುವ ಕಟ್ಟಡಗಳಲ್ಲಿ ಅಗತ್ಯದ ಸ್ಥಳಾವಕಾಶ ಇಲ್ಲದಿರುವುದರಿಂದ ಮುಖ್ಯವಾಗಿ ರೋಗಿಗಳ ಸಮಸ್ಯೆಯಾಗಿ ಪರಿಣಮಿಸಿದೆ. ತುರ್ತು ವಿಭಾಗದ ಹೊರತು ಟ್ರೋಮಾಕೇರ್ ಘಟಕವನ್ನು ಆರಂಭಿಸಲು 3 ವರ್ಷಗಳ ಹಿಂದೆ ಆರ್ಥಿಕ ಅನುಮತಿ ಲಭಿಸಿತ್ತು. ಆದರೆ ಅದಕ್ಕಾಗಿ ಗುರುತಿಸಿದ ಕಟ್ಟಡದ ಫಿಸಿಯೋಥೆರಪಿ ಘಟಕ ಹಾಗೂ ಬದಲಿ ಸ್ಟೋರ್ ಸ್ಥಾಪಿಸಲು ಬೇರೆ ಸ್ಥಳ ದೊರಕದೇ ಇರುವುದರಿಂದ ಉದ್ದೇಶಿತ ಯೋಜನೆಯು ಈಗಲೂ ಅರ್ಧದಲ್ಲೇ ಸ್ಥಗಿತಗೊಂಡಿದೆ. 7 ವರ್ಷಗಳ ಹಿಂದೆ ನಬಾರ್ಡ್ ಸಂಸ್ಥೆಯ ಸಹಾಯದೊಂದಿಗೆ ನಿರ್ಮಾಣ ಆರಂಭಿಸಿದ ಆಸ್ಪತ್ರೆಯ ನೂತನ ಕಟ್ಟಡ ಕಾಮಗಾರಿ ಇದುವರೆಗೆ ಪೂರ್ಣಗೊಂಡಿಲ್ಲ. ಡಿಸೆಂಬರ್‌ನಲ್ಲಿ ಹೊಸ ಕಟ್ಟಡವನ್ನು ಉದ್ಘಾಟಿಸುವ ನಿರೀಕ್ಷೆಯಿದ್ದರೂ ಈ ಬಗ್ಗೆ ಸ್ಪಷ್ಟತೆಯಿಲ್ಲ. ನೂತನ ಕಟ್ಟಡ ಉದ್ಘಾಟನೆಗೊಂಡರೆ ಸ್ಥಳ ಸೌಕರ್ಯ ಕೊರತೆಗೆ ಸಮರ್ಪಕ ಪರಿಹಾರ ಲಭಿಸಬಹುದಾಗಿದೆ.

ವಿದ್ವಾನ್ ಬಾಬು ರೈಗಳಿಂದ ಶಾಸ್ತ್ರೀಯ ಸಂಗೀತಕ್ಕೆ ಶ್ರೀಮಂತ ಚೌಕಟ್ಟು: ಹೊಳ್ಳ



ಕಾಸರಗೋಡು: ಶಾಸ್ತ್ರೀಯ ಸಂಗೀತ ಜಗತ್ತಿಗೆ ಶ್ರೀಮಂತಿಕೆ ನೀಡುವ ಮೂಲಕ ನಮ್ಮ ನಾಡಿಗೆ ಬಂಗಾರದ ಚೌಕಟ್ಟು ನೀಡಿದವರು ಮೃದಂಗ ಮಾಂತ್ರಿಕ, ವಿದ್ವಾನ್ ಕೆ.ಬಾಬು ರೈಗಳ ಕಾಲಘಟ್ಟದಲ್ಲೇ ನಾವೂ ಬದುಕಿದ್ದೇವೆ ಎಂಬುದೇ ನಮ್ಮ ಜೀವನದ ಸಾರ್ಥಕತೆ ಎಂದು ಹಿರಿಯ ಧಾರ್ಮಿಕ ಮುಂದಾಳು ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ ಅಭಿಪ್ರಾಯಪಟ್ಟರು.

ಆಲ್ ಕೇರಳ ಫೋಟೋಗ್ರಾಫರ್ಸ್ ಅಸೋಸಿಯೇಶನ್ (ಎಕೆಪಿಎ)ನ ವೆಸ್ಟ್ ಯೂನಿಟ್ ಕಾಸರಗೋಡು ವತಿಯಿಂದ ನಡೆದ ಶತಾಯುಷಿ (103 ವರ್ಷ), ಹಿರಿಯ ಸಂಗೀತ, ಮೃದಂಗ ಕಲಾವಿದ ವಿದ್ವಾನ್ ಕೆ.ಬಾಬು ರೈ ಅವರಿಗೆ ಶುಕ್ರವಾರ ಸೂರ್ಲುವಿನಲ್ಲಿರುವ ಅವರ ನಿವಾಸದಲ್ಲಿ ಗೌರವಾರ್ಪಣೆ ಸಲ್ಲಿಸಿ ಅವರು ಮಾತನಾಡಿದರು.

ಬಾಬಜ್ಜ ಎಂದೇ ಬಾಲ್ಯದಲ್ಲಿ ನಮ್ಮಿಂದ ಕರೆಸಿಕೊಂಡು ಇಂದಿಗೂ ಅದೇ ಆಸಕ್ತಿಯಿಂದ ಸಂಗೀತವನ್ನೂ ನಾಡನ್ನೂ ಗೌರವಿಸುತ್ತಾ ಬಂದಿರುವ ಅವರು ಇನ್ನೂ ಅನೇಕ ವರ್ಷಗಳ ಕಲಾಸೇವೆ ನಡೆಸುವಂತಾಗಬೇಕು ಎಂದು ಹಾರೈಸಿದರು.

ಪತ್ರಕರ್ತ ವೀಜ ಕಾಸರಗೋಡು ಅಭಿನಂದಿಸಿ, ಭಗವಂತನ ಪೂರ್ಣಾನುಗ್ರಹಕ್ಕೆ ಪಾತ್ರರಾದ ಪ್ರತಿಷ್ಠಿತ ಕೋಟೆಕಾರು ಮನೆತನದ ವಿದ್ವಾನ್ ಬಾಬು ರೈಗಳು ಅಪರೂಪದ ಕಲಾವಿದರಾಗಿದ್ದಾರೆ. ರಾಷ್ಟ್ರೀಯ ಮಟ್ಟದ ಕಲಾವಿದರ ಒಡನಾಡಿಯಾಗಿ ಇಂದಿಗೂ ಎಳೆಯರಿಗೆ ಸಂಗೀತ ವಾದ್ಯಗಳ ಪಾಠ ಕಲಿಸುವಲ್ಲಿ ಅದೇ ಉತ್ಸಾಹ ತಳೆದಿರುವುದು ನಾಡಿನ ಪುಣ್ಯ. ಸಂಗೀತದಿಂದ ಯಕ್ಷಗಾನದ ವರೆಗೆ ಎಲ್ಲಾ ವಲಯಗಳಲ್ಲೂ ಆಳವಾದ ಅಧ್ಯಯನ, ಅಧ್ಯಾಪನ ನಡೆಸಿದ ವಿರಳ ಸಾಧಕ ಎಂದು ವಿವರಿಸಿದರು.

ವಿದ್ವಾನ್ ಕೆ.ಶ್ರೀಧರ ರೈ ಕಾಸರಗೋಡು, ಕೆ.ನಾರಾಯಣ ರೈ ದಂಪತಿ, ಎಕೆಪಿಎ ಜಿಲ್ಲಾ ಸಮಿತಿ ಸದಸ್ಯ ಮೈಂದಪ್ಪ ವಲಯ ಸಮಿತಿ ಉಪಾಧ್ಯಕ್ಷ ಸುಬ್ರಹ್ಮಣ್ಯ, ಜೊತೆ ಕಾರ್ಯದರ್ಶಿ ಗಣೇಶ ರೈ, ಯೂನಿಟ್ ಸಮಿತಿ ಸದಸ್ಯರಾದ ರತೀಶ್ ರಾಮು, ಮಹೇಶ್ ಪರಕ್ಕಿಲ ಉಪಸ್ಥಿತರಿದ್ದರು. ಯೂನಿಟ್ ಅಧ್ಯಕ್ಷ ವಸಂತ್ ಕೆರೆಮನೆ ಸ್ವಾಗತಿಸಿ, ನಿರೂಪಿಸಿದರು. ಕಾರ್ಯದರ್ಶಿ ಶಾಲಿನಿ ರಾಜೇಂದ್ರ ವಂದಿಸಿದರು.

ಬಂದಡ್ಕ ಶಾಲಾ ಅಮೃತ ಮಹೋತ್ಸವ: ಹಿರಿಯ ಶಿಕ್ಷಕರು, ವಿದ್ಯಾರ್ಥಿಗಳಿಗೆ ಸನ್ಮಾನ



ಕಾಸರಗೋಡು: ಬಂದಡ್ಕ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಅಮೃತ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಮೊದಲ ಎಸ್ಸೆಸ್ಸೆಲ್ಸಿ ಬ್ಯಾಚ್‌ನ ವಿದ್ಯಾರ್ಥಿಗಳನ್ನು ಹಾಗೂ ಹಿರಿಯ ಶಿಕ್ಷಕರನ್ನು ಸನ್ಮಾನಿಸುವ ಕಾರ್ಯಕ್ರಮ ಆಯೋಜಿಸಲಾಯಿತು.

ಇದೇ ಸಂದರ್ಭ ಎಸ್ಸೆಸ್ಸೆಲ್ಸಿ, ಹೈಯರ್ ಸೆಕೆಂಡರಿ, ಎನ್‌ಎಂಎಂಎಸ್ ಮತ್ತು ಸಿಎಂ ಕಿಡ್ಸ್ ಸ್ಕಾಲರ್‌ಶಿಪ್ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು.

ಉದುಮ ಶಾಸಕ ಕೆ.ನೀಲಕಂಠನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಾಲೆಯ ಅಮೃತ ಮಹೋತ್ಸವ ಸಮಿತಿಯ ಅಧ್ಯಕ್ಷೆ ಕೆ. ಶೋಭನಾಕುಮಾರಿ ಅಧ್ಯಕ್ಷತೆ ವಹಿಸಿ, ಕಾರ್ಯಕ್ರಮಕ್ಕೆ ಶುಭಕೋರಿದರು. ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಕೆ.ಕೆ. ಸೋಯಾ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕುತ್ತಿಕೋಲು ಗ್ರಾ.ಪಂ. ಸದಸ್ಯ ಕೆ.ಶೋಭನಾ ಬಾಲಚಂದ್ರನ್, ಜೋಸ್ ಪಾರತ್ತಟ್ಟೀಲ್, ಮಹೇಶ್ ಗೋಪಾಲ್, ಸೌಮ್ಯಾ ಮೋಹನನ್, ಸಂತೋಷ್ ಅರುಮನ, ಅಮೃತ ಮಹೋತ್ಸವದ ಕಾರ್ಯಾಧ್ಯಕ್ಷ ಸುರೇಶ್ ಪಿ.ಎ., ಉಪಾಧ್ಯಕ್ಷರಾದ ಬಲರಾಮನ್ ನಂಬಿಯಾರ್, ಕೆ.ಎನ್.ರಾಜನ್, ಪವಿತ್ರನ್ ಸಿ.ನಾಯರ್, ಎಸ್‌ಎಂಸಿ ಅಧ್ಯಕ್ಷ ಶ್ರೀಜಿತ್ ಎಂ.ಪಿ., ಶಾಲಾ ಮುಖ್ಯೋಪಾಧ್ಯಾಯ ರಾಘವ ಎಂ.ಎನ್., ರಾಧಾಕೃಷ್ಣನ್ ನಂಬಿಯಾರ್, ಸುಭಾಷ್ ವನಶ್ರೀ, ಕೃಷ್ಣನ್ ಮೇಲತ್, ಹಿರಿಯ ಶಿಕ್ಷಕ ಪಿ.ಎನ್. ಸುಬ್ರಹ್ಮಣ್ಯ ಭಟ್, ಪ್ರಥಮ ಎಸ್ಸೆಸ್ಸೆಲ್ಸಿ ಬ್ಯಾಚ್‌ನ ವಿದ್ಯಾರ್ಥಿಗಳಾಗಿದ್ದ ಮೋನಪ್ಪ ಗೌಡ, ಮಣಿಯಪ್ಪನ್ ಕೆ.ಎನ್., ಪ್ಲಸ್ ಟು ಪರೀಕ್ಷೆಯ ಸಾಧಕಾರದ ರಸ್ನಾಲಕ್ಷ್ಮಿ ಹಾಗೂ ಜೋನ್ ಕೆ.ಎ. ಮಾತನಾಡಿದರು. ಶಾಲೆಯ ಪ್ರಾಂಶುಪಾಲೆ ರೇಖಾ ದಾಸ್ ಕೆ.ಪಿ. ಸ್ವಾಗತಿಸಿ, ಸ್ಟಾಫ್ ಸೆಕ್ರೆಟರಿ ಜ್ಯೋತಿಲಕ್ಷ್ಮಿ ಕೆ. ಕಾರ್ಯಕ್ರಮ ವಂದಿಸಿದರು.

ಮಂಜೇಶ್ವರ ಸರಕಾರಿ ಆಸ್ಪತ್ರೆಯಲ್ಲಿ 'ಪೋಲಿಯೋ' ಲಸಿಕಾ ಅಭಿಯಾನ





ಮಂಜೇಶ್ವರ: ಪೋಲಿಯೋ ಮುಕ್ತ ಸಮಾಜ ನಿರ್ಮಾಣದ ಸಂಕಲ್ಪದೊಂದಿಗೆ ಭಾನುವಾರ ಮಂಜೇಶ್ವರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಪೋಲಿಯೋ ಲಸಿಕೆ ಅಭಿಯಾನವು ಅತ್ಯಂತ ಉತ್ಸಾಹ ಮತ್ತು ಸಡಗರದಿಂದ ನಡೆಯಿತು.

ಈ ಅಭಿಯಾನದಲ್ಲಿ ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಕೈಜೋಡಿಸಿ ಯಶಸ್ವಿಗೊಳಿಸಿದರು. ಮಂಜೇಶ್ವರ ಸರಕಾರಿ ಆಸ್ಪತ್ರೆಯಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ ಬಶೀರ್ ಕನಿಲ ಅವರು ಪೋಲಿಯೋ ಲಸಿಕೆ ಕಾರ್ಯಕ್ರಮಕ್ಕೆ ಅಧಿಕೃತವಾಗಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಕ್ಕಳ ಆರೋಗ್ಯ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಪೋಲಿಯೋ ಮುಕ್ತ ದೇಶವನ್ನಾಗಿ ಮಾಡುವಲ್ಲಿ ಪ್ರತಿಯೊಬ್ಬ ಪೋಷಕರು ಜಾಗೃತರಾಗಿ ಎಂದು ಕರೆ ನೀಡಿದರು.

ಗ್ರಾ.ಪಂ.ನ ವಿವಿಧ ಭಾಗಗಳಲ್ಲಿ ಲಸಿಕೆ ವಿತರಣೆ ಕೇಂದ್ರಗಳನ್ನು ತೆರೆಯಲಾಗಿತ್ತು. ಜಿಎಚ್‌ಎಸ್ ಅಂಗನವಾಡಿ, ಉದ್ಯಾವರ ಅಂಗನವಾಡಿ ಮತ್ತು ತಲಪಾಡಿ ಬಸ್ ನಿಲ್ದಾಣದಲ್ಲಿ ನಡೆದ ಲಸಿಕೆ ವಿತರಣೆ ಕಾರ್ಯಕ್ರಮಗಳಿಗೆ ಗ್ರಾ.ಪಂ. ಸದಸ್ಯ ಮುಕ್ತಾರ್ ಎ. ಮತ್ತು ಇಲ್ಯಾಸ್ ತೂಮಿನಾಡು, ಸ್ಥಾಯೀ ಸಮಿತಿ ಅಧ್ಯಕ್ಷ ಅಬ್ದುಲ್ ರಹಮಾನ್ ಹಾಜಿ ಕೆ.ಎಂ.ಕೆ., ಫರಾನ, ಝುರೀನಾ ಅವರು ನೇತೃತ್ವ ವಹಿಸಿದರು.

ಅಭಿಯಾನವು ಸುಗಮವಾಗಿ ನಡೆಯಲು ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮುಂಜಾನೆಯಿಂದಲೇ ಸಕ್ರಿಯರಾಗಿ ಕಾರ್ಯನಿರ್ವಹಿಸಿದರು.

ಇನ್ಫೆಂಟ್ ಚರ್ಚ್‌ನಿಂದ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಮಂಜೇಶ್ವರ: ಹೊಸಂಗಡಿ ಇನ್ಫೆಂಟ್ ಜೀಸಸ್ ಸೈರೊ ಮಲಬಾರ್ ಚರ್ಚ್‌ನ ವತಿಯಿಂದ ಚರ್ಚ್‌ಗೆ ಒಳಪಟ್ಟ ವಿವಿಧ ವಲಯಗಳಲ್ಲಿರುವ ಎಸ್‌ಎಸ್‌ಎಲ್‌ಸಿ, ಪ್ಲಸ್ ಟು, ಪ್ರೊಫೆಷನಲ್ ಕೋರ್ಸ್‌ಗಳಲ್ಲಿ ಅತ್ಯಧಿಕ ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಕಣ್ಣೂರು ಯೂನಿವರ್ಸಿಟಿ ಮಂಜೇಶ್ವರ ಕ್ಯಾಂಪಸ್‌ನ (ಸ್ಕೂಲ್ ಆಫ್ ಲೀಗಲ್ ಸ್ಟಡೀಸ್) ಎಲ್‌ಎಲ್‌ಬಿಯಲ್ಲಿ ಉನ್ನತ ಪದವಿ (ಫಸ್ಟ್ ಕ್ಲಾಸ್) ಯನ್ನು ಪಡೆದ ಚರ್ಚ್‌ನ ಧರ್ಮಗುರು ಫಾದರ್ ಲೂಯಿ ಮರಿಯಾ ದಾಸ್ ಅವರನ್ನು ಚರ್ಚ್‌ನ ಆಡಳಿತ ಮಂಡಳಿ ಪರವಾಗಿ ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಗೌರವಿಸಿದರು.

ಅದೇ ರೀತಿ ಮಂಜೇಶ್ವರ ಶಾಸಕರಾಗಿ ಮರು ಆಯ್ಕೆಯಾದ ಎ.ಕೆ.ಎಂ.ಅಶ್ರಫ್ ಅವರನ್ನು ಚರ್ಚ್‌ನ ಆಡಳಿತ ಮಂಡಳಿಯು ಗೌರವಾಧಾರಗಳಿಂದ ಸನ್ಮಾನಿಸಿತು. ಸಮಾರಂಭದ ಅಧ್ಯಕ್ಷತೆಯನ್ನು ಚರ್ಚ್‌ನ ಫಾದರ್ ಲೂಯಿಸ್ ಮರಿಯಾ ದಾಸ್ ವಹಿಸಿದ್ದರು. ಸಂತೋಷ್ ಶುಭಾಶಂಸನೆಗೈದರು. ಚರ್ಚ್‌ನ ಕೋ ಓರ್ಡಿನೇಟರ್ ಥೋಮಸ್ ಪನೆಕಲ್ ಸ್ವಾಗತಿಸಿ, ಜೋಯ್ ಕೆಡಕೆಡತ್ ವಂದಿಸಿದರು. ಚರ್ಚ್‌ನ ಆಡಳಿತ ಮಂಡಳಿ ಪದಾಧಿಕಾರಿಗಳು ಸಹಿತ ಮೊದಲಾದವರಿದ್ದರು.

ಉದ್ಯಾವರ ದುಬೈ ಸಮಿತಿ ಯುಡಿಸಿಯಿಂದ ಎಸ್ಸೆಸ್ಸೆಲ್ಸಿಯ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಮಂಜೇಶ್ವರ: ಉದ್ಯಾವರ ಪ್ರದೇಶದ ದುಬೈಯಲ್ಲಿ ನೆಲೆಸಿರುವ ಪ್ರವಾಸಿಗರ ಒಕ್ಕೂಟವಾದ ಉದ್ಯಾವರ ದುಬೈ ಸಮಿತಿ ಯುಡಿಸಿ ವತಿಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲೂ ಎ ಪ್ಲಸ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಿ, ಎಜುಕೇಷನಲ್ ಎಕ್ಸಲೆನ್ಸ್ ಅವಾರ್ಡ್ - 2026 ನೀಡಿ ಸನ್ಮಾನಿಸಲಾಯಿತು.

ಕಳೆದ 40 ವರ್ಷಗಳಿಂದ ಉದ್ಯಾವರ ಪ್ರದೇಶದಲ್ಲಿ ಸಾಮಾಜಿಕ, ಶೈಕ್ಷಣಿಕ, ಕ್ರೀಡಾ ಮತ್ತು ಮಾನವೀಯ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಉದ್ಯಾವರ ದುಬೈ ಸಮಿತಿಯು ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಪ್ರೋತ್ಸಾಹ ಶ್ಲಾಘನೀಯವಾಗಿದೆ.

ಮಂಜೇಶ್ವರದ ಎ.ಕೆ.ಗಾರ್ಡನ್‌ನಲ್ಲಿ ನಡೆದ ಸಮಾರಂಭವನ್ನು ಮಂಜೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸೈಫುಲ್ಲ ತಂಙಳ್ ಉದ್ಘಾಟಿಸಿದರು. ಈ ಸಂದರ್ಭ ಮಂಜೇಶ್ವರದ ವಿವಿಧ ಶಾಲೆಗಳಿಂದ ಫುಲ್ ಎ ಪ್ಲಸ್ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಇಬ್ರಾಹಿಂ ಶಾಹಿದ್ ಎಚ್., ಫಾತಿಮತ್ ಶಜಾ, ಭುವಿ ಮತ್ತು ಸೃಷ್ಟಿ ಶೆಟ್ಟಿ ಅವರಿಗೆ ನಗದು ಬಹುಮಾನ ಹಾಗೂ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಯುಡಿಸಿ ಉಪಾಧ್ಯಕ್ಷ ಉಮ್ಮರ್ ಅಹ್ಸನಿ ಉದ್ಯಾವರ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಮಂಜೇಶ್ವರ ಗ್ರಾ.ಪಂ. ಅಧ್ಯಕ್ಷ ಬಶೀರ್ ಕನಿಲ, ಗ್ರಾ.ಪಂ.ಸದಸ್ಯರಾದ ಮುಕ್ತಾರ್, ಶರೀಫ್ ಪಾವೂರು, ದಮಾಮ್ ಸಮಿತಿ ನಾಯಕ ನಝೀರ್ ಶಾಫಿ, ಬಾವುಟ್ಟ ಹಮೀದ್ ಹೊಸಂಗಡಿ, ಎಸ್.ಎಂ.ಬಶೀರ್ ಸೇರಿದಂತೆ ಹಲವು ಮಂದಿ ಗಣ್ಯರು, ಬ್ಲಾಕ್, ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಶಿಕ್ಷಕರು ಭಾಗವಹಿಸಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಅನ್ವರ್ ಇಸ್ಮಾಯಿಲ್ ಸ್ವಾಗತಿಸಿ, ಮುಸ್ತಾಫ ವಂದಿಸಿದರು.

ಕೇಂದ್ರದ ಯೋಜನೆಗಳಿಗೆ ರಾಜ್ಯ ಸರ್ಕಾರ ವಿರೋಧ: ಅಶ್ವಿನಿ ಆರೋಪ



ಮುಳ್ಳೇರಿಯ: ಮುಂಬರುವ ಚುನಾವಣೆಗಳಲ್ಲಿ ಕೇರಳದಲ್ಲೂ ಬಂಗಾಳ ಮಾದರಿ ಫಲಿತಾಂಶ ಪುನರಾವರ್ತನೆಯಾಗಲಿದ್ದು, ಕೇರಳ ವಿಧಾನಸಭೆಯಲ್ಲೂ ಬಿಜೆಪಿಯ ಪ್ರಾತಿನಿಧ್ಯವು 3ರಿಂದ 30ಕ್ಕೆ ಏರಿಕೆ ಕಾಣಲಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷ ಎಂ.ಎಲ್. ಅಶ್ವಿನಿ ಹೇಳಿದ್ದಾರೆ.

ಬಿಜೆಪಿ ಮುಳಿಯಾರು ಕ್ಷೇತ್ರ ಸಮಿತಿ ಆಯೋಜಿಸಿದ್ದ ದ್ವಿದಿನ ಅಧ್ಯಯನ ಶಿಬಿರದ (ಪ್ರಶಿಕ್ಷಣ) ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇಶ ಮತ್ತು ಸಂಘಟನೆಯ ಹಿತಾಸಕ್ತಿಯ ಮುಂದೆ ವ್ಯಕ್ತಿಗಳಿಗೆ ಹಾಗೂ ವೈಯಕ್ತಿಕ ಹಿತಾಸಕ್ತಿಗಳಿಗೆ ಪ್ರಾಮುಖ್ಯತೆ ನೀಡದ ರಾಜಕೀಯ ಪಕ್ಷ ಬಿಜೆಪಿಯಾಗಿದೆ. ಪಿಎಂಶ್ರೀ ಯೋಜನೆ ಸೇರಿದಂತೆ ಕೇಂದ್ರದ ಯೋಜನೆಗಳನ್ನು ವಿರೋಧಿಸುವ ಯುಡಿಎಫ್ ಒಕ್ಕೂಟದವರು ಮತ್ತು ತಿರುವನಂತಪುರ ಕಾರ್ಪೊರೇಷನ್‌ನಲ್ಲಿ ಬಿಜೆಪಿಯ ಆಡಳಿತವನ್ನು ವಿರೋಧಿಸುವ ಎಲ್‌ಡಿಎಫ್ ಒಕ್ಕೂಟದವರು ಎರಡೂ ಒಂದೇ ದೋಣಿಯ ಪ್ರಯಾಣಿಕರು ಎಂದು ಎಂ.ಎಲ್. ಅಶ್ವಿನಿ ಇದೇ ವೇಳೆ ತಿಳಿಸಿದರು.

ಬಿಜೆಪಿ ಮುಳಿಯಾರು ಕ್ಷೇತ್ರ ಸಮಿತಿ ಅಧ್ಯಕ್ಷ ದಿಲೀಪ್ ಪಳ್ಳಂಜಿ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ರಾಜ್ಯ ಸಮಿತಿ ಸದಸ್ಯೆ ಪ್ರಮೀಳಾ ಸಿ. ನಾಯ್ಕ್, ಜಿಲ್ಲಾ ಕಾರ್ಯದರ್ಶಿ ಮಹೇಶ್ ಗೋಪಾಲ್, ಜಿಲ್ಲಾ ಸೆಲ್ ಸಂಯೋಜಕ ಸುಕುಮಾರ ಕುದ್ರೆಪ್ಪಾಡಿ, ರಾಜ್ಯ ಕೌನ್ಸಿಲ್ ಸದಸ್ಯ ಶಿವಕೃಷ್ಣ ಭಟ್, ಮುಳಿಯಾರು ಕ್ಷೇತ್ರ ಸಮಿತಿ ಪ್ರಧಾನ ಕಾರ್ಯದರ್ಶಿಗಳಾದ ಜಯಕುಮಾರ್ ಮಾನಡ್ಕ ಹಾಗೂ ಶಶಿಕುಮಾರ್ ಅಮ್ಮಂಗೋಡು ಮಾತನಾಡಿದರು. ಎರಡು ದಿನಗಳ ಕಾಲ ನಡೆದ ಶಿಬಿರದಲ್ಲಿ 60ಕ್ಕೂ ಹೆಚ್ಚು ಪದಾಧಿಕಾರಿಗಳು ಭಾಗವಹಿಸಿದ್ದರು.

ಸಜಂಕಿಲದಲ್ಲಿ ಎರಡು ದಿನಗಳ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಅಭಿಯಾನ ಉದ್ಘಾಟನೆ

ದೇಶದ ಹಿತಾಸಕ್ತಿ, ಸಿದ್ಧಾಂತಗಳಿಗೆ ಬಿಜೆಪಿಯಿಂದ ಆದ್ಯತೆ: ರಂಜಿತ್

ಮಂಜೇಶ್ವರ: ವ್ಯಕ್ತಿಗಳು – ವೈಯಕ್ತಿಕ ಹಿತಾಸಕ್ತಿಗಳಿಗಿಂತ ಹೆಚ್ಚಾಗಿ ದೇಶ, ಸಂಘಟನೆ ಮತ್ತು ಸಿದ್ಧಾಂತಗಳಿಗೆ ಪ್ರಾಮುಖ್ಯತೆ ಹಾಗೂ ಆದ್ಯತೆ ನೀಡುವ ಪಕ್ಷ ಬಿಜೆಪಿಯಾಗಿದೆ. ಆದ್ದರಿಂದಲೇ ಬಿಜೆಪಿಯೂ ದೇಶದಲ್ಲಿ ಬಲಿಷ್ಠ ಪಕ್ಷವಾಗಿ ಹೊರಹೊಮ್ಮಿದೆ ಎಂದು ಎಂದು ಬಿಜೆಪಿ ಕೇರಳ ರಾಜ್ಯ ಕಾರ್ಯದರ್ಶಿ ಕೆ. ರಂಜಿತ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಬಿಜೆಪಿ ಮಂಜೇಶ್ವರ ಮಂಡಲ ಸಮಿತಿ ನೇತೃತ್ವದಲ್ಲಿ ಪೈವಳಿಕೆ ಬಾಯಾರು ಸಮೀಪದ ಸಜಂಕಿಲದಲ್ಲಿ 2 ದಿನಗಳ ಕಾಲ ಹಮ್ಮಿಕೊಳ್ಳಲಾದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನ (ಅಧ್ಯಯನ ಶಿಬಿರ)ವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ರಾಜಕೀಯ ಪಕ್ಷಗಳು ಹಲವು ಬಾರಿ ವಿಭಜನೆ ಕಂಡಾಗ ಅಥವಾ ಹಲವು ಬಣಗಳಾಗಿ ರೂಪಾಂತರಗೊಂಡಾಗ ಕಳೆದ ನಾಲ್ಕೂವರೆ ದಶಕಗಳಿಂದ ದಿನೇ ದಿನೇ ಬೆಳೆದು 14 ಕೋಟಿ ಸದಸ್ಯರನ್ನು ಹೊಂದಿರುವ ವಿಶ್ವದ ಅತಿ ದೊಡ್ಡ ಪಕ್ಷವಾಗಿ ಬಿಜೆಪಿ ಹೊರಹೊಮ್ಮಿದೆ ಎಂದು ವಿವರಿಸಿದರು.



ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ. ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ಜಿಲ್ಲಾ ಉಪಾಧ್ಯಕ್ಷರಾದ ಮಣಿಕಂಠ ರೈ ಪಟ್ಲ, ಮುರಳೀಧರ ಯಾದವ್, ಜಿಲ್ಲಾ ಕಾರ್ಯದರ್ಶಿಗಳಾದ ಎನ್.ಮಧು, ಲೋಕೇಶ್ ನೋಂಡ, ಜಿಲ್ಲಾ ಸೆಲ್ ಕೋ-ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಎ.ಕೆ.ಕಯ್ಯಾರು, ಒಬಿಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ದಯಾನಂದ ಮುಜುಂಗಾವು, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಯತಿರಾಜ್ ಶೆಟ್ಟಿ ಮತ್ತು ಕೆ.ವಿ.ರಾಧಾಕೃಷ್ಣ ಭಟ್ ಮತ್ತಿತರರಿದ್ದರು.

ಯಶಸ್ಸಿನ ಮೆಟ್ಟಿಲು

> ಸೋಲುಗಳನ್ನೇ ಯಶಸ್ಸಿನ ಮೆಟ್ಟಿಲುಗಳನ್ನಾಗಿಸಿದ ಇತಿಹಾಸ ಬಿಜೆಪಿದ್ದು. ಪಕ್ಷದ ಇತಿಹಾಸ, ಕಾರ್ಯ ಯೋಜನೆ ಮತ್ತು ಉದ್ದೇಶಗಳನ್ನು ಪಕ್ಷದ ಕಾರ್ಯಕರ್ತರಿಗೆ ತಲುಪಿಸಲು ಪ್ರತಿ 3 ವರ್ಷಗಳಿಗೊಮ್ಮೆ ಬಿಜೆಪಿ ಪ್ರಶಿಕ್ಷಣ ಶಿಬಿರ ಆಯೋಜಿಸುತ್ತದೆ.
>
> ● ರಂಜಿತ್, ಬಿಜೆಪಿ ಕೇರಳ ರಾಜ್ಯ ಕಾರ್ಯದರ್ಶಿ

ವರ್ಕಾಡಿ ಬಾವಲಿಗುಳಿ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಮಹಾಸಭೆ

ಮಂಜೇಶ್ವರ: ವರ್ಕಾಡಿ ಬಾವಲಿಗುಳಿ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯ ವಾರ್ಷಿಕ ಮಹಾಸಭೆ ಶ್ರೀ ಕಟೀಲ್ ಕಚೇರಿ ವಠಾರದಲ್ಲಿ ಸಮಿತಿ ಗೌರವಾಧ್ಯಕ್ಷ ಲಕ್ಷ್ಮೀನಾರಾಯಣ ಹೊಳ್ಳ ಮರಿಕಾಪು ಅಧ್ಯಕ್ಷತೆಯಲ್ಲಿ ನಡೆಯಿತು.





ವಿಜೃಂಭಣೆಯಿಂದ ಹಬ್ಬ ಆಚರಣೆ

ಕಳೆದ 11 ವರ್ಷಗಳಿಂದ ಬಾವಲಿಗುಳಿ ಗ್ರಾಮೀಣ ಪ್ರದೇಶದಲ್ಲಿ ಶ್ರೀ ಗಣೇಶೋತ್ಸವವು ವಿಶೇಷವಾಗಿ ಸಂಭ್ರಮದಿಂದ ಆಚರಿಸಲ್ಪಡುತ್ತಿದೆ. ಈ ವರ್ಷವೂ ಅತ್ಯಂತ ವಿಜೃಂಭಣೆಯಿಂದ ಜರಗಬೇಕಾದರೆ ಇಲ್ಲಿನ ಭಕ್ತರು ಈ ಕಾರ್ಯದಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿ ಯಶಸ್ವಿಗೊಳಿಸಬೇಕು ಎಂದು ಲಕ್ಷ್ಮೀನಾರಾಯಣ ಹೊಳ್ಳ ಮರಿಕಾಪು ನುಡಿದರು.

ವೇದಿಕೆಯಲ್ಲಿ ಸಮಿತಿಯ ಅಧ್ಯಕ್ಷ ವಿಶ್ವನಾಥ ರೈ ಅಡ್ಕ ಗೌರವ ಸಲಹೆಗಾರರಾದ ಶಂಕರನಾರಾಯಣ ಹೊಳ್ಳ ಮರಿಕಾಪು, ಪದ್ಮನಾಭ ಹೊಳ್ಳ, ಮೇಲುಸ್ತುವಾರಿ ಸಮಿತಿಯ ಸತೀಶ್ ಮಳಿ, ಸದಾಶಿವ ಶೆಟ್ಟಿ ನೀರೊಳಿಕೆ, ರಾಜೇಂದ್ರ ಬೋಳದಪದವು ಮತ್ತಿತರರಿದ್ದರು.

ನೂತನ ಪದಾಧಿಕಾರಿಗಳ ಆಯ್ಕೆ

ಸಮಿತಿಯ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಅಧ್ಯಕ್ಷರಾಗಿ ವಿಶ್ವನಾಥ ರೈ ಅಡ್ಕ ಪುನರಾಯ್ಕೆಯಾದರು. ಪ್ರಧಾನ ಕಾರ್ಯದರ್ಶಿಯಾಗಿ ರವಿ ಮುಡಿಮಾರು, ಕೋಶಾಧಿಕಾರಿಯಾಗಿ ಪದ್ಮನಾಭ ಹೊಳ್ಳ ಅವರನ್ನು ಆರಿಸಲಾಯಿತು. ಉಳಿದ ಪದಾಧಿಕಾರಿಗಳನ್ನು ಗತ ವರ್ಷದ ಜವಾಬ್ದಾರಿಯಂತೆ ಮುಂದುವರಿಸಲಾಯಿತು. ಸತೀಶ್ ಮಳಿ ಸ್ವಾಗತಿಸಿ, ರಾಜೇಂದ್ರ ಕಾರ್ಯಕ್ರಮ ವಂದಿಸಿದರು.

ವಿಶೇಷಚೇತನ ಅಶೋಕ್ ಕುಟುಂಬಕ್ಕೆ ಆಸರೆಯಾದ ವಿಜಯ್ ಸಾಮ್ರಾಟ್ ಸಂಘಟನೆ

ಒಂದೇ ತಿಂಗಳಲ್ಲಿ ನಿರ್ಮಾಣವಾಯಿತು ಸುಸಜ್ಜಿತ ಸೂರು!



ಪುತ್ತೂರು: ತಾಲೂಕಿನ ಬಪ್ಪಳಿಗೆ ಸಮೀಪದ ಬಡ ಕುಟುಂಬದ ವಿಶೇಷಚೇತನ ಅಶೋಕ್ ಅವರ ಕುಟುಂಬಕ್ಕೆ ಸಹಜ್ ರೈ ಬಳಜ್ಜ ನೇತೃತ್ವದ ವಿಜಯ್ ಸಾಮ್ರಾಟ್ ಸಂಘಟನೆಯು ನೂತನ ಮನೆ ನಿರ್ಮಿಸಿ ಭಾನುವಾರ ಹಸ್ತಾಂತರಿಸಿದರು.

ತನ್ನ ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ವಾಸಿಸುತ್ತಿದ್ದ ಅಶೋಕ್ ಅವರ ಮನೆ ಶಿಥಿಲಾವಸ್ಥೆಯಲ್ಲಿರುವುದನ್ನು ಗಮನಿಸಿದ ಸ್ಥಳೀಯ ನಿವಾಸಿಗಳಾದ ರವಿ ಗೌಡ ಕರ್ಜಂಜ ಹಾಗೂ ಜನಾರ್ದನ ಗೌಡ ಕರ್ಜಂಜ ಅವರು ನೀಡಿದ ಮಾಹಿತಿಯಂತೆ ವಿಜಯ್ ಸಾಮ್ರಾಟ್ ಸಂಸ್ಥೆಯು ಏ.23 ರಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ನೂತನ ಮನೆ ನಿರ್ಮಿಸಿ ಕೊಡುವ ವಾಗ್ದಾನ ನೀಡಿತ್ತು.

ಇದೀಗ ಕೊಟ್ಟ ವಾಗ್ದಾನದಂತೆ ನಡೆದುಕೊಂಡ ಸಂಘಟನೆ ಜೂ.1 ರಿಂದ ಮನೆ ನಿರ್ಮಾಣ ಕಾರ್ಯ ಕೈಗೊಂಡು ಕೇವಲ ಒಂದೇ ತಿಂಗಳಲ್ಲಿ ಸುಸಜ್ಜಿತ ಸೂರು ನಿರ್ಮಿಸಿ ಇದೀಗ ಅಶೋಕ್ ಅವರಿಗೆ ಹಸ್ತಾಂತರಿಸಲಾಗಿದೆ. ಗೃಹಪ್ರವೇಶ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಮಂಗಳೂರು ವಿಭಾಗದ ಸಹಕಾರ್ಯವಾಹಕ ಸುಭಾಸ್ಚಂದ್ರ ಕಳಂಜ ಅವರು ಅಶೋಕ್ ಅವರಿಗೆ ಭಾರತ ಮಾತೆಯ ಭಾವಚಿತ್ರ ಹಾಗೂ ಮನೆಯ ಕೀ ಹಸ್ತಾಂತರಿಸಿದರು.

ಬಳಿಕ ಮಾತನಾಡಿದ ಅವರು, ಪ್ರತಿಯೊಬ್ಬರೂ ಸೂರು ಹೊಂದಿದರಷ್ಟೇ ದೇಶ ಅಭಿವೃದ್ಧಿಯಾಗಲು ಸಾಧ್ಯ. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದು ಸಂಘಟನೆಗಳು ಬಡವರ ಸಂಕಷ್ಟಕ್ಕೆ ಸ್ಪಂದಿಸುವ ಕಾರ್ಯ ಮಾಡುತ್ತಿದೆ. ಅಂತಹ ಸಂಘಟನೆಗಳಲ್ಲಿ ವಿಜಯ್ ಸಾಮ್ರಾಟ್ ಕೂಡ ಒಂದಾಗಿದ್ದು, ಇದರ ಸ್ಥಾಪಕಾಧ್ಯಕ್ಷ ಸಹಜ್ ರೈ ಬಳಜ್ಜ ಅವರು ತಮ್ಮ ಜನ್ಮದಿನವಾದ ಜೂ.28 ರಂದು ಅಶೋಕ್ ಅವರಿಗೆ ಮನೆ ಹಸ್ತಾಂತರಿಸಿದ್ದಾರೆ. ಇದು ಅವರ ನಾಲ್ಕನೇ ಯೋಜನೆಯಾಗಿದೆ ಎಂದು ಹೇಳಿ ಸಂಘಟನೆ ಹಾಗೂ ಅಶೋಕ್ ಅವರಿಗೆ ಶುಭಹಾರೈಸಿದರು.

ಪುತ್ತೂರು ವಿಭಾಗದ ಜಿಲ್ಲಾ ಕಾರ್ಯನಿರ್ವಾಹಕ ನವೀನ್ ರೈ ಕೈಕಾರ ಮಾತನಾಡಿ, ಬಡ ಹಾಗೂ ನಿರ್ಗತಿಕರಿಗೆ ಮನೆ ನಿರ್ಮಿಸಿಕೊಡುವ ಮೂಲಕ ವಿಜಯ್ ಸಾಮ್ರಾಟ್ ಸಂಸ್ಥೆಯು ಅರ್ಥಪೂರ್ಣ ಸಮಾಜ ಸೇವೆಯಲ್ಲಿ ತೊಡಗಿಕೊಂಡಿದೆ. ಇಂತಹ ಇನ್ನಷ್ಟು ಯೋಜನೆಗಳನ್ನು ಕೈಗೊಳ್ಳಲು ದೇವರ ಅನುಗ್ರಹ ಸಿಗಲಿ ಎಂದು ಹೇಳಿ ಶುಭಹಾರೈಸಿದರು.

ಸಂಸ್ಥೆಯ ಗೌರವ ಸಲಹೆಗಾರರೂ ಆಗಿರುವ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಉಮೇಶ್ ನಾಯಕ್ ಸ್ವಾಗತಿಸಿದರು. ಸಂಸ್ಥೆಯ ಸದಸ್ಯರೂ ಆಗಿರುವ ಮನೆಯ ನಿರ್ಮಾಣ ಯೋಜನೆ ಕೈಗೆತ್ತಿ ಕೊಂಡಿದ್ದ ಈಶಾನ್ಯ ಬಿಲ್ಡರ್ಸ್‌ನ ಶಂಕರ್ ಭಟ್ ಹಾಗೂ ಬಿಜಿಬಿಯ ಜಗ್ಗಣ್ಣ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಸದಸ್ಯರು ಹಾಗೂ ಗಣ್ಯರು ಪಾಲ್ಗೊಂಡಿದ್ದರು.

ಸಂಸ್ಥೆಯ ಸದಸ್ಯರ ಸಹಕಾರ

ಬಡವರಿಗೆ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ಈ ಸಂಸ್ಥೆ ಸ್ಥಾಪಿಸಲಾಗಿದೆ. ಮನೆ ಇಲ್ಲದವರಿಗೆ ವರ್ಷಕ್ಕೊಂದರಂತೆ ಮನೆ ನಿರ್ಮಿಸುವ ಉದ್ದೇಶ ಹಾಕಲಾಗಿದೆ. ಅದರಂತೆ ಅಶೋಕ್ ಅವರ ಕುಟುಂಬದ ಸ್ಥಿತಿಯನ್ನು ನೋಡಿ ನೂತನ ಮನೆ ನಿರ್ಮಿಸಿ ಹಸ್ತಾಂತರಿಸಲಾಗಿದೆ. ಯಾವುದೇ ಬಾಹ್ಯ ದಾನಿಗಳ ಸಹಕಾರವನ್ನು ಕೋರದ ಕೇವಲ ನಮ್ಮ ಸಂಸ್ಥೆಯ ಸದಸ್ಯರ ಸಹಕಾರದೊಂದಿಗೆ ಈ ಮನೆ ನಿರ್ಮಾಣ ಮಾಡಲಾಗಿದೆ. ಸಂಸ್ಥೆಯು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡಿದೆ.

● ಸಹಜ್ ರೈ ಬಳಜ್ಜ

ಸುತ್ತಮುತ್ತ

ಸುಂಟಿಕೊಪ್ಪ ಲಯನ್ಸ್ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆ

ಸುಂಟಿಕೊಪ್ಪ: ಸುಂಟಿಕೊಪ್ಪ ಲಯನ್ಸ್ ಸಂಸ್ಥೆಯ 2026–2027 ಸಾಲಿನ ನೂತನ ಅಧ್ಯಕ್ಷರಾಗಿ ಎಸ್. ಜಿ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿಯಾಗಿ ಗ್ಲೆನ್ ಮನೇಜಸ್ ಆಯ್ಕೆಗೊಳಿಸಲಾಯಿತು. ಸಂಸ್ಥೆಯ ಕಚೇರಿಯಲ್ಲಿ ಚೆಟ್ಟಿಮಾಡ ರಕ್ಷಿತ್ ಅವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಖಜಾಂಚಿಯಾಗಿ ಕೆ.ಪಿ. ಜಗನ್ನಾಥ್ ಆಯ್ಕೆಯಾದರು. ನೂತನ ಪದಾಧಿಕಾರಿಗಳ ಹಾಗೂ ಆಡಳಿತ ಮಂಡಳಿಯ ಪದಗ್ರಹಣ ಸಮಾರಂಭ ಸಂಸ್ಥೆಯ ಅಧ್ಯಕ್ಷ ಚೆಟ್ಟಿಮಾಡ ರಕ್ಷಿತ್ ಇವರ ಅಧ್ಯಕ್ಷತೆಯಲ್ಲಿ ಜು. 1ರಂದು ಸುಂಟಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆಯಲಿದ್ದು ಆಡಳಿತ ಮಂಡಳಿ ನೂತನ ತಂಡಕ್ಕೆ ಅಧಿಕಾರ ಹಸ್ತಾಂತರಿಸಲಿದ್ದಾರೆ.





ದೇವಚಳ್ಳ: ಪುಸ್ತಕ ವಿತರಣೆ

ಸುಳ್ಯ: ಜೇಸಿಐ ಸುಳ್ಯ ಪಯಸ್ವಿನಿ ವತಿಯಿಂದ ದೇವಚಳ್ಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪುಸ್ತಕ ವಿತರಣೆ ಕಾರ್ಯಕ್ರಮವು ಶನಿವಾರ ಶಾಲಾ ಸಭಾಂಗಣದಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಜಯಾನಂದ ಪಟ್ಟೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜೇಸಿಐ 15 ವಲಯ ಅಧ್ಯಕ್ಷ ಸಂತೋಷ್ ಶೆಟ್ಟಿ, ಜೇಸಿಐ ವಲಯ– 15 ನೇತ್ರಾವತಿ ಉಪಾಧ್ಯಕ್ಷ ಜಿತೇಶ್ ಪಿರೇರಾ, ಜೇಸಿಐ ಸುಳ್ಯ ಪಯಸ್ವಿನಿ ಇದರ ಅಧ್ಯಕ್ಷೆ ಲತಾಶ್ರೀ ಸುಪ್ರೀತ್ ಮೋಂಟಡ್ಕ, ಶಾಲಾ ಮುಖ್ಯ ಶಿಕ್ಷಕ ಕುಶಾಲಪ್ಪ ತುಂಬತ್ತಾಜೆ, ವಿಟ್ಲದ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆ ಪ್ರತಿನಿಧಿ ಮೋಹಿನಿ ವಿಶ್ವನಾಥ್, ಎಸ್‌ಡಿಎಂಸಿ ಉಪಾಧ್ಯಕ್ಷೆ ದಿವ್ಯ, ಜೇಸಿಐ ಸುಳ್ಯ ಪಯಸ್ವಿನಿ ಕಾರ್ಯದರ್ಶಿ ತಾರ ಮಾಧವ ಉಪಸ್ಥಿತರಿದ್ದರು. ಈ ಸಂದರ್ಭ ಭಾರತ ಕೃಷಿ ಅಭಿವೃದ್ಧಿ ಸಂಘದ ವತಿಯಿಂದ ಗ್ಯಾಸ್ ಸ್ಟವ್ ಶಾಲೆಗೆ ಹಸ್ತಾಂತರಿಸಲಾಯಿತು. ಜೇಸಿಐ ಸುಳ್ಯ ಪಯಸ್ವಿನಿ ವತಿಯಿಂದ ಅಧ್ಯಕ್ಷ ಲತಾಶ್ರೀ ಸುಪ್ರೀತ್ ಮೋಂಟಡ್ಕ ಅವರು ದೇವಚಳ್ಳದ ಸ.ಹಿ.ಪ್ರಾ. ಶಾಲೆಗೆ ಸುಮಾರು 45,000ಕ್ಕೂ ಅಧಿಕ ಮೌಲ್ಯದ ಪುಸ್ತಕಗಳನ್ನು ಶಾಲೆಗೆ ನೀಡಿದರು. ಮುಖ್ಯ ಶಿಕ್ಷಕ ಕುಶಾಲಪ್ಪ ತುಂಬತ್ತಾಜೆ ಸ್ವಾಗತಿಸಿ, ದೈಹಿಕ ಶಿಕ್ಷಣ ಶಿಕ್ಷಕಿ ವನಿತಾ ವಂದಿಸಿದರು. ಶಿಕ್ಷಕ ಜೀವನ್ ತಳೂರು ಕಾರ್ಯಕ್ರಮ ನಿರ್ವಹಿಸಿದರು.

ಮೊದಲನೇ ಪುಟದಿಂದ

ಪೀಕಲಾಟ!

ಧರ್ಮಸ್ಥಳದಿಂದ ಹೊರಡುವಾಗಲೇ ಬಸ್ ತುಂಬಿರುತ್ತದೆ. ದಾರಿ ಮಧ್ಯೆ ಕೆಲವೆಡೆ ತಂಗುದಾಣದಲ್ಲೇ ಪ್ರಯಾಣಿಕರನ್ನು ಅನಿವಾರ್ಯವಾಗಿ ಬಿಟ್ಟು ಬರಲೇಬೇಕಾದ ಅಸಹಾಯಕ ಸ್ಥಿತಿ ಬಸ್ ಚಾಲಕ, ನಿರ್ವಾಹಕರದ್ದಾಗಿರುತ್ತದೆ.

ಈ ವಿಚಾರವನ್ನು ಈಚೆಗೆ ಬಂಟ್ವಾಳದ ಎಸ್ಸಿಎಸ್ಟಿ ಕುಂದುಕೊರತೆ ಸಭೆಯಲ್ಲಿ ಮುಖಂಡರೋರ್ವರು ಪ್ರಸ್ತಾವಿಸಿ ಕಳವಳ ವ್ಯಕ್ತಪಡಿಸಿದ್ದರಲ್ಲದೆ ಆರ್‌ಟಿಒ,ಕೆಎಸ್ ಆರ್ ಟಿಸಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರಾದರೂ ಇದರಲ್ಲಿ ಯಾವುದೇ ಸುಧಾರಣೆಯಾಗಿಲ್ಲ. ಬೆಳಗ್ಗಿನ ಹೊತ್ತು ಧರ್ಮಸ್ಥಳ– ಮಂಗಳೂರಿಗೆ ಹಾಗೂ ಸಂಜೆಯಿಮನದ ರಾತ್ರಿ ವರೆಗೆ ಮಂಗಳೂರು– ಧರ್ಮಸ್ಥಳ ಮಾರ್ಗವಾಗಿ ಸರಕಾರಿ ಬಸ್‌ಗಳ ಅಸಮರ್ಪಕ ಓಡಾಟದಿಂದ ಪ್ರಯಾಣಿಕರು, ವಿದ್ಯಾರ್ಥಿಗಳ ಪಾಡು ಹೇಳತೀರದ್ದಾಗಿದೆ.

ಕಡಲಪಾಲು

ಮಣೂರು ಬೀಚ್‌ನ ಸೌಂದರ್ಯ ಹೆಚ್ಚುವಲ್ಲಿ ಇದು ಪ್ರಮುಖ ಪಾತ್ರ ವಹಿಸಿತ್ತು. ಆದರೆ ಶನಿವಾರ ರಾತ್ರಿ ಕಿಡಿಗೇಡಿಗಳು ಡಸ್ಟ್‌ಬಿನ್ ಅನ್ನು ಕಿತ್ತು ಸಮುದ್ರಕ್ಕೆ ಎಸೆದು ಸಾರ್ವಜನಿಕ ಆಸ್ತಿಗೆ ಹಾನಿ ಉಂಟುಮಾಡಿದ್ದಾರೆ.

ಹೆಚ್ಚುತ್ತಿದೆ ಬೀಚ್ ಮಲಿನತೆ

ಬೀಚ್‌ನಲ್ಲಿ ಸಮುದ್ರದಿಂದ ತಡಕ್ಕೆ ಸೇರುತ್ತಿ ರುವ ಪ್ಲಾಸ್ಟಿಕ್ ತ್ಯಾಜ್ಯ ಒಂದೆಡೆಯಾದರೆ ಇನ್ನೊಂದೆಡೆ ಬೀಚ್‌ನಲ್ಲಿ ಕುಳಿತು ಗುಂಡು ಪಾರ್ಟಿ ಮಾಡಿ ಅಲ್ಲಲ್ಲಿ ಮಲಿನಗೊಳಿ ಸುವ ಕೃತ್ಯಗಳು ನಿರಂತರ ನಡೆಯುತ್ತಿವೆ. ಹೀಗಾದರೆ ಪ್ರವಾಸಿಗಳು ಬೀಚ್ ಆಸುಪಾಸು ಸಂಚರಿಸುವುದಕ್ಕೆ ಕ್ಲಿಷ್ಟಕರ ಸಮಸ್ಯೆ ಎದುರಿಸುವುದು ಶತಸಿದ್ಧ. ಈ ಹಿನ್ನೆಲೆ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ ಹೆಚ್ಚಿನ ಆಸಕ್ತಿ ವಹಿಸಿ ಈ ಭಾಗಗಳ ಕಣ್ಗಾವಲಿರಿಸಬೇಕೆಂದು ಪರಿಸರಾಸಕ್ತರು, ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬಂಟಕಲ್ಲಿನಲ್ಲಿ ಕೆಸರುಗದ್ದೆ ಕ್ರೀಡಾ ಕೂಟದ ಸಂಭ್ರಮ



ಶಿರ್ವ: ರಾಜಾಪುರ ಸಾರಸ್ವತ ಸೇವಾ ವೃಂದ ಬಂಟಕಲ್ಲು ಇದರ ಆಶ್ರಯದಲ್ಲಿ ಶ್ರೀದುರ್ಗಾ ಮಹಿಳಾ ವೃಂದ ಬಂಟಕಲ್ಲು ಇದರ ಸಹ ಭಾಗಿತ್ವದಲ್ಲಿ ಸಮಾಜಬಾಂಧವರಿಗಾಗಿ ವರ್ಷಂಪ್ರತಿ ಜರುಗುವ ಕೆಸರು ಗದ್ದೆ ಕ್ರೀಡಾ ಮೇಳ ಭಾನುವಾರ ಬಂಟಕಲ್ಲು ಸಮೀಪದ ಸಡಂಬೈಲು ಅನಂತರಾಮ ವಾಗ್ಲೆ ಅವರ ಗದ್ದೆಯಲ್ಲಿ ಜರುಗಿತು.

ಕ್ರೀಡಾ ಮೇಳವನ್ನು ಪೂರ್ವಾಹ್ನ ಉದ್ಯಮಿ ರಾಮಚಂದ್ರ ಪ್ರಭು ಪಡುಬೆಳ್ಳೆ, ಶ್ರೀಕ್ಷೇತ್ರ ಬಂಟಕಲ್ಲು ಶ್ರೀ ದುರ್ಗಾ ಪರಮೇಶ್ವರೀ ದೇವಳದ ಆಡಳಿತ ಮೊಕ್ತೇಸರ ಜಯರಾಮ ಪ್ರಭು ಗಂಪದಬೈಲು, ಬೆಳ್ಳೆ ಗ್ರಾ.ಪಂ. ಮಾಜಿ ಅಧ್ಯಕ್ಷ ಶಶಿಧರ ವಾಗ್ಲೆ, ಮಹಿಳಾ ವೇದಿಕೆಯ ಅಧ್ಯಕ್ಷೆ ವನಿತಾ ದೇವೇಂದ್ರ ಬೋರ್ಕಾರ್, ಸೇವಾವೃಂದದ ಅಧ್ಯಕ್ಷ ಕೆ.ಆರ್. ಪಾಟ್ಕರ್ ವಿಶ್ವನಾಥ್ ಬಾಂದೇಲ್ಕರ್ ಸಹಿತ ಸಮಾಜದ ಗಣ್ಯರು ಗದ್ದೆಗೆ ಹಾಲು ಎರೆಯುವ ಮೂಲಕ ಕ್ರೀಡೋತ್ಸವಕ್ಕೆ ಚಾಲನೆ ನೀಡಿದರು.

ಶಿಕ್ಷಕ ದೇವದಾಸ್ ಪಾಟ್ಕರ್ ಮುದರಂಗಡಿ ನಿರೂಪಿಸಿದರು. ನಂತರ ವಿವಿಧ ರೀತಿಯ ಆಟೋಟ ಕ್ರೀಡಾ ಸ್ಪರ್ಧೆಗಳು, ವೈಯುಕ್ತಿಕ ಹಾಗೂ ಗುಂಪು ಆಟಗಳು, ಮಡಕೆ ಒಡೆಯುವುದು, ಹಗ್ಗ ಜಗ್ಗಾಟ, ಸೇರಿದಂತೆ ಮಕ್ಕಳಿಗೆ, ಯುವಕರಿಗೆ, ಮಧ್ಯ ವಯಸ್ಕರಿಗೆ ಹಾಗೂ ಹಿರಿಯ ನಾಗರಿಕರಿಗೆ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವಿಭಾಗಗಳಲ್ಲಿ ಜನಪದೀಯ ರೀತಿಯಲ್ಲಿ ವಿವಿಧ ಸ್ಪರ್ಧೆಗಳು ನಡೆದವು.

ಸಮಾರೋಪ ಸಮಾರಂಭದಲ್ಲಿ ಪ್ರಗತಿಪರ ಕೃಷಿಕ ಜಯರಾಜ್ ಪಾಟ್ಕರ್ ಇನ್ನಂಜೆ ಅವರನ್ನು ಸನ್ಮಾನಿಸಲಾಯಿತು.

ಶ್ರೀದೇವಳದ ಆಡಳಿತ ಮಂಡಳಿ ಅಧ್ಯಕ್ಷ ಉಮೇಶ್ ಪ್ರಭು ಪಾಲಮೆ, ಸತ್ಯಪ್ರಸಾದ್ ಶೆಣೈ, ಡಾ.ಸುಮತಿ ಪ್ರಭು, ಕಮಲಾ ಪ್ರಭು, ನಿವೃತ್ತ ಶಿಕ್ಷಕ ಲಕ್ಷ್ಮಣ ನಾಯಕ್ ಭಾಗವಹಿಸಿ ವಿಜೇತರಿಗೆ ಬಹುಮಾನ ನೀಡಿ ಅಭಿನಂದಿಸಿದರು. ಸೇವಾ ವೃಂದದ ಅಧ್ಯಕ್ಷ ಕೆ.ಆರ್. ಪಾಟ್ಕರ್ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ದೇವದಾಸ್ ಪಾಟ್ಕರ್ ನಿರೂಪಿಸಿದರು. ವಿಶ್ವನಾಥ್ ಬಾಂದೇಲ್ಕರ್ ವಂದಿಸಿದರು.

ಬೆಳಗ್ಗಿನ ಉಪಾಹಾರದಲ್ಲಿ ಪಾನೀಯ ಸಹಿತ ಮಸಾಲೆ ಅವಲಕ್ಕಿ, ಕಡ್ಲೆ ಉಪ್ಕರಿ, ಮಧ್ಯಾಹ್ನದ ಹಳ್ಳಿ ಊಟದಲ್ಲಿ ಬಿಸಿಬಿಸಿ ಗಂಜಿ, ತಿಮರೆಚಟ್ನಿ, ಉಪ್ಪಡ್ ಪಚ್ಚೀರ್, ಹುರುಳಿ ಸಾರು ಸಹಿತ ವಿವಿಧ ಆಹಾರಗಳಿದ್ದವು.

ಉಳ್ಳಾಲ ತಾಲೂಕು ಪತ್ರಕರ್ತರ ಸಂಘ: ನೆರಿಯಾಕ್ಕೆ ಅಧ್ಯಯನ ಪ್ರವಾಸ



ಕೊಣಾಜೆ: ಉಳ್ಳಾಲ ತಾಲೂಕು ಪತ್ರಕರ್ತರ ಸಂಘ ಹಾಗೂ ಸಮರ್ಪಣಾ ಪರಿವಾರ ಟ್ರಸ್ಟ್, ತೊಕ್ಕೊಟ್ಟು ಇವರ ಸಹಯೋಗದಲ್ಲಿ ಬೆಳ್ತಂಗಡಿ ಗ್ರಾಮದ ನೆರಿಯ ಗ್ರಾಮಕ್ಕೆ ಬುಧವಾರ ಅಧ್ಯಯನ ಪ್ರವಾಸವನ್ನು ಕೈಗೊಂಡು ಸಿಯೋನ್ ಆಶ್ರಮ ಹಾಗೂ ಇಂಟರ್‌ನ್ಯಾಷನಲ್ ಪವರ್ ಕಾರ್ಪೊರೇಷನ್ ಪವರ್ ಪ್ರೈವೇಟ್ ಲಿ.ನ ಜಲ ವಿದ್ಯುತ್ ಘಟಕ್ಕೆ ಭೇಟಿ ನೀಡಿದರು.

ಆಶ್ರಮಕ್ಕೆ ಭೇಟಿ

ಬೆಳ್ತಂಗಡಿ ತಾಲೂಕಿನ ನೆರಿಯಾದಲ್ಲಿ ಸಿ. ಪೌಲೋಸ್ ಸ್ಥಾಪಿಸಿದ ನೂರಾರು ನಿರ್ಗತಿಕರ, ಮಾನಸಿಕ ಅಸ್ವಸ್ಥರು ಹಾಗೂ ವಿಶೇಷ ಚೇತನರು ವಾಸವಾಗಿರುವ ಸಿಯೋನ್ ಆಶ್ರಮಕ್ಕೆ ಭೇಟಿ ನೀಡಿ ಅಲ್ಲಿಯ ವ್ಯವಸ್ಥೆಯ ಬಗ್ಗೆ ಅರಿತುಕೊಂಡರು. ಆಶ್ರಮದ ಸದಸ್ಯರು ಬಿಡಿಸಿದ ಸುಂದರ ಚಿತ್ರಗಳು, ತಯಾರಿಸಿದ ಗೊಂಬೆಗಳು, ಆಟಿಕೆಗಳು ಹಾಗೂ ಮೇಣದ ಬತ್ತಿಗಳು ಮೊದಲಾವುಗಳನ್ನು ವೀಕ್ಷಿಸಲಾಯಿತು.

ಬಳಿಕ ನೆರಿಯಾ ಬೆಟ್ಟಗಳ ನಡುವೆ ಇರುವ ಇಂಟರ್‌ನ್ಯಾಷನಲ್ ಪವರ್ ಕಾರ್ಪೊರೇಷನ್ ಪವರ್ ಪ್ರೈವೇಟ್ ಲಿಮಿಟೆಡ್‌ನ ಜಲವಿದ್ಯುತ್ ಯೋಜನೆಯ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ತಂಡದಲ್ಲಿ ಉಳ್ಳಾಲ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಶಿಧರ ಪೊಯ್ಯತ್ತಬೈಲ್, ನಿಕಟಪೂರ್ವ ಅಧ್ಯಕ್ಷರಾದ ವಸಂತ್ ಕೊಣಾಜೆ, ಸಮರ್ಪಣಾ ಪರಿವಾರ ಟ್ರಸ್ಟ್‌ನ ಅಧ್ಯಕ್ಷ ಮೋಹನ್ ಶಿರ್ಲಾಲ್, ಜಿಲ್ಲಾ ಉಪಾಧ್ಯಕ್ಷರಾದ ರಾಜೇಶ್ ಶೆಟ್ಟಿ ಬಳ್ಳಾಲ್ ಬಾಗ್, ನಿಕಟಪೂರ್ವ ಜಿಲಾಧ್ಯಕ್ಷ ಅನ್ಸಾರ್ ಇನೋಳಿ, ಕೋಶಾಧಿಕಾರಿ ವಜ್ರ ಗುಜರನ್, ಉಪಾಧ್ಯಕ್ಷ ಸತೀಶ್ ಕುಮಾರ್ ಪುಂಡಿಕಾಯಿ, ಕಾರ್ಯದರ್ಶಿ ಸತೀಶ್ ಕೊಣಾಜೆ, ಸದಸ್ಯರಾದ ಮೋಹನ್ ಕುತ್ತಾರ್, ಶಿವು ಕಿದೂರು, ರಜನಿಕಾಂತ್, ಪತ್ರಕರ್ತ ರಂಜನ್, ಆಶ್ವಿನ್, ಸುಶ್ಮಿತಾ, ಅಭಿಷೇಕ್, ಗಂಗಾಧರ್, ರಹಿಮಾನ್, ತೇಜು ಮೊದಲಾದವರು ಉಪಸ್ಥಿತರಿದ್ದರು.

ಅದಮಾರು ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಪ್ರೌಢಶಾಲೆ: ವಿದ್ಯಾರ್ಥಿ ಪರಿಷತ್ ಉದ್ಘಾಟನೆ



ಪಡುಬಿದ್ರಿ: ಅದಮಾರಿನ ಪೂರ್ಣಪ್ರಜ್ಞ ಇಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ 2026–27ನೇ ಸಾಲಿನ ವಿದ್ಯಾರ್ಥಿ ಪರಿಷತ್‌ನ ಉದ್ಘಾಟನೆ ಹಾಗೂ ಪ್ರಮಾಣ ವಚನ ಸ್ವೀಕಾರ ಸಮಾರಂಭವು ಶ್ರೀ ವಾಸುದೇವ ಸಭಾಂಗಣದಲ್ಲಿ ನಡೆಯಿತು.

ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕ ಶಕ್ತಿವೇಲು ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿ ನಾಯಕರುಗಳಿಗೆ ಬ್ಯಾಡ್ಜ್ ಹಾಗೂ ಸ್ಯಾಶ್‌ಗಳನ್ನು ಕೊಟ್ಟರು. ನಂತರ ಮಾತನಾಡಿ ವಿದ್ಯಾರ್ಥಿಗಳು ಶಾಲಾ ದಿನದಿಂದಲೇ ನಾಯ ಕತ್ವ ಶಿಸ್ತು ಹಾಗೂ ಸೇವಾ ಮನೋ ಭಾವ ಬೆಳೆಸಿ ಕೊಳ್ಳಲು ಕಿವಿ ಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲೆಯ ಗೌರವ ಸಹಕಾರ್ಯದರ್ಶಿ ಸುದರ್ಶನ್ ವೈ. ಎಸ್. ನೂತನವಾಗಿ ಆಯ್ಕೆಯಾದ ವಿದ್ಯಾರ್ಥಿ ನಾಯಕರು ತಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕೆಂದು ಕರೆ ನೀಡಿದರು.

ಪ್ರೌಢಶಾಲೆಯ ಮುಖ್ಯೋಪಾಧ್ಯಾಯನಿ ಕಾಂತಿ ಭಟ್ ಉಪಸ್ಥಿತರಿದ್ದರು. ಶಿಕ್ಷಕಿ ವಿದ್ಯಾಶ್ರೀ ಸ್ವಾಗತಿಸಿದರು. ಸುಕೇಶಿನಿ ವಂದಿಸಿದರು. ಗೀತಾ ಕಾರ್ಯಕ್ರಮವನ್ನು ನಿರೂಪಿಸಿದರು.

ಕಟೀಲು ಪ್ರೌಢಶಾಲೆಯ ಶಿಕ್ಷಕ-ರಕ್ಷಕ ಸಭೆ



ಕಟೀಲು: ಶ್ರೀ ದುರ್ಗಾಪರಮೇಶ್ವರಿ ದೇವಳ ಪ್ರೌಢಶಾಲೆಯ ಶಿಕ್ಷಕ–ರಕ್ಷಕ ಸಭೆಯನ್ನು ವಿದ್ಯಾಸಂಸ್ಥೆಯ ಭಾರತೀ ಸಭಾಭವನದಲ್ಲಿ ನಡೆಸಲಾಯಿತು.

ಮುಂಡ್ಕೂರು ಶಾಲೆಯ ಶಿಕ್ಷಕ, ಕಾರ್ಕಳ ತಾಲೂಕು ಕಸಾಪ ಅಧ್ಯಕ್ಷ ಪ್ರಭಾಕರ ಶೆಟ್ಟಿ ಕೊಂಡಳ್ಳಿ ಉಪನ್ಯಾಸ ನೀಡಿದರು. ಬೆಳೆಯುತ್ತಿರುವಂತಹ ಮಗುವಿಗೆ ಬೇಕಾಗಿರುವಂತದ್ದು ಸರಿಯಾದ ಮಾರ್ಗದರ್ಶನ. ಈ ನಿಟ್ಟಿನಲ್ಲಿ ಯಾವುದೇ ಮಗುವನ್ನು ಸರಿಯಾಗಿ ಗಮನಿಸದೇ ನಿಂದನೆಗೆ ಒಳಪಡಿಸುವುದು ತರವಲ್ಲ. ಮಗುವಿನ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸಿ ಬೇಕಾದ ಮಾರ್ಗದರ್ಶನವನ್ನು ಸರಿಯಾದ ರೀತಿಯಲ್ಲಿ ನೀಡಿದಾಗ ಅದು ಮಗು ಸಾಧನೆಯ ಪಥದಲ್ಲಿ ಸಾಗಲು ಸಾಧ್ಯ ಎಂದರು.

ಕಟೀಲು ವಿದ್ಯಾಸಂಸ್ಥೆ ಸಂಯೋಜನಾಧಿಕಾರಿ ದಯಾನಂದ ಮಾಡ, ಕನ್ನಡ ಮಾಧ್ಯಮ ಪ್ರೌಢ ಶಾಲೆಯ ಬೋಧಕ ವೃಂದದವರು ಉಪಸ್ಥಿತರಿದ್ದರು.

ಸಹಾಯಕ ಅಧ್ಯಾಪಕ ಉಮೇಶ್ ನೀಲಾವರ ಕಾರ್ಯಕ್ರಮ ನಿರೂಪಿಸಿದರು, ಉಪ ಪ್ರಾಚಾರ್ಯ ರಾಜಶೇಖರ್ ಎನ್. ಸ್ವಾಗತಿಸಿದರು. ಪ್ರಸಕ್ತ ಸಾಲಿನ ಶಿಕ್ಷಕ–ರಕ್ಷಕ ಸಂಘದ ಪದಾಧಿಕಾರಿಗಳನ್ನು ನೇಮಿಸಲಾಯಿತು.

ಶಿವಾಜಿಯ ಧರ್ಮನಿಷ್ಠೆ, ದೇಶಭಕ್ತಿ ಸರ್ವರಿಗೂ ಪ್ರೇರಣೆ: ರಾಧಾಕೃಷ್ಣ



ಬಂಟ್ವಾಳ: ಭಜನೆಯಿಂದ ಆತ್ಮಶುದ್ಧಿ ಸಾಧ್ಯ. ಸಾಮೂಹಿಕ ಹುಟ್ಟು ಹಬ್ಬದಿಂದ ಸಮಾಜದಲ್ಲಿ ನಾವೆಲ್ಲರೂ ಒಂದೇ ಎಂಬ ಮನಸ್ಥಿತಿ ಬೆಳೆಯುತ್ತದೆ. ಶಿವಾಜಿಯ ಧರ್ಮ ನಿಷ್ಠೆ, ದೇಶಭಕ್ತಿ ನಮಗೆಲ್ಲಾ ಪ್ರೇರಣೆ ಯಾಗಿದೆ ಎಂದು ಶ್ರೀರಾಮ ಪ್ರೌಢಶಾಲೆಯ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರು, ಕರ್ನಾಟಕ ದಕ್ಷಿಣ ಪ್ರಾಂತದ ಹಿಂದೂ ಜಾಗರಣ ವೇದಿಕೆಯ ಕಾರ್ಯಕಾರಿಣಿ ಸದಸ್ಯರಾದ ರಾಧಾಕೃಷ್ಣ ಅಡ್ಯಂತಾಯ ಅವರು ಹೇಳಿದರು.

ಕಲ್ಲಡ್ಕ ಶ್ರೀರಾಮ ಪ್ರೌಢ ಶಾಲೆಯ ಮಧುಕರ ಸಭಾಂಗಣದಲ್ಲಿ ನಡೆದ ಸಾಮೂಹಿಕ ಹುಟ್ಟುಹಬ್ಬ, ಭಜನೆ ಮತ್ತು ಹಿಂದೂ ಸಾಮ್ರಾಜ್ಯ ದಿನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅತಿಥಿ ಅಭ್ಯಾಗತರು ಭಾರತ ಮಾತೆ ಮತ್ತು ಶಿವಾಜಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀರಾಮ ಪ್ರೌಢ ಶಾಲೆಯ ಮುಖ್ಯ ಗುರುಗಳಾದ ಗೋಪಾಲ್ ಉಪಸ್ಥಿತರಿದ್ದರು. ಇದೇ ವೇಳೆ ವಿದ್ಯಾರ್ಥಿಗಳಿಂದ ಭಜನಾ ಸಂಕೀರ್ತನೆ ನೆರವೇರಿತು.

ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಹುಟ್ಟುಹಬ್ಬ ಆಚರಿಸುವ ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಸಮರ್ಪಣಾ ನಿಧಿಯನ್ನು ಅರ್ಪಿಸಿ, ಅತಿಥಿಗಳಿಂದ ತಿಲಕಧಾರಣೆ ಮತ್ತು ಆಶೀರ್ವಾದ ಪಡೆದುಕೊಂಡರು. ಚಿರಂತ್ ಅಮೃತವಚನ ನುಡಿದನು. ಧಾತ್ರಿ ದೇಶಭಕ್ತಿ ಗೀತೆಯನ್ನು ಹಾಡಿದಳು. ವಿದ್ಯಾರ್ಥಿಗಳಾದ ಧನ್ಯ ಸ್ವಾಗತಿಸಿ, ಪ್ರಜ್ಞ ವಂದಿಸಿದಳು. ದಿಶಾ ಕಾರ್ಯಕ್ರಮ ನಿರೂಪಿಸಿದಳು.

ಕನಡ ಮೊಯಿಲಿ ಸಮಾಜ ಸುಧಾರಕ ಸಂಘದ ವಾರ್ಷಿಕೋತ್ಸವ



ಮಂಗಳೂರು: ಕನ್ನಡ ಮೊಯಿಲಿ ಸಮಾಜ ಸುಧಾರಕ ಸಂಘ ಶ್ರೀ ರಾಧಾಕೃಷ್ಣ ಮಂದಿರ ಉರ್ವ ಮಂಗಳೂರು ಇದರ 79ನೇ ವಾರ್ಷಿಕೋತ್ಸವ ಸಮಾರಂಭ ಸಂಘದ ಸಭಾಂಗಣದಲ್ಲಿ ಇತ್ತೀಚೆಗೆ ನಡೆಯಿತು.

ಎಂಆರ್‌ಪಿಎಲ್ ಸೀನಿಯರ್ ಮ್ಯಾನೇಜರ್ ಪ್ರಭಾಕರ್ ದೇವಾಡಿಗ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಬಾರ್ಕೂರು ಶ್ರೀ ಏಕನಾಥೇಶ್ವರಿ ದೇವಸ್ಥಾನದ ಕಾರ್ಯಾಧ್ಯಕ್ಷ ಜನಾರ್ದನ ದೇವಾಡಿಗ, ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸದಾಶಿವ ಕಾಮತ್ ಶುಭ ಹಾರೈಸಿದರು.

ಕ್ರೀಡಾ ಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಧನಸಹಾಯ ನೀಡಲಾಯಿತು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳಿಸಿದ ಸಮಾಜದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಿಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸುಶ್ಮಿತಾ ಎನ್. ಹಾಗೂ ಇತ್ತೀಚೆಗೆ ಮಾಹೆ ವಿವಿಯಿಂದ ಪಿಎಚ್‌ಡಿ ಪದವಿ ಗಳಿಸಿದ ಡಾ. ಪೂಜಾ ಅರ್ಜುನ್ ಅವರನ್ನು ಸನ್ಮಾನಿಸಲಾಯಿತು.

ಕನ್ನಡ ಮೊಯಿಲಿ ಯುವಕ ಸಂಘದ ಅಧ್ಯಕ್ಷ ಸುರೇಶ್ ಕಲ್ಲಾವು, ಮಹಿಳಾ ಮಂಡಳದ ಅಧ್ಯಕ್ಷೆ ಕುಶಲಾ ಲೋಕಯ್ಯ, ಉಪಾಧ್ಯಕ್ಷ ವಸಂತ್ ಅತ್ತಾವರ, ತಾರಾಪ್ರಭ, ಜೊತೆ ಕಾರ್ಯ ದರ್ಶಿ ಗಣೇಶ್ ಮುಳಿಹಿತ್ಲು, ಕೋಶಾಧಿಕಾರಿ ಮಲ್ಲಿಕಾ ಶರತ್, ಅರುಣ್, ಧನಲಕ್ಷ್ಮೀ, ಗೋಪಿನಾಥ್, ಗಂಗಾಧರ್, ವನಜಾ, ರಾಜೇಶ್, ನಿಕ್ಷೇಪ್, ದಿವ್ಯ ಶಮಿತ್ ಉಪಸ್ಥಿತರಿದ್ದರು. ಸುಧಾರಕ ಸಂಘದ ಅಧ್ಯಕ್ಷ ಭುಜಂಗ ಶ್ರೀಯಾನ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಅರುಣ್ ಉರ್ವ ವಾರ್ಷಿಕ ವರದಿ ಮಂಡಿಸಿದರು. ನಿತಿನ್ ಉರ್ವ ವಂದಿಸಿದರು. ಕರುಣಾಕರ ಶ್ರೀಯಾನ್ ಹಾಗೂ ಪದ್ಮಲತಾ ಕರುಣಾಕರ ನಿರೂಪಿಸಿದರು. ಸಮಾಜದ ಮಕ್ಕಳು ಹಾಗೂ ಮಹಿಳಾ ವೇದಿಕೆಯ ಸದಸ್ಯೆಯರಿಂದ ನೃತ್ಯ ವೈವಿಧ್ಯ ಕಾರ್ಯಕ್ರಮ ಜರಗಿತು.



ಪುತ್ತೂರಿನ ಕೇಪು ಗ್ರಾಮದ ಮೈರ ಅಂಗನವಾಡಿ ಕೇಂದ್ರವು ಶ್ರೀರಾಮ ಫೈನಾನ್ಸ್‌ನ ಸಿ.ಎಸ್.ಆರ್. ಫಂಡ್‌ನಲ್ಲಿ ಹಾಗೂ ಗ್ರಾ.ಪಂ. ಅನುದಾನದಲ್ಲಿ ನೂತನವಾಗಿ ನಿರ್ಮಾಣವಾಗಲಿದ್ದು, ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಶಿಲಾನ್ಯಾಸ ನೆರವೇರಿಸಿದರು.

ಬಂಟ್ವಾಳದ ಮಣಿನಾಲ್ಕೂರು ಸ.ಪ.ಪೂ ಕಾಲೇಜಿನ ಪ್ರೌಢಶಾಲೆಯಲ್ಲಿ ಪ್ರತಿಭಾ ಪುರಸ್ಕಾರ, ಯಕ್ಷಗಾನ ನಾಟ್ಯತರಗತಿ ಉದ್ಘಾಟನೆ

ಮಕ್ಕಳಲ್ಲಿ ಸಂಸ್ಕಾರಯುತ ವ್ಯಕ್ತಿತ್ವ ರೂಪಿಸುವಲ್ಲಿ ಯಕ್ಷಗಾನದ ಪಾತ್ರ ಮಹತ್ತರ: ವಾಸುದೇವ ಐತಾಳ್

ಬಂಟ್ವಾಳ: ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಗಳಿಗೆ ಇನ್ನಷ್ಟು ಸಾಧನೆ ಮಾಡಲು ಮತ್ತು ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿಯನ್ನು ನೀಡುತ್ತವೆ. ಯಕ್ಷಗಾನವು ಮಕ್ಕಳ ಸರ್ವತೋಮುಖ ಬೆಳವಣಿಗೆ ಆತ್ಮಸ್ಥೈರ್ಯದ ಜೊತೆಗೆ ಸಂಸ್ಕಾರಯುತ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ ಎಂದು ಯಕ್ಷ ಧ್ರುವ ಪಟ್ಲ ಫೌಂಡೇಶನ್‌ನ ಯಕ್ಷಶಿಕ್ಷಣದ ಸಂಚಾಲಕ ವಾಸುದೇವ ಐತಾಳ್ ರವರು ಹೇಳಿದರು.

ಬಂಟ್ವಾಳ ತಾಲೂಕಿನ ಮಣಿನಾಲ್ಕೂರು ಸ.ಪ.ಪೂ ಕಾಲೇಜಿನ ಪ್ರೌಢ ಶಾಲಾ ವಿಭಾಗದಲ್ಲಿ ಪ್ರಸಕ್ತ ಸಾಲಿನ ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಯಕ್ಷಗಾನ ನಾಟ್ಯತರಗತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದ 10 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತಲ್ಲದೆ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ವತಿಯಿಂದ ಅತ್ಯಧಿಕ ಅಂಕ ಗಳಿಸಿದ ಮೂವರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಹಾಗೂ ಸಂಸ್ಥೆಯ ಸ್ಥಾಪಕಾಧ್ಯಕ್ಷರಾದ ದಿ. ವೆಂಕಟರಮಣ ಐತಾಳರ ಸ್ಮರಣಾರ್ಥ ಅತ್ಯಧಿಕ ಅಂಕಗಳಿಸಿದ ವಿದ್ಯಾರ್ಥಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು. ಈ ಸಂದರ್ಭ ನಿವೃತ್ತ ಶಿಕ್ಷಕರಾದ ನಾರಾಯಣ ನಾಯಕ್ ಹಾಗೂ ಸಂಸ್ಥೆಯಲ್ಲಿ ಮೂರು ವರ್ಷಗಳಿಂದ ಯಕ್ಷ ಗುರುಗಳಾಗಿ ಸೇವೆ ಸಲ್ಲಿಸಿದ ಸಾಯಿ ಸುಮಾ ನಾವಡ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯಲ್ಲಿ 19 ವರ್ಷಗಳಿಂದ ಅಡುಗೆಯವರಾಗಿ ಸೇವೆ ಸಲ್ಲಿಸಿದ ಸುನಂದ ಅವರನ್ನು ಗೌರವಿಸಿ ಬೀಳ್ಕೊಡಲಾಯಿತು.

- **ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ**
- **ಸಂಸ್ಥೆಯಲ್ಲಿ ಮೂರು ವರ್ಷಗಳಿಂದ ಯಕ್ಷ ಗುರುಗಳಾಗಿ ಸೇವೆ ಸಲ್ಲಿಸಿದ ಸಾಯಿ ಸುಮಾ ನಾವಡರಿಗೆ ಗೌರವ**

ಮುಖ್ಯ ಅತಿಥಿಗಳಾಗಿ ಪ್ರತಿಭಾಪುರಸ್ಕಾರ ಕಾರ್ಯಕ್ರಮದ ಪ್ರಾಯೋಜಕರಾದ ಗಣೇಶಕೊಂಗುಜೆ, ಯಕ್ಷಶಿಕ್ಷಣ ಗೌರವ ಸಲಹೆಗಾರರು, ಹಿರಿಯ ಯಕ್ಷಗಾನ ಕಲಾವಿದ ಅಶೋಕ್ ಶೆಟ್ಟಿ ಸರಪಾಡಿ, ಮಡಂತ್ಯಾರು ಜೇಸಿ ಅಧ್ಯಕ್ಷ, ಯಕ್ಷಗುರು ಸಾಯಿ ಸುಮ, ಯಕ್ಷ ಗುರುಗಳುಗಳಾದ ನರಸಿಂಹಯ್ಯ, ಪಟ್ಲ ಫೌಂಡೇಶನ್ ಸರಪಾಡಿ ಘಟಕದ ಅಧ್ಯಕ್ಷ ಶಶಿಕಾಂತ್ ಶೆಟ್ಟಿ ಆರುಮುಡಿ, ಪಟ್ಲ ಫೌಂಡೇಶನ್ ಪುಂಜಾಲಕಟ್ಟೆ ಘಟಕದ ಅಧ್ಯಕ್ಷ ಹರೀಂದ್ರ ಪೈ ಉಪಸ್ಥಿತರಿದ್ದರು. ಶಾಲಾ ಎಸ್‌ಡಿಎಂಸಿ ವಿಶೇಷ ಆಹ್ವಾನಿತ ಸದಸ್ಯರಾದ ಧನಂಜಯ ಶೆಟ್ಟಿ ಸರಪಾಡಿ , ರಾಮಕೃಷ್ಣ ಮಯ್ಯ, ಮಹಾಬಲ ಹೊಳ್ಳ, ಎಸ್ ಡಿಎಂಸಿ ನಿಕಟಪೂರ್ವ ಅಧ್ಯಕ್ಷರಾದ ರಾಜೇಶ್ ಶೆಟ್ಟಿ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ದಯಾನಂದ ಶೆಟ್ಟಿ ಅಮ್ಮೆ, ಉಪಾಧ್ಯಕ್ಷರಾದ ಅಶೋಕ ಶೆಟ್ಟಿ ಪಟ್ಲ ಫೌಂಡೇಶ್ ನನ ಪುಂಜಾಲಕಟ್ಟೆ ಘಟಕದ ಸಂಚಾಲಕ ರಮೇಶ್ ಶೆಟ್ಟಿ ಮಜಲೋಡಿ, ಗೌರವ ಸಲಹೆಗಾರ ಯಶೋಧರ ಶೆಟ್ಟಿ ದಂಡೆ, ಹಿರಿಯ ವಿದ್ಯಾರ್ಥಿ ವಿಶ್ವನಾಥ, ಕೆಲಿಂಜಉಳ್ಳಾಲ್ತಿ ದೈವಸ್ಥಾನದ ಅನುವಂಶಿಕ ಮೊಕ್ತೇಸರರಾದ ಶಂಕರ ನಾರಾಯಣ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಎಸ್‌ಡಿಎಂಸಿ ಅಧ್ಯಕ್ಷರಾದ ಸುಧಾ ಎನ್. ವಹಿಸಿದ್ದರು. ಮುಖ್ಯ ಶಿಕ್ಷಕ ಶ್ರೀಕಾಂತ್ ಎಂ. ಸ್ವಾಗತಿಸಿ, ಪ್ರಸ್ತಾವನೆಗೈದರು. ಶಿಕ್ಷಕ ಉದಯ ಕುಮಾರ್ ಕಾರ್ಯಕ್ರಮವನ್ನು ನಿರೂಪಿಸಿದರು. ಶಿಕ್ಷಕಿ ರಾಜೇಶ್ವರಿ ಜಿ. ವಂದಿಸಿದರು. ಶಿಕ್ಷಕಿಯರಾದ ಪ್ರಿಯಾ ಎನ್, ಶೋಭಾ, ಜಾನ್ ವಾಲ್ಡರ್ ಹಾಗೂ ಸಿಬ್ಬಂದಿಗಳು ಸಹಕರಿಸಿದರು.

ಸುತ್ತ ಮುತ್ತ

ಎಸ್.ಐ.ಆರ್ ಬಗ್ಗೆ ಆತಂಕ ಬೇಡ: ತಹಶೀಲ್ದಾರ್ ನವೀನ್



ಬಂಟ್ವಾಳ: ರಾಜ್ಯದಲ್ಲಿ ಆರಂಭವಾಗಲಿರುವ ಎಸ್.ಐ.ಆರ್ ಕುರಿತಾಗಿ ಜನರು ಯಾವುದೇ ಆತಂಕ, ಗೊಂದಲಗಳು ಬೇಡ ಎಂದು ಬಂಟ್ವಾಳ ಉಪ ತಹಶೀಲ್ದಾರ್ ನವೀನ್ ಕುಮಾರ್ ಬೆಂಜನಪದವು ಹೇಳಿದ್ದಾರೆ.

ಜಮೀಯ್ಯತುಲ್ ಫಲಾಹ್ ಬಂಟ್ವಾಳ ತಾಲೂಕು ಘಟಕ ಹಾಗೂ ಬಂಟ್ವಾಳ ತಾಲೂಕು ಸಂಯುಕ್ತ ಜಮಾಅತ್ ಇದರ ಜಂಟಿ ಆಶ್ರಯದಲ್ಲಿ ಬಿ.ಸಿ.ರೋಡಿನ ಲಯನ್ಸ್ ಸೇವಾ ಮಂದಿರದಲ್ಲಿ ನಡೆದ ಎಸ್.ಐ.ಆರ್ ಬಗ್ಗೆ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಎಸ್.ಐ.ಆರ್ ಪ್ರಕ್ರಿಯೆಗೆ ಒಂದು ತಿಂಗಳ ಕಾಲಾವಕಾಶವಿದ್ದು ಆಯಾಯ ಬೂತ್ ಮಟ್ಟದ ಅಧಿಕಾರಿ (ಬಿ.ಎಲ್.ಒ) ಗಳಿಗೆ ಈಗಾಗಲೇ ತರಬೇತಿ ನೀಡಲಾಗಿದ್ದು ಅವರು ಸಂಪೂರ್ಣವಾಗಿ ಸಹಕಾರ ನೀಡಲಿದ್ದಾರೆ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಜಾಗೃತ ಕರ್ನಾಟಕ ಬೆಂಗಳೂರು ತಂಡದ ಸದಸ್ಯ ನಿಸಾರ್ ಅಹ್ಮದ್ ಮಾತನಾಡಿ, ಗಣತಿ ನಮೂನೆ ಭರ್ತಿ ಮಾಡುವುದು ಹಾಗೂ ಇದಕ್ಕೆ ಸಂಬಂಧಿಸಿದಂತೆ ಇನ್ನಿತರ ಅನುಮಾನಗಳಿಗೆ ಸೂಕ್ತ ಸಲಹೆ ನೀಡಿದರು.

ಜಮೀಯ್ಯತುಲ್ ಫಲಾಹ್ ಅಧ್ಯಕ್ಷ ಬಿ.ಎಂ. ಅಬ್ಬಾಸ್ ಅಲಿ ಉದ್ಘಾಟಿಸಿದರು, ಸಂಯುಕ್ತ ಜಮಾಅತ್ ಅಧ್ಯಕ್ಷ ಹಾಜಿ. ಮಹಮ್ಮದ್ ಹನೀಫ್ ಗೋಳ್ತಮಜಲು ಅಧ್ಯಕ್ಷತೆ ವಹಿಸಿದ್ದರು. ಸಂಯುಕ್ತ ಜಮಾಅತ್ ಕೋಶಾಧಿಕಾರಿ ಹಾಜಿ ಪಿ.ಎಸ್.ಅಬ್ದುಲ್ ಹಮೀದ್ ನೆಹರು ನಗರ, ಜಮೀಯ್ಯತುಲ್ ಫಲಾಹ್ ಕೋಶಾಧಿಕಾರಿ ಲತೀಫ್ ನೇರಳಕಟ್ಟೆ ಜಮೀಯ್ಯತುಲ್ ಫಲಾಹ್ ಮಾಜಿ ಜಿಲ್ಲಾಧ್ಯಕ್ಷ ಕೆ.ಕೆ. ಸಾಹುಲ್ ಹಮೀದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ವೇಳೆ ಮಂಗಳವಾರ ನಿಧನರಾದ ಖಾಝಿ ತ್ವಾಖಾ ಅಹ್ಮದ್ ಮುಸ್ಲಿಯಾರ್ ನಿಧನಕ್ಕೆ ಸಂತಾಪ ಸೂಚಿಸಿ ಅವರ ಮಗ್ಫಿರತ್ ಗಾಗಿ ಪ್ರಾರ್ಥನೆ ನೆರವೇರಿಸಲಾಯಿತು. ಸಂಯುಕ್ತ ಜಮಾಅತ್ ಪ್ರಧಾನ ಕಾರ್ಯದರ್ಶಿ ನೋಟರಿ ಅಬೂಬಕ್ಕರ್ ವಿಟ್ಲ ಸ್ವಾಗತಿಸಿ, ಬಿ.ಎ. ಮಹಮ್ಮದ್ ಬಂಟ್ವಾಳ ವಂದಿಸಿದರು. ಜಮೀಯ್ಯತುಲ್ ಫಲಾಹ್ ಪ್ರಧಾನ ಕಾರ್ಯದರ್ಶಿ ಹಕೀಂ ಕಲಾಯಿ ನಿರೂಪಿಸಿದರು.

ಮುಲ್ಕಿ ಬ್ಲಾಕ್ ಕಾಂಗ್ರೆಸ್ ನಿಯೋಗದಿಂದ ಕೆಪಿಸಿಸಿ ಅಧ್ಯಕ್ಷರ ಭೇಟಿ

ಮುಲ್ಕಿ: ಕರ್ನಾಟಕದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಬಲಿಷ್ಠವಾಗಬೇಕಾದರೆ ಪಕ್ಷದ ನಾಯಕರುಗಳು, ಕಾರ್ಯಕರ್ತರುಗಳು ಪಕ್ಷದ ಸಂಘಟನೆ ಕಾರ್ಯಗಳನ್ನು ಯಶಸ್ವಿಗೊಳಿಸಿ ಎಂದು ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು ಬೆಂಗಳೂರು ಗೃಹ ಕಚೇರಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷ ಬಿ. ಕೆ. ಹರಿಪ್ರಸಾದ್ ಅವರನ್ನು ಮುಲ್ಕಿ ಬ್ಲಾಕ್ ಕಾಂಗ್ರೆಸ್ ನ ನಿಯೋಗವು ಭೇಟಿ ಮಾಡಿ ಅಭಿನಂದಿಸಿದ ಸಂದರ್ಭ ಮಾತನಾಡಿದರು. ನಿಯೋಗದಲ್ಲಿ ಮುಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಕೋಟ್ಯಾನ್, ಕೆಪಿಸಿಸಿ ಸದಸ್ಯ ಎಚ್ ವಸಂತ ಬೆರ್ನಾಡ್ ಮುಲ್ಕಿ ನ.ಪಂ. ಮಾಜಿ ಸದಸ್ಯ ಯೋಗೀಶ್ ಕೋಟ್ಯಾನ್, ಹಳೆಯಂಗಡಿ ಪ್ರಜಾಪ್ರತಿನಿಧಿ ಅಧ್ಯಕ್ಷಜಲಿಲ್ ಪೂಜಾರಿ ಸಸಿ ಹಿತ್ಲು ಕಾರ್ಯದರ್ಶಿ ಅಬ್ದುಲ್ ಅಜೀಜ್, ಮುಲ್ಕಿ ತಾಲೂಕು ಗ್ಯಾರಂಟಿ ಸಮಿತಿಯ ಸದಸ್ಯ ಸುಭಾಷ್ ಚಂದ್ರ ಕೆ.ಎಸ್ ಮತ್ತಿತರರಿದ್ದರು.

ಜಿಲ್ಲಾ ಮಟ್ಟದ ಎ.ಐ ಕಾರ್ಯಾಗಾರ

ಬಂಟ್ವಾಳ: ಸೌತ್ ಕೆನರಾ ಫೋಟೋ ಗ್ರಾಫರ್ಸ್ ಅಸೋಸಿಯೇಷನ್‌ನ ಬಂಟ್ವಾಳ ವಲಯದ ವತಿಯಿಂದ ಜಿಲ್ಲಾ ಮಟ್ಟದ ಎ.ಐ ಕಾರ್ಯಾಗಾರವು ಬಿ.ಸಿ ರೋಡ್‌ನ ರೋಟರಿ ಕ್ಲಬ್ ಸಭಾಭವನದಲ್ಲಿ ಶನಿವಾರ ನಡೆಯಿತು. ಅಸೋಸಿಯೇಷನ್ ನ ಬಂಟ್ವಾಳ ವಲಯಾಧ್ಯಕ್ಷರಾದ ರಾಜೇಂದ್ರ ಕೆ. ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದು ಎಸ್. ಕೆ. ಪಿ.ಎ ಜಿಲ್ಲಾಧ್ಯಕ್ಷ ರಾದ ನವೀನ್ ರೈ ಪಂಜಲರವರು ಕಾರ್ಯಾಗಾರ ಉದ್ಘಾಟಿಸಿ ಛಾಯಾಗ್ರಾಹಕರು ಇದರ ಸದುಪಯೋಗ ಪಡೆಯುವಂತೆ ಕೋರಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಜಯ್ ಮಂಗಳೂರು, ಜಿಲ್ಲಾ ಕಟ್ಟಡ ಸಮಿತಿ ಅಧ್ಯಕ್ಷರಾದ ಆನಂದ್, ಜಿಲ್ಲಾ ಕ್ರೀಡಾ ಕಾರ್ಯದರ್ಶಿ ಹರೀಶ್ ಕುಂದರ್, ಗೌರವಾಧ್ಯಕ್ಷರಾದ ಕಿಶೋರ್, ಛಾಯಾ ಕಾರ್ಯದರ್ಶಿ ಪ್ರಶಾಂತ್ ಉಪಸ್ಥಿತರಿದ್ದರು. ವಲಯದ ಕಾರ್ಯದರ್ಶಿ ರವಿ ಕಲ್ಲನೆ ಸ್ವಾಗತಿಸಿ, ಕೋಶಾಧಿಕಾರಿ ಕೃಷ್ಣರಾಜ್ ರಾವ್ ವಂದಿಸಿದರು. ದಯಾನಂದ್ ಬಂಟ್ವಾಳ್ ನಿರೂಪಿಸಿದರು. ಬಳಿಕ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಸಂದೀಪ್ ಶ್ಯಾಡೋ ಅವರು ಎ.ಐ.ಕುರಿತು ಮಾಹಿತಿ ನೀಡಿದರು.

ಚಾಲಕ ಹುದ್ದೆಗೆ ನೇಮಕಾತಿ

ಕಾಸರಗೋಡು: ಜಿಲ್ಲೆಯಲ್ಲಿ ಪಶುಪಾಲನಾ ಇಲಾಖೆಯಿಂದ ಜಾರಿಗೆ ತರಲಾದ ಮನೆ ಬಾಗಿಲಿನ ರಾತ್ರಿ ಪಶುವೈದ್ಯಕೀಯ ಸೇವೆಗೆ ಚಾಲಕ ಕಮ್ ಅಟೆಂಡೆಂಟ್ ನೇಮಕಾತಿಗಾಗಿ ಸಂದರ್ಶನವು ಜೂ.30 ರಂದು ಮಧ್ಯಾಹ್ನ 2.30ಕ್ಕೆ ವಿದ್ಯಾನಗರದ ಸಿವಿಲ್ ಸ್ಟೇಷನ್‌ನಲ್ಲಿರುವ ಜಿಲ್ಲಾ ಪಶುಪಾಲನಾ ಕಚೇರಿಯಲ್ಲಿ ನಡೆಯಲಿದೆ. ನೀಲೇಶ್ವರ ಬ್ಲಾಕ್‌ನಲ್ಲಿ ನೇಮಕಾತಿ ನಡೆಯಲಿದೆ. 7ನೇ ತರಗತಿ, ಲಘು ವಾಹನ ಚಾಲನಾ ಪರವಾನಗಿ ಅರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 04994 224624 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

3.23 ಕೋಟಿ ರೂ. ವೆಚ್ಚದ ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಉದ್ಘಾಟನೆ

ನೂರು ಮಕ್ಕಳ ವ್ಯಾಸಂಗ, ವಸತಿಗೆ ಅವಕಾಶ: ಶಾಸಕ ಪೊನ್ನಣ್ಣ

ಶ್ರೀಮಂಗಲ: ವ್ಯಾಸಂಗ ಮಾಡಲು ಸಮೀಪದಲ್ಲಿ ಶಾಲೆ ಆಟದ ಮೈದಾನಗಳೊಂದಿಗೆ ಸುಸಜ್ಜಿತವಾದ ವಿದ್ಯಾರ್ಥಿಗಳ ವಸತಿ ನಿಲಯ ನಿರ್ಮಾಣವಾಗಿದ್ದು ಈ ಭಾಗದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಸರಕಾರದ ಈ ಸೌಲಭ್ಯವನ್ನು ಪಡೆದು ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕೆಂದು ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್. ಪೊನ್ನಣ್ಣ ಅವರು ಕರೆ ನೀಡಿದರು.



ಪೊನ್ನಂಪೇಟೆ ತಾಲೂಕು ವ್ಯಾಪ್ತಿಯ ಕುಟ್ಟದಲ್ಲಿ ರೂ 3.23 ಕೋಟಿ ಅನುದಾನದಲ್ಲಿ ಸುಸಜ್ಜಿತವಾಗಿ ನಿರ್ಮಿಸಿರುವ ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಬಾಲಕರ ಸುಸಜ್ಜಿತ ವಿದ್ಯಾರ್ಥಿ ವಸತಿ ನಿಲಯವನ್ನು ಶನಿವಾರ ಉದ್ಘಾಟಿಸಿ, ಮಾತನಾಡಿದರು.

ಹೆಚ್ಚು ಬುಡಕಟ್ಟು ಜನಾಂಗ ವಾಸವಿರುವ ಪ್ರದೇಶವಾದ ಕುಟ್ಟ ಮತ್ತು ನಾಗರಹೊಳೆ ಭಾಗದ ವಿದ್ಯಾರ್ಥಿಗಳಿಗೆ ಬಹಳ ಸುಸಜ್ಜಿತವಾಗಿ ವಸತಿ ನಿಲಯವನ್ನು ನಿರ್ಮಾಣ ಮಾಡಲಾಗಿದೆ. ಕಟ್ಟಡದ ಕಾಮಗಾರಿಯೂ ಸಹ ತುಂಬಾ ಗುಣಮಟ್ಟದಿಂದ ಕೂಡಿದೆ ಎಂದು ಭಾವಿಸಿದ್ದೇನೆ. ಇದೇ ಶೈಕ್ಷಣಿಕ ವರ್ಷದಿಂದ ವಸತಿಗೃಹ ಆರಂಭವಾಗುತ್ತಿದೆ. 100 ಮಕ್ಕಳಿಗೆ ಇಲ್ಲಿ ವಸತಿಗೆ ಅವಕಾಶವಿದ್ದು 24 ಕೊಠಡಿ ಲಭ್ಯವಿದೆ. ಈಗಾಗಲೇ 52 ಮಕ್ಕಳು ಇದ್ದಾರೆ. ಇಲ್ಲಿನ ವಾತಾವರಣ ಸಹ ಸುಂದರವಾಗಿದ್ದು ಪಕ್ಕದಲ್ಲಿ ಶಾಲೆ ಇದೆ ವಿಶಾಲ ಆಟದ ಮೈದಾನವಿದೆ, ಓದಲಿಕ್ಕೆ ಬಹಳ ಅನುಕೂಲವಾದ ವಾತಾವರಣವಿದ್ದು ಇಲ್ಲಿ ಓದುತ್ತಿರುವ ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂದು ಶಾಸಕ ಪೊನ್ನಣ್ಣ ಹಾರೈಸಿದರು.

ಐಟಿಡಿಪಿ ಜಿಲ್ಲಾಧಿಕಾರಿಗಳಾದ ಹೊನ್ನೇಗೌಡ ಅವರು ಮುಂದಿನ ವಾರ ನಿವೃತ್ತಿಯಾಗುತ್ತಿದ್ದು ನಿವೃತ್ತಿಗೆ ಮೊದಲು ವಸತಿ ಗೃಹವನ್ನು ಅವರ ಆಶಯಂತೆ ಪೂರ್ಣಗೊಳಿಸಿ ಉದ್ಘಾಟನೆ ಮಾಡಲಾಗಿದೆ. ಜಿಲ್ಲೆಯಲ್ಲಿ ಅವರು ಉತ್ತಮವಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಹೇಳಿದರು. ಈ ಸಂದರ್ಭ ಶಾಸಕರು ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೊಂದಿಗೆ ಮಾತನಾಡಿ ಶುಭ ಹಾರೈಸಿದರು. ನೆಲ ಮಹಡಿ ಅಲ್ಲದೆ ಮೂರು ಅಂತಸ್ತಿನ ವಸತಿ ನಿಲಯವನ್ನು ಸಂಪೂರ್ಣವಾಗಿ ಶಾಸಕರು ಈ ಸಂದರ್ಭ ವೀಕ್ಷಿಸಿ ಸಂತೃಪ್ತಿ ವ್ಯಕ್ತಪಡಿಸಿದರು.

> **ರಾಜ್ಯ ಸರ್ಕಾರಕ್ಕೆ ಧನ್ಯವಾದ ಸಲ್ಲಿಕೆ**
>
> 2024ನೇ ಇಸವಿ ಜನವರಿ ತಿಂಗಳಲ್ಲಿ ಈ ವಸತಿ ನಿಲಯ ಸ್ಥಾಪನೆಗೆ ಭೂಮಿ ಪೂಜೆಯನ್ನು ಸಲ್ಲಿಸ ಲಾಗಿತ್ತು. 2026ನೇ ಜೂನ್ ತಿಂಗಳಲ್ಲಿ ಅಂದರೆ ಎರಡುವರೆ ವರ್ಷದ ನಂತರ ವಸತಿ ನಿಲಯ ನಿರ್ಮಾಣವಾಗಿ ಉದ್ಘಾಟನೆ ಮಾಡಲಾಗುತ್ತಿದೆ. ಐಟಿಡಿಪಿ ಇಲಾಖೆಗೆ ಜಿಲ್ಲಾಡಳಿತಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಈ ಸಂದರ್ಭ ಧನ್ಯವಾದಗಳು ಸಲ್ಲಿಸುತ್ತೇನೆ.
>
> ● ಎ.ಎಸ್. ಪೊನ್ನಣ್ಣ ಶಾಸಕ

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷಕಾಳಿಮಾಡ ಪ್ರಶಾಂತ್, ಮಾಜಿ ತಾ.ಪಂ. ಸದಸ್ಯ ಪಲ್ವಿನ್ ಪೂಣಚ್ಚ, ಕುಟ್ಟ ವಲಯ ಕಾಂಗ್ರೆಸ್ ಅಧ್ಯಕ್ಷ ಎಚ್.ವೈ ರಾಮಕೃಷ್ಣ ಪ್ರಮುಖರಾದ ಮುಕ್ಕಾಟಿರ ನವೀನ್ ತೀತಿರ ಮಂದಣ್ಣ, ಜಿ. ಪಂ. ಮಾಜಿ ಸದಸ್ಯ ಬಾನಂಡ ಪ್ರಥ್ವಿ, ಚೊಟ್ಟೆಯಂಡಮಾಡ ವಿಶು, ಅಪ್ಪಚಂಗಡ ಮೋಟಯ್ಯ, ಕೆ. ಬಾಡಗ ಗ್ರಾ.ಪಂ. ಮಾಜಿ ಅಧ್ಯಕ್ಷ ಚೆಪ್ಪುಡಿರ ಬೋಪಣ್ಣ, ನಾಲ್ಕೇರಿ ವಲಯ ಕಾಂಗ್ರೆಸ್ ಅಧ್ಯಕ್ಷ ತೀತಿರ ಕಟ್ಟಿ ಕಾರ್ಯಪ್ಪ ಕೆ.ಬಾಡದ ವಲಯ ಅಧ್ಯಕ್ಷ ಚಮ್ಮಣಮಾಡು ರವಿ ನರೇಂದ್ರ, ಶೇಖರ್, ಕೇಚಮಾಡ ಸಿದ್ದುರಾಜನ್, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಕೊಡಗು ಜಿಲ್ಲೆಯ ಸಮನ್ವಯ ಅಧಿಕಾರಿ ಹೊನ್ನೇಗೌಡ ಸೇರಿದಂತೆ ಪ್ರಮುಖರು ಹಾಜರಿದ್ದರು.

ಸ್ವಾವಲಂಬಿ ಸಾವಯವ ಕೃಷಿ ಮೇಳ ಆಯೋಜನೆಗೆ ಚಿಂತನೆ: ದಯಾನಂದ

ಮೂಡುಬಿದಿರೆ: ತಮ್ಮ ಜೀವನದುದ್ದಕ್ಕೂ ಔಷಧೀಯ ಗುಣಗಳುಳ್ಳ ಸಸ್ಯಗಳನ್ನು ಪೋಷಿಸಿ, ಬೆಳೆಸಿ ಉಳಿಸಿದ್ದಲ್ಲದೇ ಸಾವಯವ ತರಕಾರಿ ಬೆಳೆಸುವಿಕೆ ಮೂಲಕ ಸಮಾಜಕ್ಕೆ ಅಪಾರ ಕೊಡುಗೆ ನೀಡಿರುವ ಕೀರ್ತಿಶೇಷ ಸ್ವರ್ಗೀಯ ಅನಂತ ಭಟ್ಟರ ಕಾಯಕ, ಹೆಸರು ಶಾಶ್ವತವಾಗಿ ಉಳಿದಿರುವುದಕ್ಕೆ ಅವರಿಂದ ಮಾರ್ಗದರ್ಶನ, ಜ್ಞಾನ ಗಳಿಸಿರುವ ಇಂದಿನ ಸಾವಯವ ಕೃಷಿ ಬಳಗದವರು ನಡೆಸುತ್ತಿರುವ ಅವರ ಸಂಸ್ಮರಣಾ ಕಾರ್ಯಕ್ರಮವೇ ಸಾಕ್ಷಿಯಾಗಿದೆ ಎಂದು ಜಿಲ್ಲಾ ಹಿರಿಯ ಸಹಕಾರಿ ಧುರೀಣ, ಪಡುಮಾರ್ನಾಡು ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ ದಯಾನಂದ ಪೈ ಹೇಳಿದರು.



ಇಲ್ಲಿನ ಅಲಂಗಾರು ಜನತಾ ವಿವಿದುದ್ದೇಶ ಸಹಕಾರಿ ಸಂಘದ ವಠಾರದಲ್ಲಿ ಅಮೃತ ಸಾವಯವ ಮಳಿಗೆ ಮತ್ತು ಸಾವಯವ ಕೃಷಿಕರ ಬಳಗ ಮೂಡುಬಿದಿರೆ ಆಶ್ರಯದಲ್ಲಿ ನಡೆದ ಸ್ವರ್ಗೀಯ ಇರುವೈಲು ಅನಂತ ಭಟ್ಟರ ಸಂಸ್ಮರಣಾ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಸಾವಯವ ಕೃಷಿಯನ್ನು ಬೆಂಬಲಿಸುವ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಮೂಡುಬಿದಿರಿಯಲ್ಲಿ ಜಿಲ್ಲಾ ಮಟ್ಟದ ಸ್ವಾವಲಂಬಿ ಸಾವಯವ ಕೃಷಿ ಮೇಳವನ್ನು ನಡೆಸುವ ಉದ್ದೇಶವನ್ನಿಟ್ಟುಕೊಂಡಿದ್ದು ಫಲ ವತ್ತಾದ ಮಣ್ಣಿನಿಂದ ಫಲವತ್ತಾದ ಬೆಳೆ, ಫಲವತ್ತಾದ ಬೆಳೆಯಿಂದ ಆರೋಗ್ಯಕರ ಸಮಾಜ ನಿರ್ಮಾಣ,ಈ ನಿಟ್ಟಿನಲ್ಲಿ ಸಾವಯವ ಕೃಷಿಕರ ಮತ್ತು ಗ್ರಾಹಕರ ಸಹಕಾರವನ್ನು ಅವರು ಈ ಸಂದರ್ಭ ಕೋರಿದರು. ಪ್ರಗತಿಪರ ಸಾವಯವ ಕೃಷಿಕ ಪಡುಮಾರ್ನಾಡು ದಯಾನಂದ ಭಟ್, ಜಿನೇಂದ್ರ ಹೆಗ್ಡೆ ಅಮೃತ ಸಾವಯವ ಮಳಿಗೆಯಲ್ಲಿ ಅಶೋಕ್ ಭಂಡಾರಿ, ಇರ್ವತ್ತೂರು ವೆಂಕಟರಮಣ ಭಟ್ ಮೂಡುಬಿದಿರೆಯ ವಾಸ್ತು ತಜ್ಞ ಎಂ. ರಾಘವೇಂದ್ರ ಭಂಡಾರ್ಕರ್ ಅವರು ಕೀರ್ತಿಶೇಷ ಅನಂತ ಭಟ್ಟರ ಸಂಸ್ಮರಣೆ ಮತ್ತು ಸಾವಯವ ಕೃಷಿಯ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ವಿವಿಧ ಔಷದೀಯ ಸಸ್ಯಗಳ ಬಗ್ಗೆ ಸ್ವರ್ಗೀಯ ಇರ್ವತ್ತೂರು ಅನಂತ ಭಟ್ಟರ ಸುಪುತ್ರ ವೆಂಕಟರಮಣ ಭಟ್ಟರು ಪರಿಚಯ ನೀಡಿದರು. ನಂತರ ವಿವಿಧ ಔಷದೀಯ ಸಸಿಗಳು, ತರಕಾರಿ ಬೀಜಗಳು, ಸಾವಯವ ಕೃಷಿಕರಿಗೆ ಮತ್ತು ಗ್ರಾಹಕರಿಗೆ ಉಚಿತವಾಗಿ ವಿತರಿಸಲಾಯಿತು. ನಂತರ ಬೆಂಗಳೂರು ರವಿಶಂಕರ್ ಗುರೂಜಿಯವರ ಆರ್ಟ್ಸ್ ಆಫ್ ಲಿವಿಂಗ್ ಕೇಂದ್ರದ ಶಿಕ್ಷಕ ಉದಯ ಅವರು ಗೋ ಆಧಾರಿತ ಕೃಷಿ ಬಗ್ಗೆ ಮಾಹಿತಿ ನೀಡಿದರು. ಅಶೋಕ ಭಂಡಾರಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪಡುಮಾರ್ನಾಡು ದಯಾನಂದ ಭಟ್ಟರು ಪ್ರಾರ್ಥಿಸಿದರು. ಪೆರಿಂಜೆಯ ಗೋಪಾಲಕೃಷ್ಣ ಭಟ್ ವಂದಿಸಿದರು. ಮೂಡುಬಿದಿರೆ ತಾಲೂಕಿನ 50ಕ್ಕೂ ಹೆಚ್ಚಿನ ಸಾವಯವ ರೈತರು ಹಾಜರಿದ್ದು ತಮ್ಮ ಅನುಭವ ಹಂಚಿಕೊಂಡರು.

ಶೃಂಗೇರಿ ಭಾರತೀತೀರ್ಥ ಮೊಬೈಲ್ ಆಸ್ಪತ್ರೆ: ಇಂದು, ನಾಳೆ ಆರೋಗ್ಯ ತಪಾಸಣೆ

ಮಂಗಳೂರು: ಆರೋಗ್ಯ ಸೇವೆಯನ್ನು ಜನಸಾಮಾನ್ಯರಿಗೆ ಇನ್ನಷ್ಟು ಹತ್ತಿರವಾಗಿಸುವ ಉದ್ದೇಶದಿಂದ ಶೃಂಗೇರಿ ತಾಲೂಕಿನ ಶ್ರೀ ಅಭಿನವ ವಿದ್ಯಾತೀರ್ಥ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಭಾಗವಾದ ಶ್ರೀ ಭಾರತೀ ತೀರ್ಥ ಮಹಾಸ್ವಾಮೀಜಿ ಮೊಬೈಲ್ ಆಸ್ಪತ್ರೆ ವತಿಯಿಂದ ರೋಟರಿ ಕ್ಲಬ್ ಶೃಂಗೇರಿ ಹಾಗೂ ತೆಕ್ಕೂರು ಗ್ರಾಮಸ್ಥರ ಸಹಯೋಗದಲ್ಲಿ ಇಂದಿನಿಂದ ಎರಡು ದಿನಗಳ ಕಾಲ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಇಂದು (ಜೂ.29) ತೆಕ್ಕೂರು ವೃತ್ತದ ಬಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಬಿರ ನಡೆಯಲಿದ್ದು, ನಾಳೆ (ಜೂ.30ರಂದು) ವಿಕಾಸ ಸ್ವಸಹಾಯ ಸಂಘ ಸಿದ್ಧರಮಠ ಮತ್ತು ಶ್ರೀ ಸಿದ್ದೇಶ್ವರ ಹಳೆಯ ವಿದ್ಯಾರ್ಥಿಗಳ ಸಂಘ ಇವರ ಸಹಯೋಗ ದಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮಿ ದೇವಸ್ಥಾನದ ಸಿದ್ಧಾರಮಠ ಆವರಣದಲ್ಲಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಸಾರ್ವಜನಿಕರು ಈ ಆರೋಗ್ಯ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಕೊಳ್ಳುವಂತೆ ಕೋರಲಾಗಿದೆ. ಶಿಬಿರದಲ್ಲಿ ಜನರಲ್ ಮೆಡಿಸಿನ್, ಶಿಶು ವೈದ್ಯಕೀಯ, ಸ್ತ್ರೀರೋಗ, ಮೂಳೆ ಚಿಕಿತ್ಸೆ, ನೇತ್ರ ಚಿಕಿತ್ಸೆ ಹಾಗೂ ದಂತ ಚಿಕಿತ್ಸಾ ತಜ್ಞರು ಭಾಗವಹಿಸಿ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಿದ್ದಾರೆ ಹಾಗೂ ವೈದ್ಯರ ಸಲಹೆಯ ಮೇರೆಗೆ ಉಚಿತ ಔಷಧ ವನ್ನು ನೀಡಲಾಗುತ್ತದೆ. ಮೊಬೈಲ್ ಆಸ್ಪತ್ರೆಯ ಮೂಲಕ ಮಲ್ಟಿ-ಸ್ಪೆಷಾಲಿಟಿ ಸಮಾಲೋಚನೆ, ಇಸಿಜಿ, ಪ್ರಯೋಗಾಲಯ ಪರೀಕ್ಷೆಗಳು, ಎಕ್ಸ್-ರೇ ಸೇರಿದಂತೆ ವಿವಿಧ ಆರೋಗ್ಯ ತಪಾಸಣಾ ಸೌಲಭ್ಯ ಒದಗಿಸಲಾಗುತ್ತದೆ. ವಿಶೇಷವಾಗಿ ಮಹಿಳೆ ಯರ ಆರೋಗ್ಯಕ್ಕೆ ಆದ್ಯತೆ ನೀಡುವ ಸೇವೆಗಳನ್ನೂ ಶಿಬಿರದಲ್ಲಿ ಕಲ್ಪಿಸಲಾಗಿದೆ. ಶಿಬಿರದ ಅಂಗವಾಗಿ ಎಲ್ಲಾ ರೋಗಿಗಳಿಗೆ ಲ್ಯಾಬ್ ಪರೀಕ್ಷೆಗಳು ಮತ್ತು ಎಕ್ಸ್-ರೇ ಸೇವೆಗಳಲ್ಲಿ ಶೇಕಡಾ 50 ರಿಯಾಯಿತಿ ನೀಡಲಾಗುತ್ತಿದ್ದು ವೈದ್ಯರ ಉಚಿತ ಸಮಾಲೋಚನೆಯೂ ಲಭ್ಯವಿರಲಿದೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರ ವರೆಗೆ ನೋಂದಣಿ ನಡೆಯಲಿದ್ದು ಸಾರ್ವಜನಿಕರು ಹಳೆಯ ವೈದ್ಯಕೀಯ ದಾಖಲೆ,ವೈದ್ಯಕೀಯ ವರದಿ ಕಡ್ಡಾಯವಾಗಿ ತರುವಂತೆ ಸೂಚಿಸಲಾಗಿದೆ ಎಂದು ಶಿಬಿರದ ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೊರೆಟ್ಟೋ ಹಿಲ್ಸ್ ರೋಟರಿ ಕ್ಲಬ್‌ಗೆ 'ಡೈಮಂಡ್ ಪ್ಲಸ್ ಪ್ರಶಸ್ತಿ'



ಬಂಟ್ವಾಳ: ಇಲ್ಲಿನ ಲೊರೆಟ್ಟೋ ಹಿಲ್ಸ್ ರೋಟರಿ ಕ್ಲಬ್ ಕಳೆದ ಸಾಲಿನಲ್ಲಿ ನಡೆಸಿದ ರೋಟರಿ ಇಮೇಜ್ ವೃದ್ಧಿ ಜೊತೆಗೆ ಸಾಮಾಜಿಕ ಸೇವಾ ಚಟುವಟಿಕೆ ಮತ್ತು ರೋಟರಿ ಸಂಸ್ಥೆಗೆ ನೀಡಿದ ಟಿ ಆರ್‌ಎಫ್- ಪೋಲಿಯೋ ಫಂಡ್ ಮತ್ತಿತರ ಕೊಡುಗೆ ಹಿನ್ನೆಲೆಯಲ್ಲಿ ರೋಟರಿ ಅಂತರ್ ರಾಷ್ಟ್ರೀಯ ಜಿಲ್ಲೆ 3181 ಮಟ್ಟದಲ್ಲಿ 'ಡೈಮಂಡ್ ಪ್ಲಸ್' ಪ್ರಶಸ್ತಿ ಗಳಿಸಿದೆ.

ಮೈಸೂರಿನಲ್ಲಿ ಶನಿವಾರ ಮತ್ತು ಭಾನುವಾರ ನಡೆದ ಎರಡು ದಿನಗಳ 'ಅನುಬಂಧ ಪ್ರಶಸ್ತಿ ಪ್ರದಾನ' ಕಾರ್ಯಕ್ರಮದಲ್ಲಿ ರೋಟರಿ ಅಂತರ್ ರಾಷ್ಟ್ರೀಯ ಜಿಲ್ಲೆ 3181 ಮಟ್ಟದಲ್ಲಿ 'ಡೈಮಂಡ್ ಪ್ಲಸ್' ಪ್ರಶಸ್ತಿ ದೊರೆತಿದೆ.

ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ.ಕೆ., ನಿಯೋಜಿತ ಗವರ್ನರ್ ಸತೀಶ್ ಬೋಳಾರ್, ಮಾಜಿ ಗವರ್ನರ್ ವಿಕ್ರಂ ದತ್ತ ಇವರು ಪ್ರಶಸ್ತಿ ಸ್ವೀಕರಿಸಿದರು. ಇದೇ ವೇಳೆ ಹಿರಿಯ ಸದಸ್ಯ ಕೆ. ರಮೇಶ್ ನಾಯಕ್ ರಾಯಿ ಇವರಿಗೆ 'ಶೈಕ್ಷಣಿಕ ಪುರಸ್ಕಾರ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಹಾಯಕ ಗವರ್ನರ್ ಉಮೇಶ್ ರಾವ್ ಮಿಜಾರು, ನಿಯೋಜಿತ ಗವರ್ನರ್ ಶ್ರುತಿ ಮಾಡ್ತಾ, ಕ್ಲಬ್‌ನ ಅಧ್ಯಕ್ಷ ವಿಜಯ ಫೆರ್ನಾಂಡೀಸ್, ಕಾರ್ಯದರ್ಶಿ ಮೋಹನ್ ಕೆ. ಶ್ರೀಯಾನ್ ರಾಯಿ, ಸ್ಥಾಪಕಾಧ್ಯಕ್ಷ ಅವಿಲ್ ಮಿನೇಜಸ್, ಮಾಜಿ ಅಧ್ಯಕ್ಷ ಎಂ.ಪದ್ಮರಾಜ ಬಲ್ಲಾಳ್, ನಿಯೋಜಿತ ಅಧ್ಯಕ್ಷೆ ಗೀತಾ ಪಿ.ಬಲ್ಲಾಳ್, ಸದಸ್ಯ ರಾಜೇಶ್ ಶೆಟ್ಟಿ ಸೀತಾಳ, ಸೆಬೆಸ್ಟಿನ್ ಮಿನೇಜಸ್, ರೂಪಾ ರಾಜೇಶ್ ಶೆಟ್ಟಿ ಪ್ರೀತಾ ಆಂಟೋನಿ ಸಿಕ್ವೇರ, ಡಾ.ಕ್ಲಾರೆಟ್ ಸಂತೋಷ್ ಡಿಸೋಜ ಮತ್ತಿತರರಿದ್ದರು.



ಕ್ಯಾಂಪ್ಕೊ ಸಂಸ್ಥೆಯ 'ಸಾಂತ್ವನ' ಯೋಜನೆಯಡಿ ಕಾವು ಶಾಖೆಯ ಸಕ್ರಿಯ ಸದಸ್ಯೆ ನಳಿನಿ ಟಿ. ಬಜಕೂಡ್ಲು ಅವರ ಹೃದಯ ಶಸ್ತ್ರಚಿಕಿತ್ಸೆಗೆ ಸಹಾಯಧನದ ಮೊತ್ತ ರೂ.2 ಲಕ್ಷದ ಚೆಕನ್ನು ಕ್ಯಾಂಪ್ಕೊ ಸಂಸ್ಥೆಯ ನಿರ್ದೇಶಕ ಮುರಲೀಕೃಷ್ಣ ಕೆ.ಎನ್. ಅವರು ನಳಿನಿ ಅವರ ಪತಿ ಸುಂದರ ನಾಯ್ಕರಿಗೆ ಹಸ್ತಾಂತರಿಸಿದರು. ಸಂಸ್ಥೆಯ ಮುಖ್ಯ ವ್ಯವಸ್ಥಾಪಕ ಪ್ರಕಾಶ್ ಕುಮಾರ್ ಶೆಟ್ಟಿ, ಶಾಖೆಯ ಪ್ರಬಂಧಕ ಸಂದೇಶ್ ಎ.ಎಸ್. ಮತ್ತು ಕಾಳು ಮೆಣಸು ವಿಭಾಗದ ಮುಖ್ಯಸ್ಥ ನವೀನ, ಸಿಬ್ಬಂದಿ ವರ್ಗದವರಿದ್ದರು.

ದ.ಕ. ಜಿ.ಪಂ. ಗ್ರಾಮೀಣ ಕೈಗಾರಿಕಾ ವಿಭಾಗದಿಂದ ಉಚಿತ ಸಲಕರಣೆ ವಿತರಣೆ



ಸುಳ್ಯ: ದ.ಕ. ಜಿಲ್ಲಾ ಪಂಚಾಯತ್ ಗ್ರಾಮೀಣ ಕೈಗಾರಿಕಾ ವಿಭಾಗ ಮಂಗಳೂರು ವತಿಯಿಂದ ಉಚಿತ ಸಲಕರಣೆ ವಿತರಣೆ ಕಾರ್ಯಕ್ರಮವು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಶಾಸಕಿ ಭಾಗೀರಥಿ ಮುರುಳ್ಯ ಸಲಕರಣೆ ವಿತರಿಸಿ, ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ ಕಿಟ್ ರೂಪದಲ್ಲಿ ಕಮ್ಮಾರಿಕೆ, ಕಾರ್ಪೆಂಟರ್, ಗಾರೆ ಕೆಲಸ, ಅಕ್ಕಸಾಲಿಗ ಎಲೆಕ್ಟ್ರಿಕ್ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಸೇರಿದಂತೆ ಸುಧಾರಿತ ಉಪಕರಣಗಳನ್ನು ನೀಡಲಾಗಿದೆ. ಕೇಂದ್ರ ಸರಕಾರದ ಆಶಯದಂತೆ ಸ್ವಾವಲಂಬನೆ ಮೂಲಕ ಪ್ರತಿಯೊಬ್ಬರು ಬೆಳೆಯಬೇಕು ಜೊತೆಗೆ ಇನ್ನೊಬ್ಬರಿಗೆ ಕೆಲಸ ನೀಡುವಂತಾಗಬೇಕು ಎಂದು ಹೇಳಿದರು. ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಶುಭ ಹಾರೈಸಿದರು. ಗ್ರಾಮೀಣ ಕೈಗಾರಿಕಾ ವಿಭಾಗದ ಉಪ ನಿರ್ದೇಶಕ ಮಂಜುನಾಥ ಹೆಗ್ಡೆ ಕಾರ್ಯಕ್ರಮ ನಿರ್ವಹಿಸಿದರು. ಈ ಸಂದರ್ಭದಲ್ಲಿ 101 ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸಲಾಯಿತು.

> **ಶಾಸಕಿ ಸೂಚನೆ**
>
> ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ ಮಹಿಳಾ ಫಲಾನುಭವಿಗಳು ನಿಂತುಕೊಂಡಿದ್ದನ್ನು ಗಮನಿಸಿದ ಶಾಸಕಿ ಅಧಿಕಾರಿಗಳಿಗೆ ಆಸನವನ್ನು ನೀಡಿ ಎಲ್ಲರು ಕುಳಿತುಕೊಳ್ಳುವಂತೆ ಮಾಡಿದರಲ್ಲದೇ ಆಸನದ ಕೊರತೆ ಹಿನ್ನೆಲೆಯಲ್ಲಿ ವಿತರಣಾ ಕಾರ್ಯಕ್ರಮವನ್ನು ಅತೀ ವೇಗವಾಗಿ ಕಾರ್ಯಕ್ರಮವನ್ನು ನಿರ್ವಹಿಸಲು ಸೂಚಿಸಿ ಮುಕ್ತಾಯಗೊಳಿಸಿದರು.

ಪುತ್ತೂರು ಪ್ರಗತಿ ಎಜುಕೇಶನ್ ಟ್ರಸ್ಟ್‌ನಿಂದ ರಕ್ತ ವರ್ಗೀಕರಣ ಶಿಬಿರ



ಬಡಗನ್ನೂರು: ಕುಂಜೂರು ಪಂಜ ಸ.ಹಿ.ಪ್ರಾ. ಶಾಲಾ ದಶಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಪುತ್ತೂರು ಪ್ರಗತಿ ಎಜುಕೇಶನ್ ಟ್ರಸ್ಟ್ ವತಿಯಿಂದ ರಕ್ತವರ್ಗೀಕರಣ ಶಿಬಿರ ನಡೆಯಿತು.

ಪುತ್ತೂರು ಪ್ರಗತಿ ಎಜುಕೇಶನ್ ಟ್ರಸ್ಟ್ ನ ಪ್ರಾಂಶುಪಾಲೆ ಪ್ರೇಮಲತಾ ದೀಪ ಪ್ರಜ್ವಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ರಕ್ತದಾನ ಮತ್ತು ರಕ್ತವರ್ಗೀಕರಣ ಮಹತ್ವದ ತಿಳಿಸಿ ಶುಭ ಹಾರೈಸಿದರು.

ಕಾರ್ಯಕ್ರಮವು ಎಸ್‌ಡಿಎಂಸಿ ಅಧ್ಯಕ್ಷ ಶರೀಫ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ವೇದಿಕೆಯಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿ ಶಾಲಿನಿ, ಎಸ್‌ಡಿಎಂಸಿ ಉಪಾಧ್ಯಕ್ಷೆ ಶುಭಲಕ್ಷ್ಮಿ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪೂವಪ್ಪ ನಾಯ್ಕ, ದಾನಿ ಬಾಲಕೃಷ್ಣ ಪೂಜಾರಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಶಾಲೆಯ ಅಭಿವೃದ್ಧಿ ಕಾರ್ಯದಲ್ಲಿ ಕೈ ಜೋಡಿಸುತ್ತ ಸುಮಾರು 7ವರ್ಷದಿಂದ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ ಪೂವಪ್ಪ ನಾಯ್ಕ ಅವರನ್ನು ಶಾಲು, ಹಾರ ಹಾಕಿ ಸನ್ಮಾನಿಸಿ ಬೀಳ್ಕೊಡುಗೆ ಮಾಡಲಾಯಿತು. ಮುಖ್ಯಗುರು ಮಹಮ್ಮದ್ ಅಶ್ರಫ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹಿರಿಯ ಶಿಕ್ಷಕಿ ಶಶಿಕಲಾ ಬಿ. ವಂದಿಸಿದರು. ಸಹಶಿಕ್ಷಕಿ ಸುಮಲತ ಪಿ.ಕೆ. ಕಾರ್ಯಕ್ರಮ ನಿರ್ವಹಿಸಿದರು. ಅತಿಥಿ ಶಿಕ್ಷಕಿ ನಮಿತಾ, ಗೌರವ ಶಿಕ್ಷಕಿ ಪ್ರೀತಿ ಸಹಕರಿಸಿದರು.



ಬಂಟ್ವಾಳದ ವಿಲೇಕಂಭಗ್ರಾಮದ ಮಜಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಪೂರ್ವ ಪ್ರಾಥಮಿಕ (ಎಲ್‌ಕೆಜಿ ಮತ್ತು ಯುಕೆಜಿ) ಮಕ್ಕಳಿಗೆ ಸರಕಾರದ ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು. ಕಲ್ಲಡ್ಕ ಕ್ಲಸ್ಟರ್‌ನ ಸಮೂಹ ಸಂಪನ್ಮೂಲ ವ್ಯಕ್ತಿ ಜ್ಯೋತಿ ಸಿ., ಶಾಲಾ ಮುಖ್ಯ ಶಿಕ್ಷಕಿ ವಿನಿಶಾ ಆಗ್ನೆಸ್ ಮಂತೆರೋ, ಹಿರಿಯ ಶಿಕ್ಷಕ ಸಂಗೀತ ಶರ್ಮ ಪಿ.ಜೆ., ಶಿಕ್ಷಕ ಅಹ್ಮದ್ ಕೌಸಿಕ್, ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕಿಯರಾದ ಪಲ್ಲವಿ, ಸುಷ್ಮ, ಆಯಾ ಮೀನಾಕ್ಷಿ ಉಪಸ್ಥಿತರಿದ್ದರು.

ಎಸ್.ಎನ್.ಡಿ ಪೂಜಾರಿ ಅವರ 'ಎ.ಬಯೋಗ್ರಾಫಿಕಲ್ ಸ್ಕೆಚ್ ಆಫ್ ಮುದ್ದು ಮೂಡುಬೆಳ್ಳೆ' ಕೃತಿ ಲೋಕಾರ್ಪಣೆ

ಕನ್ನಡ, ತುಳು, ಕೊಂಕಣಿ ಸಾಹಿತ್ಯಕ್ಕೆ ಕೊಡುಗೆ ಅಪಾರ: ಡಾ. ಜನಾರ್ದನ ಭಟ್

ಶಿರ್ವ: ತೀರಾ ಹಳ್ಳಿಪ್ರದೇಶದ ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ಮುದ್ದು ಮೂಡುಬೆಳ್ಳೆಯವರು ಶಾಲಾ ದಿನಗಳಲ್ಲಿಯೇ ಬೇರೆಯವರಲ್ಲಿ ಕೆಲಸವನ್ನು ಮಾಡುತ್ತಾ ಜೊತೆಗೆ ಶಿಕ್ಷಣವನ್ನು ಪಡೆದು ಸಾಹಿತ್ಯ ಕ್ಷೇತ್ರದಲ್ಲಿಯೂ ಸಕ್ರಿಯರಾಗಿ ಕನ್ನಡ, ತುಳು, ಕೊಂಕಣಿ ಭಾಷೆಗಳಲ್ಲಿ ಕತೆಗಳನ್ನು ಬರೆಯುವ ಹವ್ಯಾಸವನ್ನು ಬೆಳೆಸಿಕೊಂಡವರು. ಕಾದಂಬರಿಗಳನ್ನು ಬರೆದುದಲ್ಲದೆ ತುಳುನಾಡಿನ ಚರಿತ್ರೆಯನ್ನೂ ಬರೆದವರು. ಕತೆ,ಸಣ್ಣ ಕತೆಯ ರಚನಾಕಾರರಲ್ಲಿ ಮುದ್ದು ಮೂಡುಬೆಳ್ಳೆಯವರ ಸಾಧನೆ ಅನನ್ಯ ಎಂದು ಹಿರಿಯ ಸಾಹಿತಿ, ನಿವೃತ್ತ ಪ್ರಾಂಶುಪಾಲರು, ಸಾಹಿತ್ಯ ವಿಮರ್ಶಕ ಡಾ.ಬಿ.ಜನಾರ್ದನ ಭಟ್ ಬೆಳ್ಮಣ್ಣು ನುಡಿದರು.

ಅವರು ಶನಿವಾರ ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆಗಳು ಪಡುಬೆಳ್ಳೆ ಇದರ ಆಶ್ರಯದಲ್ಲಿ ಪಡುಬೆಳ್ಳೆ ಶ್ರೀ ನಾರಾಯಣ ಗುರು ಆಂಗ್ಲ ಮಾಧ್ಯಮ ಶಾಲಾ ಸಭಾಂಗಣದಲ್ಲಿ ಜರುಗಿದ ಖ್ಯಾತ ಲೇಖಕರಾದ ಪ್ರೊ. ಶಂಕರನಾರಾಯಣ ದೂಜ ಪೂಜಾರಿ (ಎಸ್.ಎನ್.ಡಿ.ಪೂಜಾರಿ)ಮಿರಾಮಾರ್ ಗೋವಾ, ಇವರು ಆಂಗ್ಲ ಭಾಷೆಯಲ್ಲಿ ಸಂಪಾದಿಸಿದ ಕೃತಿ 'ಬಯೋಗ್ರಫಿಕಲ್ ಸ್ಕೆಚ್ ಆಫ್ ಮುದ್ದು ಮೂಡುಬೆಳ್ಳೆ' ಇದರ ಲೋಕಾರ್ಪಣೆಗೊಳಿಸಿ, ಲೇಖಕರ ಪರಿಕಲ್ಪನೆ ತುಂಬಾ ಚೆನ್ನಾಗಿದ್ದು, ಮುದ್ದು ಮೂಡುಬೆಳ್ಳೆಯವರ ಬಹುಮುಖ ಪ್ರತಿಭೆಗಳು ಹಾಗೂ ಸಾಧನೆಗಳ ಎಲ್ಲಾ ಆಯಾಮಗಳನ್ನು ತಮ್ಮ ಕೃತಿಯಲ್ಲಿ ಬರೆದಿದ್ದಾರೆ. ಸಾಹಿತಿಯ ಬಗ್ಗೆ ಅತ್ಯಂತ ಶ್ರೇಷ್ಠ ಕೃತಿಯ ರಚನೆ ಮಾಡಿದ ಎಸ್.ಎನ್.ಡಿ.ಪೂಜಾರಿ ಅವರನ್ನು ಅಭಿನಂದಿಸಿದರು.



ಕಾಪು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ. ಪುಂಡಲೀಕ ಮರಾಠೆ ಮಾತನಾಡಿ, ಮುದ್ದು ಮೂಡುಬೆಳ್ಳೆಯವರ ಬಹುಮುಖ ಪ್ರತಿಭೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಗಣನೀಯ ಸಾಧನೆಗಳೇ ಕುತ್ಯಾರಿನಲ್ಲಿ ಜರುಗಿದ ಕಾಪು ತಾಲೂಕು ಪ್ರಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿತ್ತು. ಈ ಕೃತಿ ಮುಂದಿನ ಪೀಳಿಗೆಗೆ ಸ್ಫೂರ್ತಿ ತುಂಬಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಶಾಲಾ ಆಡಳಿತ ಮಂಡಳಿ ಸದಸ್ಯರು, ಬೆಳ್ಳೆ ಸಿ.ಎ.ಬ್ಯಾಂಕ್ ಅಧ್ಯಕ್ಷರಾದ ಶಿವಾಜಿ ಎಸ್.ಸುವರ್ಣ ಇವರು ವಹಿಸಿ ಮುದ್ದು ಮೂಡುಬೆಳ್ಳೆ ಮತ್ತು ಕೃತಿ ರಚನಾಕಾರ ಎಸ್.ಎನ್.ಡಿ.ಪೂಜಾರಿ ಇವರನ್ನು ಸನ್ಮಾನಿಸಿ ಬಹುಮುಖ ಪ್ರತಿಭಾ ಸಂಪನ್ನರಾದ ಮುದ್ದು ಮೂಡುಬೆಳ್ಳೆಯವರು ನಮ್ಮ ಊರಿನವರು ಎನ್ನಲು ಹೆಮ್ಮೆ ಅನಿಸುತ್ತಿದೆ. ಇವರ ಸಾಹಿತ್ಯ ಸೇವೆ ನಿರಂತರ ಮುಂದುವರಿಯಲಿ ಎಂದು ಹಾರೈಸಿದರು. ಸುಕನ್ಯಾ ಸನ್ಮಾನ ಪತ್ರ ವಾಚಿಸಿದರು. ವೇದಿಕೆಯಲ್ಲಿ ಶಾಲಾ ಆಡಳಿತ ಮಂಡಳಿ ಸದಸ್ಯರಾದ ಗೀತಾ ವಾಗ್ಲೆ ಪ್ರಕಾಶ್ ಪಾಲಮೆ, ಜೋಯ್ ಕ್ವಾಡ್ರಸ್ ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕರಾದ ರಾಘವೇಂದ್ರ ಸಾಲಿಯಾನ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಕನ್ನಡ ಮಾಧ್ಯಮ ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ಉಷಾ ಪಿ. ವಂದಿಸಿದರು.. ಸುಜಾತಾ ಸುವರ್ಣ ಮೂಡುಬೆಳ್ಳೆ ಕಾರ್ಯಕ್ರಮ ನಿರೂಪಿಸಿದರು.

ಸುತ್ತ ಮುತ್ತ

ರಶ್ಮಿ ಕೆ.ಎಂ. ನೆಕ್ರಾಜೆ ಅಧಿಕಾರ ಸ್ವೀಕಾರ

ಸುಬ್ರಹ್ಮಣ್ಯ: ದ.ಕ. ಜಿಲ್ಲಾ ನಿರೂಪಣಾಧಿಕಾರಿ ಮತ್ತು ಪ್ರಭಾರ ಜಿಲ್ಲಾ ರಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ರಶ್ಮಿ ಕೆ.ಎಂ.ನೆಕ್ರಾಜೆ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಭಾರ ಜಿಲ್ಲಾ ಉಪನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.



ಇವರು ತಮ್ಮ ಪ್ರೊಬೇಷನರಿ ಅವಧಿಯಲ್ಲಿ ಸುಳ್ಯ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಯಾಗಿ 3 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಇವರ ಕಾರ್ಯತತ್ಪರತೆಗಾಗಿ ಜನಮೆಚ್ಚಿದ ಅಧಿಕಾರಿ ಪುರಸ್ಕಾರ ಪಡೆದಿದ್ದರು. ಬಳಿಕ ಅವರು ಜಿಲ್ಲಾ ನಿರೂಪಣಾಧಿಕಾರಿಯಾಗಿ ನಿಯುಕ್ತರಾಗಿದ್ದರು. ಇವರು ಸುಬ್ರಹ್ಮಣ್ಯ ತಾ.ಪಂ. ನಿಕಟಪೂರ್ವ ಸದಸ್ಯ ಹಾಗೂ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಅಶೋಕ್ ನೆಕ್ರಾಜೆ ಅವರ ಪತ್ನಿ.

ಮುಲ್ಕಿ ರೋಟರಿ ಕ್ಲಬ್ ಅಧ್ಯಕ್ಷರಾಗಿ ಆಯ್ಕೆ

ಮುಲ್ಕಿ: ಮುಲ್ಕಿ ರೋಟರಿ ಕ್ಲಬ್ ನ 2026–27ರ ಸಾಲಿನ ಅಧ್ಯಕ್ಷರಾಗಿ ಭಾನುಮತಿ ಶೆಟ್ಟಿ ಕಕ್ವಗುತ್ತು ಆಯ್ಕೆಯಾಗಿದ್ದಾರೆ.

ಕಾರ್ಯದರ್ಶಿ ಭುಜಂಗ ಕವತ್ತಾರು, ಜೊತೆ ಕಾರ್ಯದರ್ಶಿ ಮೊಹಮ್ಮದ್ ಹಬೀಬುಲ್ಲ, ಕೋಶಾಧಿಕಾರಿ ಜೋವಿನ್ ಪ್ರಕಾಶ್ ಡಿಸೋಜ, ಸರ್ಜಂಟ್ ಎಟ್ ಆರ್ಮ್ ಚಂದ್ರಿಕಾ ಭಂಡಾರಿ ಆಯ್ಕೆಯಾದರು. ಮುಲ್ಕಿ ರೋಟರಿ ಕ್ಲಬ್ ನ



2026–27 ರ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಜು. 8ರಂದು ಸಂಜೆ ಕಾರ್ನಾಡಿನ ರೋಟರಿ ಶತಾಬ್ದಿ ಭವನದಲ್ಲಿ ನಡೆಯಲಿದೆ. ನೂತನ ಅಧ್ಯಕ್ಷೆ ಭಾನುಮತಿ ಶೆಟ್ಟಿ ಮತ್ತವರ ತಂಡದ ಪದಗ್ರಹಣವನ್ನು ರೋಟರಿಯ ಮಾಜಿ ಜಿಲ್ಲಾ ಗವರ್ನರ್ ವಿಕ್ರಮ್ ದತ್ತ ನೆರವೇರಿಸಲಿದ್ದು, ರೋಟರಿಯ ಸಹಾಯಕ ಗವರ್ನರ್ ಜೋಯಲ್ ಹೆರಾಲ್ಡ್ ಡಿ ಸೋಜ, ವಲಯ ಸೇನಾನಿ ದೇವಿದಾಸ್ ಶೆಟ್ಟಿ ಮುಖ್ಯ ಅತಿಥಿಗಳಾಗಿರುವರು ಎಂದು ಪ್ರಕಟಣೆ ತಿಳಿಸಿದೆ.

ತೋಕೂರು ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್‌ಗೆ ಆಯ್ಕೆ

ಮುಲ್ಕಿ: ತೋಕೂರು ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್ ನ 2026–2027ನೇ ಸಾಲಿನ ನೂತನ ಅಧ್ಯಕ್ಷರಾಗಿ ಸುರೇಶ್ ಶೆಟ್ಟಿ ಆಯ್ಕೆಯಾಗಿದ್ದಾರೆ. ಗೌರವ ಅಧ್ಯಕ್ಷರಾಗಿ ಲೀಲಾಧರ್



ಕಡಂಬೋಡಿ, ಉಪಾಧ್ಯಕ್ಷರಾಗಿ ಜಗದೀಶ್ ಕೋಟ್ಯಾನ್, ಮಹಿಳಾ ಕಾರ್ಯಾಧ್ಯಕ್ಷೆಯಾಗಿ ನೀಮಾ ಸನಿಲ್, ಜೊತೆ ಕಾರ್ಯಾಧ್ಯಕ್ಷೆಯಾಗಿ ಶೈಲಾ ಶೆಟ್ಟಿಗಾರ್, ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ್ ದೇವಾಡಿಗ. ಆಯ್ಕೆಯಾಗಿದ್ದಾರೆ.

ಜೊತೆ ಕಾರ್ಯದರ್ಶಿಗಳಾಗಿ ಗಣೇಶ್ ಆಚಾರ್ಯ, ಶ್ರೀ ಸುನಿಲ್ ದೇವಾಡಿಗ, ಮಹಿಳಾ ಜೊತೆ ಕಾರ್ಯದರ್ಶಿ: ಕವಿತಾ ನಾಗೇಶ್, ಕೋಶಾಧಿಕಾರಿ – ಜಗದೀಶ್ ಕುಲಾಲ್, ಜೊತೆ ಕೋಶಾಧಿಕಾರಿ: ರವಿರಾಜ್ ಶೆಟ್ಟಿಗಾರ್, ಸಾಂಸ್ಕೃತಿಕ ಕಾರ್ಯದರ್ಶಿಗಳಾಗಿ ಚಂದ್ರ ಸುವರ್ಣ, ಹರ್ಷಿತಾ ದೇವಾಡಿಗ, ಆರೋಗ್ಯ ನಿಧಿ ಕಾರ್ಯದರ್ಶಿ – ಅರ್ಫಾಜ್, ಲೆಕ್ಕಪರಿಶೋಧಕ – ಸುಭಾಸ್ ಅಮೀನ್, ಕ್ರೀಡಾ ಕಾರ್ಯದರ್ಶಿ – ಗೌತಮ್ ಬೆಳ್ಳಡ, ತಂಡದ ನಾಯಕ: ಸಚಿನ್ ಆಚಾರ್ಯ. ಉಪನಾಯಕನಾಗಿ ಪ್ರಥಮ್ ಅಮೀನ್ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿ ಆಯ್ಕೆ

ಕಿನ್ನಿಗೋಳಿ: ಇಲ್ಲಿನ ರೋಟರಿ ಕ್ಲಬ್ ಅಧ್ಯಕ್ಷರಾಗಿ ಪ್ರವೀಣ್ ಸಾಲ್ಯಾನ್, ನಿಕಟಪೂರ್ವಾಧ್ಯಕ್ಷ ಸಾಯಿನಾಥ್ ಶೆಟ್ಟಿ, ಕಾರ್ಯದರ್ಶಿಯಾಗಿ ಸದಾಶಿವ



ನಾಯ್ಕ್, ಉಪಾಧ್ಯಕ್ಷರಾಗಿ ರಾಜೇಶ್ ಕೆಂಚನಕೆರೆ, ಕೋಶಾಧಿಕಾರಿಯಾಗಿ ಸತೀಶ್ಚಂದ್ರ ಹೆಗ್ಡೆ ನಿರ್ದೇಶಕರಾಗಿ ದೇವಿಪ್ರಸಾದ್ ಶೆಟ್ಟಿ, ಜೆರಾಲ್ಡ್ ಮಿನೇಜಸ್, ಶೇಷರಾಮ ಶೆಟ್ಟಿ, ಹರೀಶ್ ಶೆಟ್ಟಿ ಆಯ್ಕೆಯಾಗಿದ್ದು ಜು. 6ರಂದು ಕಿನ್ನಿಗೋಳಿ ರೋಟರಿ ಸಭಾಭವನದಲ್ಲಿ ಪದಗ್ರಹಣ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.






ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕುವ ಅಭಿಯಾನ ಯಶಸ್ವಿ

ಪ್ರತಿ ಮಗುವಿಗೂ ಪೋಲಿಯೋ ಲಸಿಕೆ ಸಮಾಜದ ಜವಾಬ್ದಾರಿ

ಪುತ್ತೂರು/ಸುಳ್ಯ/ಸುಬ್ರಹ್ಮಣ್ಯ/ಬಂಟ್ವಾಳ/ಮುಲ್ಕಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಅಭಿಯಾನ ಯಶಸ್ವಿಯಾಗಿ ನಡೆಯಿತು. ಜಿಲ್ಲೆಯ ವಿವಿಧ ಸರ್ಕಾರಿ ಆಸ್ಪತ್ರೆ, ಅಂಗನವಾಡಿ ಕೇಂದ್ರ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ಹಾಕುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕೋಡಿಂಬಾಡಿ ಅಂಗನವಾಡಿ ಕೇಂದ್ರ

ಪುತ್ತೂರು ತಾಲೂಕಿನ ಕೋಡಿಂಬಾಡಿ ಅಂಗನವಾಡಿ ಕೇಂದ್ರದಲ್ಲಿ ನಡೆದ ರಾಷ್ಟ್ರೀಯ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ ಶಾಸಕ ಅಶೋಕ್ ಕುಮಾರ್ ರೈ ಭಾಗವಹಿಸಿ, ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರತಿ ಮಗುವಿಗೂ ಪೋಲಿಯೋ ಲಸಿಕೆ ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿ. ಪೋಷಕರು ತಮ್ಮ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೇ ಪೋಲಿಯೋ ಹನಿ ಹಾಕಿಸಿ, ಪೋಲಿಯೋ ಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.






ಮುರುಳ್ಯ ಅಂಗನವಾಡಿ ಕೇಂದ್ರ

ಸುಳ್ಯ ತಾಲೂಕು ಮುರುಳ್ಯ ಅಂಗನವಾಡಿ ಕೇಂದ್ರದಲ್ಲಿ ಭಾನುವಾರ ಪೋಲಿಯೋ ದಿನಾಚರಣೆ ಪ್ರಯುಕ್ತ ಮಕ್ಕಳಿಗೆ ಲಸಿಕೆಯನ್ನು ಹಾಕಲಾಯಿತು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಪುಟಾಣಿ ಮಕ್ಕಳ ಬಾಯಿಗೆ ಎರಡು ಹನಿ ಪೋಲಿಯೋ ಲಸಿಕೆಯನ್ನು ನೀಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉಳಿದಂತೆ ಸಾರ್ವಜನಿಕ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಬಸ್ಸು ತಂಗುದಾಣ ಸೇರಿದಂತೆ ವಿವಿಧೆಡೆಗಳಲ್ಲಿ ಮಕ್ಕಳಿಗೆ ಪಲ್ಸ್ ಪೋಲಿಯೊ ಲಸಿಕೆಯನ್ನು ನೀಡಲಾಯಿತು ಈ ಸಂದರ್ಭದಲ್ಲಿ ವೈದ್ಯಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಆಶಾ ಕಾರ್ಯಕರ್ತೆಯರು, ಸಿಬ್ಬಂದಿ ವರ್ಗ, ಪುಟಾಣಿಮಕ್ಕಳ ಪೋಷಕ ಇದ್ದರು.

ಕುಕ್ಕೆ ಸುಬ್ರಹ್ಮಣ್ಯ ಬಸ್ ನಿಲ್ದಾಣ

ಸುಬ್ರಹ್ಮಣ್ಯ ಪ್ರಾಥಮಿಕ ಆರೋಗ್ಯ ಕೇಂದ್ರ, ರೋಟರಿ ಕ್ಲಬ್ ಸುಬ್ರಹ್ಮಣ್ಯ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಇವುಗಳ ಆಶಯದಲ್ಲಿ ಕುಕ್ಕೆ ಸುಬ್ರಹ್ಮಣ್ಯದ ಕರ್ನಾಟಕ ರಾಜ್ಯ ರಸ್ತೆ ಸಂಸ್ಥೆ ಬಸ್ ನಿಲ್ದಾಣದಲ್ಲಿ ಪೋಲಿಯೋ ಲಸಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸುಬ್ರಹ್ಮಣ್ಯ ರೋಟರಿ ಕ್ಲಬ್ ಅಧ್ಯಕ್ಷ ಜಯಪ್ರಕಾಶ್ ಆರ್. ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸುಬ್ರಹ್ಮಣ್ಯ ರೋಟರಿ ಕ್ಲಬ್ ಪೂರ್ವಾಧ್ಯಕ್ಷ ವಿಶ್ವನಾಥ ನಡುತೋಟ, ಕೆಎಸ್‌ಆರ್‌ಟಿಸಿ ಸಂಚಾರ ನಿಯಂತ್ರಣಾಧಿಕಾರಿ ಬಾಬು, ಉದ್ಯಮಿ ರೋಶನ್ ರೈ, ಪ್ರಾಥಮಿಕ ಕೇಂದ್ರದ ವೈದ್ಯಾಧಿಕಾರಿ ಡಾ. ರಶ್ಮಿ ರೈ, ಆರೋಗ್ಯ ನಿರೀಕ್ಷಕ ಉಮ್ಮರ್ ಖಾನ್, ಪ್ರಮುಖರಾದ ಸುಜಾತ, ಜಯಂತಿ, ನಾಗಮ್ಮ ಲಲಿತಾ, ಉಷಾ, ಅಶ್ವಿನಿ ಉಪಸ್ಥಿತರಿದ್ದರು.

ಬ್ರಹ್ಮರಕೂಟ್ಲು

ಬಂಟ್ವಾಳ ತಾಲೂಕಿನ ಕಳ್ಳಿಗೆ ಗ್ರಾಮದ ಬ್ರಹ್ಮರಕೂಟ್ಲು ಅಂಗನವಾಡಿ ಕೇಂದ್ರದಲ್ಲಿ ಮಗುವಿಗೆ ಪಲ್ಸ್ ಪೋಲಿಯೋ ನೀಡುವ ಮೂಲಕ ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣಕುಮಾರ್ ಪೂಂಜ ರವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆಶಾ ಕಾರ್ಯಕರ್ತೆಯಾದ ಶೋಭಾ ಪಿ., ಅಂಗನವಾಡಿ ಕಾರ್ಯಕರ್ತೆಯರಾದ ಲಿಲ್ಲಿ ಡಿಸೋಜಾ ಮತ್ತು ಚೈತ್ರ ಇವರು ಇದ್ದರು.

ಮೂಡುಪಡುಕೋಡಿ ಶಾಲೆ

ಬಂಟ್ವಾಳ ತಾಲೂಕಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮೂಡುಪಡುಕೋಡಿ ಶಾಲೆಯಲ್ಲಿ ಭಾನುವಾರ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಪೂಂಜಾಲಕಟ್ಟೆ ಆರೋಗ್ಯ ಕೇಂದ್ರದ ವೈದ್ಯ ಡಾ. ರಿತೇಶ್ ಶೆಟ್ಟಿ, ದಾದಿಯಾರಾದ ಸಂಧ್ಯಾ,ಮೀನಾಕ್ಷಿ, ಸಿಎಚ್ಒ ಗಳಾದ ಶಿವರಾಜ್, ಸಿದ್ದಣ್ಣ ಪಾಟೀಲ್, ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಶಂಕರ್ ಶೆಟ್ಟಿ ಬೆದ್ರಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಸುಧೀಂದ್ರ ಶೆಟ್ಟಿ ಎರ್ಮನಾಡು, ಆಶಾ ಕಾರ್ಯಕರ್ತೆಯರಾದ ನಳಿನಿ, ಅರುಂಧತಿ, ಅಂಗನವಾಡಿ ಕಾರ್ಯಕರ್ತೆಯರಾದ ಗೀತಾ, ಸುನಿತಾ, ಚಂದ್ರಾವತಿ ಶೆಟ್ಟಿ ಇದ್ದರು.

ಕೆಮ್ರಾಲ್ ಪ್ರಾಥಮಿಕ ಆರೋಗ್ಯ ಕೇಂದ್ರ

ಮುಲ್ಕಿ ಸಮೀಪದ ಹಳೆಯಂಗಡಿ ಗ್ರಾಮ ಪಂಚಾಯತ್, ಕೆಮ್ರಾಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ನೇತೃತ್ವ ಮತ್ತು ಸಹಕಾರದಲ್ಲಿ ಶ್ರೀ ವಿದ್ಯಾ ವಿನಾಯಕ ಯುವಕ ಮಂಡಲ,ರಜತ ಸೇವಾ ಟ್ರಸ್ಟ್ ಯುವತಿ ಮಂಡಲ, ಕಿಶೋರ – ಕಿಶೋರಿ ಸಂಘದ ಸಹಕಾರದಲ್ಲಿ ದ.ಕ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪೋಲಿಯೋ ಮುಕ್ತ ಭಾರತ ಅಂಗವಾಗಿ ಯುವಕ ಮಂಡಲದ ಸಭಾಂಗಣದಲ್ಲಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಹಳೆಯಂಗಡಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅರುಣ್ ಪ್ರದೀಪ್ ಡಿ'ಸೋಜ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಜಂಟಿ ಸಂಸ್ಥೆಯ ಪದಾಧಿಕಾರಿಗಳು, ಮಂಡಲದ ಸದಸ್ಯರು ಉಪಸ್ಥಿತರಿದ್ದರು.

ಮುಲ್ಕಿ ಬಸ್ ನಿಲ್ದಾಣ

ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕೆಮ್ರಾಲ್ ಆರೋಗ್ಯ ಕೇಂದ್ರದ ವತಿಯಿಂದ ಮುಲ್ಕಿ ಬಸ್ ನಿಲ್ದಾಣದ ಬಳಿ ಪಲ್ಸ್ ಪೋಲಿಯೋ ಅಭಿಯಾನ ನಡೆಯಿತು. ಈ ಸಂದರ್ಭ ಕೆಮ್ರಾಲ್ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಾಧಿಕಾರಿ ರಕ್ಷಿತಾ, ಅಂಗನವಾಡಿ ಕಾರ್ಯಕರ್ತೆ ಮಂಜುಳಾ, ಮಹಾದೇವಿ, ಅಂಗನವಾಡಿ ಸಹಾಯಕಿ ಕಾವ್ಯಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಕಿಲ್ಪಾಡಿ ಗ್ರಾಮ ಪಂಚಾಯತ್

ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮುಲ್ಕಿ ಸಮೀಪದ ಕಿಲ್ಪಾಡಿ ಗ್ರಾಮ ಪಂಚಾಯತ್‌ನಲ್ಲಿ ನಡೆದ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ ನಡೆಯಿತು.

ಬೆಂಗಳೂರಿನ ಆಧ್ಯಾತ್ಮಿಕ ವಿಶ್ವಗುರು ಅಂತಾರಾಷ್ಟ್ರೀಯ ವಾಸ್ತುತಜ್ಞ ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಮೂಲಕ ಪೋಲಿಯೋ ಮುಕ್ತ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಪೋಲಿಯೊ ಒಂದು ಅಪಾಯಕಾರಿ ವೈರಸ್‌ನಿಂದ ಉಂಟಾಗುವ ರೋಗವಾಗಿದೆ. ಇದು ಮಕ್ಕಳ ಕೈ-ಕಾಲುಗಳನ್ನು ಶಾಶ್ವತವಾಗಿ ದುರ್ಬಲಗೊಳಿಸಬಹುದು ಅಥವಾ ಅಂಗವೈಕಲ್ಯಕ್ಕೆ ಕಾರಣವಾಗಬಹುದು. ಆದರೆ, ಪೋಲಿಯೊ ಲಸಿಕೆ ನೀಡುವುದರಿಂದ ಈ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಬಹುದು. ಎಂದು ಹೇಳಿದರು.

ಪೋಲಿಯೊ ಹನಿಯ ಮುಖ್ಯ ಉಪಯೋಗವೆಂದರೆ ಮಕ್ಕಳಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ಪೋಲಿಯೊ ವೈರಸ್‌ನಿಂದ ರಕ್ಷಿಸುವುದು. ಇದು ಸುರಕ್ಷಿತ, ಉಚಿತ ಮತ್ತು ಪರಿಣಾಮಕಾರಿ ಲಸಿಕೆಯಾಗಿದೆ. ಪ್ರತಿ ಬಾರಿ ಸರ್ಕಾರ ಆಯೋಜಿಸುವ ಪಲ್ಸ್ ಪೋಲಿಯೊ ಅಭಿಯಾನದಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲ ಮಕ್ಕಳಿಗೂ ಪೋಲಿಯೊ ಹನಿ ಹಾಕಿಸುವುದು ಪ್ರತಿಯೊಬ್ಬ ಪೋಷಕರ ಜವಾಬ್ದಾರಿಯಾಗಿದೆ. ಇದರಿಂದ ಆರೋಗ್ಯವಂತ ಸಮಾಜ ಮತ್ತು ಪೋಲಿಯೊ ಮುಕ್ತ ಭಾರತ ನಿರ್ಮಾಣ ಸಾಧ್ಯ. ಪ್ರತಿಯೊಂದು ಮಗುವಿಗೂ ಪೋಲಿಯೊ ಹನಿ ಖಚಿತಪಡಿಸೋಣ ಎಂದರು

ಈ ಸಂದರ್ಭ ಶ್ರೀ ಚಂದ್ರಶೇಖರ ಸ್ವಾಮೀಜಿ, ಆಶ್ರಮದ ನಿರ್ದೇಶಕಿ ರಜನಿ ಸಿ. ಭಟ್, ರಾಹುಲ್ ಚಂದ್ರಶೇಖರ್, ಸಂಚಾಲಕ ಪುನೀತ್‌ಕೃಷ್ಣ ಆಶ್ರಮದ ಸೇವಾ ಭಕ್ತರಾದ ಶರತ್ ಕಾರ್ನಾಡ್, ಮಾಜಿ ತಾ.ಪಂ. ಸದಸ್ಯ ಶರತ್ ಕುಬೆವೂರು, ಗ್ರಾ.ಪಂ. ಸಿಬ್ಬಂದಿ ಯತೀಶ್ ಕೊಲಕಾಡಿ, ಕೆಮ್ರಾಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ಉಪಸ್ಥಿತರಿದ್ದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಂತ್ರಿಮಂಡಲ ಉದ್ಘಾಟನೆ



ಉಳ್ಳಾಲ: ಮಕ್ಕಳು ವಿದ್ಯಾವಂತರಾಗುವ ಉದ್ದೇಶವೇ ರಾಷ್ಟ್ರಸೇವೆ. ಸೇವಾ ಮನೋಭಾವವನ್ನು ಬೆಳೆಸಿಕೊಂಡವ ದೇಶದ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗುತ್ತಾನೆ. ಎಳೆಯ ಪ್ರಾಯದಲ್ಲಿ ವಿದ್ಯಾರ್ಥಿಗಳು ಸೈನ್ಯ ಸೇರುವತ್ತ ಸಂಕಲ್ಪ ಮಾಡಬೇಕು. ಸೈನಿಕ ಮತ್ತು ಕೃಷಿಕ ಭಾರತದ ಅಮೂಲ್ಯ ಆಸ್ತಿಗಳು ಎಂದು ಭಾರತೀಯ ಸೇನೆಯ ನಿವೃತ್ತ ಸುಬೇದಾರ್ ಬೋಳಾರ್ ಕೃಷ್ಣ ಅಭಿಪ್ರಾಯಪಟ್ಟರು.

ತೊಕ್ಕೊಟ್ಟು ಚೆಂಬುಗುಡ್ಡೆಯ ಮಂಗಳೂರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಶನಿವಾರ 2026 – 27ನೇ ಶೈಕ್ಷಣಿಕ ವರ್ಷದ ಮಂತ್ರಿಮಂಡಲವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ರಾಂತ ಜೀವನವನ್ನು ಕೃಷಿಯ ಮೂಲಕ ಸಂತೋಷದ ದಿನಗಳನ್ನಾಗಿಸಬಹುದು. ನಾಯಕತ್ವ ಎಂಬುದು ಕಲಿಕೆಯ ನಂತರ ಬರುವುದಲ್ಲ, ವಿದ್ಯಾರ್ಥಿ ದೆಸೆಯಲ್ಲಿ ತಂಡವನ್ನು ನಿಭಾಯಿಸುವ ಗುಂಪಿನ ಮುಂದಾಳತ್ವವನ್ನು ವಹಿಸುವ ಗುಣಗಳು ಮೂಡಬೇಕು. ರಾಷ್ಟ್ರೋತ್ಥಾನ ವಿದ್ಯಾ ಸಂಸ್ಥೆಗಳು ರಾಷ್ಟ್ರ ಭಕ್ತ ನಾಯಕರನ್ನು ಸೃಷ್ಟಿ ಮಾಡುವಲ್ಲಿ ಮಹತ್ವದ ಕೊಡುಗೆಯನ್ನು ನೀಡುತ್ತಿದೆ. ಇದು ನಿಜಕ್ಕೂ ಅಭಿನಂದನೀಯ ಎಂದು ಅವರು ಹೇಳಿದರು.

ನೂತನ ಮಂತ್ರಿಮಂಡಲಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರಾಧಾನಾಚಾರ್ಯರು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಸುಮಧುರ ಗಾಯನವನ್ನು ಪ್ರಸ್ತುತಪಡಿಸಿದರು.

ಪ್ರಧಾನಾಚಾರ್ಯರಾದ ವಿದ್ಯಾ ಕಾಮತ್ ಜಿ, ಕಾರ್ಯನಿರ್ವಹಣಾಧಿಕಾರಿ ಪ್ರಖ್ಯಾತ್ ರೈ ಹಾಗೂ ಶಿಕ್ಷಕ ಶಿಕ್ಷಕೇತರ ಬಂಧುಗಳು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದಿವಿತ್ ವೈಯಕ್ತಿಕ ಗೀತೆ ಹಾಡುವ ಮೂಲಕ ಕಾರ್ಯಕ್ರಮಕ್ಕೆ ಶುಭ ಮುನ್ನುಡಿಯನ್ನು ಬರೆದರು. ವಿದ್ಯಾರ್ಥಿನಿ ಗಗನ ಸ್ವಾಗತಿಸಿ, ಸಾನ್ವಿ ಬಂಗೇರ ಧನ್ಯವಾದವಿತ್ತರು. ತನವ್ ಕಾರ್ಯಕ್ರಮ ನಿರೂಪಿಸಿದರು.

ಎನ್.ಸಿ.ರೋಡು ಆಟೋ ರಿಕ್ಷಾ ಚಾಲಕ-ಮಾಲಕರ ಸಮಿತಿ ಮಹಾಸಭೆ



ಬಂಟ್ವಾಳ: ಭಾರತೀಯ ಮಜ್ದೂರ್ ಸಂಘ (ಬಿಎಂಎಸ್) ಸಂಯೋಜನೆಯ ಕಾವಳಮೂಡೂರು ಗ್ರಾಮದ ಎನ್.ಸಿ. ರೋಡು ಆಟೋ ರಿಕ್ಷಾ ಚಾಲಕ-ಮಾಲಕರ ಸಮಿತಿಯ ಮೂರನೇ 3ನೇ ವರ್ಷದ ವಾರ್ಷಿಕ ಮಹಾಸಭೆ ಎನ್.ಸಿ. ರೋಡ್ ರಿಕ್ಷಾ ಪಾರ್ಕ್‌ನಲ್ಲಿ ನಡೆಯಿತು.

ಹಿರಿಯ ಆಟೋ ಚಾಲಕ-ಮಾಲಕ ಯಾಕೂಬ್ ಸಾಹೇಬ್ ಉದ್ಘಾಟಿಸಿದರು. ಸಮಿತಿ ಅಧ್ಯಕ್ಷ ಮುಸ್ತಾಫಾ ನೆಲ್ಲಿಗುಡ್ಡೆ ಸಭಾಧ್ಯಕ್ಷತೆ ವಹಿಸಿದ್ದರು. ಪುಂಜಾಲಕಟ್ಟೆ ಪೊಲೀಸ್ ಠಾಣೆ ಉಪನಿರೀಕ್ಷಕ ರಾಜೇಶ್ ಕೆ.ಪಿ. ರಸ್ತೆ ಸುರಕ್ಷತೆ ಹಾಗೂ ಸಂಚಾರ ನಿಯಮಗಳ ಪಾಲನೆಯ ಕುರಿತು ಮಾಹಿತಿ ನೀಡಿದರು.

ಭಾರತೀಯ ಮಜ್ದೂರ್ ಸಂಘ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಯು. ಮಾತನಾಡಿ, ಮಜ್ದೂರ್ ಸಂಘವು 'ದೇಶದ ಹಿತ, ಕೈಗಾರಿಕಾ ಹಿತ, ಕಾರ್ಮಿಕರ ಹಿತ' ಎಂಬ ಧ್ಯೇಯದೊಂದಿಗೆ 1955ರಿಂದ ಕಾರ್ಮಿಕರ ಹಕ್ಕುಗಳಿಗಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಜಿಲ್ಲಾ ಸಂಘಟನಾ ಕಾರ್ಯದರ್ಶಿ ವಸಂತ ಕುಮಾರ್ ಪಿ. ಮಣಿಹಳ್ಳ ಮಾತನಾಡಿ, ಸಂಘ ಸಂಘಟನಾತ್ಮಕವಾಗಿ ಸಾಧಿಸಿರುವ ಬೆಳವಣಿಗೆ ಶ್ಲಾಘನೀಯವಾಗಿದೆ ಎಂದರು. ಮೋಟಾರ್ ಮತ್ತು ಜನರಲ್ ಮಜ್ದೂರ್ ಸಂಘದ ಜಿಲ್ಲಾ ಉಪಾಧ್ಯಕ್ಷ ನಾರಾಯಣ ಪೂಜಾರಿ, ತಾಲೂಕು ಬಿಎಂಎಸ್ ಆಟೋ ರಿಕ್ಷಾ ಚಾಲಕ-ಮಾಲಕರ ಸಂಘದ ಕಾರ್ಯದರ್ಶಿ ಶ್ರೀಕಾಂತ್ ಗಾಣಿಗ, ಸಂಘಟನಾ ಕಾರ್ಯದರ್ಶಿ ದಿನೇಶ್ ಮೂಲ್ಯ ಬಂಗೇರಕೆರೆ ಮಾತನಾಡಿದರು. ಕಾರ್ಯದರ್ಶಿ ಹರೀಶ್ ಶೆಟ್ಟಿ ಲೆಕ್ಕಪತ್ರ ಮಂಡಿಸಿದರು. ಸಮಿತಿಯ ಗೌರವಾಧ್ಯಕ್ಷ ಯೋಗೇಶ್ ಪೂಜಾರಿ, ಮೂರ್ಜೆ ರಿಕ್ಷಾ ಪಾರ್ಕ್ ಹಿರಿಯ ಚಾಲಕ ವಿಶ್ವನಾಥ ಶೆಟ್ಟಿ, ಕಮಲಕಟ್ಟೆ ರಿಕ್ಷಾ ಪಾರ್ಕ್ ಅಧ್ಯಕ್ಷ ಅಬ್ದುಲ್ ರಜಾಕ್, ಕಾಡಬೆಟ್ಟು ರಿಕ್ಷಾ ಪಾರ್ಕ್ ಅಧ್ಯಕ್ಷ ಸುರೇಶ್ ಪೂಜಾರಿ ಇದ್ದರು. ಸತೀಶ್ ಕುಲಾಲ್ ಸ್ವಾಗತಿಸಿದರು. ಶೇಷಗಿರಿ ವಂದಿಸಿದರು. ಉಮಾಶಂಕರ್ ಕಾರ್ಯಕ್ರಮ ನಿರೂಪಿಸಿದರು.

ಕಟೀಲು: ದಾಸರ ಪದಗಳ ಗಾಯನ ತರಬೇತಿ



ಕಟೀಲು: ಏಕಾಗ್ರತೆಯಿಂದ ದೇವರ ಕುರಿತು ಚಿಂತನೆ ಮೂಡಿಸಲು ಸಂಗೀತವೂ ಒಂದು ಮಾರ್ಗವಾಗಿದೆ. ಈ ಸಂಗೀತ ಕ್ಷೇತ್ರಕ್ಕೆ ವಿಶೇಷ ಕೊಡುಗೆಯಾಗಿ ನೀಡಿದ ದಾಸರು ಸದಾ ಸ್ಮರಣೀಯರು. ಅವರ ಹಾಡುಗಳನ್ನು ಸರಿಯಾಗಿ ಕಲಿತು ಹಾಡುವ ಮೂಲಕ ದೇವರ ಅನುಗ್ರಹ ಪಡೆಯಬೇಕು ಎಂದು ಕಟೀಲು ದೇಗುಲದ ಅರ್ಚಕ ಶ್ರೀಹರಿನಾರಾಯಣದಾಸ ಅಸ್ರಣ್ಣ ಹೇಳಿದರು.

ಅವರು ಶ್ರೀ ದುರ್ಗಾಪರಮೇಶ್ವರಿ ದೇವಳ ಸಮೂಹ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳಿಗೆ ಆಯೋಜಿಸಿದ ದಾಸರ ಪದಗಳ ಗಾಯನ ತರಬೇತಿ ಉದ್ಘಾಟಿಸಿ ಮಾತನಾಡಿದರು. ಸಂಗೀತ ಶಿಕ್ಷಕಿ ಸುಶ್ರಾವ್ಯ ಅಸ್ರಣ್ಣ ದೇಗುಲದ ಅರ್ಚಕಶ್ರೀಕರ ಅಸ್ರಣ್ಣ ಶಿಕ್ಷಣಸಂಸ್ಥೆಗಳ ಮುಖ್ಯಸ್ಥರಾದ ಕುಸುಮಾವತಿ, ಗಿರೀಶ್ ತಂತ್ರಿ, ದಯಾನಂದ ಮಾಡ ಇದ್ದರು. ಉಪನ್ಯಾಸಕಿ ಶೈಲಜಾ ನಿರೂಪಿಸಿದರು.



ಬಂಟ್ವಾಳ ತಾಲೂಕಿನ ವಾಮದಪದವಿನ ಬಸ್ತಿಕೋಡಿಯ ಪದ್ಮಾವತಿ ಸಭಾಭವನದಲ್ಲಿ ಆರಂಭಗೊಂಡಿರುವ 2076ನೇ ಮದ್ಯವರ್ಜನ ಶಿಬಿರದಲ್ಲಿ ವಾಮಪದವು ಆರೋಗ್ಯ ಕೇಂದ್ರದ ವೈದ್ಯ ಡಾ. ಉಮೇಶ್ ಅಡ್ಯಂತಾಯ, ಇರ್ವತ್ತೂರಿನ ಡಾ. ರಾಮಕೃಷ್ಣ ಭಟ್ ಶಿಬಿರಾರ್ಥಿಗಳ ಆರೋಗ್ಯ ತಪಾಸಣೆ ನಡೆಸಿದರು. ಯೋಜನಾಧಿಕಾರಿ ಗಣೇಶ್ ಆಚಾರ್ಯ, ತಾಲೂಕು ಯೋಜನಾಧಿಕಾರಿ ಜಯಾನಂದ್ ಪಿ., ಶಿಬಿರಾಧಿಕಾರಿ ರಮೇಶ್ ಆರೋಗ್ಯ ಸಹಾಯಕಿ ಜಯಲಕ್ಷ್ಮೀ ಹಾಗೂ ವ್ಯವಸ್ಥಾಪನ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಹಲಸು ಮೇಳದಲ್ಲಿ ಹಣ್ಣು ಬೆಳೆಗಾರರೊಂದಿಗೆ ಸಂವಾದ | ಕೃಷ್ಣ ಶೆಟ್ಟಿ ಅಭಿಪ್ರಾಯ

ಸವಾಲು ಎದುರಿಸುವ ಛಾತಿ ಇದ್ದಾಗ ಯಶಸ್ಸು ಖಚಿತ

ಕಡಬ: ನಾವು ಬೆಳೆಯುವ ಆಧುನಿಕ ಹಣ್ಣುಗಳಿಗೆ ಸೂಕ್ತ ಮಾರುಕಟ್ಟೆಯನ್ನು ಹುಡುಕದಿದ್ದರೆ ಮಧ್ಯವರ್ತಿಗಳು ರೈತರನ್ನು ಮೋಸಗೊಳಿಸುತ್ತಾರೆ ಎಂದು ಜಿ.ಪಂ. ಮಾಜಿ ಸದಸ್ಯ, ಹಣ್ಣು ಬೆಳೆಗಾರ ಕೃಷ್ಣ ಶೆಟ್ಟಿ ಕಡಬ ಅವರು ಅಭಿಪ್ರಾಯಪಟ್ಟರು.

ಅವರು ಕಡಬ ಅನುಗ್ರಹ ಸಭಾಭವನದಲ್ಲಿ ಜೇಸಿಐ ಕದಂಬ ಹಾಗೂ ರೈತ ಕುಡ್ಲ ಪ್ರತಿಷ್ಠಾನದ ಆಶ್ರಯದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಡೆಯುತ್ತಿರುವ ಹಲಸು ಮೇಳ –2026 ಕೃಷಿ ಹಬ್ಬದ ಪ್ರಯುಕ್ತ ನಡೆದ ಹಣ್ಣುಗಳೊಂದಿಗೆ ನಾವು ನೀವು ಮಾತುಕತೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು. ಮಧ್ಯವರ್ತಿಗಳ ಮೋಸದಿಂದ ರೈತರು ನಷ್ಟ ಅನುಭವಿಸಬೇಕಾಗುತ್ತದೆ. ಅದರ ಪರಿಣಾಮ ನಮ್ಮ ಹಿರಿಯರು ನಡೆಸಿಕೊಂಡು



ಬಂದಿರುವ ಕೃಷಿ ಪರಂಪರೆಯಿಂದ ನಮ್ಮ ಪೀಳಿಗೆ ವಿಮುಖರಾಗುವ ಭೀತಿ ಇದೆ ಎಂದರು.

ಪೆರುವಾಜೆ ಮಂಜಣ್ಣ ಶೆಟ್ಟಿ ಫಾರ್ಮ್‌ನ ಚೇತನ್ ಶೆಟ್ಟಿ, ಕಡಬದ ಪ್ರಗತಿಪರ ಕೃಷಿಕ ಜೋಕಿಮ್ ರೋಡ್ರಿಗಸ್, ಕಡಬ ರೈತ ಉತ್ಪಾದಕ ಕಂಪೆನಿ ಅಧ್ಯಕ್ಷ ವೆಂಕಪ್ಪ ಗೌಡ ಕೋಡಿಬೈಲು, ರೈತ ಕುಡ್ಲ ಪ್ರತಿಷ್ಠಾನದ ಅಧ್ಯಕ್ಷ ಭರತ್ ರಾಜ್ ಸೊರಕೆ, ಜೇಸಿಐ ವಲಯಾಧಿಕಾರಿ ವಿಶ್ರುತಾ ರಾಜೇಶ್ ಇದ್ದರು. ಜೇಸಿಐ ಕಡಬ ಕದಂಬ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ನಾಗರಾಜ್ ಎನ್.ಕೆ. ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕಡಬ ಕದಂಬ ಜೇಸಿಐನ ಪದಾಧಿಕಾರಿ ನವ್ಯಕೃಷ್ಣ ವಂದಿಸಿದರು.

ಬೆಳ್ತಂಗಡಿ ಕ್ಷೇತ್ರದ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ | ಶಾಸಕ ಪೂಂಜ ಹೇಳಿಕೆ

ಪ್ರತಿಭಾವಂತರಿಗೆ ಪ್ರೋತ್ಸಾಹ ಎಲ್ಲರ ಹೊಣೆಗಾರಿಕೆ

ಬೆಳ್ತಂಗಡಿ: ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ (ಡಿಸ್ಟಿಂಕ್ಷನ್) ತೇರ್ಗಡೆಯಾದ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಾಸಕ ಹರೀಶ್ ಪೂಂಜ ನೇತೃತ್ವದಲ್ಲಿ ಮೂರು ಕಡೆಗಳಲ್ಲಿ ನಡೆಯುವ ಗೌರವ ಸನ್ಮಾನ ಸಮಾರಂಭಕ್ಕೆ ಭಾನುವಾರ ಅಳದಂಗಡಿ ಸ್ವರಾಜ್ ಟವರ್ಸ್‌ನಲ್ಲಿ ಚಾಲನೆ ನೀಡಲಾಯಿತು.

ಶಾಸಕ ಹರೀಶ್ ಪೂಂಜ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಿ ಮಾತನಾಡಿ, ಇಂದಿನ ವಿದ್ಯಾರ್ಥಿಗಳೇ ಭವಿಷ್ಯದ ಉಜ್ವಲ ಭಾರತವನ್ನು ಮುನ್ನಡೆಸುವ ಪ್ರತಿನಿಧಿಗಳು, ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯ. ಈ ಗೌರವ



ಇನ್ನುಳಿದ ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ಮಹಾಶಕ್ತಿ ಕೇಂದ್ರಗಳ ವ್ಯಾಪ್ತಿಯ ಗ್ರಾಮಗಳನ್ನು ಆಧರಿಸಿ ಮೂರು ಪ್ರತ್ಯೇಕ ಸಮಯ ಹಾಗೂ ಸ್ಥಳಗಳಲ್ಲಿ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣದ ಶಿಕ್ಷಕ ಅಜಿತ್ ಕುಮಾರ್ ಕೊಕ್ರಾಡಿ, ಬಿಜೆಪಿ ಪ್ರಭಾರಿ ಜಯಂತ್ ಕೋಟ್ಯಾನ್, ಸುಲ್ಕೇರಿ ಶ್ರೀರಾಮ ಶಾಲೆಯ ಗೌರವಾಧ್ಯಕ್ಷ ಗಣೇಶ ಹೆಗ್ಡೆ, ಬೆಳ್ತಂಗಡಿ ಮಂಡಲದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಪಾರೆಂಕಿ, ವಿವಿಧ ಸಿಎ ಬ್ಯಾಂಕ್ ಗಳ ಅಧ್ಯಕ್ಷರು, ಗ್ರಾಮ ಸಮಿತಿ ಪದಾಧಿಕಾರಿಗಳು, ಪೋಷಕರು ಇದ್ದರು.

ಖುಷಿ ಬದುಕಿಗೆ ಕೃಷಿ

ಕೃಷಿ ಎಂದರೆ ಅದೊಂದು ತಪಸ್ಸು, ಕೃಷಿಕನೆಂದರೆ ವಿಜ್ಞಾನಿ. ಆತನಿಗೆ ಎಲ್ಲವೂ ಅರಿವು ಬೇಕಾಗುತ್ತದೆ. ಬ್ಯಾಂಕ್ ವ್ಯವಹಾರದಿಂದ ತೊಡಗಿ ಪಂಪ್ ದುರಸ್ತಿಯವರೆಗೆ, ವಾಹನ ಚಾಲನೆಯಿಂದ ತೊಡಗಿ ಅಡುಗೆ ಕಾರ್ಯದವರೆಗೆ, ಮನುಷ್ಯನ ಆರೋಗ್ಯದಿಂದ ತೊಡಗಿ ಪ್ರಾಣಿಯ ಆರೋಗ್ಯದವರೆಗೆ ಎಲ್ಲವೂ ತಿಳಿದಿರಬೇಕಾಗುತ್ತದೆ. ಮಣ್ಣಿನ ಗುಣಗಳನ್ನು, ವಾತಾವರಣದ ಬದಲಾವಣೆಯನ್ನೂ ಆತನೇ ಹೇಳಬಲ್ಲವನು. ಹೀಗಾಗಿ ಕೃಷಿಕ ಎಂದರೆ ಅವಿದ್ಯಾವಂತನಲ್ಲ, ಇನ್ನು ವಿದ್ಯಾವಂತರೆಲ್ಲ ಕೃಷಿಗೆ ಬಂದರೆ ಕೃಷಿ ಇನ್ನಷ್ಟು ಸಮೃದ್ಧವಾಗಬಹುದು.



ಭಾರತದಲ್ಲಿ ಕೃಷಿಯು ಹೆಚ್ಚಾಗಿ ಪ್ರಕೃತಿಯ ಮೇಲೆ ಅವಲಂಬಿತವಾಗಿದೆ, ಆದರೆ ಹವಾಮಾನ ಮತ್ತು ಜಾಗತಿಕ ತಾಪಮಾನದ ಸಮಸ್ಯೆಗಳು ಕೃಷಿಗೆ ಸವಾಲೊಡ್ಡುತ್ತಿದೆ. ಆಧುನಿಕ ತಂತ್ರಜ್ಞಾನ ಮತ್ತು ಹೊಸ ಯಾಂತ್ರೀಕೃತ ವಿಧಾನಗಳ ಬಳಕೆಯಿಂದ ಕೃಷಿಯನ್ನು ಉತ್ಪಾದನೆಯನ್ನು ಹೆಚ್ಚಿಸಿ, ಲಾಭದಾಯಕತೆವಾಗಿಸಬಹುದು. ಈ ಬಗ್ಗೆ ರೈತರಿಗೆ ಅರಿವು ಮೂಡಿಸಬೇಕಾಗಿದೆ.

ಭಾರತದ ಜನಸಂಖ್ಯೆ 140 ಕೋಟಿ ದಾಟಿದೆ. ದೇಶದ ಜನಸಂಖ್ಯೆಯ ಶೇ.60ರಷ್ಟು ಕೃಷಿಕರಿದ್ದಾರೆ. ಹಿಂದಿನ ಕಾಲದ ನೈಸರ್ಗಿಕ ರೀತಿಯ ಕೃಷಿಯು ಇಂದಿನ ಆಹಾರ ಬೇಡಿಕೆಯನ್ನು ಪೂರೈಸಲಾರದು. ಆದ್ದರಿಂದ ಪೂರೈಕೆಯನ್ನು ಸಮದೂಗಿಸಬೇಕಾದರೆ ಯಾಂತ್ರೀಕೃತ ಕೃಷಿಯನ್ನು ನೆಚ್ಚಿಕೊಳ್ಳುವುದು ಅನಿವಾರ್ಯ.

ನೈಸರ್ಗಿಕ ಅಸಮತೋಲನವು ಮಾಲಿನ್ಯ, ಮಣ್ಣಿನ ಅವನತಿ, ವನ್ಯಜೀವಿಗಳ ಜನಸಂಖ್ಯೆಯ ಕುಸಿತ ಮತ್ತು ಸಸ್ಯ ಮತ್ತು ಪ್ರಾಣಿಗಳ ಮಾನವ-ಸೃಷ್ಟಿಸಿದ ಬದಲಾವಣೆಗಳಲ್ಲಿ ಗೋಚರಿಸುತ್ತದೆ. ಹೀಗಾಗಿ, ತಂತ್ರಜ್ಞಾನವು ಕೃಷಿ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಮುಂದುವರಿಯುತ್ತದೆ.

ಕೃಷಿ ಮತ್ತು ಕೃಷಿ ಪದ್ಧತಿಗಳಲ್ಲಿ ತಂತ್ರಜ್ಞಾನವು ಪ್ರಮುಖ ಪಾತ್ರವನ್ನು ಹೊಂದಿದೆ ಮತ್ತು ಡಿಜಿಟಲ್ ತಂತ್ರಜ್ಞಾನದ ಆಗಮನದೊಂದಿಗೆ, ವ್ಯಾಪ್ತಿ ವಿಸ್ತರಿಸಿದೆ. ಕೃಷಿಯಲ್ಲಿನ ಆವಿಷ್ಕಾರವು ಕೃಷಿ ಪದ್ಧತಿಗಳಲ್ಲಿ ವಿಕಸನಕ್ಕೆ ಕಾರಣವಾಗುತ್ತದೆ, ಇದು ನಷ್ಟವನ್ನು ಕಡಿಮೆ ಮಾಡುತ್ತದೆ ಮತ್ತು ದಕ್ಷತೆಯನ್ನು ಹೆಚ್ಚಿಸುತ್ತದೆ. ಇದು ರೈತರ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತಿದೆ. ಡಿಜಿಟಲ್ ಮತ್ತು ವಿಶ್ಲೇಷಣಾತ್ಮಕ ಪರಿಕರಗಳ ಬಳಕೆಯು ಕೃಷಿಯಲ್ಲಿ ನಿರಂತರ ಸುಧಾರಣೆಗೆ ಚಾಲನೆ ನೀಡುತ್ತಿದೆ ಇದರ ಪರಿಣಾಮವಾಗಿ ಬೆಳೆ ಇಳುವರಿಯನ್ನು ಸುಧಾರಿಸುತ್ತದೆ ಮತ್ತು ರೈತ ಸಮುದಾಯದ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಭಾರತದಲ್ಲಿ ಅಭಿವೃದ್ಧಿಯಲ್ಲಿ ಕಾಣಿಸಿಕೊಂಡವು. ಟ್ರ್ಯಾಕ್ಟರ್‌ಗಳ ಪರಿಚಯದ ನಂತರ ಹೊಸ ಬೇಸಾಯ ಮತ್ತು ಕೊಯ್ಲು ಉಪಕರಣಗಳು, ನೀರಾವರಿ ವಿಧಾನಗಳು ಮತ್ತು ಗಾಳಿ ಬಿತ್ತನೆ ತಂತ್ರಜ್ಞಾನವು ಆಹಾರ ಮತ್ತು ನಾರಿನ ಸುಧಾರಿತ ಗುಣಮಟ್ಟಕ್ಕೆ ಕಾರಣವಾಯಿತು.

ಕೃಷಿಯಲ್ಲಿ ಯಾಂತ್ರೀಕರಣದಿಂದಾಗಿ ಸುಧಾರಿತ ಉತ್ಪಾದಕತೆ ಹೆಚ್ಚಿ ಕಾರ್ಮಿಕರ ಅವಲಂಬನೆ ಕಡಿಮೆಯಾಯಿತು. ಆದರೆ ಸಣ್ಣ ಹಿಡಿವಳಿದಾರರು ಯಾಂತ್ರೀಕರಣದ ದುಬಾರಿ ವೆಚ್ಚವನ್ನು ಭರಿಸಲು ಶಕ್ತರಾಗಿಲ್ಲ. ಅವರಿಗೆ ಕೃಷಿ ವ್ಯಾಪ್ತಿ ಕಡಿಮೆಯಿರುವುದರಿಂದ ವೆಚ್ಚ ನಿರ್ವಹಣೆ ಸಮಸ್ಯೆಯಾಗುತ್ತಿವೆ. ಭಾರತೀಯ ಬೇಸಾಯವು ಸಣ್ಣ ಭೂಹಿಡುವಳಿಗಳಿಂದ ನಿರೂಪಿಸಲ್ಪಟ್ಟಿದೆ ಮತ್ತು ಆಧುನಿಕ ಯಂತ್ರಗಳ ಲಾಭವನ್ನು ಪಡೆಯಲು ಇತರರೊಂದಿಗೆ ಪಾಲುದಾರರಾಗುವ ಅವಶ್ಯಕತೆಯಿದೆ. ಸಾಮೂಹಿಕ ಕೃಷಿಯಿಂದ ಈ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳಬಹುದು. ಸಣ್ಣ ಹಿಡಿವಳಿದಾರ ರೈತರ ಸಾಮರ್ಥ್ಯವನ್ನು ಹೆಚ್ಚಿಸುವುದು, ಆಧುನಿಕ ಯಂತ್ರಗಳನ್ನು ವಿಶೇಷವಾಗಿ ಸಣ್ಣ ಜಮೀನುಗಳಿಗೆ ಲಭ್ಯವಾಗುವಂತೆ ಮಾಡುವ ಮೂಲಕ ಸಮಸ್ಯೆಗಳನ್ನು ನಿಭಾಯಿಸಿದರೆ ಮುಂದೆ ಯಾಂತ್ರೀಕರಣ ಸೇವೆಗಳ ಹೆಚ್ಚಿನ ಅಳವಡಿಕೆಗೆ ಕಾರಣವಾಗುತ್ತದೆ. ಕೃಷಿ ಯಾಂತ್ರೀಕರಣವು ನಷ್ಟದಲ್ಲಿನ ಕಡಿತ ಮತ್ತು ಲಾಭದ ಹೆಚ್ಚಳದ ಮೂಲಕ ಇಳುವರಿಯನ್ನು ನೇರವಾಗಿ ಮತ್ತು ಪರೋಕ್ಷವಾಗಿ ಪರಿಣಾಮ ಬೀರುವ ಸಾಮರ್ಥ್ಯವನ್ನು ಹೊಂದಿದೆ.

ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ

ಮೊಬೈಲ್ ತಂತ್ರಜ್ಞಾನವು ಬೆಳೆ ನೀರಾವರಿ ವ್ಯವಸ್ಥೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ

> **▸ ಈ ಬಾರಿ ಮೃಗಶಿರಾ, ಆರ್ದ್ರಾ ಮಳೆ ನಕ್ಷತ್ರಗಳಲ್ಲಿ ನಿರೀಕ್ಷಿತ ಮಳೆ ಬಂದಿಲ್ಲ. ಇನ್ನು ಪುನರ್ವಸು, ಪುಷ್ಯ ನಕ್ಷತ್ರಗಳಲ್ಲಿ ಧಾರಾಕಾರ ಮಳೆ ಬಂದರೆ ಕೊಂಚ ನೆಮ್ಮದಿ ತರಬಹುದು. ನೀರಿನ ಒರತೆಯಿಲ್ಲದೆ ಹಳ್ಳಕೊಳ್ಳಗಳಲ್ಲಿ ನೀರಿನ ರಭಸವಿಲ್ಲ. ಕಡಿಮೆ ಮಳೆಯಿಂದ ಮುಂದೆ ಕೃಷಿ, ಕುಡಿಯುವ ನೀರಿಗೂ ಸಮಸ್ಯೆಗಳುಂಟಾಗಲಿದೆ.**

ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಈ ಆಧುನಿಕ ತಂತ್ರಜ್ಞಾನದೊಂದಿಗೆ, ರೈತರು ತಮ್ಮ ನೀರಾವರಿ ವ್ಯವಸ್ಥೆಯನ್ನು ಸ್ಮಾರ್ಟ್ ಫೋನ್‌ಗಳು ಮತ್ತು ಕಂಪ್ಯೂಟರ್‌ಗಳ ಮೂಲಕ ಪ್ರತಿ ಕ್ಷೇತ್ರಕ್ಕೂ ಚಾಲನೆ ಮಾಡುವ ಬದಲು ನಿಯಂತ್ರಿಸಬಹುದು. ನೆಲದಡಿಯಲ್ಲಿ ನೆಡಲಾದ ತೇವಾಂಶ ಸಂವೇದಕಗಳು ಮಣ್ಣಿನಲ್ಲಿನ ನಿರ್ದಿಷ್ಟ ಆಳದಲ್ಲಿನ ತೇವಾಂಶದ ಮಟ್ಟಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ.

ಹಿಂದೆ ಕೃಷಿಯ ಸಮಸ್ಯೆ, ತೋಟದ ಒಳಗಿನ ಸಮಸ್ಯೆಗಳು ಅಧಿಕಾರಿಗಳಿಗೆ ತಲಪುವ ವೇಳೆ, ವಿಜ್ಞಾನಿಗಳಿಗೆ ತಲಪುವುದು ತುಂಬಾ ನಿಧಾನವಾಗುತ್ತಿತ್ತು. ಈಗ ವಿವಿಧ ಮಾಧ್ಯಮಗಳು, ಸೋಶಿಯಲ್ ಮೀಡಿಯಾಗಳು ಕೃಷಿಗೆ ಸಮಸ್ಯೆಯಾದ ತಕ್ಷಣವೇ ಸುದ್ದಿಯನ್ನು ಜಾಲತಾಣದಲ್ಲಿ ಸುದ್ದಿ ಮಾಡಿ ಹರಿಯ ಬಿಡುತ್ತವೆ. ಇದರಿಂದ ಸಂಬಂಧಪಟ್ಟವರು ತಕ್ಷಣವೇ ಸ್ಪಂದಿಸುತ್ತಾರೆ.

ಇಂದು ಕೃಷಿಕರಿಂದಲೇ ಹತ್ತಾರು ಗುಂಪುಗಳು ಸೋಶಿಯಲ್ ಮೀಡಿಯಾದಲ್ಲಿ ರಚನೆಯಾಗಿದೆ. ಸಮಸ್ಯೆಗಳಿಗೆ ತಕ್ಷಣದ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಕೃಷಿ ಮಾರುಕಟ್ಟೆ ಧಾರಣೆಯ ಬಗ್ಗೆ ಇರುವ ಸಂದೇಹವನ್ನು ಪರಿಹರಿಸಿಕೊಳ್ಳುತ್ತಾರೆ.

ಮಂಗಳೂರು
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ, 29 ಜೂನ್ 2026
ಸಂಪುಟ 48, ಸಂಚಿಕೆ 102 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೆರೆ ರಾಷ್ಟ್ರಗಳ ಮೇಲೆ ಇರಾನ್ ದಾಳಿ | ೦೭
ಸಮುದ್ರದಿಂದ ಆಕಾಶದವರೆಗೆ ಆತ್ಮನಿರ್ಭರ | ೦೭
ಟಿ20 ವಿಶ್ವಕಪ್: ಭಾರತದ ಕಪ್ ಕನಸು ಭಗ್ನ | ೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಹುಣ್ಣಿಮೆ, ನಕ್ಷತ್ರ: ಮೂಲ

ದಿನದ ಮಾತು

ಸುಖ-ದುಃಖ ಎರಡನ್ನೂ ನಾವು ಎದುರಿಸದೆ ಮುಂದೂಡಕೂಡದು. ಅವುಗಳನ್ನು ಆಗಿಂದಾಗಲೇ ಎದುರಿಸಿ ಬಗೆಹರಿಸಿಕೊಳ್ಳಬೇಕು.

▲ ನಾಣ್ನುಡಿ

ಕಿರುಸುದ್ದಿ

ರಾಜ್ಯದಲ್ಲಿ ನಾಳೆಯಿಂದ ಎಸ್ಐಆರ್ ಪ್ರಕ್ರಿಯೆ

ಬೆಂಗಳೂರು: ಯಾವುದೇ ಅರ್ಹ ಮತದಾರ ಪಟ್ಟಿಯಿಂದ ಹೊರಗುಳಿಯಬಾರದು. ಯಾವುದೇ ಅನರ್ಹ ಮತದಾರ ಪಟ್ಟಿಯಲ್ಲಿರಬಾರದು ಎಂಬ ಉದ್ದೇಶದೊಂದಿಗೆ ಚುನಾವಣಾ ಆಯೋಗ ನಡೆಸುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆ ರಾಜ್ಯದಲ್ಲಿ ಜೂನ್ 30 ರಿಂದ ಆರಂಭವಾಗಲಿದೆ.

• ಪುಟ ೪

15 ಸಾವಿರ ಜನರ ಹತ್ಯೆ ಸಂಚು; ಓರ್ವನ ಸೆರೆ

ಮುಂಬೈ: ಮೊಹರಂ ಮೆರವಣಿಗೆಯಲ್ಲಿ ಜನರಿಗೆ ವಿಷಮಿಶ್ರಿತ ಮಾತ್ರೆಗಳನ್ನು ವಿತರಿಸುತ್ತಿದ್ದ ಆರೋಪಿಯನ್ನು ಪೊಲೀಸರು ಸಕಾಲದಲ್ಲಿ ಬಂಧಿಸಿದ್ದು, ಭಾರೀ ಗಂಡಾಂತರ ತಪ್ಪಿದೆ, ಸಾವಿರಾರು ಮಂದಿ ಸಂಭಾವ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

• ಪುಟ ೨

ಎಸ್ಐಆರ್ ಬಗ್ಗೆ ಎಲ್ಲರೂ ಜಾಗೃತರಾಗಿ: ಸಿದ್ದರಾಮಯ್ಯ

• ಪುಟ ೫

ದಾರಿತಪ್ಪಿಸುವ ಹುನ್ನಾರ: ರಕ್ಷಣಾ ಸಚಿವಾಲಯ

• ಪುಟ ೨

ಸೀಶೆಲ್ಸ್ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಪ್ರಧಾನಿ ಮೋದಿ ಮಾತು

ಪ್ರಕೃತಿ ನ್ಯಾಯ ಪಾಲಿಸಿ

ವಿಕ್ಟೋರಿಯಾ: ಜಾಗತಿಕ ದಕ್ಷಿಣ ರಾಷ್ಟ್ರಗಳು, ವಿಶೇಷವಾಗಿ ದ್ವೀಪ ರಾಷ್ಟ್ರಗಳು, ಹವಾಮಾನ ಬದಲಾವಣೆಯಿಂದ ಅತ್ಯಧಿಕವಾಗಿ ಪರಿಣಾಮ ಕ್ಕೊಳಗಾಗಿವೆ. ಹೀಗಾಗಿ ಹವಾಮಾನ ನ್ಯಾಯ ಪಾಲಿಸುವುದು ಅತ್ಯವಶ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾನುವಾರ ಸೀಶೆಲ್ಸ್ ರಾಷ್ಟ್ರೀಯ ಅಸೆಂಬ್ಲಿಯನ್ನುದ್ದೇಶಿಸಿ ಮಾತನಾಡಿದ ಅವರು, ಭಾರತ- ಸೀಶೆಲ್ಸ್ ನಡುವಿನ ಸಹಕಾರ ಬಲಪಡಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಹವಾಮಾನ ವೈಪರೀತ್ಯದ ಪರಿಣಾಮಗಳು ಈಗಾಗಲೇ ಕರಾವಳಿ ಪ್ರದೇಶಗಳು, ಸಮುದ್ರ ಪರಿಸರ ವ್ಯವಸ್ಥೆಗಳು, ಹವಾಮಾನ ಮಾದರಿಗಳು ಮತ್ತು ಜನಜೀವನದಲ್ಲಿ ಗೋಚರಿಸುತ್ತಿವೆ ಎಂದ ಮೋದಿ, ಹವಾಮಾನ ವೈಪರೀತ್ಯಕ್ಕೆ



ಅತಿ ಕಡಿಮೆ ಕೊಡುಗೆ ನೀಡಿದ ರಾಷ್ಟ್ರಗಳು ಅದರ ಭಾರವನ್ನು ಹೆಚ್ಚು ಹೊರುವಂತಾಗಬಾರದು. ಇಲ್ಲಿ ನ್ಯಾಯಸಮ್ಮತತೆ, ಜವಾಬ್ದಾರಿ ಮತ್ತು ಸಮಾನತೆಯ ತತ್ತ್ವಗಳನ್ನು ಪಾಲಿಸಬೇಕು ಎಂದು ಹೇಳಿದರು. ಅಭಿವೃದ್ಧಿಶೀಲ ಸಣ್ಣ ದ್ವೀಪ ರಾಷ್ಟ್ರಗಳ ಹಿತಾಸಕ್ತಿಗೆ ಭಾರತ ನಿರಂತರ ಬೆಂಬಲ ನೀಡುವುದಾಗಿ ತಿಳಿಸಿದರು.

ಸಹಕಾರ ವಿಸ್ತರಣೆ: ಮೀನುಗಾರಿಕೆ, ಸಮುದ್ರ ವಿಜ್ಞಾನ, ಕರಾವಳಿ ನಿರ್ವಹಣೆ, ನವೀಕರಿಸಬಹುದಾದ ಇಂಧನ ಹಾಗೂ ಸುಸ್ಥಿರ ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸುವ ಕುರಿತು ಮೋದಿ ಪ್ರಸ್ತಾಪಿಸಿದರು. ಡಿಜಿಟಲ್ ಆವಿಷ್ಕಾರ ಮತ್ತೊಂದು ಪ್ರಮುಖ ಸಹಕಾರ ಕ್ಷೇತ್ರವಾಗಿದ್ದು, ಸೀಶೆಲ್ಸ್ ತನ್ನ ಡಿಜಿಟಲ್ ಪರಿವರ್ತನೆ ಮುಂದುವರಿಸುವ ಸಂದರ್ಭದಲ್ಲಿ ಭಾರತದ ಅನುಭವ ಮತ್ತು ಪರಿಣತಿಯನ್ನು ಹಂಚಿಕೊಳ್ಳಲು ಭಾರತ ಸಿದ್ಧವಾಗಿದೆ ಎಂದರು. ಇದಕ್ಕೂ ಮೊದಲು ಮೋದಿ, ಸೀಶೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಿದರು. ಪ್ರಾದೇಶಿಕ ಹಾಗೂ ಅಂತಾರಾಷ್ಟ್ರೀಯ ವಿಷಯಗಳ ಕುರಿತು ಅಭಿಪ್ರಾಯ ವಿನಿಮಯ ನಡೆಸಿದರು.



ಮೋದಿಗೆ ಸೀಶೆಲ್ಸ್‌ನ ಅತ್ಯುನ್ನತ ಪ್ರಶಸ್ತಿ

ದ್ವೀಪರಾಷ್ಟ್ರ ಪರಿಸರ ಸಂರಕ್ಷಣೆ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಬೆನ್ನೆಲುಬಾಗಿ ತೋರಿದ ಬದ್ಧತೆಗಾಗಿ ಪ್ರಧಾನಿ ಮೋದಿ ಅವರಿಗೆ ಗಾರ್ಡಿಯನ್ ಆಫ್ ದಿ ಬ್ಲೂ ಹಾರಿಜಾನ್ ಹೆಸರಿನ ಸೀಶೆಲ್ಸ್ ಅತ್ಯುನ್ನತ ಪ್ರಶಸ್ತಿ ಒಲಿದಿದೆ. ಇದು ಮೋದಿಯವರಿಗೆ ದೊರೆತ 34ನೇ ಅಂತಾರಾಷ್ಟ್ರೀಯ ಗೌರವ. ಇದನ್ನು ಸೀಶೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನ್ ಮೋದಿ ಅವರಿಗೆ ಪ್ರದಾನ ಮಾಡಿದರು. ಸೀಶೆಲ್ಸ್ ಅತ್ಯುನ್ನತ ಪ್ರಶಸ್ತಿ ಸ್ವೀಕರಿಸಿದ ಮೋದಿ, ಸೀಶೆಲ್ಸ್ ಜನತೆ, ಸರ್ಕಾರ ಮತ್ತು ಅಧ್ಯಕ್ಷ ಪ್ಯಾಟ್ರಿಕ್‌ರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಇತ್ತೀಚೆಗೆ ಸ್ಲೊವಾಕಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ದಿ ಆರ್ಡರ್ ಆಫ್ ದಿ ವೈಟ್ ಡಬಲ್ (ಫಸ್ಟ್ ಕ್ಲಾಸ್) ಪಡೆದಿದ್ದರು.

ಹಿಂದು ಮಹಾಸಾಗರ ಅವಕಾಶಗಳ ಆಗರ!

ಹಿಂದು ಮಹಾಸಾಗರವನ್ನು ಅವಕಾಶಗಳ ಸಾಗರವನ್ನಾಗಿ ಪರಿವರ್ತಿಸುವುದೇ ಭಾರತದ ದೃಷ್ಟಿಕೋನ ಎಂದು ಪ್ರಧಾನಿ ಮೋದಿ ಭಾನುವಾರ ಹೇಳಿದ್ದಾರೆ. ಸಾಗರ ಭದ್ರತೆಯೊಂದಿಗೆ ಆರ್ಥಿಕ ಸಮೃದ್ಧಿ ಹಾಗೂ ಪರಸ್ಪರ ನಂಬಿಕೆಯ ಪಾಲುದಾರಿಕೆ ಮಾಡುವ ಉದ್ದೇಶ ಹೊಂದಿದ್ದೇವೆ ಎಂದು ಮೋದಿ ಹೇಳಿದ್ದಾರೆ. ಭಾರತ ಮತ್ತು ಸೀಶೆಲ್ಸ್‌ನ ರಕ್ಷಣೆ ಮತ್ತು ಭದ್ರತೆ ಎರಡೂ ಬಹಳ ಮುಖ್ಯ. ಹಿಂದು ಮಹಾಸಾಗರ ನಮ್ಮೆಲ್ಲರ ಮನೆ. ಅದರ ಭದ್ರತೆ, ಸುಸ್ಥಿರ ಪ್ರಗತಿ ಮತ್ತು ಸಮೃದ್ಧಿ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಮೋದಿ ಹೇಳಿದ್ದಾರೆ. ಇದು ಭಾರತದ ಮಹಾಸಾಗರ್ (ಪರಸ್ಪರ ಭದ್ರತೆ ಮತ್ತು ಪ್ರಾದೇಶಿಕ ಪ್ರಗತಿ) ಯೋಜನೆಯ ದೃಷ್ಟಿಕೋನವೆಂದು ಮೋದಿ ತಿಳಿಸಿದ್ದಾರೆ.

ಭಾರತ-ಸೀಶೆಲ್ಸ್ ಮಧ್ಯೆ 19 ಒಪ್ಪಂದ

ವಿಕ್ಟೋರಿಯಾ: ಪ್ರಧಾನಿ ನರೇಂದ್ರ ಮೋದಿ ಹಾಗೂ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನ್ ನಡುವಿನ ಮಾತುಕತೆಯ ಫಲವಾಗಿ ಭಾನುವಾರ ಒಟ್ಟು 19 ಕ್ಷೇತ್ರಗಳಲ್ಲಿ ಪರಸ್ಪರ ಸಹಯೋಗ ವಿಸ್ತರಿಸಲು ಭಾರತ ಮತ್ತು ಸೀಶೆಲ್ಸ್ ನಿರ್ಧರಿಸಿವೆ. ರಕ್ಷಣಾ ಮತ್ತು ಸಾಗರ ಭದ್ರತೆ, ಡಿಜಿಟಲ್ ಪಾವತಿಗಳು, ಬಾಹ್ಯಾಕಾಶ, ಆರೋಗ್ಯ, ಕೃಷಿ ಹಾಗೂ ಶಿಕ್ಷಣ ಸೇರಿ 19 ವಲಯಗಳಲ್ಲಿ ಉಭಯ ರಾಷ್ಟ್ರಗಳು ಸಹಯೋಗವನ್ನು ವಿಸ್ತರಿಸಿವೆ.

➡ ಪುಟ ೪

ಸೀಶೆಲ್ಸ್ ಸಂಭ್ರಮದಲ್ಲಿ ಭಾರತೀಯ ಸೇನೆ ಭಾಗಿ

• ಪುಟ ೨

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ

ಅಮಲಿನ ಅಂಶವಿದ್ದರೆ ಗುಟ್ಕಾ ನಿಷೇಧ: ಸಿಎಂ



ಬೆಂಗಳೂರು: ರಾಜ್ಯ ಸರ್ಕಾರ ಮಾದಕದ್ರವ್ಯ ಮುಕ್ತ ಕರ್ನಾಟಕ ನಿರ್ಮಾಣಕ್ಕೆ ಬದ್ಧವಾಗಿದೆ. ಸ್ವಲ್ಪ ಅಮಲು ಪದಾರ್ಥ ಬೆರಕೆ ಮಾಡಿದರೂ ರಾಜ್ಯದಲ್ಲಿ ಎಲ್ಲ ರೀತಿಯ ಪಾನ್ ಮಸಾಲಾ, ಗುಟ್ಕಾ ಮಾರಾಟ ನಿಷೇಧ ಮಾಡುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 31ನೇ ಸಂಸ್ಥಾಪನಾ ದಿನಾಚರಣೆ ಹಾಗೂ ನಶಾ ಮುಕ್ತ ಭಾರತ ಅಭಿಯಾನದಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಸಮ್ಮುಖದಲ್ಲಿ ಅವರು ಮಾತನಾಡಿದರು.

ಪಾನ್ ಮಸಾಲಾ, ಗುಟ್ಕಾ ಮತ್ತಿತರ ಪದಾರ್ಥಗಳಲ್ಲಿ ಅಮಲು ಬರುವ ವಸ್ತುಗಳನ್ನು ಬೆರಕೆ ಮಾಡಿ ಮಾರಾಟ ಮಾಡುತ್ತಿರುವ ಬಗ್ಗೆ ದೂರುಗಳು ನನ್ನ ಗಮನಕ್ಕೆ ಬಂದಿವೆ. ಇದು ನಿಜವೇ ಆಗಿದ್ದರೆ, ತಕ್ಷಣ ನಿಲ್ಲದಿದ್ದರೆ ಎಲ್ಲ ರೀತಿಯ ಪಾನ್ ಮಸಾಲಾ, ಗುಟ್ಕಾ ಪದಾರ್ಥಗಳ ಮಾರಾಟವನ್ನು ರಾಜ್ಯದಲ್ಲಿ ನಿಷೇಧಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಮಾದಕದ್ರವ್ಯ ಮುಕ್ತ ಕರ್ನಾಟಕ ಗುರಿ: ಕರ್ನಾಟಕವನ್ನು ಮಾದಕದ್ರವ್ಯ ಮುಕ್ತವಾಗಿಸುವುದು ನಮ್ಮ ಗುರಿ. ಅದಕ್ಕಾಗಿ ನಾವು ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಇಂದು ನಶೆಮುಕ್ತ ಭಾರತ ಅಭಿಯಾನವನ್ನು ನಾನು ಸ್ವಾಗತಿಸುತ್ತೇನೆ. ನೀವೆಲ್ಲರೂ ಇದರ ರಾಯಭಾರಿಗಳು. ಮಾದಕ ವ್ಯಸನ ತಡೆಯುವುದೇ ದೊಡ್ಡ ಸವಾಲಾಗಿದೆ. ನಾವೆಲ್ಲರೂ ಒಗ್ಗಟ್ಟಾಗಿ ಯುವಪೀಳಿಗೆ ಈ ವ್ಯಸನದ ಸುಳಿಗೆ ಸಿಲುಕದಂತೆ ತಡೆಯೋಣ.

➡ ಪುಟ ೪

ಸಂಶೋಧನೆಗೆ ಮುಂದಾಗಬೇಕು

ಮಾದಕದ್ರವ್ಯ ವ್ಯಸನಕ್ಕೆ ಬಲಿಯಾಗುವ ಪ್ರತಿ ಯುವ ಜೀವವೂ ರಾಷ್ಟ್ರೀಯ ಸಾಮರ್ಥ್ಯದ ನಷ್ಟವಾಗಿದೆ ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು. ವಿದ್ಯಾರ್ಥಿಗಳು, ವಿಶೇಷವಾಗಿ ಭವಿಷ್ಯದ ವೈದ್ಯರು, ದಾದಿಯರು, ಮನಃಶಾಸ್ತ್ರಜ್ಞರು, ಸಂಶೋಧಕರು ಮತ್ತು ಸಾರ್ವಜನಿಕ ಆರೋಗ್ಯ ವೃತ್ತಿಪರರು ಜಾಗೃತಿಯ ರಾಯಭಾರಿಗಳಾಗಬೇಕು. ಮಾದಕ ದ್ರವ್ಯ ಸೇವನೆ ತಡೆಗಟ್ಟುವಿಕೆ, ಚಿಕಿತ್ಸೆ, ಸಂಶೋಧನೆ ಮತ್ತು ಪುರಾವೆ ಆಧಾರಿತ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಕರೆನೀಡಿದರು.

ಅಯೋಧ್ಯೆ ರಾಮಮಂದಿರ ದೇಣಿಗೆ ಹಣ ದುರ್ಬಳಕೆ ಆರೋಪ

ಬಂಧಿತರ ಮನೆಗಳಲ್ಲಿ ಶೋಧಕಾರ್ಯ

ಅಯೋಧ್ಯೆ: ರಾಮ ಮಂದಿರದ ದೇಣಿಗೆ ಹಣ ದುರ್ಬಳಕೆ ಆರೋಪ ಸಂಬಂಧ ಬಂಧಿತ ಎಂಟು ಆರೋಪಿಗಳ ಮನೆಗಳ ಮೇಲೆ ಅಯೋಧ್ಯೆ ಪೊಲೀಸರು ಭಾನುವಾರ ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ. ಸ್ಥಳೀಯ ಮ್ಯಾಜಿಸ್ಟ್ರೇಟ್ ಸಮ್ಮುಖದಲ್ಲಿ ನಡೆದ ಶೋಧ ಕಾರ್ಯದಲ್ಲಿ ಆಧಾರ್ ಕಾರ್ಡ್, ಪಾನ್ ಕಾರ್ಡ್ ಹಾಗೂ ಬ್ಯಾಂಕ್ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವಿನಾಶ್ ಶುಕ್ಲಾ, ಲವ್ ಕುಶ್ ಮಿಶ್ರಾ, ಮನೀಶ್ ಯಾದವ್ ಸೇರಿದಂತೆ ಎಂಟು ಮಂದಿ ರಾಮ ಮಂದಿರಕ್ಕೆ ಬಂದ ದೇಣಿಗೆ ಹಣ ಮತ್ತು ಬೆಲೆಬಾಳುವ ವಸ್ತುಗಳ ಎಣಿಕೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಈವರೆಗೆ 79.85 ಲಕ್ಷ ರೂ. ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉ.ಪ್ರ. ಸರ್ಕಾರ ರಚಿಸಿದ್ದ ವಿಶೇಷ ತನಿಖಾ ತಂಡದ ಪ್ರಾಥಮಿಕ ವರದಿ ಆಧರಿಸಿ ಪ್ರಕರಣ ದಾಖಲಿಸಲಾಗಿತ್ತು. ಕ್ರಿಮಿನಲ್ ಸಂಚು ಸೇರಿದಂತೆ ವಿವಿಧ ಆರೋಪಗಳಲ್ಲಿ ಪ್ರಕರಣ ದಾಖಲಾಗಿದೆ.

ಮೊಮ್ಮಗಳಿಗೆ ಲಸಿಕೆ ನೀಡಿ ಅಭಿಯಾನಕ್ಕೆ ಸಿಎಂ ಚಾಲನೆ

ಮಕ್ಕಳ ಭವಿಷ್ಯಕ್ಕೆ ಪೋಲಿಯೊ

ಬೆಂಗಳೂರು: ಮಕ್ಕಳ ಭವಿಷ್ಯಕ್ಕಾಗಿ ಸರ್ಕಾರ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮ ರೂಪಿಸಿದ್ದು, ರಾಜ್ಯದ ಎಲ್ಲಾ ಭಾಗದ ಪೋಷಕರು ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಿಸಬೇಕು. ಆರೋಗ್ಯಕರ ಕುಟುಂಬದಿಂದ ಆರೋಗ್ಯಕರ ರಾಜ್ಯ ಹಾಗೂ ದೇಶ ನಿರ್ಮಾಣ ಸಾಧ್ಯ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಸದಾಶಿವನಗರದ ತಮ್ಮ ನಿವಾಸದಲ್ಲಿ ಭಾನುವಾರ ಪಲ್ಸ್ ಪೋಲಿಯೊ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಆರೋಗ್ಯ ಸಚಿವ ಯು. ಟಿ. ಖಾದರ್ ಅವರು ಬಹಳ ಬುದ್ಧಿವಂತರು. ನನ್ನ ಮೊಮ್ಮಗಳಿಗೆ ಒಂದು ತಿಂಗಳು. ಹೀಗಾಗಿ ಈ ಕಾರ್ಯಕ್ರಮಕ್ಕೆ ನನ್ನ ಮನೆಯನ್ನೇ ಆಯ್ಕೆ ಮಾಡಿದ್ದಾರೆ.

ಮುಖ್ಯಮಂತ್ರಿ ಮನೆಯಿಂದ ಈ ಅಭಿಯಾನ ಆರಂಭವಾಗಲಿ ಎಂಬುದು ಅವರ ಸದಾಶಯ. ಹೀಗಾಗಿ ನನ್ನ ಮನೆಯಲ್ಲೇ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ ಎಂದು ತಿಳಿಸಿದರು.

➡ ಪುಟ ೪



5 ವರ್ಷದೊಳಗಿನವರಿಗೆ ಕಡ್ಡಾಯ ಲಸಿಕೆ ಹಾಕಿಸಿ: ಖಾದರ್

• ಪುಟ ೪

ಭಾರತದ ಸಮಗ್ರ ದೃಷ್ಟಿಕೋನ ಜಗತ್ತಿಗೇ ಮಾದರಿ: ಭಾಗವತ್

ಬೆಂಗಳೂರು: ಭಾರತದ ಸಂಪೂರ್ಣ ಮತ್ತು ಸಮಗ್ರ ದೃಷ್ಟಿಕೋನವು ಇಂದು ಜಗತ್ತು ಹುಡುಕುತ್ತಿರುವ ಉತ್ತರಗಳನ್ನು ಹೊಂದಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅಭಿಪ್ರಾಯಪಟ್ಟರು.

ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಭಾರತೀಯ ಶಿಕ್ಷಣ ಮಂಡಲ ಆಯೋಜಿಸಿದ್ದ ಎನ್ಇಪಿ 2020 ಕಾರ್ಯಗತಗೊಳಿಸುವುದು: ಭಾರತೀಯ ಜ್ಞಾನ ವ್ಯವಸ್ಥೆಗಳನ್ನು ಸಂಯೋಜಿಸುವುದು ಎಂಬ 3 ದಿನಗಳ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಅವರು ಮಾತನಾಡಿದರು. ಚಾಲ್ತಿಯಲ್ಲಿರುವ ಜಾಗತಿಕ ಚೌಕಟ್ಟುಗಳು ಭಾಗಶಃ ದೃಷ್ಟಿಕೋನಗಳನ್ನು ನೀಡುತ್ತವೆಯಾದರೂ, ಅವುಗಳಿಂದ ಮಾತ್ರ ಪ್ರಸಕ್ತ ಸವಾಲುಗಳನ್ನು ಸಂಪೂರ್ಣವಾಗಿ ಪರಿಹರಿಸಲು ಸಾಧ್ಯವಿಲ್ಲ. ಪ್ರಪಂಚದ ಎಲ್ಲಾ ಜೀವಿಗಳ ಕಲ್ಯಾಣಕ್ಕಾಗಿ ಭಾರತದ ಸಂಪೂರ್ಣ ದೃಷ್ಟಿಕೋನದ ಆಧಾರದ ಮೇಲೆ ಮುಂದುವರಿಯಬೇಕು. ಅಲ್ಲದೇ ಅದನ್ನು ಪೂರ್ಣಗೊಳಿಸಲು ಭಾರತವನ್ನು ಆಲಿಸಬೇಕು, ಇದು ಅನಿವಾರ್ಯವಾಗಿದೆ.

➡ ಪುಟ ೪



ಎನ್ಇಪಿ 2020 ರಾಷ್ಟ್ರೀಯ ಸಮ್ಮೇಳನ ಸಮಾರೋಪದಲ್ಲಿ ಮಾತು

ಬಂಗಾಳದಲ್ಲಿ ಇಂದು ಏನಾಸಂ ಮಂಡನೆ

ಕೊಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲೇ ಬಿಜೆಪಿ ಸರ್ಕಾರ ತನ್ನ ಪ್ರಮುಖ ಚುನಾವಣಾ ಭರವಸೆಗಳಲ್ಲಿ ಒಂದಾದ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಮಸೂದೆಯನ್ನು ಸೋಮವಾರ ವಿಧಾನಸಭೆಯಲ್ಲಿ ಮಂಡಿಸಲು ಸಜ್ಜಾಗಿದೆ.

• ಪುಟ ೨


ಪಾಕ್: ಉಗ್ರರ ಆತ್ಮಾಹುತಿ ಸ್ಫೋಟಕ್ಕೆ 6 ಮಂದಿ ಸಾವು

ಕರಾಚಿ: ಪಾಕಿಸ್ತಾನದ ಕರಾಚಿಯಲ್ಲಿ ಉಗ್ರರು ನಡೆಸಿದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಮೂವರು ಪ್ಯಾರಾಮಿಲಿಟರಿ ಯೋಧರು ಮತ್ತು ಮೂವರು ಉಗ್ರರು ಮೃತಪಟ್ಟಿದ್ದಾರೆ. ಸಿಂಧ್ ರೇಂಜರ್ಸ್ ಪ್ಯಾರಾಮಿಲಿಟರಿ ಕಚೇರಿಯ ಗೋಡೆಗೆ ಸ್ಫೋಟಕ ತುಂಬಿದ್ದ ವಾಹನವನ್ನು ಗುದ್ದಿ ಆತ್ಮಾಹುತಿ ದಾಳಿ ನಡೆಸಲಾಗಿದೆ ಎಂದು ಪಾಕಿಸ್ತಾನ ಸೇನೆ ಭಾನುವಾರ ಹೇಳಿದೆ.

• ಪುಟ ೨

ಸಿಂದೂರ್ ಕುರಿತ ಅಪಪ್ರಚಾರಕ್ಕೆ ಕೇಂದ್ರ ತರಾಟೆ

ದಾರಿತಪ್ಪಿಸುವ ಹುನ್ನಾರ



• **ಹೊಸದಿಲ್ಲಿ:** ಆಪರೇಷನ್ ಸಿಂದೂರ್ ಕುರಿತು ಸಂಸತ್ತಿನಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಹೇಳಿಕೆಗಳನ್ನು ತಪ್ಪಾಗಿ ಪ್ರತಿಬಿಂಬಿಸುವ ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳನ್ನು "ಉದ್ದೇಶಪೂರ್ವಕ ದಾರಿತಪ್ಪಿಸುವ ಮತ್ತು ವಾಸ್ತವಿಕವಾಗಿ ತಪ್ಪಾದ" ಮಾಹಿತಿ ಎಂದು ಕೇಂದ್ರ ಸರ್ಕಾರ ಪ್ರತಿಕ್ರಿಯಿಸಿದೆ.

ರಕ್ಷಣಾ ಸಚಿವಾಲಯ ಬಿಡುಗಡೆ ಮಾಡಿದ್ದ ಕೆಲವು ಪೋಸ್ಟ್‌ಗಳು ಜುಲೈ 28, 2025ರಂದು ಸಂಸತ್ತಿನಲ್ಲಿ ಸಿಂಗ್ ಅವರ ಭಾಷಣದ "ಪ್ರತ್ಯೇಕ ಭಾಗವನ್ನು ಆಯ್ದು ಉಲ್ಲೇಖಿಸಿವೆ" ಎಂದು ಹೇಳಿದೆ. ಕಾರ್ಯಾಚರಣೆಯ ಸಮಯದಲ್ಲಿ ಯಾವುದೇ ಭಾರತೀಯ ಸೈನಿಕರ ಬಲಿಯಾಗಿಲ್ಲ ಎಂದು ಅವರು ಹೇಳಿಕೊಂಡಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿತ್ತು.

ಆಪರೇಷನ್ ಸಿಂದೂರ್ ಸಮಯದಲ್ಲಿ ಮಡಿದ ಆರು ಸೈನಿಕರ ತ್ಯಾಗವನ್ನು ಸರ್ಕಾರ ಮರೆಮಾಚಿದೆ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಆರೋಪಿಸಿದ್ದರು. ಆಪರೇಷನ್ ಸಿಂದೂರ್ ಸಮಯದಲ್ಲಿ ಭಾರತದ ಕಡೆ ಅನೇಕ ಸಾವುನೋವು ಸಂಭವಿಸಿದ್ದಾಗ ಪಾಕಿಸ್ತಾನ ಸುಳ್ಳು ಪ್ರಚಾರ ನಡೆಸಿತ್ತು. ಇದೀಗ ಕಾಂಗ್ರೆಸ್ ವಕ್ತಾರನ ಹೇಳಿಕೆಯ ಹಿನ್ನೆಲೆಯಲ್ಲಿ "ವಿವಾದವನ್ನು ನಿರ್ಮಿಸಲು" ಪ್ರಯತ್ನಿಸುತ್ತಿರುವವರು ಸಚಿವರ ಹೇಳಿಕೆಗಳ ಸಂದರ್ಭವನ್ನು ಸಂಪೂರ್ಣ ನಿರ್ಲಕ್ಷಿಸಿದ್ದಾರೆ ಎಂದು ಸಚಿವಾಲಯ ಹೇಳಿದೆ. ರಕ್ಷಣಾ ಸಚಿವರು ಅದು ಮಾಡಿದ ಭಾಷಣದ ಸಮಯದಲ್ಲಿ, ಆಪರೇಷನ್ ಸಿಂದೂರ್ ವೇಳೆ, ಭಾರತೀಯ ಪೈಲಟ್‌ಗಳು ಕಳೆದುಕೊಂಡಿದ್ದಾರೆ ಎಂದು ಹೇಳಿಕೊಳ್ಳುವ ಕೆಲವು ವಿಭಾಗಗಳಲ್ಲಿ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ನಿರ್ದಿಷ್ಟವಾಗಿ ನಿರಂತರ ಮತ್ತು ಪ್ರಬಲವಾದ ನಿರೂಪಣೆಯ ಹಿಡಿತ ಸಾಧಿಸಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು". ಮತ್ತು ಇದಲ್ಲದೆ ಈ ನಿರೂಪಣೆ ಸಂಪೂರ್ಣವಾಗಿ ಸುಳ್ಳು ಮತ್ತು ಇದು ಕಾರ್ಯಾಚರಣೆಯ ಯಶಸ್ಸನ್ನು ಕುಗ್ಗಿಸುವ ಹಾಗೂ ಸಾರ್ವಜನಿಕ ಭಾವನೆಯನ್ನು ಕುಗ್ಗಿಸುವ ಸ್ಪಷ್ಟ ಉದ್ದೇಶದಿಂದ ಇದನ್ನು ಆಕ್ರಮಣಕಾರಿಯಾಗಿ ತೀವ್ರಗೊಳಿಸಲಾಗುತ್ತಿದೆ" ಎಂದು ಹೇಳಿಕೆ ತಿಳಿಸಿದೆ.

ಸಿಂಗ್ ಅವರ ಹೇಳಿಕೆಗಳು ನಿರ್ದಿಷ್ಟವಾಗಿ ಭಾರತೀಯ ವಾಯುಪಡೆಯ ಪೈಲಟ್‌ಗಳ ಸಾವುನೋವುಗಳ ಕುರಿತಾದ ಹೇಳಿಕೆಗಳನ್ನು ನಿರಾಕರಿಸುವ ಗುರಿಯನ್ನು ಹೊಂದಿದ್ದವು. ಈ ನಿರ್ದಿಷ್ಟ ಮತ್ತು ದುರುದ್ದೇಶಪೂರಿತ ನಿರೂಪಣೆಯನ್ನು ನೇರವಾಗಿ ಉಲ್ಲೇಖಿಸಿ ರಕ್ಷಣಾ ಸಚಿವರು ಈ ಹೇಳಿಕೆಯನ್ನು ನೀಡಿದ್ದರು ಎಂದೂ ಹೇಳಿಕೆ ಬೊಟ್ಟು ಮಾಡಿದೆ.

ಯೋಧರ ಬಲಿದಾನಕ್ಕೆ ಅತ್ಯುನ್ನತ ಗೌರವ: ಇದೇ ವೇಳೆ, ಆರು ಸೈನಿಕರ ತ್ಯಾಗವನ್ನು ಎಂದಿಗೂ ಮರೆಮಾಚಲಾಗಿಲ್ಲ. ಅವರ ಹೆಸರುಗಳನ್ನು ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಉಲ್ಲೇಖಿಸಲಾಗಿದೆ ಮತ್ತು ಸ್ಮಾರಕ ವೆಬ್‌ಸೈಟ್‌ನಲ್ಲಿ ಗೌರವ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಭಾರತೀಯ ರಕ್ಷಣಾ ಪಡೆಗಳ ಪ್ರತಿಯೊಬ್ಬ ಸದಸ್ಯರಿಗೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ರಾಷ್ಟ್ರದ ರಕ್ಷಣೆಯಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದವರಿಗೆ ಭಾರತ ಸರ್ಕಾರ ಗೌರವ, ಕೃತಜ್ಞತೆ ಮತ್ತು ಸಲ್ಲಿಸುವ ಗೌರವದಲ್ಲಿ ದೃಢವಾಗಿದೆ. ಅವರ ತ್ಯಾಗವು ಮಾತೃಭೂಮಿಗೆ ನೀಡುವ ಅತ್ಯುನ್ನತ ಸೇವೆಯಾಗಿದೆ ಮತ್ತು ಅದನ್ನು ಯಾವಾಗಲೂ ಅದಕ್ಕೆ ಅರ್ಹವಾದ ಘನತೆ, ಹೆಮ್ಮೆ ಮತ್ತು ಗಂಭೀರತೆಯಿಂದ ಗೌರವಿಸಲಾಗುತ್ತದೆಂದೂ ಸ್ಪಷ್ಟಪಡಿಸಲಾಗಿದೆ.

ಸರ್ಕಾರ ಹುತಾತ್ಮ ಸಿಬ್ಬಂದಿಯ ಕುಟುಂಬಗಳನ್ನು ಮತ್ತು ಅವಲಂಬಿತರಿಗೆ ಶಿಕ್ಷಣ, ಆರೋಗ್ಯ ಮತ್ತು ಇತರ ಕಲ್ಯಾಣ ಪ್ರಯೋಜನಗಳನ್ನು ವಿಸ್ತರಿಸಿದೆ ಎಂದು ಸಚಿವಾಲಯ ತಿಳಿಸಿದೆ.

ಕಳೆದ ವರ್ಷ ಏ.22ರಂದು ನಡೆದ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ, ಮೇ 7ರಂದು ಆಪರೇಷನ್ ಸಿಂದೂರ್ ಪ್ರಾರಂಭಿಸಲಾಯಿತು. ಪಾಕಿಸ್ತಾನದ ಕೋರಿಕೆಯ ಮೇರೆಗೆ ಮೇ 10ರಂದು ಭಾರತ ಕದನ ವಿರಾಮಕ್ಕೆ ಒಪ್ಪಿಗೆ ನೀಡಿತ್ತು. ಆದರೆ ಪಾಕಿಸ್ತಾನವು ತನ್ನ ಮುಖವುಳಿಸಿಕೊಳ್ಳುವ ಯತ್ನದಲ್ಲಿ, ತಾನು ಭಾರತದ ರಾಫೆಲ್ ಸೇರಿದಂತೆ ಹಲವು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದ್ದಾಗಿ ಸುಳ್ಳುಪ್ರಚಾರ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಬಾಂಗ್ಲಾಗೆ ಮರಳಿಯೇ ಸಿದ್ಧ: ಹಸೀನಾ



• **ಢಾಕಾ:** ಬಾಂಗ್ಲಾದಿಂದ ಅನ್ಯಾಯವಾಗಿ ಗಡೀಪಾರು ಮಾಡಲ್ಪಟ್ಟಿರುವ ಮತ್ತು ಸ್ವದೇಶದಲ್ಲಿ ಮರಣದಂಡನೆ ಶಿಕ್ಷೆ ಕಾದಿದ್ದರೂ, ನಿಷೇಧಿತ ಅವಾಮಿ ಲೀಗ್ ಪಾರ್ಟಿಯ ನಾಯಕಿ, ಬಾಂಗ್ಲಾದ ಮಾಜಿ ಪ್ರಧಾನಿ ಶೇಖ್ ಹಸೀನಾ ಸ್ವಲ್ಪವೂ ಧೃತಿಗೆಟ್ಟಿಲ್ಲ. ತಾನು ಈ ವರ್ಷ ತಾಯ್ನಾಡಿಗೆ ಮರಳಿಯೇ ಸಿದ್ಧ ಎಂದಿದ್ದಾರೆ.

ತನ್ನ ಪಕ್ಷವೊಂದು ಸಂಘಟನೆಯಷ್ಟೇ ಅಲ್ಲ, ಬದಲಾಗಿ ಒಂದು ಶಕ್ತಿ ಎಂದಿರುವ ಅವರು, ಅಲ್ಪಸಂಖ್ಯಾತರ ಮೇಲಿನ ದಾಳಿಯು ಬಾಂಗ್ಲಾದ ಸ್ವಾತಂತ್ರ್ಯ ಮೇಲಿನ ದಾಳಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಾನು ಅಧಿಕಾರಕ್ಕಾಗಿ ರಾಜಕೀಯ ಮಾಡುವವಳಲ್ಲ. ಬಾಂಗ್ಲಾ ಜನರ ಕಲ್ಯಾಣಕ್ಕಾಗಿ ಮತ್ತು ಸೋನಾರ್ ಬಾಂಗ್ಲಾ ನಿರ್ಮಾಣ ಬಗ್ಗೆ ಬಾಂಗ್ಲಾದ ಪಿತ, ಬಂಗಬಂಧು ಶೇಖ್ ಮುಜಿಬುರ್ ಹೊಂದಿದ್ದ ಕನಸನ್ನು ಸಾಕಾರಗೊಳಿಸುವುದಕ್ಕಾಗಿ ರಾಜಕೀಯ ಕಣದಲ್ಲಿದ್ದೇನೆ ಎಂದು ಹಸೀನಾ ಟಿವಿ ಚಾನೆಲ್‌ಗೆ ಸಂದರ್ಶನದಲ್ಲಿ ತಿಳಿಸಿದ್ದಾರೆ. ತನ್ನ ವಿರುದ್ಧದ ತೀರ್ಪು ಸರಿಯಾದ್ದಲ್ಲ. ತೀರ್ಪು ಅಕ್ರಮ, ಅಸಾಂವಿಧಾನಿಕ ಮತ್ತು ರಾಜಕೀಯವಾಗಿ ಪ್ರೇರಿತ ಪ್ರಕ್ರಿಯೆಯ ಭಾಗವಾಗಿದೆ. ಅವಾಮಿ ಲೀಗ್ ನಾಯಕನಿಲ್ಲದ ಪಕ್ಷವಾಗಲು ನ್ಯಾಯಾಂಗ ಕೂಡ ರಾಜಕೀಯ ದ್ವೇಷಸಾಧನೆಯ ಮಾಧ್ಯಮವಾಗಿ ಪ್ರವರ್ತಿಸಿದೆ. ಇಂತಹ ಪ್ರಯತ್ನಗಳು ಹಿಂದೆಯೂ ನಡೆದಿತ್ತು ಮತ್ತು ಅವರು ಸೋತಿದ್ದರು. ಮುಂದೆಯೂ ಅವರು ಸೋಲುವುದು ಖಚಿತ ಎಂದು ಹೇಳಿದ್ದಾರೆ.



ಮಧ್ಯಪ್ರಾಚ್ಯದಲ್ಲಿ ಭುಗಿಲೆದ್ದ ಸಂಘರ್ಷದಿಂದ ಜಾಗತಿಕ ಇಂಧನ ಮಾರುಕಟ್ಟೆ ತಲ್ಲಣ

ತೈಲಾಘಾತದಿಂದ ಭಾರತ ಪಾರಾಗಿದ್ದಾದರೂ ಹೇಗೆ?

ಜಾಗತಿಕ ಇಂಧನ ತುರ್ತು ಪರಿಸ್ಥಿತಿ

ಮಿಲಿಟರಿ ಸಂಘರ್ಷದ ತೀವ್ರತೆ ಮತ್ತು ಆಯಕಟ್ಟಿನ ಹಾರ್ಮುಜ್ ಜಲಸಂಧಿಯ ಭಾಗಶಃ ಅಡಚಣೆ, ಜಾಗತಿಕ ಇಂಧನ ಮಾರುಕಟ್ಟೆಗೆ ಭಾರೀ ಆಘಾತ ನೀಡಿತು. ಅಂತಾರಾಷ್ಟ್ರೀಯ ಕಚ್ಚಾ ತೈಲ ಬೆಲೆ ಕೆಲವೇ ವಾರಗಳಲ್ಲಿ ಪ್ರತಿ ಬ್ಯಾರೆಲ್‌ಗೆ ಸುಮಾರು 70ರಿಂದ 126 ಡಾಲರ್‌ಗೆ ಜಿಗಿದು ಪ್ರಮುಖ ಆರ್ಥಿಕತೆಗಳನ್ನು ಅಸ್ಥಿರಗೊಳಿಸಿತು. ಸ್ವತಃ ಅಮೆರಿಕ ಕೂಡ ಇದರಿಂದ ಹೊರತಾಗಿರಲಿಲ್ಲ.

ತೈಲ ಮತ್ತು ಇಂಧನ

- **ತೈಲ ಬೆಲೆ ಏರಿಕೆ:** ಪ್ರತಿ ಬ್ಯಾರೆಲ್‌ಗೆ 70ರಿಂದ 126 ಡಾಲರ್‌ಗೆ ಜಿಗಿತ.
- **ಪೆಟ್ರೋಲ್ ದರ:** ದೇಶೀಯ ಮಾರುಕಟ್ಟೆಯಲ್ಲಿ ಸ್ಥಿರ.
- **ಆಮದು ಮೂಲಗಳು:** 20 ರಿಂದ 40 ದೇಶಗಳಿಗೆ ವಿಸ್ತರಣೆ.
- **ಪರ್ಯಾಯ ಮಾರ್ಗ:** ಹಾರ್ಮುಜ್ ಹೊರಗೆ ಶೇ.70 ತೈಲ ಸಾಗಣೆ.
- **ರಿಫೈನರಿ ಪ್ರಗತಿ:** ಎಲ್‌ಪಿಜಿ ಉತ್ಪಾದನೆ ಶೇ.25 ಹೆಚ್ಚಳ.
- **ಕೈಗಾರಿಕಾ ಅನಿಲ ಮಿತಿ:** ಪೂರೈಕೆ ಶೇ.80ಕ್ಕೆ ಸೀಮಿತ.
- **ಎಥನಾಲ್ ಮಿಶ್ರಣ:** 45 ಮಿಲಿಯನ್ ಬ್ಯಾರೆಲ್ ತೈಲ ಉಳಿತಾಯ.
- **ರೈಲ್ವೆ ವಿದ್ಯುದ್ದೀಕರಣ:** 1.8 ಬಿಲಿಯನ್ ಲೀಟರ್ ಡೀಸೆಲ್ ಉಳಿತಾಯ.
- **ಆಯಕಟ್ಟಿನ ದಾಸ್ತಾನು:** 5.3 ಮಿಲಿಯನ್ ಮೆಟ್ರಿಕ್ ಟನ್ ತೈಲ ಸಂಗ್ರಹ
- **ಗ್ರಾಹಕರ ವ್ಯಾಪ್ತಿ:** ಎಲ್‌ಪಿಜಿ ಬಳಕೆದಾರರ ಸಂಖ್ಯೆ 33 ಕೋಟಿಗೆ ಏರಿಕೆ.

ದೇಶೀಯ ತಂತ್ರಗಾರಿಕೆ ಮತ್ತು ಕ್ರಮಗಳು

ಭಾರತ ಬಿಕ್ಕಟ್ಟಿನಿಂದ ತಕ್ಷಣ ಮುಕ್ತಿ ಪಡೆಯಲು ತ್ವರಿತ ಆಡಳಿತಾತ್ಮಕ ನಿರ್ಧಾರಗಳೇ ಪ್ರಮುಖ ಕಾರಣ. ಪೂರೈಕೆಗೆ ಅಡಚಣೆಯಾದ ಎಂಟು ದಿನಗಳಲ್ಲೇ ಕೇಂದ್ರ ಸರ್ಕಾರ, ಅಗತ್ಯ ವಸ್ತುಗಳ ಕಾಯ್ದೆಯಲ್ಲಿ ತುರ್ತು ಎಲ್‌ಪಿಜಿ ನಿಯಂತ್ರಣ ಆದೇಶ ಹೊರಡಿಸಿ, ದೇಶೀಯ ರಿಫೈನರಿಗಳಿಗೆ ಎಲ್‌ಪಿಜಿ ಉತ್ಪಾದನೆಯನ್ನು ಶೇ.25ರಷ್ಟು ಹೆಚ್ಚಿಸಲು ಸೂಚಿಸಿತು.

ಪಶ್ಚಿಮ ಏಷ್ಯಾದಲ್ಲಿ ಭುಗಿಲೆದ್ದ ಸಂಘರ್ಷ ಜಾಗತಿಕ ಇಂಧನ ಮಾರುಕಟ್ಟೆಯನ್ನೇ ತಲ್ಲಣಗೊಳಿಸಿದೆ. ಜಗತ್ತಿನ ದೊಡ್ಡ ಆರ್ಥಿಕತೆಗಳು ಕೂಡ ಇದರಲ್ಲಿ ಸಿಲುಕಿ ನಲುಗಿವೆ. ಆದರೆ, ಭಾರತ ತ್ವರಿತ ನಿಯಂತ್ರಣ ಕ್ರಮಗಳು ಮತ್ತು ದೃಢವಾದ ಕಾರ್ಯತಂತ್ರದ ಮೂಲಕ ದೇಶೀಯ ಇಂಧನ ಬಿಕ್ಕಟ್ಟಿನಿಂದ ಯಶಸ್ವಿಯಾಗಿ ಪಾರಾಗಿದೆ. ಹಲವು ದೇಶಗಳ ಜನರು ಗಗನಕ್ಕೇರಿದ ಬೆಲೆಗಳು ಮತ್ತು ಇಂಧನ ಹಂಚಿಕೆ ಮಿತಿಯಿಂದ ತತ್ತರಿಸಿದರೂ, ಭಾರತೀಯ ಗ್ರಾಹಕರು ಮಾತ್ರ ಕಡಲ ಪೂರೈಕೆಯಲ್ಲಾದ ಅಡಚಣೆಗಳ ನೇರ ಆಘಾತದಿಂದ ಬಹುತೇಕ ತಪ್ಪಿಸಿಕೊಂಡಿದ್ದಾರೆ.

ಸಾರ್ವಜನಿಕ ಪೂರೈಕೆ ಭದ್ರತೆ

ಸಾಮಾನ್ಯ ಕುಟುಂಬಗಳಿಗೆ ಅಡುಗೆ ಅನಿಲದ ಕೊರತೆಯಾಗದಂತೆ ತಡೆಯಲು ದೇಶೀಯ ಸಿಲಿಂಡರ್ ವಿತರಣೆಗೆ ಆದ್ಯತೆ ನೀಡಲಾಯಿತು ಮತ್ತು ವಾಣಿಜ್ಯ ಹಾಗೂ ಕೈಗಾರಿಕಾ ನೈಸರ್ಗಿಕ ಅನಿಲ ಪೂರೈಕೆಯನ್ನು ಶೇ.80ಕ್ಕೆ ಸೀಮಿತಗೊಳಿಸಲಾಯಿತು. ಜತೆಗೆ, ವಾಣಿಜ್ಯ ಹಡಗುಗಳು ಮತ್ತು ತೈಲ ಟ್ಯಾಂಕರ್‌ಗಳಿಗೆ ಸುರಕ್ಷಿತ ಮಾರ್ಗ ಒದಗಿಸಲು ಭಾರತೀಯ ನೌಕಾಪಡೆ ಪರ್ಷಿಯನ್ ಕೊಲ್ಲಿಯಲ್ಲಿ ಯುದ್ಧನೌಕೆಗಳನ್ನು ನಿಯೋಜಿಸಿತು. ಇದು ದೇಶದಲ್ಲಿ ಪೆಟ್ರೋಲ್ ಬಂಕ್‌ಗಳ ಮುಂದೆ ಸಾರ್ವಜನಿಕರು ದೀರ್ಘ ಸಾಲಿನಲ್ಲಿ ನಿಲ್ಲುವ ಅಪಾಯವನ್ನು ನಿವಾರಿಸಿತು.

ಎಥನಾಲ್ ಮಿಶ್ರಣ -ಇಂಧನ ಉಳಿತಾಯ

ದೇಶಾದ್ಯಂತ ರೈಲ್ವೆ ವಿದ್ಯುದ್ದೀಕರಣದ ಪರಿಣಾಮವಾಗಿ ವಾರ್ಷಿಕ 1.8 ಬಿಲಿಯನ್ ಲೀಟರ್ ಡೀಸೆಲ್ ಉಳಿತಾಯವಾಯಿತು. ಅದೇ ರೀತಿ, ಪೆಟ್ರೋಲ್‌ನಲ್ಲಿ ಸುಮಾರು ಶೇ.20ರಷ್ಟು ಎಥನಾಲ್ ಮಿಶ್ರಣ ಮಾಡುವ ಗುರಿ ಸಾಧನೆ, ದೇಶದ ವಾರ್ಷಿಕ ಕಚ್ಚಾ ತೈಲ ಆಮದು ಅಗತ್ಯವನ್ನು 45 ಮಿಲಿಯನ್ ಬ್ಯಾರೆಲ್‌ಗಳಷ್ಟು ಕಡಿಮೆ ಮಾಡಿತು. ಇದು ಜಾಗತಿಕ ಬಿಕ್ಕಟ್ಟುಗಳ ವಿರುದ್ಧ ಭಾರತಕ್ಕೆ ದೃಢವಾದ ರಕ್ಷಣೆ ನೀಡಿತು.

ಪೂರೈಕೆ ಜಾಲದ ವೈವಿಧ್ಯ

ಭೌಗೋಳಿಕ ರಾಜಕೀಯ ಸೂಕ್ಷ್ಮತೆಗಳನ್ನು ಎದುರಿಸಲು ಭಾರತ ತನ್ನ ಕಚ್ಚಾ ತೈಲ ಆಮದು ಜಾಲವನ್ನು 20 ದೇಶಗಳಿಂದ 40 ದೇಶಗಳಿಗೆ ವಿಸ್ತರಿಸಿತು. ರಷ್ಯಾ, ಅಮೆರಿಕ, ನೈಜೀರಿಯಾ ಮತ್ತು ಅಂಗೋಲಾದಂತಹ ಪರ್ಯಾಯ ಮೂಲಗಳಿಂದ ಹೆಚ್ಚಿನ ಪ್ರಮಾಣದ ತೈಲವನ್ನು ಖರೀದಿಸಲು ಆರಂಭಿಸಿತು.

ಬದಲಿ ಮಾರ್ಗ

ಈ ದೊಡ್ಡ ಮತ್ತು ಕಠಿಣ ಬದಲಾವಣೆಯಿಂದಾಗಿ ಭಾರತ ತನ್ನ ಒಟ್ಟು ಕಚ್ಚಾ ತೈಲ ಆಮದಿನ ಶೇ.70 ರಷ್ಟನ್ನು ಹಾರ್ಮುಜ್ ಜಲಸಂಧಿಯ ಹೊರತಾದ ಸುರಕ್ಷಿತ ಮಾರ್ಗಗಳ ಮೂಲಕ ಸಾಗಿಸಲು ಸಾಧ್ಯವಾಯಿತು. ಇದರೊಂದಿಗೆ ಭಾರತದ ದೀರ್ಘಕಾಲದ ದೇಶೀಯ ಇಂಧನ ಪರಿವರ್ತನೆ ನೀತಿಗಳು ಬಿಕ್ಕಟ್ಟಿನ ಸಮಯದಲ್ಲಿ ಪ್ರಮುಖ ರಕ್ಷಣಾ ಕವಚವಾಗಿ ಕೆಲಸ ಮಾಡಿದವು.

ಜಾಗತಿಕ ಪರಿಣಾಮಗಳು

- **ಶ್ರೀಲಂಕಾ:** ಇಂಧನ ತುರ್ತು ಪರಿಸ್ಥಿತಿ; 4 ದಿನಗಳ ಕೆಲಸದ ವಾರ ನಿಯಮ ಜಾರಿ.
- **ಬಾಂಗ್ಲಾದೇಶ:** ತೀವ್ರ ಇಂಧನ ಕೊರತೆ; ದೇಶಾದ್ಯಂತ ಕಠಿಣ ರೇಷನಿಂಗ್
- **ಫಿಲಿಪ್ಪೈನ್ಸ್:** ರಾಷ್ಟ್ರದಾದ್ಯಂತ ಇಂಧನ ತುರ್ತು ಪರಿಸ್ಥಿತಿ ಘೋಷಣೆ.
- **ಹಾಂಗ್ ಕಾಂಗ್:** ಪೆಟ್ರೋಲ್ ಬೆಲೆ ಲೀಟರ್‌ಗೆ ದಾಖಲೆಯ 295 ರೂ.ಗೆ ಏರಿಕೆ.
- **ಯುರೋಪ್:** ಸರಾಸರಿ ಪೆಟ್ರೋಲ್ ಬೆಲೆ ಲೀಟರ್‌ಗೆ 220 ರೂ. ದಾಟಿತು.

ಜಾಗತಿಕವಾಗಿ ತೀವ್ರ ಪರಿಣಾಮ

ಈ ಹಠಾತ್ ಬೆಲೆ ಏರಿಕೆಯಿಂದಾಗಿ ಬಾಂಗ್ಲಾದೇಶ ಕಠಿಣ ಇಂಧನ ಹಂಚಿಕೆ ಮಿತಿ ಜಾರಿಗೊಳಿಸಿತು, ಶ್ರೀಲಂಕಾ 4 ದಿನಗಳ ಕೆಲಸದ ವಾರವನ್ನು ಘೋಷಿಸಿತು ಮತ್ತು ಫಿಲಿಪ್ಪೈನ್ಸ್ ರಾಷ್ಟ್ರೀಯ ಇಂಧನ ತುರ್ತು ಪರಿಸ್ಥಿತಿ ಘೋಷಿಸಿತು. ಹಾಂಗ್ ಕಾಂಗ್‌ನಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 295 ರೂ. ದಾಟಿದರೆ, ಪಶ್ಚಿಮ ಯುರೋಪ್‌ನಲ್ಲಿ 220 ರೂ. ಗಡಿ ದಾಟಿತು. ಆದರೆ ಭಾರತ ದೇಶೀಯವಾಗಿ ಪೆಟ್ರೋಲ್ ಬೆಲೆಯನ್ನು ಸುಮಾರು 95 ರೂ. ಆಸುಪಾಸಿನಲ್ಲಿ ಸ್ಥಿರವಾಗಿಟ್ಟುಕೊಂಡು ಯಶಸ್ವಿ ಸಮತೋಲನ ಕಾಯ್ದುಕೊಂಡಿತು.

ಕಿರುಸುದ್ದಿ

ಪಿಒಕೆ ನುಸುಳುಕೋರ ಸೆರೆ

• **ಶ್ರೀನಗರ:** ಜಮ್ಮು-ಕಾಶ್ಮೀರದ ಪೂಂಚ್ ಜಿಲ್ಲೆಯ ಬಾಲಾಕೋಟ್ ವಲಯದಲ್ಲಿ ಗಡಿ ನಿಯಂತ್ರಣ ರೇಖೆ ದಾಟಿ ಭಾರತಕ್ಕೆ ನುಸುಳಿದ್ದ ಪಾಕ್ ಆಕ್ರಮಿತ ಕಾಶ್ಮೀರದ ರಯೀಸ್ ಖಾನ್(31) ಎಂಬಾತನನ್ನು ಭಾರತೀಯ ಸೇನೆ ಭಾನುವಾರ ಬಂಧಿಸಿದೆ. ಆತನ ಬಳಿ ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಿಲ್ಲ. ಈ ತಿಂಗಳಲ್ಲಿ ಪೂಂಚ್‌ನಲ್ಲಿ ಬಂಧಿತನಾದ ಮೂರನೇ ನುಸುಳುಕೋರನಾಗಿದ್ದಾನೆ. ಇದೇ ವೇಳೆ ಸಾಂಬಾ ಜಿಲ್ಲೆಯ ಗಡಿಭಾಗದಲ್ಲಿ ಪಾಕಿಸ್ತಾನ ಮೂಲದ ಶಂಕಿತ ಡ್ರೋನ್ ಕಾಣಿಸಿಕೊಂಡಿದ್ದು, ಶೋಧ ಕಾರ್ಯಾಚರಣೆ ನಡೆಸಿದರೂ ಏನೂ ಪತ್ತೆಯಾಗಿಲ್ಲ.

1 ರೂ. ಆಫರ್‌ಗಾಗಿ ಸೇರಿದ ಜನ; ಕಾಲ್ತುಳಿತದಿಂದ ಪಾರು

• **ಮುಂಬೈ:** ನ್ಯೂ ಮಿ ಫ್ಯಾಷನ್ ಬ್ರ್ಯಾಂಡ್ ತನ್ನ ಸಾಮಾಜಿಕ ಜಾಲತಾಣದಲ್ಲಿ 1 ರೂ. ಸೇಲ್ ಆಫರ್ ಘೋಷಿಸಿದ್ದರ ಪರಿಣಾಮ ಮುಂಬೈನ ಮಲಾಡ್‌ನಲ್ಲಿನ ಇನ್ಫಿನಿಟಿ ಮಾಲ್‌ನಲ್ಲಿ ಜನರು ಭಾರೀ ಸಂಖ್ಯೆಯಲ್ಲಿ ಸೇರಿದ್ದು, ಕಾಲ್ತುಳಿತದ ಸ್ಥಿತಿ ನಿರ್ಮಾಣವಾಗಿತ್ತು. ಜೆನ್ ಝಿ ಗ್ರಾಹಕರನ್ನು ಗುರಿಯಾಗಿಸಿ ಫ್ಯಾಷನ್ ಬ್ರ್ಯಾಂಡ್ ಪ್ರಚಾರಕ್ಕೋಸ್ಕರ ನೀಡಿದ 1 ರೂ. ಸೇಲ್‌ಗೆ ನಿರೀಕ್ಷೆಗೂ ಮೀರಿ ಜನ ಸೇರಿದ್ದರಿಂದ ವ್ಯವಸ್ಥೆ ಅಸ್ತವ್ಯಸ್ತವಾಗಿತ್ತು.

ಪಾಕ್: ಉಗ್ರರ ಆತ್ಮಾಹುತಿ ಸ್ಫೋಟಕ್ಕೆ 6 ಮಂದಿ ಸಾವು

• **ಕರಾಚಿ:** ಪಾಕಿಸ್ತಾನದ ಕರಾಚಿಯಲ್ಲಿ ಉಗ್ರರು ನಡೆಸಿದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಮೂವರು ಪ್ಯಾರಾಮಿಲಿಟರಿ ಯೋಧರು ಮತ್ತು ಮೂವರು ಉಗ್ರರು ಮೃತಪಟ್ಟಿದ್ದಾರೆ. ಸಿಂಧ್ ರೇಂಜರ್ಸ್ ಪ್ಯಾರಾಮಿಲಿಟರಿ ಕಚೇರಿಯ ಗೋಡೆಗೆ ಸ್ಫೋಟಕ ತುಂಬಿದ್ದ ವಾಹನವನ್ನು ಗುದ್ದಿ ಆತ್ಮಾಹುತಿ ದಾಳಿ ನಡೆಸಲಾಗಿದೆ ಎಂದು ಪಾಕಿಸ್ತಾನ ಸೇನೆ ಭಾನುವಾರ ಹೇಳಿದೆ.

2024ರ ಅಕ್ಟೋಬರ್‌ನಲ್ಲಿ ಜಮಾತ್ ಉಲ್ ಅಹ್ರಾರ್ ಉಗ್ರರು ಪಾಕಿಸ್ತಾನ್ ರೇಂಜರ್ಸ್ (ಸಿಂಧ್) ಶಿಬಿರದ ಮೇಲೆ ನಡೆಸಿದ ದಾಳಿಯ ಬಳಿಕ ಇದು ಕರಾಚಿ ನಗರದಲ್ಲಿ ಸಂಭವಿಸಿದ ಮೊದಲ ಪ್ರಮುಖ ಉಗ್ರರ ದಾಳಿಯಾಗಿದೆ ಎಂದು ಪಾಕ್ ಸೇನೆ ತಿಳಿಸಿದೆ. ಶನಿವಾರ ರಾತ್ರಿ ಉಗ್ರರು ರೇಂಜರ್ಸ್ ಕಚೇರಿ ಗೇಟಿಗೆ ಸ್ಫೋಟಕಗಳು ತುಂಬಿದ್ದ ವಾಹನದಿಂದ ಗುದ್ದಿದ್ದಾರೆ.

ಪಾಕ್ ಆರೋಪ ತಳ್ಳಿಹಾಕಿದ ಭಾರತ: ಕರಾಚಿ ಪ್ಯಾರಾಮಿಲಿಟರಿ ನೆಲೆಯ ಮೇಲೆ ನಡೆದ ಉಗ್ರರ ದಾಳಿ ಹಿಂದೆ ಭಾರತದ ಕೈವಾಡವಿದೆ ಎಂಬ ಪಾಕ್ ಆಂತರಿಕ ಸಚಿವ ಮೊಹ್ಸಿನ್ ನಖ್ವಿ ಆರೋಪವನ್ನು ಭಾರತ ತಳ್ಳಿಹಾಕಿದೆ. ಇತರರ ಮೇಲೆ ಬೊಟ್ಟು ಮಾಡುವ ಬದಲು ಪಾಕಿಸ್ತಾನ ಆತ್ಮಾವಲೋಕನ ಮಾಡಿಕೊಳ್ಳಲಿ. ತನ್ನೊಳಗಿನ ಉಗ್ರ ಮೂಲಸೌಕರ್ಯಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಿ. ಭಯೋತ್ಪಾದನೆ ಮೇಲೆ ಅವಲಂಬಿಸುವ ತನ್ನ ದೇಶದ ನೀತಿ ಕಿತ್ತೊಗೆಯಲಿ ಎಂದು ವಿದೇಶಾಂಗ(ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಟೀಕಿಸಿದ್ದಾರೆ.

ಸೀಶೆಲ್ಸ್‌ನ ಸಂಭ್ರಮದಲ್ಲಿ ಭಾರತೀಯ ಸೇನೆ ಭಾಗಿ

• **ಹೊಸದಿಲ್ಲಿ:** ಸೋಮವಾರ ನಡೆಯಲಿರುವ ಸೀಶೆಲ್ಸ್‌ನ ರಾಷ್ಟ್ರೀಯ ದಿನಾಚರಣೆಯ ಸುವರ್ಣ ಮಹೋತ್ಸವದಲ್ಲಿ ಭಾರತೀಯ ಸಶಸ್ತ್ರ ಪಡೆಗಳೂ ಭಾಗವಹಿಸಲಿವೆ. ತಮ್ಮ ಪ್ರಸ್ತುತ ಮೂರು ದಿನಗಳ ಪ್ರವಾಸದ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಈ ಪ್ರಮುಖ ಐತಿಹಾಸಿಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಮಿಲಿಟರಿ ಪಥಸಂಚಲನ: ಕ್ಯಾಪ್ಟನ್ ಆರ್ಯನ್ ಎಚ್ ಡಿಯೋಲೇಕರ್ ನೇತೃತ್ವದ ಅಸ್ಸಾಂ ರೆಜಿಮೆಂಟ್‌ನ 32 ಸಿಬ್ಬಂದಿಯನ್ನು ಒಳಗೊಂಡ ಭಾರತೀಯ ಸೇನಾ ತುಕಡಿ ಈ ಕಾರ್ಯಕ್ರಮದಲ್ಲಿ ಪಥಸಂಚಲನ ನಡೆಸಲಿದೆ. ಇದರೊಂದಿಗೆ ಭಾರತೀಯ ನೌಕಾಪಡೆಯ ಪಥಸಂಚಲನ ತುಕಡಿ ಮತ್ತು ಮಿಲಿಟರಿ ಬ್ಯಾಂಡ್ ಕೂಡ ಭಾಗವಹಿಸಲು ಸಜ್ಜಾಗಿವೆ.

ನೌಕಾಪಡೆಯ ಉಪಸ್ಥಿತಿ: ನೌಕಾಪಡೆಯ ಮುಂಚೂಣಿ ರಹಸ್ಯ ಯುದ್ಧನೌಕೆ ಐಎನ್‌ಎಸ್ ತರ್ಕಾಶ್ ಮತ್ತು ಸ್ವದೇಶಿ ನಿರ್ಮಿತ ಸಮೀಕ್ಷಾ ನೌಕೆ ಐಎನ್‌ಎಸ್ ಇಕ್ಷಾಕ್ ಜೂನ್ 26ರಂದು ವಿಕ್ಟೋರಿಯಾ ತಲುಪಿವೆ. ಇವುಗಳ ಕಾರ್ಯಾಚರಣೆಯ ನಿಯೋಜನೆ, ಹಿಂದೂ ಮಹಾಸಾಗರ ಪ್ರದೇಶದಲ್ಲಿ ಉಭಯ ದೇಶಗಳ ನಡುವಿನ ಸುದೀರ್ಘ ಕರಾವಳಿ ಪಾಲುದಾರಿಕೆ ಮತ್ತು ನಿಕಟ ಸ್ನೇಹದ ಸೂಚಕ.

ಕಾರ್ಯತಂತ್ರದ ಸಂಬಂಧಗಳು: ಈ ಜಂಟಿ ಪಾಲ್ಗೊಳ್ಳುವಿಕೆ, ಪರಸ್ಪರ ನಂಬಿಕೆ ಮತ್ತು ಆಳವಾದ ರಕ್ಷಣಾ ಸಹಕಾರವನ್ನು ಒತ್ತಿಹೇಳುತ್ತದೆ. ಈ ಮಹತ್ವದ ಸಂದರ್ಭ, ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಪುನರುಚ್ಚರಿಸುತ್ತದೆ ಮತ್ತು ಪ್ರಾದೇಶಿಕ ಭದ್ರತೆಯಲ್ಲಿ ಭಾರತದ ಸಕ್ರಿಯ ಪಾತ್ರವನ್ನು ಪ್ರತಿಬಿಂಬಿಸುತ್ತದೆ.

15 ಸಾವಿರ ಜನರ ಹತ್ಯೆ ಸಂಚು; ಓರ್ವನ ಸೆರೆ

• **ಮುಂಬೈ:** ಮೊಹರಂ ಮೆರವಣಿಗೆಯಲ್ಲಿ ಜನರಿಗೆ ವಿಷಮಿಶ್ರಿತ ಮಾತ್ರೆಗಳನ್ನು ವಿತರಿಸುತ್ತಿದ್ದ ಆರೋಪಿಯನ್ನು ಪೊಲೀಸರು ಸಕಾಲದಲ್ಲಿ ಬಂಧಿಸಿದ್ದು, ಭಾರೀ ಗಂಡಾಂತರ ತಪ್ಪಿದೆ, ಸಾವಿರಾರು ಮಂದಿ ಸಂಭಾವ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಂಧಿತ ಆರೋಪಿ ಬಿಬಿಎ ಪದವೀಧರ ಫಯಾಜ್ ಪ್ರೇಮ್‌ಜಿ ಎಂಬಾತ. ತಾನು 15 ಸಾವಿರ ಜನರನ್ನು ಕೊಲ್ಲಲು ನಿರ್ಧರಿಸಿದ್ದೆ ಎಂದು ತಪ್ಪೊಪ್ಪಿರುವ ಆರೋಪಿಯನ್ನು ಬೈಕುಲಾ ಪ್ರದೇಶದಲ್ಲಿ ಬಂಧಿಸಲಾಗಿದೆ. ಈತ ನೀಡಿದ ಮಾತ್ರೆ ತಿಂದು ಸುಮಾರು 12ಕ್ಕೂ ಅಧಿಕ ಜನರು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ನೋವು ನಿವಾರಕ ಮತ್ತು ಶಕ್ತಿವರ್ಧಕ ಮಾತ್ರೆಗಳೆಂದು ನಂಬಿಸಿ ಜನರಿಗೆ ಈತ ವಿತರಿಸಿದ್ದ.

ಆರೋಪಿ ಫಯಾಜ್ ಝಿಂಕ್ ಫಾಸ್ಫೈಡ್ ಅನ್ನು ಮಾತ್ರೆಗಳಿಗೆ ತುಂಬಿದ್ದ. ಈ ಮಾತ್ರೆಗಳನ್ನು ವಿತರಿಸಲು ಅಗತ್ಯವಿರುವ ಮಾನ್ಯತೆಯನ್ನು ಈತ ಹೊಂದಿರಲಿಲ್ಲ. ಈತನ ಮಾತ್ರೆಗಳ ದಾಸ್ತಾನುಗಾರದಿಂದ 14,900 ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ. ಇಷ್ಟೇ ಅಲ್ಲ, ಸುಮಾರು 30 ಸಾವಿರ ಖಾಲಿ ಕ್ಯಾಪ್ಸೂಲ್‌ಗಳು ಹಾಗೂ 50 ಕೆಜಿ ಫಾಸ್ಫರಸ್‌ಗೂ ಆರೋಪಿ ಆರ್ಡರ್ ಮಾಡಿದ್ದನೆಂದು ಡಿಸಿಪಿ ಜಯಂತ್ ಮೀನಾ ತಿಳಿಸಿದ್ದಾರೆ.

ಬಂಧಿತ ಆರೋಪಿಯನ್ನು ನ್ಯಾಯಾಲಯ 2 ದಿನಗಳ ಪೊಲೀಸ್ ಕಸ್ಟಡಿಗೆ ಹಸ್ತಾಂತರಿಸಿದೆ. ಆರೋಪಿಗೆ ಭಯೋತ್ಪಾದಕರ ನಂಟಿದೆಯೇ ಮತ್ತು ಪ್ರಸ್ತುತ ಷಡ್ಯಂತ ಹಿಂದಿನ ಸೂತ್ರಧಾರಿಗಳ ಪತ್ತೆ ನಿಟ್ಟಿನಲ್ಲಿ ಪೊಲೀಸರು ತನಿಖೆ ನಡೆಸಿದ್ದಾರೆ.

ಪಶ್ಚಿಮ ಬಂಗಾಳ: ಏನಾಸಂ ಮಸೂದೆ ಮಂಡನೆ ಇಂದು

• **ಕೊಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲೇ ಬಿಜೆಪಿ ಸರ್ಕಾರ ತನ್ನ ಪ್ರಮುಖ ಚುನಾವಣಾ ಭರವಸೆಗಳಲ್ಲಿ ಒಂದಾದ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಮಸೂದೆಯನ್ನು ಸೋಮವಾರ ವಿಧಾನಸಭೆಯಲ್ಲಿ ಮಂಡಿಸಲು ಸಜ್ಜಾಗಿದೆ. ಈ ಮಸೂದೆ ವಿವಾಹ, ವಿಚ್ಛೇದನ, ದತ್ತು ಸ್ವೀಕಾರ ಹಾಗೂ ಆಸ್ತಿ ಹಂಚಿಕೆ ಸೇರಿದಂತೆ ನಾಗರಿಕ ವಿಷಯಗಳಿಗೆ ಧರ್ಮಭೇದವಿಲ್ಲದೆ ಒಂದೇ ಕಾನೂನು ಚೌಕಟ್ಟನ್ನು ಜಾರಿಗೆ ತರಲು ಉದ್ದೇಶಿಸಿದೆ.ಮುಖ್ಯಮಂತ್ರಿ ಸುವೇಂದು ಅಧಿಕಾರಿ, ಗುಜರಾತ್, ಉತ್ತರಾಖಂಡ ಮತ್ತು ಅಸ್ಸಾಂ ಮಾದರಿಯಲ್ಲಿ ಪಶ್ಚಿಮ ಬಂಗಾಳದಲ್ಲೂ ಏನಾಸಂ ಜಾರಿಗೊಳಿಸಲಾಗುವುದು ಎಂದು ತಿಳಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಅವರು ಸಂವಿಧಾನಾತ್ಮಕವಾಗಿ ಮಾನ್ಯತೆ ಪಡೆದ ಪರಿಶಿಷ್ಟ ಪಂಗಡಗಳ (ಎಸ್‌ಟಿ) ಜನರು ಏನಾಸಂನಿಂದ ವಿನಾಯಿತಿ ಪಡೆಯಲಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ವಿರೋಧ ವ್ಯಕ್ತಪಡಿಸಿರುವ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ, ಈ ಮಸೂದೆ ಸಾಮಾಜಿಕ ಒಗ್ಗಟ್ಟಿಗೆ ಮತ್ತು ಸಂವಿಧಾನಾತ್ಮಕ ಮೌಲ್ಯಗಳಿಗೆ ಸಂಬಂಧಿಸಿದ ಮಹತ್ವದ ವಿಷಯವಾಗಿದ್ದು, ವ್ಯಾಪಕ ಚರ್ಚೆ ಅಗತ್ಯವಿದೆ ಎಂದು ಹೇಳಿದ್ದಾರೆ.

ಸ್ವದೇಶಿ ವಿಮಾನ, ಕ್ಷಿಪಣಿ, ಯುದ್ಧನೌಕೆಗಳ ಸಾಧನೆ: ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿ ಪ್ರಶಂಸೆ

ಸಮುದ್ರದಿಂದ ಆಕಾಶದವರೆಗೆ ಆತ್ಮನಿರ್ಭರದತ್ತ ಭಾರತ



• **ಹೊಸದಿಲ್ಲಿ:** ಭಾರತವು ರಕ್ಷಣಾ, ವಿಮಾನಯಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ವೇಗವಾಗಿ ಆತ್ಮನಿರ್ಭರತೆಯತ್ತ ಸಾಗುತ್ತಿದ್ದು, ಸಮುದ್ರದಿಂದ ಆಕಾಶದವರೆಗೆ ದೇಶದ ಸಾಮರ್ಥ್ಯ ವಿಸ್ತರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಭಾನುವಾರ ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ಮಾತನಾಡಿದ ಅವರು, ಜೂನ್ ತಿಂಗಳಲ್ಲಿ ದೇಶ ಹಲವು ಮಹತ್ವದ ಸಾಧನೆಗಳನ್ನು ದಾಖಲಿಸಿದೆ ಎಂದರು.

ಸಿ-295 ವಿಮಾನದಿಂದ ಹೊಸ ಮೈಲಿಗಲ್ಲು: ಭಾರತದಲ್ಲೇ ನಿರ್ಮಿಸಲಾದ ಸಿ-295 ಸೇನಾ ಸಾರಿಗೆ ವಿಮಾನ ಯಶಸ್ವಿಯಾಗಿ ಮೊದಲ ಹಾರಾಟ ನಡೆಸಿರುವುದು ದೇಶದ ವಿಮಾನಯಾನ ಕ್ಷೇತ್ರಕ್ಕೆ ಮಹತ್ವದ ಸಾಧನೆಯಾಗಿದೆ. 40 ವಿಮಾನಗಳನ್ನು ಭಾರತದಲ್ಲೇ ನಿರ್ಮಿಸಲಾಗುತ್ತಿದ್ದು, ಇದರಿಂದ ಎಂಎಸ್‌ಎಂಇ ಮತ್ತು ಏರೋಸ್ಪೇಸ್ ಕ್ಷೇತ್ರಗಳಿಗೆ ಉತ್ತೇಜನ ದೊರೆಯಲಿದೆ. ಜತೆಗೆ ಉದ್ಯೋಗಾವಕಾಶಗಳೂ ಹೆಚ್ಚಲಿವೆ ಎಂದು ಹೇಳಿದರು.

ಸ್ವದೇಶಿ ಯುದ್ಧನೌಕೆ, ಕ್ಷಿಪಣಿ ಯಶಸ್ಸು: ಇತ್ತೀಚೆಗೆ ಕೋಲ್ಕತ್ತಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಐಎನ್‌ಎಸ್ ದುನಗಿರಿ, ಐಎನ್‌ಎಸ್ ಶಂಖ್ ಹಾಗೂ ಐಎನ್‌ಎಸ್ ಅಗ್ರಯ ನೌಕೆಗಳನ್ನು ಭಾರತೀಯ ನೌಕಾಪಡೆಗೆ ಸೇರ್ಪಡೆಗೊಳಿಸಲಾಗಿದೆ. ಈ ನೌಕೆಗಳ ವಿನ್ಯಾಸದಿಂದ ನಿರ್ಮಾಣದವರೆಗೆ ಎಲ್ಲವೂ ಸ್ವದೇಶಿ ತಂತ್ರಜ್ಞಾನದಿಂದಲೇ ರೂಪುಗೊಂಡಿವೆ ಎಂದು ಮೋದಿ ಹೇಳಿದರು. ಇದೇ ವೇಳೆ ಡಿಆರ್‌ಡಿಒ ಅಭಿವೃದ್ಧಿಪಡಿಸಿದ ದೀರ್ಘ ವ್ಯಾಪ್ತಿಯ ಭೂ ದಾಳಿ ಕ್ರೂಸ್ ಕ್ಷಿಪಣಿ (ಎಲ್‌ಆರ್‌ಎಲ್‌ಎಸಿಎಂ) ಯಶಸ್ವಿ ಪರೀಕ್ಷೆಯನ್ನೂ ಅವರು ಉಲ್ಲೇಖಿಸಿದರು. ಸಮುದ್ರದಿಂದ ಆಕಾಶದವರೆಗೆ ಭಾರತ ಹೆಚ್ಚು ಸುರಕ್ಷಿತ ಮತ್ತು ಆತ್ಮನಿರ್ಭರವಾಗುತ್ತಿದೆ ಎಂದು ಹೇಳಿದರು.

ಜನರಿಗೆ ಧನ್ಯವಾದ: ಮಧ್ಯಪ್ರಾಚ್ಯದ ಉದ್ವಿಗ್ನ ಪರಿಸ್ಥಿತಿಯ ಸಂದರ್ಭದಲ್ಲಿ ಚಿನ್ನ ಖರೀದಿ ಕಡಿಮೆ ಮಾಡಲು, ವಿದೇಶ ಪ್ರವಾಸ ತಪ್ಪಿಸಲು ಹಾಗೂ ಕಾರ್‌ಪೂಲ್ ಬಳಸಲು ನೀಡಿದ್ದ ಮನವಿಗೆ ಸ್ಪಂದಿಸಿದ ದೇಶದ ನಾಗರಿಕರಿಗೆ ಮೋದಿ ಧನ್ಯವಾದ ಸಲ್ಲಿಸಿದರು

ಸಂಸ್ಕೃತ ವಿವಿಯಲ್ಲಿ ಎಐ: ಯುವಕರನ್ನು ಆಧುನಿಕ ತಂತ್ರಜ್ಞಾನಕ್ಕೆ ಸಜ್ಜುಗೊಳಿಸುವ ಉದ್ದೇಶದಿಂದ ದಿಲ್ಲಿಯ ಕೇಂದ್ರ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಮತ್ತು ಡೇಟಾ ಸೈನ್ಸ್‌ನಲ್ಲಿ ಬಿ.ಟೆಕ್ ಕೋರ್ಸ್ ಆರಂಭಿಸಲಾಗುತ್ತಿದೆ ಎಂದರು.

ಜಾಗತಿಕ ಮಟ್ಟದಲ್ಲಿ ಭಾರತೀಯ ಸಂಸ್ಕೃತಿ: ಡೊಮಿನಿಕನ್ ಗಣರಾಜ್ಯದಲ್ಲಿ ಕೇವಲ ನೂರಕ್ಕೂ ಕಡಿಮೆ ಭಾರತೀಯರು ಇದ್ದರೂ, ಸ್ಥಳೀಯ ಸ್ಪ್ಯಾನಿಷ್ ಭಾಷಿಕರು ಬ್ರಹ್ಮಕಮಲ ಡೊಮಿನಿಕಾನಾ ಎಂಬ ತಂಡ ರಚಿಸಿ ವೇದ ಸಾಹಿತ್ಯ ಅಧ್ಯಯನ ಮಾಡುತ್ತಿರುವುದನ್ನು ಉದಾಹರಿಸಿದರು. ಅವರು ಧ್ವನಿಮುದ್ರಣಗಳನ್ನು ಆಲಿಸಿ ವೇದ ಮಂತ್ರಗಳ ಉಚ್ಚಾರಣೆಯನ್ನು ಕಲಿಯುತ್ತಿದ್ದಾರೆ ಎಂದರು.

ಗಣೇಶೋತ್ಸವಕ್ಕೆ ಸ್ವದೇಶಿ ಮೂರ್ತಿಗಳಿಗೆ ಬೆಂಬಲ

ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಗಣೇಶ ಚತುರ್ಥಿ ಹಬ್ಬದ ಹಿನ್ನೆಲೆಯಲ್ಲಿ, ದೇಶೀಯ ಮಣ್ಣಿನಿಂದ ಸ್ಥಳೀಯ ಕುಂಬಾರರು ತಯಾರಿಸುವ ಗಣೇಶ ಮೂರ್ತಿಗಳಿಗೆ ಆದ್ಯತೆ ನೀಡುವಂತೆ ಮೋದಿ ಕರೆ ನೀಡಿದರು. ಮಣ್ಣಿನ ಮೂರ್ತಿಗಳ ಬಳಕೆ ಪರಿಸರ ಸ್ನೇಹಿಯಾಗಿದ್ದು, ಸ್ಥಳೀಯ ಕಲಾವಿದರ ಜೀವನೋಪಾಯಕ್ಕೂ ನೆರವಾಗಲಿದೆ ಎಂದು ಹೇಳಿದರು.

ಪ್ಲಾಸ್ಟಿಕ್‌ನಿಂದ ಪರಿಸರ ಸ್ನೇಹಿ ಇಟ್ಟಿಗೆ: ಮಧ್ಯಪ್ರದೇಶದ ರಾಜಗಢ ಜಿಲ್ಲೆಯ ಮಹಿಳೆಯರು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ ಇಕೋ ಬ್ರಿಕ್ಸ್ ತಯಾರಿಸುವ ಮೂಲಕ ಪರಿಸರ ಸಂರಕ್ಷಣೆಗೆ ಮಾದರಿಯಾಗಿದ್ದಾರೆ ಎಂದರು. ಅಸ್ಸಾಂನಲ್ಲಿ ಅಪಶಕುನ ಎಂದು ಪರಿಗಣಿಸಲಾಗುತ್ತಿದ್ದ ಹರ್ಗಿಲಾ ಪಕ್ಷಿಯ ಸಂರಕ್ಷಣೆಗೆ ಜೀವಶಾಸ್ತ್ರಜ್ಞೆ ಪೂರ್ಣಿಮಾ ದೇವಿ ಬರ್ಮನ್ ಕೈಗೊಂಡ ಜಾಗೃತಿ ಕಾರ್ಯವನ್ನು ಮೋದಿ ಶ್ಲಾಘಿಸಿದರು. ಮೇಘಾಲಯದ ಜೀವಂತ ಬೇರು ಸೇತುವೆಗಳನ್ನು ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಗೆ ಸೇರಿಸಲು ಭಾರತ ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು.

ಅಮೆರಿಕದ ದಾಳಿಗೆ ಇರಾನ್ ಪ್ರತೀಕಾರ

ನೆರೆ ರಾಷ್ಟ್ರಗಳ ಮೇಲೆ ದಾಳಿ

• **ದುಬೈ:** ಅಮೆರಿಕ ಶನಿವಾರ ನಡೆಸಿದ ವೈಮಾನಿಕ ದಾಳಿಗೆ ಪ್ರತ್ಯುತ್ತರವಾಗಿ ಅಮೆರಿಕದ ಮಿತ್ರರಾಷ್ಟ್ರಗಳಾದ ಬಹ್ರೇನ್ ಮತ್ತು ಕುವೈತ್ ಮೇಲೆ ಇರಾನ್ ಭಾನುವಾರ ಡ್ರೋನ್ ಮತ್ತು ಕ್ಷಿಪಣಿಗಳಿಂದ ದಾಳಿ ನಡೆಸಿದೆ. ದಾಳಿ ನಡೆಸಿದ್ದಲ್ಲದೆ, ಅಮೆರಿಕ ದಾಳಿಯನ್ನು ನಿಲ್ಲಿಸದಿದ್ದರೆ ಶಾಂತಿ ಮಾತುಕತೆಗಳನ್ನು ಸಂಪೂರ್ಣ ರದ್ದುಗೊಳಿಸುವುದಾಗಿ ಇರಾನ್ ಬೆದರಿಕೆಯೊಡ್ಡಿದೆ.

ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸಿ ವಾಣಿಜ್ಯ ಹಡಗೊಂದರ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದೆಯೆಂಬ ಆರೋಪದ ಹಿನ್ನೆಲೆ ಅಮೆರಿಕ ಶನಿವಾರ ತಡರಾತ್ರಿ ಇರಾನ್‌ನ ಕ್ಷಿಪಣಿ, ಡ್ರೋನ್ ಮತ್ತು ರಾಡಾರ್ ಕೇಂದ್ರಗಳ ಮೇಲೆ ಭಾರೀ ವೈಮಾನಿಕ ದಾಳಿಯನ್ನು ನಡೆಸಿತ್ತು.

ಇರಾನ್ ದಾಳಿಗೆ ಜೋರ್ಡಾನ್ ಖಂಡನೆ: ಬಹ್ರೇನ್ ಮತ್ತು ಕುವೈತ್ ಮೇಲೆ ಇರಾನ್ ನಡೆಸಿದ ಕ್ಷಿಪಣಿ ಮತ್ತು ಡ್ರೋನ್ ದಾಳಿಯನ್ನು ಜೋರ್ಡಾನ್ ಖಂಡಿಸಿದ್ದು, ಇದು ಸಾರ್ವಭೌಮತೆಯ ಉಲ್ಲಂಘನೆಯಾಗಿದೆ. ಅವುಗಳ ಭದ್ರತೆ ಮತ್ತು ಸ್ಥಿರತೆಗೆ ಒಡ್ಡಿದ ಬೆದರಿಕೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಕ್ಷಿಪಣಿಗಳನ್ನು ತಡೆದ ಕುವೈತ್: ಇರಾನ್ ನಡೆಸಿದ ಕ್ಷಿಪಣಿ ದಾಳಿಗಳ ಪೈಕಿ, ಕುವೈತ್ ವಾಯುನೆಲೆಯ ಮೇಲೆ ಅಪ್ಪಳಿಸಲಿದ್ದ ಎರಡು ಕ್ಷಿಪಣಿಗಳನ್ನು ಭಾನುವಾರ ಬೆಳಗ್ಗೆ ತನ್ನ ಸೇನೆ ತಡೆದಿರುವುದಾಗಿ ಕುವೈತ್ ತಿಳಿಸಿದ್ದು, ಇರಾನ್‌ನ ಹೇಯ ಕೃತ್ಯವನ್ನು ಕುವೈತ್ ವಿದೇಶಾಂಗ ಸಚಿವಾಲಯವು ತೀವ್ರವಾಗಿ ಖಂಡಿಸಿದೆ.

ಇರಾನ್ ಹಣದುಬ್ಬರ ಶೇ.89ಕ್ಕೆ: ಅಮೆರಿಕದೊಂದಿಗಿನ ತಿಕ್ಕಾಟದಲ್ಲಿ ಇರಾನ್ ಪೌರುಷದ ಹೇಳಿಕೆಗಳನ್ನು ನೀಡುತ್ತಿರುವ ಹೊರತಾಗಿಯೂ ಇರಾನ್‌ನ ಹಣದುಬ್ಬರವು ಎಲ್ಲ ಎಲ್ಲೆಗಳನ್ನು ಮೀರಿ ಅಪಾಯಕಾರಿ ಮಟ್ಟಕ್ಕೆ ಹೋಗಿದ್ದು, ಶೇ.89ರ ಸನಿಹಕ್ಕೆ ತಲುಪಿದೆ. ಇರಾನಿನ ಆರ್ಥಿಕತೆ ತೀವ್ರ ಸಂಕಷ್ಟಕ್ಕೀಡಾಗಿದ್ದು, ಆಹಾರದ ಬೆಲೆಗಳು ಗಗನಕ್ಕೇರಿದ್ದು ಜನತೆ ಕಂಗೆಟ್ಟಿದ್ದಾರೆ.

ಕಿರುಸುದ್ದಿ

ನಾಳೆ ಕೊಡವ ತಕ್ ಎಳ್ತ್‌ಕಾರಡ ಕೂಟದ 199ನೆ ಪುಸ್ತಕ ಲೋಕಾರ್ಪಣೆ

• **ಶ್ರೀಮಂಗಲ:** 1994ರಿಂದ ಎಡೆಬಿಡದೆ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಕೊಡವ ಸಾಹಿತ್ಯ ಲೋಕದ ಹಿರಿಯ ಸಂಸ್ಥೆ 'ಕೊಡವ ತಕ್ಕ್ ಎಳ್ತ್‌ಕಾರಡ ಕೂಟ' ಹಾಗೂ 'ವೀರಾಜಪೇಟೆ ಕೊಡವ ಸಮಾಜ ಪೊಮ್ಮಕ್ಕಡ ಕೂಟ'ದ ಜಂಟಿ ಆಶ್ರಯದಲ್ಲಿ ಜೂನ್ 30ರಂದು ಅಪರಾಹ್ನ 2 ಗಂಟೆಗೆ ವೀರಾಜಪೇಟೆ ಕೊಡವ ಸಮಾಜದಲ್ಲಿ ವಿಶೇಷ ಕೊಡವ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭ ಕೂಟದ 'ಜನಪ್ರಿಯ ಕೊಡವ ಸಾಹಿತ್ಯ ಮಾಲೆ' ಯೋಜನೆಯ 199ನೆ ಹೆಜ್ಜೆಯ ಪುಸ್ತಕ ಲೋಕಾರ್ಪಣೆಗೊಳಿಸಲಾಗುವುದು. ಇದರೊಂದಿಗೆ ಪ್ರಾಥಮಿಕ, ಪ್ರೌಢ ಶಾಲೆ, ಕಾಲೇಜು ಹಾಗೂ ಸಾರ್ವಜನಿಕ ವಿಭಾಗದಲ್ಲಿ ಕೊಡವ ಭಾಷೆಯ ಹಾಡುಗಾರಿಕೆ, ಕೊಡವ ಪುಸ್ತಕ ಓದುವುದು ಹಾಗೂ ಕೊಡವ ಭಾಷೆಯಲ್ಲಿ ಹಾಸ್ಯ ಸ್ಪರ್ಧೆ ನಡೆಸಲಾಗುವುದು. ವಿಜೇತರಿಗೆ ವಿಭಾಗವಾರು ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಲಾಗುವುದು. ಕೊಡವ ತಕ್ಕ್ ಎಳ್ತ್‌ಕಾರಡ ಕೂಟದ ಅಧ್ಯಕ್ಷ ಚೆಟ್ಟಂಗಡ ರವಿ ಸುಬ್ಬಯ್ಯರವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವೀರಾಜಪೇಟೆ ಕೊಡವ ಸಮಾಜದ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ, ವೀರಾಜಪೇಟೆ ಕೊಡವ ಸಮಾಜ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ತಾತಂಡ ಜ್ಯೋತಿ ಪ್ರಕಾಶ್,199ನೆ ಪುಸ್ತಕದ ಲೇಖಕಿ ಹಾಗೂ ದಾನಿ ಕಿಕ್ಕೇರಿಯಂಡ ಲೀಲ ಅಯ್ಯಪ್ಪ, ಪುಸ್ತಕ ಪ್ರಕಟಣೆಯ ದಾನಿ ನಾಯಕಂಡ ಮಧು ಬೋಪಯ್ಯ, ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕೆಇಎಲ್ ಇಎಂಎಲ್‌ನ ಹೊಸ ಕಾರ್ಪೊರೇಟ್ ಲೋಗೋ ಬಿಡುಗಡೆ

• **ಕಾಸರಗೋಡು:** ಕಾಸರಗೋಡು ಮೂಲದ ಕೇರಳ ಸರಕಾರಿ ಕಂಪೆನಿಯಾದ ಕೆಇಎಲ್ ಇಲೆಕ್ಟ್ರಿಕಲ್ ಮೆಷಿನ್ಸ್ ಲಿಮಿಟೆಡ್ (ಕೆಇಎಲ್ ಇಎಂಎಲ್)ನ ಹೊಸ ಕಾರ್ಪೊರೇಟ್ ಲೋಗೋವನ್ನು ಕೈಗಾರಿಕಾ ಖಾತೆ ಸಚಿವ ಪಿ.ಕೆ. ಕುಂಞಾಲಿಕುಟ್ಟಿ ತಿರುವನಂತಪುರದಲ್ಲಿ ಅನಾವರಣಗೊಳಿಸಿ ಶುಭಕೋರಿದರು. ಸಮಾರಂಭದಲ್ಲಿ ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮುಹಮ್ಮದ್ ಹನೀಶ್, ಕೆಇಎಲ್ ಇಎಂಎಲ್ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಕನೋಟ್, ನಿರ್ದೇಶಕರಾದ ರಾಜ್‌ಮೋಹನ್, ಮನೀಶ್ ಮೋಹನ್, ಲೈಜು ಪಿ.ನಾಯರ್, ಇಲಾಖಾ ಮುಖ್ಯಸ್ಥರಾದ ಸಿಜಿಲ್ ಮತ್ತು ಸಂಜೀವ್, ಕಾರ್ಮಿಕ ಸಂಘದ ಮುಖಂಡರಾದ ಮುಹಮ್ಮದ್ ಅನೀಸ್, ರಾಗೇಶ್ ಕುಮಾರ್ ಮತ್ತು ಸನೋಜ್ ಉಪಸ್ಥಿತರಿದ್ದರು.

ದಿವ್ಯಾಗೆ ಪಿಹೆಚ್‌ಡಿ ಪದವಿ

ಮಡಿಕೇರಿ : ತುಮಕೂರು ಸ್ನಾತಕೋತ್ತರ ವ್ಯವಹಾರ ಆಡಳಿತ ಮಂಡಳಿ ಮತ್ತು ಸಂಶೋಧನಾ ವಿಭಾಗದ ವಿದ್ಯಾರ್ಥಿನಿ, ಮಡಿಕೇರಿ ತಾಲ್ಲೂಕಿನ ಅರ್ವತ್ತೊಕ್ಲು ಗ್ರಾಮದ ದಿವ್ಯ ಎ. ಅವರು ತುಮಕೂರು ವಿಶ್ವವಿದ್ಯಾಲಯದಿಂದ ಪಿಹೆಚ್‌ಡಿ ಪದವಿ ಪಡೆದಿದ್ದಾರೆ.



Impact of Work Flexibility on Employee Performance in Selected Private hospitals- With Special reference to Nurses in Mangalore & Udupi City ವಿಷಯದ ಮೇಲೆ ಪ್ರೊ.ಶಿವಶಂಕರ್ ಕೆ.ಸಿ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಲಭಿಸಿದೆ. ದಿವ್ಯ ಎ. ಅವರಿಗೆ ಪತಿ ಸಂತು ಟಿ.ಪಿ ಹಾಗೂ ಪುತ್ರ ಕುಶ್ ಟಿ.ಎಸ್ ಶುಭ ಕೋರಿದ್ದಾರೆ.

ಟಿಪ್ಪರ್ ಲಾರಿಗಳ ಸಂಚಾರಕ್ಕೆ ನಿಯಂತ್ರಣ: ಹಲವೆಡೆ ಉಲ್ಲಂಘನೆ

• **ಕಾಸರಗೋಡು:** ಶಾಲಾ ಸಮಯದಲ್ಲಿ ಟಿಪ್ಪರ್ ಲಾರಿಗಳನ್ನು ರಸ್ತೆಗಿಳಿಸಕೂಡದು, ಅಪರಿಮಿತ ವೇಗ ನಿಯಂತ್ರಿಸಲು ಸ್ಪೀಡ್ ಗವರ್ನರ್ ಸ್ಥಾಪಿಸಬೇಕು ಮೊದಲಾದ ಹಲವಾರು ನಿಬಂಧನೆಗಳಿದ್ದರೂ ಕಾಸರಗೋಡು ಜಿಲ್ಲೆಯಲ್ಲಿ ಅದ್ಯಾವುದೂ ಪಾಲನೆಯಾಗುತ್ತಿಲ್ಲವೆಂದು ಆರೋಪಿಸಲಾಗಿದೆ. ಕಾನೂನು ಉಲ್ಲಂಘನೆಗಳನ್ನು ಪತ್ತೆಹಚ್ಚಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಪೊಲೀಸ್ ಹಾಗೂ ಮೋಟಾರು ವಾಹನ ಇಲಾಖೆಯು ಸಿದ್ಧವಾಗದಿರುವುದೇ ಈ ಸಮಸ್ಯೆಗೆ ಕಾರಣವೆಂದು ಹೇಳಲಾಗುತ್ತಿದೆ. ಶಾಲಾ ಚಟುವಟಿಕೆಗಳು ಇರುವ ದಿನಗಳಲ್ಲಿ ಬೆಳಗ್ಗೆ ಮತ್ತು ಸಂಜೆ ಹೊತ್ತಿನಲ್ಲಿ ಟಿಪ್ಪರ್ ಲಾರಿಗಳ ಸಂಚಾರಕ್ಕೆ ನಿಯಂತ್ರಣ ಹೇರಿ ಮೋಟಾರು ವಾಹನ ಇಲಾಖೆಯು ಈ ಮೊದಲೇ ಸೂಚನೆ ನೀಡಿತ್ತು. ಮಾತ್ರವಲ್ಲದೆ ಜಿಲ್ಲಾಧಿಕಾರಿಗಳು ಕೂಡಾ ಈ ವಿಷಯದಲ್ಲಿ ಸ್ಪಷ್ಟ ನಿರ್ದೇಶನ ನೀಡಿದ್ದರು. ಆದರೆ ಅದನ್ನು ಕೆಲವರು ಪಾಲಿಸುತ್ತಿಲ್ಲವೆಂದು ದೂರುಗಳು ಕೇಳಿ ಬರುತ್ತಿವೆ.

ಕಾರು-ಟ್ಯಾಂಕರ್ ಡಿಕ್ಕಿ: ಐವರು ಗಂಭೀರ

• **ಉಪ್ಪಿನಂಗಡಿ :** ಶಿರಾಡಿ ಗ್ರಾಮದ ಗುಂಡ್ಯ ಎಂಬಲ್ಲಿ ಕಾರು ಮತ್ತು ಟ್ಯಾಂಕರ್ ನಡುವೆ ಡಿಕ್ಕಿ ಸಂಭವಿಸಿ ಕಾರಿನಲ್ಲಿದ್ದ ಐವರು ಗಂಭೀರವಾಗಿ ಗಾಯಗೊಂಡ ಘಟನೆ ಭಾನುವಾರ ಸಂಭವಿಸಿದೆ. ಗಾಯಾಳುಗಳನ್ನು ಸಕಲೇಶಪುರದ ನಿವಾಸಿಗರಾದ ಸಂಜಯ್ (34), ಲಲಿತಾ (45), ಮೋನಪ್ಪ (56), ಪ್ರೇಮ (34) ಹಾಗೂ ಸುರೇಶ್ (39) ಎಂದು ಗುರುತಿಸಲಾಗಿದೆ. ಇವರೆಲ್ಲರೂ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಎದುರುಗಡೆಯಿಂದ ಬಂದ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಎಲ್ಲರೂ ಗಾಯಗೊಂಡು ನೆಲ್ಯಾಡಿಯ ಅಶ್ವಿನಿ ಆಸ್ಪತ್ರೆಗೆ ದಾಖಲುಗೊಂಡಿದ್ದಾರೆ.

ಈ ಅಪಘಾತದಿಂದಾಗಿ ಹೆದ್ದಾರಿ ಸಂಚಾರ ಕೆಲ ಕಾಲ ಅಸ್ತವ್ಯಸ್ತಗೊಂಡಿದ್ದು, ಪೊಲೀಸರು ಮತ್ತು ಸ್ಥಳೀಯರ ಪ್ರಯತ್ನದ ಫಲವಾಗಿ ಹೆದ್ದಾರಿ ಸಂಚಾರವನ್ನು ಸುಗಮಗೊಳಿಸಲಾಯಿತು. ಉಪ್ಪಿನಂಗಡಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾರ್ನಾಡ್ ಬಳಿ ಭೀಕರ ಅಪಘಾತ: ಇಬ್ಬರು ಗಂಭೀರ

• **ಮುಲ್ಕಿ:** ಕಿನ್ನಿಗೋಳಿ ಮುಲ್ಕಿ ರಾಜ್ಯ ಹೆದ್ದಾರಿಯ ಕಾರ್ನಾಡ್ ಬಳಿ ಬೈಕ್‌ಗೆ ಕಾರು ಡಿಕ್ಕಿಯಾಗಿ ಬೈಕ್ ಸವಾರ ಹಾಗೂ ಸಹ ಸವಾರ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಗೊಂಡವರನ್ನು ಕಾರ್ನಾಡ್ ಕುದ್ರಪಲ್ಲ ನಿವಾಸಿಗಳಾದ ಬೈಕ್‌ನಲ್ಲಿದ್ದ ಅಕ್ಷಿತ್ (32) ಮತ್ತು ಮಾನಿಷ್ (25) ಎಂದು ಗುರುತಿಸಲಾಗಿದೆ. ಕೂಡಲೇ ಸ್ಥಳೀಯರು ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ನೆರವಾದರು. ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.


ಮಂಗಳೂರು


ಉಡುಪಿ


ಕಾಸರಗೋಡು

ದ.ಕ., ಉಡುಪಿ, ಕಾಸರಗೋಡು ಜಿಲ್ಲಾ ಮಟ್ಟದ ಪೋಲಿಯೋ ಲಸಿಕೆ ಕಾರ್ಯಕ್ರಮ

ಲಸಿಕೆ ಹಾಕಿಸುವುದು ಹೆತ್ತವರ ಕರ್ತವ್ಯ

• **ಮಂಗಳೂರು:** ರಾಜ್ಯಾದ್ಯಂತ ಭಾನುವಾರ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ ನಡೆದಿದ್ದು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿಯೂ ಯಶಸ್ವಿಯಾಗಿ ನಡೆಯಿತು. ದ.ಕ. ಜಿಲ್ಲಾ ಮಟ್ಟದ ಪೋಲಿಯ ಲಸಿಕೆ ಕಾರ್ಯಕ್ರಮಕ್ಕೆ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಅವರು ಲೇಡಿ ಗೋಷನ್ ಆಸ್ಪತ್ರೆಯಲ್ಲಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪೋಲಿಯೊ ಲಸಿಕೆ ಹಾಕಿಸುವುದು ಹೆತ್ತವರ ಕರ್ತವ್ಯವಾಗಿದೆ. ಪ್ರತಿಯೊಂದು ಮಗುವು ದೇಶದ ಆಸ್ತಿ. ಹೀಗಾಗಿ ಅವರ ಆರೋಗ್ಯದ ಕಡೆಗೆ ಗಮನ ಹರಿಸಬೇಕಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಚ್.ಆರ್. ತಿಮ್ಮಯ್ಯ, ಲೇಡಿಗೋಷನ್ ಆಸ್ಪತ್ರೆಯ ಅಧೀಕ್ಷಕ ಡಾ.ದುರ್ಗಾಪ್ರಸಾದ್ ಎಂ.ಆರ್, ಆರೋಗ್ಯ ಇಲಾಖೆಯ ಅಧಿಕಾರಿಗಳಾದ ಡಾ. ರಾಜೇಶ್ ಬಿ.ವಿ., ಆರೋಗ್ಯ ಶಿಕ್ಷಣಾಧಿಕಾರಿ ಜ್ಯೋತಿ ಉಳೇಪಾಡಿ ಮತ್ತಿತರರು ಉಪಸ್ಥಿತರಿದ್ದರು.

1,40,677 ಮಕ್ಕಳಿಗೆ ಲಸಿಕೆ ಹಾಕಿಸುವ ಗುರಿ

ದ.ಕ. ಜಿಲ್ಲೆಯಲ್ಲಿ 0–5 ವರ್ಷದೊಳಗಿನ 1,40,677 ಮಕ್ಕಳಿಗೆ ಪೋಲಿಯೊ ಹನಿ ಹಾಕಿಸುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಒಟ್ಟು 756 ಬೂತ್‌ಗಳನ್ನು ತೆರೆಯಲಾಗಿತ್ತು. 26 ಟ್ರಾನ್ಸಿಟ್ ತಂಡಗಳು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣ, ಸುಬ್ರಹ್ಮಣ್ಯ, ಧರ್ಮಸ್ಥಳ, ಕಟೀಲು ಸಹಿತ ದೇವಸ್ಥಾನಗಳಲ್ಲಿ ಪೋಲಿಯೊ ಲಸಿಕೆ ಹಾಕುವ ಕಾರ್ಯದಲ್ಲಿ ನಿರತವಾಗಿವೆ. ಜಿಲ್ಲೆಯಲ್ಲಿ 506 ಮಂದಿ ವಲಸೆ ಮಕ್ಕಳಿದ್ದು, ಅವರಿಗೂ ಪೋಲಿಯೋ ಹನಿ ಹಾಕಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಚ್. ಆರ್. ತಿಮ್ಮಯ್ಯ ತಿಳಿಸಿದ್ದಾರೆ.

▸ ದ.ಕ. ಜಿಲ್ಲೆ ಶೇ. 97.2 ಸಾಧನೆ

ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ ದ.ಕ. ಜಿಲ್ಲೆಯಲ್ಲಿ 1,40,677 ಗುರಿ ನೀಡಲಾಗಿದ್ದು, ಅದರಲ್ಲಿ 1,36,717 (ಶೇ. 97.2) ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯದಲ್ಲಿ ಗುರಿ ಮೀರಿದ ಸಾಧನೆಯಾಗಿದೆ. ಬಂಟ್ವಾಳ ಶೇ. 96.8, ಬೆಳ್ತಂಗಡಿ ಶೇ. 103.4, ಮಂಗಳೂರು ಶೇ.93.1, ಪುತ್ತೂರು ಶೇ.102.4 ಮತ್ತು ಸುಳ್ಯ ತಾಲೂಕಿನಲ್ಲಿ ಶೇ.106.2 ಗುರಿ ಸಾಧಿಸಲಾಗಿದೆ.

ಆರೋಗ್ಯವಂತ ಮಕ್ಕಳು ಭವಿಷ್ಯದ ನಾಯಕರು: ಶಾಸಕ ಯಶಪಾಲ್ ಸುವರ್ಣ

• **ಉಡುಪಿ:** ಭಾರತವು ಪೋಲಿಯೊ ಮುಕ್ತ ದೇಶವಾಗಿದ್ದು ಪೋಲಿಯೊ ರೋಗವನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡುವಲ್ಲಿ ವಿಶ್ವದ ಇತರ ಎಲ್ಲಾ ದೇಶಗಳಿಗೆ ಮಾದರಿಯಾಗಿದೆ. ದೇಶದ ಭವಿಷ್ಯ ವಾಗಿರುವ ಮಕ್ಕಳು ಸದೃಢರಾಗಿರಬೇಕು ಎನ್ನುವ ಉದ್ದೇಶದಿಂದ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಸದೃಢ, ಆರೋಗ್ಯವಂತ ಮಕ್ಕಳು ಭವಿಷ್ಯದ ನಾಯಕರಾಗಿ ರೂಪುಗೊಂಡು ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಬೇಕು ಎಂದು ಶಾಸಕ ಯಶಪಾಲ್ ಸುವರ್ಣ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಆರೋಗ್ಯ ಅಭಿಯಾನ, ವಿವಿಧ ಇಲಾಖೆಗಳ ಹಾಗೂ ಸಂಘಗಳ ಸಹಯೋಗದಲ್ಲಿ ಸರಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ನಾವು ಪೋಲಿಯೊ ಮುಕ್ತ ರಾಷ್ಟ್ರವಾಗಿದ್ದರೂ ವಿಶ್ವದ ಇನ್ನಿತರ ದೇಶಗಳಲ್ಲಿ ಪೋಲಿಯೊ ಪ್ರಕರಣಗಳು ಕಂಡು ಬರುತ್ತಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಪ್ರತಿ ವರ್ಷವೂ ಮಕ್ಕಳಿಗೆ ಲಸಿಕಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ 60 ಸಾವಿರಕ್ಕೂ ಮಿಕ್ಕಿ ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದೆ. ಪೋಲಿಯೊ ಬಗ್ಗೆ ಜಾಗೃತಿ ಮೂಡಿಸಿ ಮಕ್ಕಳು ತಪ್ಪದೇ ಲಸಿಕೆ ಪಡೆದುಕೊಳ್ಳುವಂತೆ ನೋಡಿಕೊಳ್ಳಬೇಕು ಎಂದರು. ಶೈಕ್ಷಣಿಕವಾಗಿ ಮುಂಚೂಣಿಯಲ್ಲಿರುವ ಜಿಲ್ಲೆಯು ಆರೋಗ್ಯ ಕ್ಷೇತ್ರದಲ್ಲಿಯೂ ಅಗ್ರ ಸ್ಥಾನದಲ್ಲಿರಬೇಕು ಎಂದರು.

> **ತಾಯಿ ಮಕ್ಕಳ ಆಸ್ಪತ್ರೆಗೆ ಹೊಸ ರೂಪ ನೀಡುವ ಪ್ರಯತ್ನ ನಡೆಯುತ್ತಿದೆ. ಆರೋಗ್ಯ ಸಚಿವರ ಜೊತೆ ಚರ್ಚಿಸಿ ಆಸ್ಪತ್ರೆಯ ಮೂಲ ಸೌಕರ್ಯಗಳನ್ನು 50 ಲಕ್ಷ ರೂ. ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸುವ ಪ್ರಯತ್ನ ನಡೆದಿದೆ. ಶೀಘ್ರವೇ ಆರೋಗ್ಯ ಸಚಿವರು ಜಿಲ್ಲೆಗೆ ಭೇಟಿ ನೀಡಲಿದ್ದು ಸಮಸ್ಯೆಗಳಿಗೆ ಮುಕ್ತಿ ನೀಡುವ ಕಾರ್ಯವಾಗಲಿದೆ. ಜಿಲ್ಲಾಸ್ಪತ್ರೆಗೆ ನಿಗದಿ ಪಡಿಸಿದ ಸ್ಥಳದ ಸಮಸ್ಯೆಗಳನ್ನು ಪರಿಹರಿಸಲು ಸಚಿವರಿಗೆ ಮನವಿ ಮಾಡಲಾಗುವುದು.**
> ■ **ಯಶಪಾಲ್ ಸುವರ್ಣ, ಶಾಸಕರು**

ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ. ಎ. ಗಫೂರ್ ಮಾತನಾಡಿ, ಆರೋಗ್ಯ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದಿಂದ ದೇಶವು ಇಂದು ಪೋಲಿಯೊ ಹಾಗೂ ಸಿಡುಬು ರೋಗ ಮುಕ್ತವಾಗಿದೆ. ದೇಶವನ್ನು ಕ್ಷಯ ರೋಗ ಮುಕ್ತವಾಗಿಸಲು ಪಣ ತೊಟ್ಟಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗ, ವೈದ್ಯರು, ಆರೋಗ್ಯ ಕಾರ್ಯಕರ್ತರು ಮತ್ತು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಲಸಿಕಾ ಕಾರ್ಯಕ್ರಮಗಳು ಯಶಸ್ವಿಯಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಬಸವರಾಜ್ ಹುಬ್ಬಳ್ಳಿ, ಬಿಬಿಎಂಪಿ ಉಪ ನಿರ್ದೇಶಕಿ ಡಾ. ಮಮತಾ ಎಂ ಎಸ್, ಜಿಲ್ಲಾ ಸರ್ಜನ್ ಡಾ. ಅಶೋಕ್ ಎಚ್, ರೋಟರಿ ಪ್ಲಸ್ ಸಮಿತಿ ಅಧ್ಯಕ್ಷ ಸುಬ್ರಹ್ಮಣ್ಯ ಬಸ್ರ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಆರ್ ಸಿ ಎಚ್ ಅಧಿಕಾರಿ ಜ್ಯೋತ್ಸ್ನಾ ಬಿ. ಕೆ ಸ್ವಾಗತಿಸಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಶಿಧರ್ ಎಚ್. ನಿರೂಪಿಸಿ, ರೋಟರಿ ಅಧ್ಯಕ್ಷ ಸುಧೀಂದ್ರ ಹೆಗ್ಡೆ ವಂದಿಸಿದರು.

▸ ಕಾಸರಗೋಡಿನಲ್ಲಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಎಚ್‌ಎಂ) ಕಾಸರಗೋಡು, ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (ಐಎಪಿ) ಮತ್ತು ರೋಟರಿ ಇಂಟರ್ ನ್ಯಾಷನಲ್ ಇವುಗಳ ಜಂಟಿ ಆಶ್ರಯದಲ್ಲಿ ಕಾಞಂಗಾಡಿನ ಜಿಲ್ಲಾಸ್ಪತ್ರೆಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕೆ ವಿತರಣಾ ದಿನದ ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆಯು ಭಾನುವಾರ ಜರಗಿತು.

ಸಮಾರಂಭದಲ್ಲಿ ಕಾಞಂಗಾಡು ಶಾಸಕ ಗೋವಿಂದನ್ ಪಳ್ಳಿಕಾಪಿಲ್ ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ನೆರವೇರಿಸಿ, ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಚಾಲನೆ ನೀಡಿದರು. ಭವಿಷ್ಯದ ಪೀಳಿಗೆಯ ಆರೋಗ್ಯ ರಕ್ಷಣೆಗಾಗಿ ಇಂತಹ ತಡೆಗಟ್ಟುವ ಅಭಿಯಾನಗಳನ್ನು ಸಂಪೂರ್ಣ ಯಶಸ್ವಿಗೊಳಿಸುವ ಅಗತ್ಯತೆಯ ಬಗ್ಗೆ ಅವರು ಮಾತನಾಡಿದರು. ಕಾಞಂಗಾಡು ನಗರಸಭೆಯ ಅಧ್ಯಕ್ಷ ವಿ.ವಿ.ರಮೇಶನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾಸರಗೋಡು ಜಿಲ್ಲಾ ವೈದ್ಯಾಧಿಕಾರಿ (ಆರೋಗ್ಯ) ಡಾ.ಬಿ.ಸಂತೋಷ್ ಮುಖ್ಯ ಭಾಷಣ ಮಾಡಿದರು. ಕಾಞಂಗಾಡು ನಗರಸಭೆಯ ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಮುಹಮ್ಮದ್ ಮುರಿಯನಾವಿ, ವಾರ್ಡ್ ಕೌನ್ಸಿಲರ್ ಎಂ.ಎ.ರೇಷ್ಮಾ, ಆರೋಗ್ಯ ಇಲಾಖೆಯ ಹೆಚ್ಚುವರಿ ನಿರ್ದೇಶಕ ಡಾ.ಕೆ. ಮಣಿಕಂಠನ್, ಉಪ ಡಿಎಂಒ ಡಾ.ಕೆ.ಸಂತೋಷ್, ಕಾಸರಗೋಡು ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಜೆನ್ಸಿರಾಣಿ ಎ.ಕೆ., ರಾಷ್ಟ್ರೀಯ ಆರೋಗ್ಯ ಮಿಷನ್ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ಡಾ.ಧನ್ಯಾ ದಯಾನಂದ್, ಐಎಪಿ ಕಾಞಂಗಾಡು ಘಟಕದ ಅಧ್ಯಕ್ಷ ಡಾ.ಟಿ.ವಿ.ಪದ್ಮನಾಭನ್, ಕಾಞಂಗಾಡು ರೋಟರಿ ಕ್ಲಬ್ ಪ್ರತಿನಿಧಿ ಎಂ.ಕೆ.ವಿನೋದ್‌ಕುಮಾರ್, ಕಾಸರಗೋಡು ಇ-ಸಂಜೀವಿನಿ ನೋಡೆಲ್ ಅಧಿಕಾರಿ ಡಾ.ಬಾಸಿಲ್ ವರ್ಗೀಸ್, ಜಿಲ್ಲಾ ಎಂಸಿಎಚ್ ಅಧಿಕಾರಿ ಸ್ಟೆಲ್ಲಾ ಜೋಸೆಫ್ ಶುಭಹಾರೈಸಿದರು. ಕಾಞಂಗಾಡಿನ ಜಿಲ್ಲಾಸ್ಪತ್ರೆಯ ಅಧೀಕ್ಷಕಿ ಡಾ.ಜೀಜಾ ಎಂ.ಪಿ. ಸ್ವಾಗತಿಸಿ, ಜಿಲ್ಲಾ ಶಿಕ್ಷಣ ಮತ್ತು ಮಾಧ್ಯಮ ಅಧಿಕಾರಿ ಅಬ್ದುಲ್ ಲತೀಫ್ ಮಡತ್ತಿಲ್ ವಂದಿಸಿದರು.

ವಿವಿಧೆಡೆ ಬೂತ್‌ಗಳ ಸ್ಥಾಪನೆ

ಪೋಲೀಯೋ ಲಸಿಕೆ ವಿತರಣಾ ಕಾರ್ಯಕ್ರಮದ ಭಾಗವಾಗಿ ಅಂಗನವಾಡಿಗಳು, ಶಾಲೆಗಳು, ಆರೋಗ್ಯ ಕೇಂದ್ರಗಳು, ಬಸ್ ನಿಲ್ದಾಣಗಳು ಮತ್ತು ರೈಲ್ವೆ ನಿಲ್ದಾಣಗಳು ಸೇರಿದಂತೆ ಮಕ್ಕಳು ಸೇರುವ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಪೋಲಿಯೋ ಹನಿಗಳನ್ನು ನೀಡಲು ವಿಶೇಷ ಬೂತ್‌ಗಳನ್ನು ಸ್ಥಾಪಿಸಲಾಗಿತ್ತು. ಇದಲ್ಲದೆ ಐದು ವರ್ಷದೊಳಗಿನ ಅತಿಥಿ ಕಾರ್ಮಿಕರ ಮಕ್ಕಳಿಗೆ ಲಸಿಕೆ ನೀಡಲು ಮೊಬೈಲ್ ಬೂತ್‌ಗಳು ಸೇರಿದಂತೆ ವ್ಯಾಪಕ ವ್ಯವಸ್ಥೆಗಳನ್ನು ಮಾಡಲಾಗಿತ್ತು.

ತರಬೇತಿ ಪಡೆದ ಆರೋಗ್ಯ ಕಾರ್ಯಕರ್ತರು ಬೂತ್‌ಗಳಲ್ಲಿ ಲಸಿಕೆಗಳನ್ನು ವಿತರಿಸಿದರು. ಯಾವುದಾದರೂ ಕಾರಣಗಳಿಂದ ಈ ದಿನ ಲಸಿಕೆ ಪಡೆಯಲು ಸಾಧ್ಯವಾಗದಿದ್ದರೆ ಮುಂದಿನ ದಿನಗಳಲ್ಲಿ ಅಂತಹ ಮಕ್ಕಳಿಗೆ ಸ್ವಯಂಸೇವಕರ ಮೂಲಕ ಅವರ ಮನೆಗಳಿಗೆ ಔಷಧವನ್ನು ತಲುಪಿಸಲು ವ್ಯವಸ್ಥೆ ಮಾಡಲಾಗಿದೆ.

ಅಭಿಯಾನದ ಯಶಸ್ವಿಗೆ ಕಾರ್ಯಚಟುವಟಿಕೆ

ಕಾಸರಗೋಡು ಜಿಲ್ಲೆಯ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೊ ಹನಿಗಳನ್ನು ನೀಡುವ ಮೂಲಕ ಆರೋಗ್ಯ ಕಾರ್ಯಕರ್ತರು ಮತ್ತು ಸಾರ್ವಜನಿಕರು ರೋಗನಿರೋಧಕ ಅಭಿಯಾನವನ್ನು ಯಶಸ್ವಿಯಾಗಿಸುವಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡರು. ಜಿಲ್ಲೆಯಲ್ಲಿ ಒಟ್ಟು 1,272 ಪೋಲಿಯೋ ಬೂತ್‌ಗಳನ್ನು ಸ್ಥಾಪಿಸಲಾಗಿದ್ದು, ಐದು ವರ್ಷದೊಳಗಿನ 1,02,355 ಮಂದಿ ಮಕ್ಕಳಿಗೆ ಮತ್ತು ಅತಿಥಿ ಕಾರ್ಮಿಕರ 646 ಮಂದಿ ಮಕ್ಕಳಿಗೆ ಪೋಲೀಯೋ ಹನಿ ಹಾಕಲಾಯಿತು.

ಗರ್ಭಿಣಿ ಆತ್ಮಹತ್ಯೆ | ಧೈರ್ಯ ತುಂಬಿದ ಮಹಿಳಾ ಮೋರ್ಚಾ

ಸಂತ್ರಸ್ತ ಕುಟುಂಬಕ್ಕೆ ಬಿಜೆಪಿ ಸಾಂತ್ವನ



• **ಸುರತ್ಕಲ್:** ಅಪ್ರಾಪ್ತ ಗರ್ಭಿಣಿ ಯುವತಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಕಾಟಿಪಳ್ಳದ ಸಂತ್ರಸ್ತೆಯ ಮನೆಗೆ ಮಂಗಳೂರು ಉತ್ತರ ಮಂಡಲ ಬಿಜೆಪಿ ಮಹಿಳಾ ಮೋರ್ಚಾ ಸದಸ್ಯರು ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರಲ್ಲದೆ ದುಃಖದಲ್ಲಿ ಭಾಗಿಯಾದರು.

ಈ ಪ್ರಕರಣದ ಕುರಿತು ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಅವರು ಕಳವಳಕಾರಿ ಅಂಶಗಳನ್ನು ಬಹಿರಂಗಪಡಿಸಿದ್ದಾರೆ. ಯುವತಿ ಇದ್ದ ನೃತ್ಯ ತಂಡದಲ್ಲಿ ಕೆಲವರು ಡ್ರಗ್ಸ್ ಬಳಕೆ ಮಾಡುತ್ತಿದ್ದ ಬಗ್ಗೆ ಪೊಲೀಸರು ಈ ಹಿಂದೆಯೇ ಗಂಭೀರ ಎಚ್ಚರಿಕೆ ನೀಡಿದ್ದರು ಎಂಬ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಪೊಲೀಸ್ ಇಲಾಖೆ ಕೂಲಂಕಷವಾಗಿ ತನಿಖೆಯನ್ನು ಮಾಡಿ ಸತ್ಯವನ್ನು ಹೊರ ತರುವ ಮೂಲಕ ಅಪರಾಧಿಗಳಿಗೆ ಶಿಕ್ಷೆ ಯಾಗುವಂತೆ ಮಾಡಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ಇತ್ತೀಚಿನ ದಿನಗಳಲ್ಲಿ ಯುವಜನತೆ ಡ್ರಗ್ಸ್ ಜಾಲಕ್ಕೆ ಸಿಲುಕುತ್ತಿರುವುದು ಆತಂಕಕಾರಿ. ಈ ನಿಟ್ಟಿನಲ್ಲಿ ಮಕ್ಕಳ ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳು ಜಾಗರೂಕರಾಗಬೇಕು ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರು ಸಹಕರಿಸಬೇಕು. ಈ ದುರಂತವು ಇಡೀ ಸಮಾಜಕ್ಕೆ ಎಚ್ಚರಿಕೆಯ ಸಂದೇಶವಾಗಿದೆ ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಕಾರ್ಯದರ್ಶಿ ಶ್ವೇತ ಪೂಜಾರಿ ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳ ದುರ್ಬಳಕೆ ಹಾಗೂ ತಪ್ಪು ಜೀವನಶೈಲಿಯ ಬಗ್ಗೆ ಅತ್ಯಂತ ಎಚ್ಚರಿಕೆಯಿಂದ ಇರಬೇಕು ಎಂದು ಅವರು ಮನವಿ ಮಾಡಿದ್ದಾರೆ. ಬಿಜೆಪಿ ಉತ್ತರ ಮಂಡಲ ಅಧ್ಯಕ್ಷೆ ಲಕ್ಷ್ಮೀ ಆಚಾರ್ಯ, ಪ್ರಧಾನ ಕಾರ್ಯದರ್ಶಿ ಸ್ವಪ್ನ ಸನಿಲ್, ಸದಸ್ಯೆ ಶೈಲಜಾ, ವೇದಾವತಿ, ಮಾಜಿ ಮನಪ ಸದಸ್ಯ ಲೋಕೇಶ್ ಬೊಳ್ಳಾಜೆ, ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾದ ಸದಸ್ಯರಾದ ಪ್ರೇಮ್ ಡಿಸೋಜಾ, ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

ಕೊಡಗು ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ

ಮಕ್ಕಳಿಗಾಗಿ ಮನೆಮನೆಗೂ ಭೇಟಿ



• **ಮಡಿಕೇರಿ:** ಐದು ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ನೀಡುವ ಮೂಲಕ ಕೊಡಗು ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ದೊರೆಯಿತು.

ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ವೀರಾಜಪೇಟೆಯ ತಮ್ಮ ಗೃಹ ಕಚೇರಿಯಲ್ಲಿ ಹಾಗೂ ಡಾ.ಮಂಥರ್ ಗೌಡ ಅವರು ಸೋಮವಾರಪೇಟೆಯ ತಾಲೂಕು ಆಸ್ಪತ್ರೆಯಲ್ಲಿ ಶಿಸುಗಳಿಗೆ ಪೋಲಿಯೋ ಹನಿ ನೀಡಿ ಕಾರ್ಯಕ್ರಮದ ಮಹತ್ವ ಕುರಿತು ಸಂದೇಶ ಸಾರಿದರು.

ಹಾಗೆಯೇ ನಗರದ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮಹಿಳಾ ಮತ್ತು ಮಕ್ಕಳ ವಿಭಾಗದಲ್ಲಿ ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು ಐದು ವರ್ಷದ ಮಕ್ಕಳಿಗೆ ಪೋಲಿಯೋ ಹನಿ ನೀಡಿ ಗಮನ ಸೆಳೆದರು.

ಶಾಸಕ ಡಾ.ಮಂಥರ್ ಗೌಡ ಅವರು ಮಾತನಾಡಿ, ಐದು ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಎರಡು ಹನಿ ನೀಡುವುದರಿಂದ ಮಕ್ಕಳ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

> **ಜೂನ್ 29 ಮತ್ತು 30 ರಂದು ಗ್ರಾಮೀಣ ಪ್ರದೇಶದಲ್ಲಿ, ಜೂನ್ 29 ರಿಂದ ಜುಲೈ 1 ರ ವರೆಗೆ ನಗರ ಪ್ರದೇಶದಲ್ಲಿ ಮನೆ ಮನೆಗೆ ಭೇಟಿ ನೀಡಿ ಪೋಲಿಯೋ ಲಸಿಕೆಯಿಂದ ಬಿಟ್ಟು ಹೋಗಿರುವ ಮಕ್ಕಳಿಗೆ ಲಸಿಕೆ ನೀಡಲಾಗುತ್ತದೆ.**
> ■ **ಡಾ.ಮಧುಸೂದನ**

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ರವೀಂದ್ರ ರೈ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸತೀಶ್ ಕುಮಾರ್, ಆರ್.ಸಿ.ಎಚ್. ಅಧಿಕಾರಿ ಡಾ.ಮಧುಸೂದನ, ತಾಲ್ಲೂಕು ವೈದ್ಯಾಧಿಕಾರಿ ಡಾ.ಸನತ್ ಕುಮಾರ್, ಡಾ.ಯತಿರಾಜು, ಡಾ.ಇಂದೂಧರ ಅವರು ಮಾತನಾಡಿದರು.

ರೋಟರಿ ಸಂಸ್ಥೆಯ ಮನೋಹರ್ ಕಾಮತ್, ರತನ್ ತಮ್ಮಯ್ಯ, ಡಾ.ಚಂದ್ರಶೇಖರ್, ಡಾ.ದಿವ್ಯಾರಾಣಿ, ಆರೋಗ್ಯ ಶಿಕ್ಷಣಾಧಿಕಾರಿ ಪಾಲಾಕ್ಷ

ಜು.5: ತೀಯಾ ಸಮಾಜದ ಶೈಕ್ಷಣಿಕ ಸಾಧಕರಿಗೆ ವಿದ್ಯಾರ್ಥಿವೇತನ ವಿತರಣೆ



• **ಉಳ್ಳಾಲ:** ಭಾರತೀಯ ತೀಯಾ ಸಮಾಜ ಉಳ್ಳಾಲ ವಲಯದ ವತಿಯಿಂದ, ಉಳ್ಳಾಲ ಶ್ರೀ ಚೀರುಂಭ ಭಗವತಿ ಕ್ಷೇತ್ರಕ್ಕೆ ಒಳಪಟ್ಟ ನಾಲ್ಕು ಊರಿಯಗಳಾದ ಉಳ್ಳಾಲ, ಕೋಟೆಕಾರ್ -ಉಚ್ಚಿಲ-ತಲಪಾಡಿ,ಬೆಳ್ಮ-ಮಂಜನಾಡಿ ಹಾಗೂ ನಂದ್ಯಾ- ಮಣೇಲಿ ವ್ಯಾಪ್ತಿಯ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿದ ತೀಯಾ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಜುಲೈ 5ರ ಭಾನುವಾರ ಬೆಳಗ್ಗೆ 9 ಗಂಟೆಗೆ ಕೊಲ್ಯದ ಸೌಭಾಗ್ಯ ಸಭಾಭವನದಲ್ಲಿ ನಡೆಯಲಿದೆ ಎಂದು ಉಳ್ಳಾಲ ವಲಯ ಭಾರತೀಯ ತೀಯ ಸಮಾಜದ ಪ್ರಧಾನ ಕಾರ್ಯದರ್ಶಿ ಸುಕೇಶ್ ಮಂಜನಾಡಿ ತಿಳಿಸಿದರು.

ತೊಕ್ಕೊಟ್ಟುವಿನ ಉಳ್ಳಾಲ ಪ್ರೆಸ್ ಕ್ಲಬ್ಬಲ್ಲಿ ಶನಿವಾರದಂದು ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು. ಕಾರ್ಯಕ್ರಮವು ತೀಯ ಪ್ರತಿಭೆಗಳ ಭರತನಾಟ್ಯ ಪ್ರದರ್ಶನದೊಂದಿಗೆ ಆರಂಭಗೊಳ್ಳಲಿದ್ದು,ಬೆಳಗ್ಗೆ 9.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ಭಾರತೀಯ ತೀಯ ಸಮಾಜ ಉಳ್ಳಾಲ ವಲಯದ ಅಧ್ಯಕ್ಷರಾದ ಜಯಂತ ಕೊಂಡಾಣ ಅಧ್ಯಕ್ಷತೆ ವಹಿಸಲಿದ್ದು,ಭಾರತೀಯ ತೀಯ ಸಮಾಜ ಕೇಂದ್ರ ಸಮಿತಿಯ ಅಧ್ಯಕ್ಷ ಸದಾಶಿವ ಉಳ್ಳಾಲ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಉಳ್ಳಾಲ ಭಾರತ್ ಪಿಯು ಕಾಲೇಜಿನ ಕನ್ನಡ ಉಪನ್ಯಾಸಕಿ ಕಸ್ತೂರಿ ಸುವರ್ಣ ಅವರು "ಶಿಕ್ಷಣ,ವಿದ್ಯಾರ್ಥಿವೇತನ ಮತ್ತು ವಿದ್ಯಾರ್ಥಿಗಳ ಉಜ್ವಲ ಭವಿಷ್ಯ" ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ತೀಯಾ ಸಮಾಜದ ಪ್ರಮುಖರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕಳೆದ ವರ್ಷ ಸುಮಾರು 25 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗಿತ್ತು. ಈ ಬಾರಿ ಕನಿಷ್ಠ 30ರಿಂದ 35 ವಿದ್ಯಾರ್ಥಿಗಳು ವಿದ್ಯಾರ್ಥಿವೇತನ-ಪ್ರತಿಭಾ ಪುರಸ್ಕಾರದ ಪ್ರಯೋಜನ ಪಡೆಯುವ ನಿರೀಕ್ಷೆಯಿದ್ದು, ಕಳೆದ ಎರಡು ತಿಂಗಳುಗಳಿಂದ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆಯೆಂದರು. ಮುಂದಿನ ದಿನಗಳಲ್ಲಿ ಅಶಕ್ತರಿಗೆ ಸಹಾಯಧನ ಹಾಗೂ ಅನಾರೋಗ್ಯ ಪೀಡಿತರಿಗೆ ನೆರವು ಸೇರಿದಂತೆ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆಯೂ ಇದೆಯೆಂದರು.

ಭಾರತೀಯ ತೀಯ ಸಮಾಜ ಉಳ್ಳಾಲ ವಲಯದ ಅಧ್ಯಕ್ಷರಾದ ಜಯಂತ್ ಕೊಂಡಾಣ, ಮಹಿಳಾ ಸಮಿತಿಯ ಅಧ್ಯಕ್ಷೆ ಸುಧಾಶ್ರೀ ರಮೇಶ್ ,ಪ್ರಮುಖರಾದ ಗಣೇಶ್ ಕೊಲ್ಯ,ಪವನ್ ರಾಜ್ ಕೊಲ್ಯ,ಜಯಂತ್ ಕೊಲ್ಯ,ನಿಶಾ ಸುನೀಲ್ ತೊಕ್ಕೊಟ್ಟು ಹಾಗೂ ತನುಜಾ ತಲಪಾಡಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಾಧಕರಿಗೆ ಅಭಿನಂದನೆ

ನಿವೃತ್ತ ಯೋಧ ಕೃಷ್ಣ ಬಿ.ಎಂ.ಅವರಿಗೆ "ತೀಯ ಜವಾನ್" ಬಿರುದು ನೀಡಿ ಗೌರವಿಸಲಾಗುವುದು. ವಿವಿಧ ಕ್ಷೇತ್ರಗಳ ಸಾಧಕರಿಗೆ ಅಭಿನಂದನೆ ಹಾಗೂ ಸನ್ಮಾನವೂ ನಡೆಯಲಿದೆ.

ಹೆಸರು ನೋಂದಾಯಿಸಿ

ಪ್ರಶಸ್ತಿ ಪಡೆಯುವ ವಿದ್ಯಾರ್ಥಿಗಳು ಜುಲೈ 5ರಂದು ಬೆಳಿಗ್ಗೆ 9 ಗಂಟೆಗೆ ಪೋಷಕರೊಂದಿಗೆ ಕಡ್ಡಾಯವಾಗಿ ಹಾಜರಾಗಿ ಹೆಸರು ನೋಂದಾಯಿಸಿಕೊಳ್ಳಬೇಕು.ಅರ್ಜಿ ಸಲ್ಲಿಕೆಯ ಅವಧಿಯನ್ನು ಸಾರ್ವಜನಿಕರ ಮನವಿಯ ಮೇರೆಗೆ ಜುಲೈ 2ರ ಸಂಜೆ 4 ಗಂಟೆಯವರೆಗೆ ವಿಸ್ತರಿಸಲಾಗಿದೆ.ಭರ್ತಿ ಮಾಡಿದ ಅರ್ಜಿಗಳನ್ನು ಜೈ ಭಾರತ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್, ಸನ್ ಸಿಟಿ ಬಿಲ್ಡಿಂಗ್, ತೊಕ್ಕೊಟ್ಟು ಇಲ್ಲಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಪ್ರಧಾನ ಕಾರ್ಯದರ್ಶಿ ಸುಕೇಶ್ ಮಂಜನಾಡಿ (ಮೊ.9731747753) ಅವರನ್ನು ಸಂಪರ್ಕಿಸಬಹುದು ಎಂದರು.

ಇನ್ನೂ ಕಸದ ಟೆಂಡರ್ ಕರೆದಿಲ್ಲ: ಸಿಎಂ




• ಬೆಂಗಳೂರು: ಇನ್ನೂ ಬೆಂಗಳೂರಿನ ಕಸದ ಟೆಂಡರ್ ಆಗಿಲ್ಲ. ಯಾವುದೂ ತೀರ್ಮಾನ ಆಗಿಲ್ಲ. ಆದರೆ, ವಿರೋಧ ಪಕ್ಷದ ನಾಯಕರು 10 ಸಾವಿರ ಕೋಟಿ ರೂ. ಲಂಚ ಹೊಡೆದಿದ್ದೇನೆ ಎಂದು ಆರೋಪ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರೋಧ ಪಕ್ಷದವರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ.

ಹೆಬ್ಬಾಳದಲ್ಲಿ ನಡೆದ ಟನಲ್ ರೋಡ್ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1.40 ಕೋಟಿ ಜನಸಂಖ್ಯೆ, 1.35 ಕೋಟಿ ವಾಹನಗಳು ಬೆಂಗಳೂರಿನಲ್ಲಿವೆ. ಇಡೀ ಬೆಂಗಳೂರಿನಲ್ಲಿ ಕಸದ ಸಮಸ್ಯೆಯಿದೆ. ಅದನ್ನು ಬಗೆಹರಿಸುವ ಕೆಲಸವನ್ನು ಯಾರಾದರೂ ಮಾಡಿದ್ದಾರೆಯೇ? ನಾನು ಮುಖ್ಯಮಂತ್ರಿ ಆದ ತಕ್ಷಣ ವಿರೋಧ ಪಕ್ಷದ ನಾಯಕರು 10 ಸಾವಿರ ಕೋಟಿ ರೂ.ಲಂಚ ಹೊಡೆದಿದ್ದೇನೆ ಎಂದು ಆರೋಪ ಮಾಡಿದರು. ಇನ್ನೂ ಟೆಂಡರ್ ಆಗಿಲ್ಲ, ಯಾವುದೂ ತೀರ್ಮಾನ ಆಗಿಲ್ಲ. ಯಂತ್ರೋಪಕರಣಗಳಿಗೆ 4–5 ಸಾವಿರ ಕೋಟಿ ರೂ.ಆಗಬಹುದು ಆದರೆ 10 ಸಾವಿರ ಕೋಟಿ ರೂ.ಎಂದು ಟೀಕೆ ಮಾಡಿದರು. 10 ಸಾವಿರ ಕೋಟಿ ರೂ.ಇದ್ದರೂ 20 ದೊಡ್ಡ ಶೆಡ್‌ಗಳು ಬೇಕಾಗಬಹುದೇನೋ ಎಂದು ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರು.

ಬೇರೆ ಯಾರನ್ನೋ ಟೀಕಿಸಿದಂತೆ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಸರ್ಕಾರವನ್ನು ಟೀಕಿಸುತ್ತಿದ್ದಾರೆ. ಇದಲ್ಲಾ ನಡೆಯುವುದಿಲ್ಲ. ಪ್ರತಿಭಟನೆ ಮಾಡಲಿ, ಏನು ಬೇಕಾದರೂ ಮಾಡಲಿ, ಜೊತೆಗೆ ಮಾರ್ಗದರ್ಶನ ನೀಡಿದರೂ ನಾನು ಕೇಳುತ್ತೇನೆ ಎಂದರು. ವಿಪಕ್ಷಗಳು ಅವಕಾಶ ಸಿಕ್ಕಾಗ ಕೆಲಸ ಮಾಡಲಿಲ್ಲ. ಈಗ ಜನ ನಮಗೆ 136 ಸ್ಥಾನ ನೀಡಿದ್ದಾರೆ. ನಮಗೆ ಸಿಕ್ಕ ಅವಕಾಶದಿಂದ ಈ ರಾಜ್ಯದ, ಬೆಂಗಳೂರಿನ ಜನರ ಸೇವೆ ಮಾಡುತ್ತಿದ್ದೇವೆ. 1.50 ಲಕ್ಷ ಕೋಟಿ ಯೋಜನೆಯನ್ನು ಬೆಂಗಳೂರು ಅಭಿವೃದ್ಧಿಗೆ ರೂಪಿಸಿದ್ದೇವೆ. ಕೃಷ್ಣ ಬೈರೇಗೌಡರ ನೇತೃತ್ವದಲ್ಲಿ ಸಮರ್ಥವಾಗಿ ಜನರ ದಾಖಲೆ, ಆಸ್ತಿಗಳನ್ನು ರಕ್ಷಿಸುವ ಕೆಲಸ ಮಾಡಲಾಗುತ್ತಿದೆ. 30–40 ಲಕ್ಷ ಕುಟುಂಬಗಳಿಗೆ ಆಸ್ತಿ ದಾಖಲೆಯನ್ನು ಅವರ ನೇತೃತ್ವದಲ್ಲಿ ನೀಡಲಾಗುತ್ತದೆ ಎಂದು ತಿಳಿಸಿದರು.

ರಾಮ ಬಾಣ



ರಾಮ ಮಂದಿರಕ್ಕೆ ಭೇಟಿ ನೀಡಿ, ಒಳ್ಳೆ ಬುದ್ಧಿಗಾಗಿ ತಪಸ್ಸು ಮಾಡಿ

• ಹೊಸದಿಲ್ಲಿ: ಅಯೋಧ್ಯೆಯಲ್ಲಿನ ಕಾಣಿಕೆ ಕಳವು ಪ್ರಕರಣವನ್ನು ರಾಜಕೀಯಕ್ಕೆ ಬಳಸಿ ಹಿಂದು ಸಮಾಜದಲ್ಲಿ ಗೊಂದಲ ಸೃಷ್ಟಿಸಲು ಯತ್ನಿಸುತ್ತಿರುವ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರನ್ನು ತರಾಟೆಗೆತ್ತಿಕೊಂಡಿರುವ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಮೊದಲು ಅಯೋಧ್ಯೆಯ ಶ್ರೀರಾಮ ಮಂದಿರಕ್ಕೆ ಒಮ್ಮೆ ಭೇಟಿ ನೀಡಿ, ಅಲ್ಲಿ ಒಳ್ಳೆಯ ಬುದ್ಧಿಗಾಗಿ ತಪಸ್ಸು ಮಾಡಿ ಎಂದು ಸೂಚಿಸಿದ್ದಾರೆ.

ಹತ್ರಾಸ್‌ನಲ್ಲಿ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದ ಯೋಗಿಯವರು, ಹಿಂದಿನ ಸಮಾಜವಾದಿ ಪಕ್ಷ ಸರಕಾರ ಅಯೋಧ್ಯಾ ಶ್ರೀರಾಮ ಭಕ್ತರ ಮೇಲೆ ಗುಂಡಿನ ದಾಳಿ ನಡೆಸಿ ನೂರಾರು ಭಕ್ತರ ಮಾರಣಹೋಮ ಗೈದುದನ್ನು ನೆನಪಿಸಿದರು.

ತನ್ನ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಅಯೋಧ್ಯೆಯನ್ನು ಧಾರ್ಮಿಕ ನಗರವನ್ನಾಗಿ ಮಾಡಲಾಗುವುದು ಎಂದು ಅಖಿಲೇಶ್ ನೀಡಿದ ಹೇಳಿಕೆಯನ್ನು ನೋಡಿದೆ. ನೀವು ಯಾವ ರೀತಿಯ ಧಾರ್ಮಿಕ ನಗರವನ್ನು ಸೃಷ್ಟಿಸುತ್ತೀರಿ? ನಿಮ್ಮ ಸಮಾಜವಾದಿ ಪಕ್ಷದ ಸರಕಾರ ಇದ್ದಾಗ ಭಗವಾನ್ ಶ್ರೀರಾಮ ಭಕ್ತರ ಮೇಲೆ ಗುಂಡಿನ ದಾಳಿ ನಡೆಸಿದವರು ನೀವು. ಧೈರ್ಯವಿಲ್ಲದ ನೀವು ಮುಲ್ಲಾಗಳು ಮತ್ತು ಮೌಲ್ವಿಗಳ ಮುಂದೆ ಮಂಡಿಯೂರುವುದು ಬಿಟ್ಟರೆ ರಾಮನ ಅಭಿವೃದ್ಧಿ ಅಥವಾ ಅಯೋಧ್ಯಾ, ಮಥುರಾ, ಕಾಶಿಗಳ ಅಭ್ಯುತ್ಥಾನವನ್ನು ಎತ್ತಿಹಿಡಿಯುವಲ್ಲಿ ನೀವು ಯಾವ ಕಾರ್ಯಸೂಚಿ ಹೊಂದಿದ್ದೀರಿ ಎಂದು ಯೋಗಿ ಅಖಿಲೇಶ್ ಅವರ ವಿರುದ್ಧ ಮಾತಿನ ಚಾಟಿ ಬೀಸಿದರು. ಆದರೆ ಈಗ ನಾವು ಆ ಹಣವನ್ನು ದೇವಾಲಯಗಳ ಅಭಿವೃದ್ಧಿಗೆ ಬಳಸಿದ್ದೇವೆ .ಅಖಿಲೇಶ್, ಅಯೋಧ್ಯೆಯನ್ನು ಶ್ರೀರಾಮ ಭಕ್ತರೇ ಅಲಂಕರಿಸಿ ಸುಂದರಗೊಳಿಸಿದ್ದಾರೆ. ನೀವು ಅದರ ಬಗ್ಗೆ ಚಿಂತೆ ಮಾಡಬೇಡಿ. ನೀವು ಒಂದು ಬಾರಿ ಶ್ರೀರಾಮ ಲಲಾನನ್ನು ಸಂದರ್ಶಿಸಿ, ಅಲ್ಲಿ ಪ್ರಾರ್ಥಿಸಿ.ಇದರಿಂದಲಾದರೂ ನಿಮಗೆ ಕನಿಷ್ಠ ಪಕ್ಷ ಉತ್ತಮ ಮನಸ್ಸು ಬರಬಹುದು ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನನಗೆ ಆ ಧರ್ಮ ಈ ಧರ್ಮ, ಆ ಜಾತಿ ಈ ಜಾತಿ ಎಂಬ ಭೇದವಿಲ್ಲ – ಡಿಕೆಶಿ

– ಸಾಮಾನ್ಯವಾಗಿ ವ್ಯಾಪಾರ ಮಾಡುವವರದೂ ಅದೇ ಸಿದ್ಧಾಂತ. ಅದು ನೋಟಿಗಾಗಿ ಇದು ಓಟಿಗಾಗಿ!

ದಿನ ಭವಿಷ್ಯ

ಮೇಷ
ನೀವು ನಿರೀಕ್ಷಿಸದ ಬದಲಾವಣೆ ಸಂಭವ. ಅದಕ್ಕೆ ಒಗ್ಗಿಕೊಳ್ಳಿ. ಹಿರಿಯರ ಕಿವಿಮಾತು ಪಾಲಿಸುವುದು ವಿಹಿತ. ವೃತ್ತಿ ಒತ್ತಡ ಹೆಚ್ಚು.

ವೃಷಭ
ವ್ಯವಹಾರದಲ್ಲಿ ಆಂಶಿಕ ಯಶಸ್ಸು. ಅಸೂಕ್ತ ಆಹಾರ ಸೇವನೆಯಿಂದ ಗ್ಯಾಸ್ಟ್ರಿಕ್ ಸಮಸ್ಯೆ. ಪ್ರೀತಿಯ ವಿಚಾರದಲ್ಲಿ ಬಿಕ್ಕಟ್ಟು ಎದುರಿಸುವಿರಿ.

ಮಿಥುನ
ಉತ್ಸಾಹ ಹೆಚ್ಚಿಸುವ ಬೆಳವಣಿಗೆ. ಕಾಡುತ್ತಿದ್ದ ಸಮಸ್ಯೆಗೆ ಪರಿಹಾರ ಸಮೀಪಿಸಿದೆ. ಅದೃಷ್ಟ ಜತೆಗಿದೆ, ಪೂರಕ ಪ್ರಸಂಗ ಸೃಷ್ಟಿಯಾಗಲಿದೆ.

ಕಟಕ
ನಿಮ್ಮನ್ನು ತುಳಿಯಲು ಕೆಲವರ ಯತ್ನ. ಆದರೆ ಅದು ಫಲ ನೀಡದು. ಹಣದ ಕೊರತೆ ಸಂಭವ. ಸಾಲ ಪಡೆಯಲು ಹೋಗಬೇಡಿ.

ಸಿಂಹ
ಎಲ್ಲ ವಿಚಾರದಲ್ಲಿ ನಿಮಗೆ ಅನುಕೂಲಕರ. ಧನವೃದ್ಧಿ. ಕಾರ್ಯದಲ್ಲಿ ಯಶಸ್ಸು. ಪ್ರೀತಿ ಸಫಲ. ಆರೋಗ್ಯ ಸಮಸ್ಯೆ ಪರಿಹಾರ. ನೆಮ್ಮದಿ.

ಕನ್ಯಾ
ಎಂದಿಗಿಂತ ಹೆಚ್ಚು ಕಾರ್ಯದೊತ್ತಡ ಇದ್ದರೂ ನಿಭಾಯಿಸಲು ಶಕ್ತ. ಈಡೇರಿಸಲಾಗದ ಆಶ್ವಾಸನೆ ಯಾರಿಗೂ ಕೊಡಬೇಡಿ.

ತುಲಾ
ನಿಮ್ಮ ಸಾಮರ್ಥ್ಯ ಅನಾವರಣಗೊಳ್ಳುವ ಸನ್ನಿವೇಶ. ಮನಸ್ಸಿಗೆ ಕಿರಿಕಿರಿ ತರುವ ಬೆಳವಣಿಗೆ. ವ್ಯವಹಾರದ ಒತ್ತಡ ಹೆಚ್ಚುವ ಸಾಧ್ಯತೆ.

ವೃಶ್ಚಿಕ
ಎಲ್ಲ ವಿಧದಲ್ಲೂ ಇಂದು ಸವಾಲಿನ ದಿನ. ಮನಸ್ಸು ಶಾಂತಗೊಳಿಸುವ ಹವ್ಯಾಸದಲ್ಲಿ ತೊಡಗಿ. ಬಂಧುಗಳ ಸಮಸ್ಯೆ ನಿಮ್ಮ ಮೇಲೆ ಎಳೆದುಕೊಳ್ಳದಿರಿ.

ಧನು
ಅದೃಷ್ಟ ನಿಮ್ಮ ಜತೆಗಿರದು. ಎಷ್ಟೇ ಪ್ರಯತ್ನ ಹಾಕಿದರೂ ಸೂಕ್ತ ಫಲ ದೊರಕದು. ಹಣ ಗಳಿಕೆಯ ವಿಚಾರದಲ್ಲೂ ಹಿನ್ನಡೆ ಕಾಣುವಿರಿ.

ಮಕರ
ದಿನವಿಡೀ ಒತ್ತಡ. ಯಾವುದೇ ಕೆಲಸ ಮುಗಿಸಿದರೂ ಮತ್ತೊಂದು ಹೊಣೆ ಹೆಗಲೇರುತ್ತದೆ. ಅಜೀರ್ಣ ಸಮಸ್ಯೆ ಕಾಡಬಹುದು.

ಕುಂಭ
ಏನೋ ಕಳೆಕೊಂಡ ಭಾವ ಕಾಡುವುದು. ಭಾವುಕ ಸನ್ನಿವೇಶ ಎದುರಿಸುವಿರಿ. ದೈಹಿಕ ನೋವೂ ಕಾಡಲಿದೆ. ಧ್ಯಾನ, ಯೋಗ ಸಹಕಾರಿ.

ಮೀನ
ಆತ್ಮೀಯರ ಹಿತಕ್ಕಾಗಿ ಇಂದು ಹೆಚ್ಚು ಗಮನ ಹರಿಸುವಿರಿ. ಕೆಲವು ಏರುಪೇರು ಎದುರಿಸುವ ಪ್ರಸಂಗ ಬಂದೀತು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 2,9,3,7

ಕಾಂಗ್ರೆಸ್‌ಗೆ ನಿಮ್ಮ ಬೆಂಬಲ ಬೇಕು: ಮುಖ್ಯಮಂತ್ರಿ ಶಿವಕುಮಾರ್

ನಾನೆಂದಿಗೂ ಕಾರ್ಮಿಕರ ಪರ

• ಬೆಂಗಳೂರು: ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಹಾಗೂ 2028ಕ್ಕೆ ರಾಜ್ಯದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಕಚೇರಿಯ ಭಾರತ್ ಜೋಡೊ ಸಭಾಂಗಣದಲ್ಲಿ ಭಾನುವಾರ ನಡೆದ ಎಐಟಿಯುಸಿ (ಇಂಟೆಕ್) 316ನೇ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 2028ಕ್ಕೆ ಕರ್ನಾಟಕದಲ್ಲಿ ಹಾಗೂ 2029ಕ್ಕೆ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ. ಇದಕ್ಕೆ ದೇಶದ ಕಾರ್ಮಿಕರ, ಜನಸಾಮಾನ್ಯರ ಬೆಂಬಲ ಇರಬೇಕು ಎಂದರು. ಸರ್ಕಾರದ ಪ್ರತಿನಿಧಿಯಾಗಿರುವ ನಾನು ಎಂದಿಗೂ ಕಾರ್ಮಿಕರ ಪರವಾಗಿರುವವನು. ನನ್ನ ಮೇಲೆ ನಂಬಿಕೆಯನ್ನಿಟ್ಟು ಸರ್ಕಾರದ ಜವಾಬ್ದಾರಿ ನೀಡಲಾಗಿದೆ. ನಾನು ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗುತ್ತೇನೆ ಎಂದರು.

ಕೃಷಿಕ, ಶಿಕ್ಷಕ, ಸೈನಿಕ, ಕಾರ್ಮಿಕ ಇವರುಗಳು ಇಲ್ಲದೇ ಸಮಾಜ ಮುನ್ನಡೆಯದು. ಈ ದೇಶಕ್ಕೆ ಕಾರ್ಮಿಕರ ಶ್ರಮ, ಶಕ್ತಿ, ಬದ್ಧತೆ ಸಾಕಷ್ಟು ಕೊಡುಗೆಯನ್ನು ನೀಡಿದೆ. ಕಾರ್ಮಿಕ ಇಲ್ಲದೇ ಹೋದರೆ ಯಾವುದೇ ದೇಶದ ಆರ್ಥಿಕತೆ ಬೆಳೆಯುವುದಿಲ್ಲ. ಉದ್ದಿಮೆದಾರರು ಪ್ರಬಲರಾದರೆ ಕಾರ್ಮಿಕರೂ ಬಲವಾಗುತ್ತಾರೆ. ಜೊತೆಗೂಡಿದರೆ ಆರಂಭ, ನಂತರ ಪ್ರಗತಿ ಎಂದರು.




ಜೂ.30 ರಿಂದ ಎಸ್‌ಐಆರ್ ಪ್ರಾರಂಭವಾಗುತ್ತಿದೆ. ಬಿಜೆಪಿ ಮತಗಳನ್ನು ಡಿಲೀಟ್ ಮಾಡಿಸು ತ್ತಿದೆ. ಈ ದೇಶದ ಶ್ರಮಿಕರ, ಕಾರ್ಮಿಕರ ಮತಗಳನ್ನು ಡಿಲೀಟ್ ಮಾಡಲಾಗುತ್ತಿದೆ. ಕಾರ್ಮಿಕರಿಂದ ಹಿಡಿದು ಎಲ್ಲರೂ ಇದರ ಬಗ್ಗೆ ಎಚ್ಚರದಿಂದ ಇರಬೇಕು. ಮತಗಳು ಡಿಲೀಟ್ ಆಗದಂತೆ ಎಚ್ಚರವಹಿಸಬೇಕು.
■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಕಾರ್ಮಿಕರ ಕಲ್ಯಾಣಕ್ಕಾಗಿ ಗ್ಯಾರಂಟಿ: ನಾವು ತಂದಿರುವ ಐದು ಗ್ಯಾರಂಟಿ ಯೋಜನೆಗಳು ಕಾರ್ಮಿಕರ, ಮಹಿಳೆಯರ ಹಾಗೂ ಜನಸಾಮಾನ್ಯರ ಪರವಾಗಿವೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿಯವರಿಂದ ಹಿಡಿದು ಎಲ್ಲರೂ ಟೀಕೆ ಮಾಡಿದರು. 50 ಸಾವಿರ ಕೋಟಿ ರೂ.ಗೂ ಹೆಚ್ಚು ಹಣ ಪ್ರತಿ ವರ್ಷ ಗ್ಯಾರಂಟಿಗಳಿಗೆ ಖರ್ಚು ಮಾಡಲಾಗುತ್ತಿದೆ. ಟೀಕೆ ಮಾಡಿದವರೇ ನಮ್ಮ ಯೋಜನೆಗಳನ್ನು ನಕಲು ಮಾಡಿದ್ದಾರೆ ಎಂದರು.

ಕೊಲ್ಲೂರು ದೇವಸ್ಥಾನಕ್ಕೆ ಡಾ.ಜಿ.ಪರಮೇಶ್ವರ್ ಭೇಟಿ

▸▸ ಮಾಸ್ಟರ್ ಪ್ಲಾನ್ ಜಾರಿ, ಜಮೀನು ಒತ್ತುವರಿ ತೆರವು ಗೊಳಿಸಲು ಸೂಚನೆ



• ಉಡುಪಿ: ರಾಜ್ಯದ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವ ಸ್ಥಾನಗಳ ಜಮೀನು ಒತ್ತುವರಿಯನ್ನು ತೆರವುಗೊಳಿಸಲು ಆಯುಕ್ತರಿಗೆ ಹಾಗೂ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಈ ಕುರಿತು ಅಧಿಕಾರಿಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಸದ್ಯದಲ್ಲೇ ಮಾಹಿತಿ ಪಡೆದು ಮುಂದಿನ ಕಾನೂನು ಕ್ರಮ ವಹಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

ಭಾನುವಾರ ಪತ್ನಿ ಕನ್ನಿಕಾ ಪರಮೇಶ್ವರಿ ಅವರೊಂದಿಗೆ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ, ಚಂಡಿಕಾ ಹೋಮನೆರವೇರಿಸಿ ದೇವರ ದರ್ಶನಪಡೆದ ಬಳಿಕ ಅವರು ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದರು.

ಭಕ್ತರ ಸೌಕರ್ಯಕ್ಕೆ 'ಮಾಸ್ಟರ್ ಪ್ಲಾನ್': ಕೊಲ್ಲೂರು ಮೂಕಾಂಬಿಕಾ ಕ್ಷೇತ್ರಕ್ಕೆ ದೇಶ–ವಿದೇಶಗಳಿಂದ ನಿರಂತರವಾಗಿ ಭಕ್ತಾದಿಗಳು ಆಗಮಿಸುತ್ತಾರೆ. ಅವರಿಗೆ ಸುಗಮ ದರ್ಶನ, ಸುಸಜ್ಜಿತ ವಸತಿ ಹಾಗೂ ಪಾರ್ಕಿಂಗ್ ಸೇರಿದಂತೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥಿತವಾಗಿ ಕಲ್ಪಿಸುವ ನಿಟ್ಟಿನಲ್ಲಿ ಸಮಗ್ರ 'ಮಾಸ್ಟರ್ ಪ್ಲಾನ್' ಸಿದ್ಧಪಡಿಸಲಾಗಿದೆ. ಇದನ್ನು ಅತ್ಯಂತ ಶೀಘ್ರದಲ್ಲಿಯೇ ಕಾರ್ಯಗತಗೊಳಿಸಲು ಸರ್ಕಾರ ಉದ್ದೇಶಿಸಿದೆ ಎಂದು ಡಿಸಿಎಂ ಹೇಳಿದರು.

ಭಾರತದ ಸಮಗ್ರ ದೃಷ್ಟಿಕೋನ ಜಗತ್ತಿಗೇ ಮಾದರಿ: ಡಾ.ಮೋಹನ್ ಭಾಗವತ್

ಪುಟ ೧➡ ವಾಸ್ತವವಾಗಿ ನಮ್ಮ ಕೆಲಸವು ಜಗತ್ತಿಗೆ ಸಂಪೂರ್ಣತೆಯನ್ನು ನೀಡುವುದಾಗಿದೆ ಎಂದು ವಿವರಿಸಿದರು.

ಇತರ ದೃಷ್ಟಿಕೋನಗಳನ್ನು ತಪ್ಪಾಗಿ ಪರಿಗಣಿಸುವುದಿಲ್ಲ. ಏಕೆಂದರೆ ಎಲ್ಲಾ ಜನರು ತಮ್ಮ ಸ್ವಂತ ಜೀವನ ಅನುಭವಗಳಿಂದ ತಮ್ಮ ದೃಷ್ಟಿಕೋನಗಳನ್ನು ರೂಪಿಸುತ್ತಾರೆ. ಆದ್ದರಿಂದ ಅವುಗಳು ತಮ್ಮದೇ ಆದ ಸಿಂಧುತ್ವ ವನ್ನು ಹೊಂದಿವೆ. ಅನೇಕತೆಯ ತತ್ತ್ವದ ಮೂಲಕ ಭಾರತೀಯ ದೃಷ್ಟಿಕೋನ ಅಳವಡಿಸಿಕೊಳ್ಳುವ ವೈವಿಧ್ಯತೆಯು ಅಂತಹ ಎಲ್ಲಾ ಅನುಭವಗಳನ್ನು ಸ್ವಾಗತಿಸುತ್ತದೆ. ಯಾವುದೇ ಒಂದು ದೃಷ್ಟಿಕೋನವು ಸಂಪೂರ್ಣವಾಗಿ ಒಳಗೊಂಡಿರುವಷ್ಟು ವಿಶಾಲವಾಗಿದೆ ಎಂದು ಗುರುತಿಸುತ್ತದೆ. ಈ ಮಾರ್ಗವು ವಾದವಲ್ಲ, ಬದಲಾಗಿ ಶಾಸ್ತ್ರ, ವಿದ್ವತ್ಪೂರ್ಣ ಸಂಭಾಷಣೆ, ಪ್ರತಿ ದೃಷ್ಟಿಕೋನದಿಂದ ಸಾರವನ್ನು ಸೆಳೆಯುವ ದೃಷ್ಟಿಕೋನವನ್ನು ಒಳಗೊಂಡಿದೆ. ಆದರೆ, ಇತರ ದೃಷ್ಟಿಕೋನಗಳು ಅಪೂರ್ಣವಾಗಿವೆ ಎಂದರು.

ಭಾರತೀಯ ಶಿಕ್ಷಣ ಮಂಡಳಿ (ಬಿಎಸ್‌ಎಂ) ಕಾರ್ಯವು ಒಂದು ಸಣ್ಣ ಅಥವಾ ಸೀಮಿತ ವ್ಯವಹಾರವಲ್ಲ. ಬದಲಾಗಿ ಸಮಗ್ರ ಭಾರತೀಯ ಶಿಕ್ಷಣ ದೃಷ್ಟಿಕೋನದಲ್ಲಿ ಬೇರೂರಿರುವ ದೊಡ್ಡ ನಾಗರಿಕತೆಯ ಧ್ಯೇಯದಲ್ಲಿ ಭಾಗವಹಿಸುವಿಕೆಯಾಗಿದೆ. ಬಿಎಸ್‌ಎಂ ಕೇವಲ ಭೌತಿಕ ಜೀವ ನೋಪಾಯ ಮತ್ತು ಹಣದ ಮೂಲಕ ಎಲ್ಲವನ್ನೂ ಅಳೆಯುವುದನ್ನು ಮೀರಿ ಮಾನವನನ್ನು ಸಂಪೂರ್ಣವಾಗಿ ಉದ್ದೇಶಿಸುವ ಸಮಗ್ರ ದೃಷ್ಟಿಕೋನದ ಕಡೆಗೆ ಕೆಲಸ ಮಾಡುತ್ತದೆ ಎಂದು ಹೇಳಿದರು.

ಬಿಎಸ್‌ಎಂ ರಾಜಕೀಯ ಪಕ್ಷಗಳು ಮತ್ತು ಅವುಗಳ ಹಿಡಿತಗಳಿಂದ ಸ್ವತಂತ್ರವಾಗಿದೆ. ಸಮಗ್ರ ದೃಷ್ಟಿಕೋನದತ್ತ ಕೆಲಸವನ್ನು ರಾಜಕೀಯ ಪಕ್ಷದೊಂದಿಗೆ ಸರಿಯಾಗಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸ್ವಾತಂತ್ರ್ಯ, ಭಾರತೀಯ ಮೌಲ್ಯಗಳಲ್ಲಿ ಬೇರೂರಿರುವಿಕೆ ಮತ್ತು ಸಮಗ್ರ ದೃಷ್ಟಿಕೋನವು ಭಾರತೀಯ ಶಿಕ್ಷಣ ಮಂಡಳಿಯನ್ನು ರಾಜಕೀಯ ಪ್ರೇರಿತ ಎಲ್ಲಾ ಇತರ ಸಂಸ್ಥೆಗಳಿಂದ ಪ್ರತ್ಯೇಕಿಸುತ್ತದೆ ಎಂದು ಡಾ. ಭಾಗವತ್ ತಿಳಿಸಿದರು. ಈ ವೇಳೆ ಭಾರತೀಯ ಶಿಕ್ಷಣ ಮಂಡಳಿಯ ಹೊಸ ವೆಬ್‌ಸೈಟ್‌ಗೆ ಡಾ. ಮೋಹನ್ ಭಾಗವತ್ ಚಾಲನೆ ನೀಡಿದರು. ಇದು ಬಿಎಸ್‌ಎಂನ ಡಿಜಿಟಲ್ ವ್ಯಾಪ್ತಿ ವಿಸ್ತರಿಸುವಲ್ಲಿ ಮತ್ತು ದೇಶಾದ್ಯಂತ ಹಾಗೂ ಅದರಾಚೆಗಿನ ಶಿಕ್ಷಣತಜ್ಞರು, ವಿದ್ವಾಂಸರು ಮತ್ತು ನಾಗರಿಕರಿಗೆ ಭಾರತೀಯ ಶಿಕ್ಷಣದ ದೃಷ್ಟಿಕೋನ ಹೆಚ್ಚು ಪ್ರವೇಶಿಸುವಂತೆ ಮಾಡುವಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಕಾರ್ಯಕ್ರಮದಲ್ಲಿ ಬಿಎಸ್‌ಎಂನ ಅಖಿಲ ಭಾರತೀಯ ಅಧ್ಯಕ್ಷ ಡಾ. ಸಚ್ಚಿದಾನಂದ ಜೋಶಿ ಮತ್ತು ಅಖಿಲ ಭಾರತೀಯ ಪ್ರಧಾನ ಕಾರ್ಯದರ್ಶಿ ಡಾ. ಭರತ್ ಶರಣ್ ಸಿಂಗ್ ಸೇರಿದಂತೆ ಪದಾಧಿಕಾರಿಗಳು, ದೇಶಾದ್ಯಂತ 380 ಪ್ರತಿನಿಧಿಗಳು, ಶಿಕ್ಷಣತಜ್ಞರು, ವಿದ್ವಾಂಸರು ಮತ್ತು ಸದಸ್ಯರು ಭಾಗವಹಿಸಿದ್ದರು. ಭಾರತೀಯ ಶಿಕ್ಷಣ ಮಂಡಲದ ಮೂರು ದಿನಗಳ ಸಮ್ಮೇಳನವನ್ನು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಉದ್ಘಾಟಿಸಿದ್ದರು. ಭಾರತೀಯ ಶಿಕ್ಷಣ ಮಂಡಲದ ಕಾರ್ಯ ಬಲಪಡಿಸುವ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಸಾಮೂಹಿಕವಾಗಿ ಚರ್ಚಿಸಲು ಈ ಸಮ್ಮೇಳನವು ದೇಶದ ಕಾರ್ಯಕರ್ತರಿಗೆ ಒಂದು ಪ್ರಮುಖ ವೇದಿಕೆ ಒದಗಿಸಿತು.

ಭಾರತ-ಸೀಶೆಲ್ಸ್ ಮಧ್ಯೆ 19 ಒಪ್ಪಂದ

ಪುಟ ೧➡ ಪ್ರಧಾನಿ ಮೋದಿಯವರ ಪ್ರವಾಸ ಹಾಗೂ ಪಾಲುದಾರಿಕೆ ವಿಸ್ತರಣೆಗಳು, 2,400 ಕಿ.ಮೀ. ದೂರದಲ್ಲಿರುವ ಸೀಶೆಲ್ಸ್ ಮತ್ತು ಭಾರತ ನಡುವಿನ ಸಂಬಂಧದಲ್ಲಿ ಆಗುತ್ತಿರುವ ವೃದ್ಧಿಯನ್ನು ಪ್ರತಿಬಿಂಬಿಸುತ್ತದೆ.

ಹಸ್ತಾಂತರ ಒಪ್ಪಂದ, ಸೀಶೆಲ್ಸ್‌ನಲ್ಲಿ ಯುಪಿಐ ಪಾವತಿ ವ್ಯವಸ್ಥೆ, ಎಕ್ಸ್‌ಪೋರ್ಟ್– ಇಂಪೋರ್ಟ್ ಬ್ಯಾಂಕ್ ಆಫ್ ಇಂಡಿಯಾ (ಎಕ್ಸಿಮ್)ನೊಂದಿಗಿನ ಸಾಲ ಒಪ್ಪಂದ ಹಾಗೂ ನೂತನ ಸೀಶೆಲ್ಸ್ ರಾಷ್ಟ್ರೀಯ ಆಸ್ಪತ್ರೆ ನಿರ್ಮಾಣಕ್ಕಾಗಿ ಪ್ರಾಥಮಿಕ ಹಂತದ ಒಪ್ಪಂದ ಒಳಗೊಂಡಿವೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಸೀಶೆಲ್ಸ್‌ಗೆ ಒಂದು ಗಸ್ತು ನೌಕೆ, 10 ಆಂಬುಲೆನ್ಸ್, ಸೀಶೆಲ್ಸ್ ರಕ್ಷಣಾ ಪಡೆಗೆ 10 ಟಾಟಾ ವಾಹನಗಳು ಹಾಗೂ 5 ಲೇಸರ್ ರೇಡಿಯಲ್ ದೋಣಿಗಳನ್ನು ಪ್ರಧಾನಿ ಮೋದಿಯವರು ಶನಿವಾರ ಹಸ್ತಾಂತರಿಸಿದ್ದಾರೆ. ಇದಲ್ಲದೆ 2021ರ ಏಪ್ರಿಲ್‌ನಲ್ಲಿ ಸೀಶೆಲ್ಸ್ ರಕ್ಷಣಾ ಪಡೆಗೆ ಉಡುಗೊರೆ ನೀಡಿದ್ದ ಗಸ್ತು ನೌಕೆ ಪಿಎಸ್ ಜೊರೋಸ್ಟರ್ ಮತ್ತು ಗಾಜಿನ ಕಾಕ್‌ಪಿಟ್‌ನೊಂದಿಗೆ ಡಾರ್ನಿಯರ್ ಸೇನಾ ವಿಮಾನವನ್ನು ನವೀಕರಿಸುವುದಾಗಿ ಭಾರತ ಭರವಸೆ ನೀಡಿದೆ.

ಇತರ ಉಪಕ್ರಮಗಳು: ಸೀಶೆಲ್ಸ್‌ಗೆ ಸುಮಾರು 500 ಟನ್ ಅಕ್ಕಿ, 8500 ಟನ್ ಸಿಮೆಂಟ್ ಹಸ್ತಾಂತರಿಸಲಾಗಿದೆ. ಭಾರತ–ಸೀಶೆಲ್ಸ್ ನಡುವಿನ 50 ವರ್ಷಗಳ ರಾಜತಾಂತ್ರಿಕ ಸಂಬಂಧವನ್ನು ನೆನಪಿಗಾಗಿ ವಿಶೇಷ ಲೋಗೋವನ್ನು ಬಿಡುಗಡೆಗೊಳಿಸಲಾಗಿದೆ. ಸೀಶೆಲ್ಸ್‌ನಲ್ಲಿ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ ಕೇಂದ್ರಗಳ ವರ್ಚುವಲ್ ಶಿಲಾನ್ಯಾಸವನ್ನು ನೆರವೇರಿಸಲಾಯಿತು. ಕೃಷಿ ಸಂಶೋಧನೆ ಮತ್ತು ಶಿಕ್ಷಣ, ಸೀಶೆಲ್ಸ್ ಧ್ವಜ ಹೊಂದಿರುವ ಹಡಗುಗಳಲ್ಲಿ ಸೇವೆ ಸಲ್ಲಿಸುವ ನಾವಿಕರಿಗೆ ತರಬೇತಿ, ಬಾಹ್ಯಾಕಾಶ ಅನ್ವೇಷಣೆ ಮತ್ತು ಶಾಂತಿಯುತ ಸಹಕಾರ ಇತ್ಯಾದಿ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಎಕ್ಸ್‌ನಲ್ಲಿ ತಿಳಿಸಿದೆ.

ಸೀಶೆಲ್ಸ್‌ನಲ್ಲೂ ಯುಪಿಐ: ಅತ್ಯಾಧುನಿಕ ಯುಪಿಐ ಆಧಾರಿತ ಪಾವತಿ ವ್ಯವಸ್ಥೆಗಳನ್ನು ಪರಿಚಯಿಸುವುದಕ್ಕಾಗಿ ಹಾಗೂ ಆರ್ಥಿಕ ಮತ್ತು ತಾಂತ್ರಿಕ ಸಹಯೋಗ ವಿಸ್ತರಿಸಲು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ(ಎನ್‌ಪಿಸಿಐ) ಇಂಟರ್‌ನ್ಯಾಷನಲ್ ಪೇಮೆಂಟ್ಸ್ ಲಿ. ಮತ್ತು ಸೆಂಟ್ರಲ್ ಬ್ಯಾಂಕ್ ಆಫ್ ಸೀಶೆಲ್ಸ್ ನಡುವಿನ ಒಪ್ಪಂದಕ್ಕೆ ಉಭಯ ರಾಷ್ಟ್ರಗಳು ಸಹಿ ಹಾಕಿವೆ.

ಜನೌಷಧಿ ಒಪ್ಪಂದ: ಕೇಂದ್ರ ಸರ್ಕಾರದ ಜನೌಷಧಿ ಯೋಜನೆಯ ಅನ್ವಯ ಉತ್ತಮ ಗುಣಮಟ್ಟದ ಮತ್ತು ಕೈಗೆಟುಕುವ ದರದಲ್ಲಿ ಭಾರತೀಯ ಔಷಧಿಗಳನ್ನು ಸೀಶೆಲ್ಸ್ ನಾಗರಿಕರಿಗೆ ಒದಗಿಸುವ ಉದ್ದೇಶದಿಂದ ಎಚ್‌ಎಲ್‌ಎಲ್ ಲೈಫ್‌ಕೇರ್ ಲಿ. ಹಾಗೂ ಸೀಶೆಲ್ಸ್ ಆರೋಗ್ಯ ಸಚಿವಾಲಯ ಒಪ್ಪಂದಕ್ಕೆ ಸಹಿ ಹಾಕಿವೆ. ಇದರಲ್ಲಿ ನೂತನ ಸೀಶೆಲ್ಸ್ ರಾಷ್ಟ್ರೀಯ ಆಸ್ಪತ್ರೆಯ ಪ್ರಾಥಮಿಕ ಹಂತದ ಹಣಕಾಸು ನೆರವು ಒಳಗೊಂಡಿದೆ ಎಂದು ಎಂಇಎ ಹೇಳಿದೆ.

ಅಮಲಿನ ಅಂಶವಿದ್ದರೆ ಗುಟ್ಕಾ ನಿಷೇಧ: ಮುಖ್ಯಮಂತ್ರಿ

ಪುಟ ೧➡ ಇದು ಎಲ್ಲರ ಕರ್ತವ್ಯ ಎಂದು ಹೇಳಿದರು.ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ದೇಶದಲ್ಲೇ ಅತಿ ದೊಡ್ಡ ಆರೋಗ್ಯ ವಿವಿಯಾಗಿದೆ. ಅತಿ ಹೆಚ್ಚು ವೈದ್ಯರನ್ನು ತಯಾರು ಮಾಡಿದೆ. ನಮ್ಮ ರಾಜ್ಯದಲ್ಲಿ 70 ವೈದ್ಯಕೀಯ ಕಾಲೇಜುಗಳಿದ್ದು, ದೇಶದ ಬೇರೆ ಯಾವುದೇ ರಾಜ್ಯದಲ್ಲಿ ಇಷ್ಟು ವೈದ್ಯಕೀಯ ಕಾಲೇಜುಗಳಿಲ್ಲ. ವೈದ್ಯಕೀಯ ಶಿಕ್ಷಣ ಎಲ್ಲರಿಗೂ ಸಿಗುವಂತೆ ಆಗಬೇಕು ಎಂದು ಈ ರಾಜೀವ್ ಗಾಂಧಿ ವಿವಿಯನ್ನು ಆರಂಭಿಸಿದ ವೀರಪ್ಪ ಮೊಯ್ಲಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಬೆಂಗಳೂರಿನ ಹವಾಮಾನ ದೇಶದ ಬೇರೆ ಯಾವುದೇ ಭಾಗದಲ್ಲಿಲ್ಲ. ಹೀಗಾಗಿ ಇದನ್ನು ಹವಾನಿಯಂತ್ರಿತ ನಗರ ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಇರುವಷ್ಟು ಆಸ್ಪತ್ರೆ ಬೇರಾವ ರಾಜ್ಯದಲ್ಲೂ ಇಲ್ಲ. ಆದ್ದರಿಂದ ದೇಶದಲ್ಲಿ ಕರ್ನಾಟಕ ವೈದ್ಯಕೀಯ ರಾಜಧಾನಿಯೂ ಆಗಿದೆ. ಈ ವಿವಿ ಬೆಂಗಳೂರು ದಕ್ಷಿಣ ಜಿಲ್ಲೆಯ ನೂತನ ಕ್ಯಾಂಪಸ್‌ಗೆ ಸ್ಥಳಾಂತರವಾಗಲಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಅಡ್ಡ ಮತದಾನ ಸಾಬೀತಾದರೆ ನಿವೃತ್ತಿ: ಶಾಸಕ

• ಲಿಂಗಸೂಗೂರು: ನಾನು ಯಾವುದೇ ಕಾರಣಕ್ಕೂ ಪಕ್ಷದ್ರೋಹದ ಕೆಲಸ ಮಾಡುವುದಿಲ್ಲ. ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ನಾನು ಅಡ್ಡ ಮತದಾನ ಮಾಡಿದ್ದೇನೆ ಎಂಬ ಆರೋಪ ಸತ್ಯಕ್ಕೆ ದೂರವಾದದ್ದು ಎಂದು ಶಾಸಕ ಮಾನಪ್ಪ ವಜ್ಜಲ್ ಸ್ಪಷ್ಟಪಡಿಸಿದರು.

ಪಟ್ಟಣದ ಶಾಸಕರ ಭವನದಲ್ಲಿ ರೇಷ್ಮೆ ಬೆಳೆಗಾರರಿಗೆ ಕೃಷಿ ಸಲಕರಣೆಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು ಪತ್ರ ಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದರು. ನಾನು ಬಿಜೆಪಿ ಶಾಸಕನಾದಾಗಿನಿಂದಲೂ ಕಾಂಗ್ರೆಸ್ ಸರ್ಕಾರ ನನ್ನ ಕ್ಷೇತ್ರವನ್ನು ಪಕ್ಷಪಾತಿ ಧೋರಣೆಯಿಂದ ನೋಡುತ್ತಿದೆ. ನನ್ನ ಕಂಪನಿಯನ್ನು ಮುಚ್ಚುವ ಹಂತಕ್ಕೆ ತಂದು ನಿಲ್ಲಿಸುವ ಮೂಲಕ ಕಾಂಗ್ರೆಸ್ ಸರ್ಕಾರ ನನ್ನ ಮೇಲೆ ದ್ವೇಷ ರಾಜಕಾರಣ ಮಾಡುತ್ತಿದೆ ಎಂದು ದೂರಿದರು. ನಾನು ಅಡ್ಡ ಮತದಾನ ಮಾಡಿದ್ದೇನೆ ಎಂಬುದನ್ನು ಯಾರಾದರೂ ಸಾಬೀತುಪಡಿಸಲಿ.

ಆ ಕ್ಷಣವೇ ರಾಜಕೀಯ ನಿವೃತ್ತಿ ಪಡೆದು, ಪಕ್ಷದ ಕಚೇರಿಯಲ್ಲಿ ಕಸ ಬಳಿಯುವ ಕೆಲಸ ಮಾಡಲು ಸಿದ್ಧನಿದ್ದೇನೆ ಎಂದು ಮುಕ್ತ ಸವಾಲು ಹಾಕಿದರು.

ಪ್ರದೀಪ್ ಮಕ್ಕಳಿಗೆ ಅದೇನ್ ಹೇಳಿಕೊಡ್ತಾರೋ: ಸೋಮಣ್ಣ

• ತುಮಕೂರು: ಕೋಚಿಂಗ್ ಸೆಂಟರ್ ನಡೆಸುವ ಪ್ರದೀಪ್ ಈಶ್ವರ್ ಮಕ್ಕಳಿಗೆ ಅದೇನ್ ಹೇಳಿಕೊಡ್ತಾರೋ ಎಂದು ಕೇಂದ್ರ ಸಚಿವ ಸೋಮಣ್ಣ ಅಸಮಾಧಾನ ವ್ಯಕ್ತಪಡಿಸಿದರು. ಮಾಧ್ಯಮಗಳೊಂದಿಗೆ ಮಾತನಾಡಿ, ಆ ಯುವ ಶಾಸಕ ಯಾರು ಎಂಬುದು ನನಗೆ ಸರಿಯಾಗಿ ತಿಳಿದಿಲ್ಲ. ಆದರೆ, ಒಬ್ಬ ಜನಪ್ರತಿನಿಧಿಯಾಗಿ ಅವರ ಆಡುವ ಭಾಷೆ ಮತ್ತು ನಡೆದುಕೊಳ್ಳುವ ರೀತಿ ಸರಿ ಇಲ್ಲ ಎಂದು ಕಿಡಿಕಾರಿದರು. ಸಣ್ಣಪುಟ್ಟ ವಿಷಯಗಳಿಗೆ ಜಾತಿಯ ಬಣ್ಣ ಬಳಿಯುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಎಚ್.ಡಿ. ಕುಮಾರಸ್ವಾಮಿ ಅವರಂತಹ ಹಿರಿಯ ನಾಯಕರೊಂದಿಗೆ ಸಂಘರ್ಷ ಮಾಡುವುದನ್ನು ಬಿಟ್ಟು, ಅವರಿಂದ ರಾಜಕೀಯ ಪಾಠ ಕಲಿಯಬೇಕು. ಇಂತಹ ಹುಡುಗಾಟದ ರಾಜಕೀಯ ಬಿಟ್ಟು ಜವಾಬ್ದಾರಿಯಿಂದ ನಡೆದುಕೊಳ್ಳದಿದ್ದರೆ ಮುಂದೆ ಕಷ್ಟವಾಗುತ್ತದೆ ಎಂದರು. ಬಿಡದಿ ಟೌನ್‌ಶಿಪ್ ವಿವಾದದ ಕುರಿತು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಸೋಮಣ್ಣ ರೈತರ ವಿರೋಧದ ನಡುವೆಯೂ ಈ ಯೋಜನೆ ಜಾರಿಗೆ ತರಲು ಸರ್ಕಾರ ಹಠ ಹಿಡಿದಿರುವುದು ಸರಿಯಲ್ಲ. ಬಿಡದಿಯಲ್ಲಿ ಈ ಯೋಜನೆ ಬೇಡ ಎಂದು ರೈತರು ಪ್ರತಿಭಟನೆ ನಡೆಸುತ್ತಿದ್ದು, ಅವರಿಗೆ ಹಿಂಸೆ ನೀಡಬಾರದು ಎಂದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕೆಲಸ ಮಾಡುವ ಲವಲವಿಕೆ ಇದೆ, ಆದರೆ ಅವರು ಇಂತಹ ಅನವಶ್ಯಕ ಯೋಜನೆಗಳಿಗೆ ಸಮಯ ವ್ಯಯಿಸುವ ಬದಲು, 50–60 ವರ್ಷಗಳಿಂದ ಕಲುಷಿತಗೊಂಡಿರುವ ಬೈರಮಂಗಳ ಕೆರೆಯನ್ನು ಸ್ವಚ್ಛಗೊಳಿಸಲು ಗಮನ ಹರಿಸಲಿ ಎಂದು ಸಲಹೆ ನೀಡಿದರು. ಅಯೋಧ್ಯೆ ರಾಮಮಂದಿರದ ದೇಣಿಗೆ ಅವ್ಯವಹಾರ ಪ್ರಕರಣದ ಬಗ್ಗೆ ಮಾತನಾ, ಉತ್ತರ ಪ್ರದೇಶ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ಈಗಾಗಲೇ ವಿಶೇಷ ತನಿಖಾ ತಂಡ ರಚನೆಯಾಗಿದ್ದು, 7–8 ಮಂದಿಯನ್ನು ಬಂಧಿಸಲಾಗಿದೆ.

ಮಕ್ಕಳ ಭವಿಷ್ಯಕ್ಕೆ ಪೋಲಿಯೊ

ಪುಟ ೧➡ ಈ ಕಾರ್ಯಕ್ರಮದಲ್ಲಿ 36,686 ಲಸಿಕಾ ಕೇಂದ್ರಗಳು, 988 ಸಂಚಾರಿ ಕೇಂದ್ರಗಳು, 2,125 ಪಾಯಿಂಟ್ ಸೇರಿ ಒಟ್ಟು 1,14,213 ಲಸಿಕಾ ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ. 60.84 ಲಕ್ಷ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡಲು ನಮ್ಮ ಸರ್ಕಾರ ತೀರ್ಮಾನಿಸಿದೆ ಎಂದರು.

ನಮ್ಮ ದೇಶ ಬಲಿಷ್ಠವಾಗಿದೆ. ನೆರೆ ರಾಷ್ಟ್ರಗಳಿಂದ ಮತ್ತೆ ಪೋಲಿಯೊ ಬಾರದಂತೆ ತಡೆಯಲು ನಾವು ಈ ಅಭಿಯಾನ ಮಾಡುತ್ತಿದ್ದೇವೆ. ವಿಶ್ವ ಪೋಲಿಯೊ ಲಸಿಕಾ ದಿನದ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಲಸಿಕೆ ನೀಡಿ ಯಾವುದೇ ಮಕ್ಕಳು ಅಂಗವೈಕಲ್ಯಕ್ಕೆ ಒಳಗಾಗಬಾರದು ಎಂದು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ನಮ್ಮ ರಾಜ್ಯದ ಆರೋಗ್ಯ ಸೇವೆ ದೇಶದಲ್ಲಿ ಎಲ್ಲೂ ಇಲ್ಲ: ಈ ದೇಶವನ್ನು ಪೋಲಿಯೊಮುಕ್ತ ಮಾಡಲಾಗಿದೆ. ಖಾದರ್ ಅವರಿಗೆ ಅಪಾರ ಅನುಭವವಿದೆ. ಅವರು ಈ ಜವಾಬ್ದಾರಿ ಹೊತ್ತಿದ್ದಾರೆ. ನಮ್ಮ ರಾಜ್ಯದ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಬಲಿಷ್ಠವಾಗಿದ್ದು, ಹೊರಗಿನಿಂದ ಜನರು ಆರೋಗ್ಯ ಸೇವೆ ಪಡೆಯಲು ನಮ್ಮ ರಾಜ್ಯಕ್ಕೆ ಬರುತ್ತಿದ್ದಾರೆ ಎಂದು ಸಿಎಂ ತಿಳಿಸಿದರು.

ನಮ್ಮ ರಾಜ್ಯದಲ್ಲಿ ಪ್ರತಿವರ್ಷ 13,940 ವೈದ್ಯರನ್ನು ತಯಾರು ಮಾಡುತ್ತೇವೆ. 1.07 ಲಕ್ಷ ಆರೋಗ್ಯ ಸೇವೆ ಸಿಬ್ಬಂದಿ ತಯಾರು ಮಾಡುತ್ತಿದ್ದೇವೆ.

ನಮ್ಮ ರಾಜ್ಯದ ಕಾಲೇಜುಗಳಲ್ಲಿ ಓದಿ ವೈದ್ಯರಾದವರು ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ನಮ್ಮ ಸರ್ಕಾರ ಆರೋಗ್ಯ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಸ್ತಾವನೆಗಳಿಗೆ ಆದ್ಯತೆ ಮೇರೆಗೆ ಒಪ್ಪಿಗೆ ನೀಡುತ್ತಿದ್ದೇವೆ ಎಂದು ಹೇಳಿದರು.

5 ವರ್ಷದೊಳಗಿನವರಿಗೆ ಕಡ್ಡಾಯ ಲಸಿಕೆ ಹಾಕಿಸಿ



ಪೋಲಿಯೊಮುಕ್ತ ಭಾರತ ಹಾಗೂ ಆರೋಗ್ಯವಂತ ಸಮಾಜ ನಿರ್ಮಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳು ಮತ್ತು ಆರೋಗ್ಯ ಕೇಂದ್ರಗಳಲ್ಲಿ ಪೋಲಿಯೊ ಲಸಿಕೆ ಹಾಕಲಾಗುವುದು. ಆಗ ತಾನೇ ಹುಟ್ಟಿದ ಮಗುವಿನಿಂದ ಹಿಡಿದು 5 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೊ ಲಸಿಕೆ ಹಾಕಿಸಿಕೊಳ್ಳಲು ಆರೋಗ್ಯ ಸಚಿವ ಯು.ಟಿ. ಖಾದರ್ ಮನವಿ ಮಾಡಿದರು.

ಜುಲೈ 29ರವರೆಗೆ ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ

ರಾಜ್ಯದಲ್ಲಿ ನಾಳೆಯಿಂದ ಎಸ್‌ಐಆರ್

• ಬೆಂಗಳೂರು: ಯಾವುದೇ ಅರ್ಹ ಮತದಾರ ಪಟ್ಟಿಯಿಂದ ಹೊರಗುಳಿಯಬಾರದು. ಯಾವುದೇ ಅನರ್ಹ ಮತದಾರ ಪಟ್ಟಿಯಲ್ಲಿರಬಾರದು ಎಂಬ ಉದ್ದೇಶದೊಂದಿಗೆ ಚುನಾವಣಾ ಆಯೋಗ ನಡೆಸುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ರಾಜ್ಯದಲ್ಲಿ ಜೂನ್ 30 ರಿಂದ ಆರಂಭವಾಗಲಿದೆ.

ಮಹತ್ವದ ಎಸ್‌ಐಆರ್ ಪ್ರಕ್ರಿಯೆಯಲ್ಲಿ 59,050 ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಜೂನ್ 30ರಿಂದ ಜುಲೈ 29ರವರೆಗೆ ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಈ ಅವಧಿಯಲ್ಲಿ ಸಾರ್ವಜನಿಕರು ತಮಗೆ ನೀಡಲಾದ ಮತದಾರರ ವಿವರ ನಮೂನೆ ಭರ್ತಿ ಮಾಡಿ ಬಿಎಲ್‌ಒಗಳಿಗೆ ಹಸ್ತಾಂತರಿಸಬೇಕು. ಭರ್ತಿ ಮಾಡಿದ ಅರ್ಜಿ(ನಮೂನೆ) ಸ್ವೀಕರಿಸಿದ ನಂತರ ಬಿಎಲ್‌ಒಗಳು ನಾಗರಿಕರಿಗೆ ಅಧಿಕೃತ ಸ್ವೀಕೃತಿ ಪತ್ರ ನೀಡಲಿದ್ದಾರೆ. ಈ ಬಾರಿ ರಾಜ್ಯದಲ್ಲಿ 2026 ಅಕ್ಟೋಬರ್ 1ನ್ನು ಅರ್ಹತಾ ದಿನಾಂಕ ಎಂದು ನಿಗದಿಪಡಿಸಲಾಗಿದೆ. ಅರ್ಹತಾ ದಿನಾಂಕ ಎಂದರೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಅರ್ಜಿದಾರರ ಕನಿಷ್ಠ ವಯಸ್ಸು 18 ವರ್ಷ ತುಂಬಿದೆಯೇ ಎಂದು ನಿರ್ಧರಿಸುವ ಮಾನದಂಡವಾಗಿದೆ.

ಸನ್ನದ್ಧವಾದ ಕಾರ್ಯಪಡೆ: ರಾಜ್ಯದಲ್ಲಿ 59,050 ಬಿಎಲ್‌ಒಗಳು ಪರಿಷ್ಕರಣೆ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಪ್ರತಿ 10 ಬಿಎಲ್‌ಒಗಳಿಗೆ ಒಬ್ಬ ಮುಖ್ಯಸ್ಥರಂತೆ 5905 ಅಧಿಕಾರಿಗಳನ್ನು ನೇಮಿಸಲಾಗಿದೆ. ಅಲ್ಲದೆ 31 ಎಆರ್‌ಇ, 4 ಎಎಆರ್‌ಇಗಳು, 224 ಇಆರ್‌ಓ, 336 ಎಇಆರ್‌ಒಗಳನ್ನು ನೇಮಿಸಲಾಗಿದೆ. ಅಲ್ಲದೆ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಂದ ಬೂತ್ ಮಟ್ಟದ ಏಜೆಂಟರನ್ನು (ಬಿಎಲ್‌ಎ) ನೇಮಕ ಮಾಡಲಾಗಿದೆ.

ಅಗತ್ಯವಿರುವ ಪೂರಕ ದಾಖಲೆಗಳು: ಹೆಸರು ನೋಂದಣಿ, ತಿದ್ದುಪಡಿಗಾಗಿ ಆಯೋಗವು ನಿಗದಿಪಡಿಸಿದ ಒಟ್ಟು 12 ಅಧಿಕೃತ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಬಳಸಬಹುದು. ಪ್ರಮುಖವಾಗಿ ಆಧಾರ್ , ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಬ್ಯಾಂಕ್/ಅಂಚೆ ಕಚೇರಿ ಪಾಸ್‌ಬುಕ್, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಅಥವಾ ಜನನ ಪ್ರಮಾಣಪತ್ರ, ಅರಣ್ಯ ಹಕ್ಕುಗಳ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ ಬಳಸಲು ಅವಕಾಶ ನೀಡಲಾಗಿದೆ.

ಡಿಜಿಟಲ್ ವ್ಯವಸ್ಥೆ: ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಲು ಸಾರ್ವಜನಿಕರು ಕಚೇರಿಗಳಿಗೆ ಅಲೆಯುವ ಅಗತ್ಯವಿಲ್ಲ. ಆಯೋಗವು ಡಿಜಿಟಲ್ ಮಾಧ್ಯಮಗಳ ಮೂಲಕ ಸುಲಭ ಮಾರ್ಗಗಳನ್ನು ಒದಗಿಸಿದೆ. ಹತ್ತಿರದ ಬಿಎಲ್‌ಒ ಬಳಿ ಇರುವ ಅಧಿಕೃತ ಪಟ್ಟಿ ಪರಿಶೀಲಿಸಬಹುದು. ಕೇಂದ್ರ ಚುನಾವಣಾ ಆಯೋಗದ ಅಧಿಕೃತ ವೆಬ್‌ಸೈಟ್ voters.eci.gov.in ಮೂಲಕವೂ ತಿಳಿದುಕೊಳ್ಳಬಹುದು. ECINET ಮೊಬೈಲ್ ಆ್ಯಪ್ ಮೂಲಕ ನಿಮ್ಮ ಹೆಸರು ಮತ್ತು ವಿವರಗಳನ್ನು ಪರಿಶೀಲಿಸಬಹುದು.

ಎಸ್‌ಐಆರ್ ಬಗ್ಗೆ ಪ್ರತಿಯೊಬ್ಬರೂ ಜಾಗೃತರಾಗಬೇಕಿದೆ: ಸಿದ್ದರಾಮಯ್ಯ



ಮೈಸೂರು: ಮತದಾರರ ಪಟ್ಟಿಯಿಂದ ಯಾವುದೇ ಅರ್ಹ ವ್ಯಕ್ತಿಯ ಹೆಸರು ಕೈಬಿಡುವುದು ಅವರ ಹಕ್ಕು ಕಸಿದಂತೆ. ಅರ್ಹರನ್ನು ಮತದಾರರ ಪಟ್ಟಿಗೆ ಸೇರಿಸುವುದು ಆಯೋಗದ ಜವಾಬ್ದಾರಿಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಮೈಸೂರಿನ ಜೆ.ಕೆ.ಮೈದಾನದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಮೈಸೂರು ವಿಭಾಗೀಯ ಮಟ್ಟದ ಎಸ್ ಐಆರ್ ಜಾಗೃತಿ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿ ಚುನಾವಣೆ ಪ್ರಜಾಪ್ರಭುತ್ವದ ಬುನಾದಿ. ಮತದಾನ ಎಲ್ಲ ವಯಸ್ಕರ ಹಕ್ಕು. ಇದನ್ನು ಮೊಟಕು ಮಾಡುವ ಅಧಿಕಾರ ಯಾರಿಗೂ ಇಲ್ಲ. ಚುನಾವಣಾ ಆಯೋಗವು ಸಾಂವಿಧಾನಿಕ ರೀತಿಯಲ್ಲಿ ನಡೆಯುವುದು ಅವರ ಜವಾಬ್ದಾರಿಯಾಗಿದೆ ಎಂದರು.

ದೇಶದ ಸಂವಿಧಾನ ಉಳಿವಿಗಾಗಿ ಎಸ್‌ಐಆರ್ ಕುರಿತು ಪ್ರತಿಯೊಬ್ಬರೂ ಜಾಗೃತಿ ಆಗಬೇಕಿದೆ. ಇಲ್ಲವಾದರೆ ಈ ದೇಶ ಮತ್ತೆ ಸರ್ವಾಧಿಕಾರಕ್ಕೆ ಹೋಗಲಿದೆ. ಮತದಾರರು, ಪ್ರಜಾಪ್ರಭುತ್ವದ ಮಾಲೀಕರೂ ಗುಲಾಮ ಆಗುತ್ತದೆ ಎಂದು ಎಚ್ಚರಿಸಿದರು. ಜೂನ್ 30ರಿಂದ ಜುಲೈ 29ರವರೆಗೆ ನಡೆಯಲಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ಸಕ್ರಿಯ ವಾಗಿ ಪಾಲ್ಗೊಳ್ಳಬೇಕು. ಈ ಪ್ರಕ್ರಿಯೆಯು ಜನಪ್ರತಿನಿಧಿಗಳ ಅಳಿವು ಉಳಿವಿನ ಪ್ರಶ್ನೆ. ಸಂತೇಮರಹಳ್ಳಿ ಕ್ಷೇತ್ರದ ವಿಧಾನಸಭೆ ಚುನಾವಣೆಯಲ್ಲಿ ಎ.ಆರ್. ಕೃಷ್ಣಮೂರ್ತಿ ಅವರು ಕೇವಲ ಒಂದು ಮತದಿಂದ ಸೋತರು. ಹೀಗಾಗಿ ಪ್ರತಿ ಮತವೂ ಅಮೂಲ್ಯ. ಹಾಗಾಗಿ ಕಾಂಗ್ರೆಸ್ ಜಾಗೃತಿ ವಹಿಸಿ ಪ್ರತಿ ಅರ್ಹ ಮತದಾರನೂ ಪಟ್ಟಿಯಲ್ಲಿ ಇರುವಂತೆ ನೋಡಿಕೊಳ್ಳಲು ಅಭಿಯಾನ ನಡೆಸಿದೆ ಎಂದು ತಿಳಿಸಿದರು.



ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 31ನೇ ಸಂಸ್ಥಾಪನಾ ದಿನಾಚರಣೆ ಹಾಗೂ ನಶಾ ಮುಕ್ತ ಭಾರತ ಅಭಿಯಾನದಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಸಮ್ಮುಖದಲ್ಲಿ ಸಾವಿರಾರು ವಿದ್ಯಾರ್ಥಿಗಳು ಮಾದಕ ದ್ರವ್ಯ ವಿರೋಧಿ ಪ್ರತಿಜ್ಞೆ ಸ್ವೀಕರಿಸಿದರು.

ಎಸ್‌ಐಆರ್ ಮೂಲಕ ಹತೋಟಿಗೆ ಬಿಜೆಪಿ ಯತ್ನ: ಮಹದೇವಪ್ಪ



ಬೆಂಗಳೂರು: ಚುನಾವಣಾ ಆಯೋಗದ ಮೂಲಕವೇ ತಮ್ಮ ಕುತಂತ್ರಗಳನ್ನು ಜಾರಿ ಮಾಡಲು ಹೊರಟಿರುವ ಕೇಂದ್ರ ಸರ್ಕಾರವು ಎಸ್‌ಐಆರ್ ನೆಪದಲ್ಲಿ ಮತದಾರರ ಪಟ್ಟಿಯಲ್ಲಿ ತಮ್ಮ ಚುನಾವಣೆಗೆ ಅನುಕೂಲವಲ್ಲದ ಜನರು, ಪ್ರದೇಶದ ಮೇಲೆ ಹತೋಟಿ ಸಾಧಿಸಲು ಹೊರಟಿದ್ದಾರೆ ಎಂದು ಮಾಜಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಆರೋಪಿಸಿದ್ದಾರೆ.

ಜೂ.30ರಿಂದ ರಾಜ್ಯದಲ್ಲಿ ಎಸ್‌ಐಆರ್ ಪ್ರಾರಂಭವಾಗಲಿರುವ ಹಿನ್ನೆಲೆಯಲ್ಲಿ ಮಾಧ್ಯಮ ಹೇಳಿಕೆ ನೀಡಿರುವ ಅವರು, ಬಿಜೆಪಿಗೆ ಎಲ್ಲೆಲ್ಲಿ ಚುನಾವಣಾ ಅನುಕೂಲ ಇಲ್ಲವೋ ಅಲ್ಲೆಲ್ಲಾ ಎಸ್‌ಐಆರ್ ಅಸ್ತ್ರ ಹಿಡಿದು, ಲಕ್ಷಾಂತರ ಮತಗಳನ್ನು ರದ್ದು ಮಾಡಿ ಸುಲಭವಾಗಿ ಚುನಾವಣಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುತ್ತಿದ್ದು, ಇದರ ವಿರುದ್ಧ ಆಂದೋಲನವು ದೊಡ್ಡ ಮಟ್ಟದಲ್ಲಿ ಆಗ ಬೇಕಿದ್ದು ಆ ಹೋರಾಟವೇ ಪ್ರಜಾಪ್ರಭುತ್ವವನ್ನು ಉಳಿಸುವ ಶಕ್ತಿಯಾಗಿದೆ ಎಂದಿದ್ದಾರೆ.

ಮುಮ್ಮಡಿ ಶ್ರೀಗಳಿಂದ ರಚನಾತ್ಮಕ ಕಾರ್ಯ

ಕನಕಪುರ: ಕನಕಪುರದಲ್ಲಿನ ವೀರಶೈವ ಲಿಂಗಾಯತ ಪರಂಪರೆಯ ದೇಗುಲ ಮಠವು ಮಾಡುವ ರಚನಾತ್ಮಕ ಕಾರ್ಯಗಳು ಕ್ರಾಂತಿಕಾರವಾಗಿವೆ. ಈ ಮಠವು ಮುಂದಿನ ದಿನಗಳಲ್ಲಿ ಈ ಪರಂಪರೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು. ಇದಕ್ಕೆ ತಮ್ಮಿಂದಾಗುವ ನೆರವನ್ನು ನೀಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ ತಿಳಿಸಿದರು.

ಇತ್ತೀಚೆಗೆ ಶಿವೈಕ್ಯರಾದ ಮಠದ ಶ್ರೀಗಳಾಗಿದ್ದ ಮುಮ್ಮಡಿ ನಿರ್ವಾಣ ಸ್ವಾಮೀಜಿಗಳ ಪುಣ್ಯ ಸ್ಮರಣೆಯ ಪೂರ್ವಭಾವಿ ಕಾರ್ಯಕ್ರಮದಲ್ಲಿ ಅವರು ಶ್ರದ್ಧಾಂಜಲಿ ಅರ್ಪಿಸಿ, ಸ್ವಾಮೀಜಿಯವರ ಪುಣ್ಯೋತ್ಸವದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದರು. ದೇಗುಲ ಮಠವು ಲಿಂಗಾಯತ ಸಂಪ್ರದಾಯಕ್ಕೆ ಸೇರಿದ್ದರೂ ಜಾತ್ಯತೀತ ನೆಲೆ ಯಲ್ಲಿ ತನ್ನ ಚಟುವಟಿಕೆಗಳನ್ನು ನಡೆಸುತ್ತ ಬಂದಿದೆ. ಇದರಿಂದ ಕನಕಪುರದ ಪರಿಸರದಲ್ಲಿ ಇದರ ಬಗ್ಗೆ ಜನರ ವಿಶ್ವಾಸ ಅದಮ್ಯವಾಗಿದೆ ಎಂದರು.

ಕಿರುಸುದ್ದಿ

ಪ್ರದೀಪ್ ಈಶ್ವರ್ ಭಾಷಣಕ್ಕೆ ಅಡ್ಡಿಪಡಿಸಿದ ನಾಲ್ವರ ಬಂಧನ

ಚಿಕ್ಕಬಳ್ಳಾಪುರ: ನಗರದ ಕನ್ನಡ ಭವನದಲ್ಲಿ ಶನಿವಾರ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮದ ವೇಳೆ ಶಾಸಕ ಪ್ರದೀಪ್ ಈಶ್ವರ್ ಅವರ ಭಾಷಣಕ್ಕೆ ಅಡ್ಡಿಪಡಿಸಿ ಗದ್ದಲ ಎಬ್ಬಿಸಿ ಚಪ್ಪಲಿ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ. ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ನಡೆದ ಗಲಾಟೆ ತೀವ್ರ ಸ್ವರೂಪ ಪಡೆದುಕೊಂಡಿದ್ದು, ರಾಜಕೀಯ ವಲಯದಲ್ಲಿ ಭಾರಿ ಸಂಚಲನ ಸೃಷ್ಟಿಸಿದೆ.

ಈ ಆಘಾತಕಾರಿ ಘಟನೆಯನ್ನು ಬೆನ್ನಟ್ಟಿ ಇಡೀ ರಾತ್ರಿ ಕಾರ್ಯಾಚರಣೆ ನಡೆಸಿರುವ ಪೊಲೀಸರು ಸದ್ಯ ನಾಲ್ವರನ್ನು ಬಂಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಬಳ್ಳಾಪುರ ನಗರ ಠಾಣೆಯ ಪಿಎಸ್‌ಐ ಅಮರ್ ಅವರು ಸ್ವಯಂಪ್ರೇರಿತ ಎಫ್‌ಐಆರ್ ದಾಖಲಿಸಿಕೊಂಡಿದ್ದು, ಶಾಸಕರ ಮೇಲೆ ಚಪ್ಪಲಿ ಎಸೆದು, ಅವಾಚ್ಯ ಪದಗಳಿಂದ ನಿಂದಿಸಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಪ್ರಕರಣ ದಾಖಲಾಗಿದೆ. ಈ ಕುರಿತು ಮಾಹಿತಿ ನೀಡಿರುವ ಎಸ್‌ಪಿ ಕುಶಾಲ್ ಚೌಕ್ಸಿ, ಘಟನೆಗೆ ಸಂಬಂಧಿಸಿದಂತೆ ನಾಲ್ವರು ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ. ಗದ್ದಲ ಎಬ್ಬಿಸಿದವರು ಯಾವುದೇ ನಿರ್ದಿಷ್ಟ ರಾಜಕೀಯ ಪಕ್ಷದ ಕಾರ್ಯಕರ್ತರೋ ಅಥವಾ ಸಾಮಾನ್ಯ ಜನರೋ ಎಂಬ ನಿಟ್ಟಿನಲ್ಲಿ ತನಿಖೆ ನಡೆಸಲಾಗುತ್ತಿದೆ. ಘಟನೆಯ ಹಿಂದೆ ಯಾರೇ ಇದ್ದರೂ, ತಪ್ಪಿತಸ್ಥರನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಬೈಕಿಗೆ ಲಾರಿ ಡಿಕ್ಕಿ: ಅಣ್ಣ-ತಂಗಿ ಮೃತ್ಯು

ಬಂಗಾರಪೇಟೆ: ಬೈಕ್‌ಗೆ ಲಾರಿ ಡಿಕ್ಕಿಯಾಗಿ ತಮಿಳುನಾಡು ಗಡಿಯಲ್ಲಿ ಕೆಜಿಎಫ್ ಮೂಲದ ಅಣ್ಣ ತಂಗಿ ಧಾರುಣ ಸಾವನ್ನಪ್ಪಿರುವ ಘಟನೆ ಭಾನುವಾರ ನಡೆದಿದೆ. ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ವಿ.ಕೋಟ-ಪ್ಯಾರ್ನಂಬಟ್ ಗಡಿಯಲ್ಲಿ ಈ ಘಟನೆ ನಡೆದಿದೆ. ಬೈಕ್‌ಗೆ ಡಿಕ್ಕಿಯಾಗಿ ಲಾರಿ ಕೆಳಗೆ ಸಿಲುಕಿದ ಬೈಕ್‌ನ್ನು ಲಾರಿ ಸುಮಾರು ಅರ್ಧ ಕಿಮೀನಷ್ಟು ದೂರು ಎಳೆದೊಯ್ದಿದೆ. ಬೈಕ್ ಹಾಗೂ ಬೈಕ್ ನಲ್ಲಿದ್ದವರನ್ನ ಸುಮಾರು ಅರ್ಧ ಕಿ.ಮೀ. ಎಳೆದೊಯ್ದಿರುವ ಲಾರಿಗೆ ಅಣ್ಣ-ತಂಗಿ ಇಬ್ಬರು ಸಿಲುಕಿ ಅಪ್ಪಚ್ಚಿಯಾಗಿದ್ದಾರೆ. ಕೆಜಿಎಫ್ ನಗರದ ಪಾರಂಡಹಳ್ಳಿ ನಿವಾಸಿಗಳಾದ ಬಾಲಾಜಿ ಹಾಗೂ ಆತನ ತಂಗಿ ಮಹಾಶ್ರೀ ಮೃತರಾದವರು. ದೇಹವನ್ನು ಹೊರ ತೆಗೆಯಲು ಸ್ಥಳೀಯರು ಪರದಾಡಿದ್ದು, ತಂಗಿಯ ಶವ ಹೊರ ತೆಗೆದಿದ್ದು, ಅಣ್ಣ ಬಾಲಾಜಿ ದೇಹ ಚಕ್ರಕ್ಕೆ ಸಿಲುಕಿದೆ. ಇನ್ನೂ ಸ್ಥಳಕ್ಕೆ ತಮಿಳುನಾಡು ಪೊಲೀಸರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಂಡಿದ್ದಾರೆ.

150 ಅಡಿ ಬಾವಿಗೆ ಬಿದ್ದ ಟ್ಯಾಂಕರ್: ಚಾಲಕ ಸಾವು

ಜಮಖಂಡಿ: ತಾಲೂಕಿನ ಹುನ್ನೂರ ಗ್ರಾಮದ ಸಮೀಪ ಇರುವ ಹಿಪ್ಪರಗಿ ರಸ್ತೆಯಲ್ಲಿ ಮಳ್ಳಿ ತುಂಬಿಕೊಂಡು ಹೋಗುತ್ತಿದ್ದ ಟ್ಯಾಂಕರ್ ನಿಯಂತ್ರಣ ತಪ್ಪಿ ತೆರೆದ ಬಾವಿಗೆ ಬಿದ್ದ ಪರಿಣಾಮ ಚಾಲಕನೊಬ್ಬ ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆದಿದೆ. ಟ್ರ್ಯಾಕ್ಟರ್ ಸಮೇತ ಬಾವಿಯಲ್ಲಿ ಬಿದ್ದು ಮೃತಪಟ್ಟ ಚಾಲಕನನ್ನು ಅಥಣಿ ತಾಲೂಕಿನ ಬಳವಾಡ ಗ್ರಾಮದ ಮಂಜುನಾಥ ಆಟವಾಳಕರ ಎಂದು ಗುರುತಿಸಲಾಗಿದೆ. ಮಳ್ಳಿ ತುಂಬಿದ ಟ್ಯಾಂಕರ್ ಹಿಪ್ಪರಗಿಯಿಂದ ಜಮಖಂಡಿ ಬರುವ ಮಾರ್ಗದಲ್ಲಿ ವಾಹನ ನಿಯಂತ್ರಣ ತಪ್ಪಿದ್ದರಿಂದ ರಾತ್ರಿ ಬಿಳ್ಳೂರ ತೋಟದ ಬಾವಿಯಲ್ಲಿ ಬಿದ್ದಿದ್ದರಿಂದ ಸ್ಥಳದಲಿಯೇ ಚಾಲಕ ಮೃತಪಟ್ಟಿದ್ದಾನೆ. ಜೂ.26 ರಂದು ಈ ಘಟನೆ ನಡೆದಿದ್ದು ಅಂದಾಜು 150 ಅಡಿ ಆಳದ ಬಾವಿಗೆ ಟ್ಯಾಂಕರ್ ಬಿದ್ದಿದೆ.

ನಶಾ ಮುಕ್ತ ಭಾರತ ಸಮಾವೇಶದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿಕೆ

ಹೋರಾಟ ರಾಷ್ಟ್ರವ್ಯಾಪಿಯಾಗಲಿ

ಬೆಂಗಳೂರು: ಮಾದಕ ದ್ರವ್ಯ ವಿರುದ್ಧದ ಹೋರಾಟವು ವೈಯಕ್ತಿಕವಾಗಿ ಶುರುವಾಗಿ ರಾಷ್ಟ್ರವ್ಯಾಪಿ ಚಳವಳಿಯಾಗಬೇಕು. ಶಿಕ್ಷಣ ಸಂಸ್ಥೆಗಳು, ಕುಟುಂಬ, ಆರೋಗ್ಯ ವೃತ್ತಿಪರರು, ಕಾನೂನು ಜಾರಿ ಸಂಸ್ಥೆಗಳು ಮತ್ತು ನಾಗರಿಕ ಸಮಾಜವು ನಶೆ ಮುಕ್ತ ಭಾರತ ನಿರ್ಮಾಣಕ್ಕೆ ಒಟ್ಟಾಗಿ ಕೆಲಸ ಮಾಡಬೇಕೆಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಕರೆ ನೀಡಿದರು. ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 31ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ ಮತ್ತು ದಿಶಾ ಬೋಧ್ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿದ್ದ ನಶಾ ಮುಕ್ತ ಭಾರತ ಸಮಾವೇಶದಲ್ಲಿ ಅವರು ಮಾತನಾಡಿದರು.

ಮಾದಕ ದ್ರವ್ಯ ಸೇವನೆಯು ವೈಯಕ್ತಿಕ ಆರೋಗ್ಯಕ್ಕೆ ಮಾತ್ರವಲ್ಲದೆ ಶೈಕ್ಷಣಿಕ ಸಾಧನೆ, ಉತ್ಪಾದಕತೆ, ಸಾಮಾಜಿಕ ಒಗ್ಗಟ್ಟು ಮತ್ತು ರಾಷ್ಟ್ರೀಯ ಅಭಿವೃದ್ಧಿಗೂ ಅಪಾಯವನ್ನುಂಟುಮಾಡುತ್ತದೆ. ನಶಾ ಮುಕ್ತ ಭಾರತ ಎಂದರೆ ಕೇವಲ ಮಾದಕ ವಸ್ತು ಮುಕ್ತವಲ್ಲ. ಬದಲಾಗಿ ಆರೋಗ್ಯಕರ ಆಯ್ಕೆ, ತಿಳಿವಳಿಕೆಯುಳ್ಳ ನಿರ್ಧಾರ, ಬೆಂಬಲ ನೀಡುವ ಕುಟುಂಬಗಳು ಮತ್ತು ಸ್ಥಿತಿಸ್ಥಾಪಕ ಸಮುದಾಯಗಳನ್ನು ಉತ್ತೇಜಿಸುವುದು. ಮಾದಕ ವಸ್ತುಗಳು ಮನಸ್ಸಿನ ಮೇಲೆ ಹಿಡಿತ ಸಾಧಿಸಿದಾಗ, ಒಬ್ಬ ವ್ಯಕ್ತಿಯು ತನ್ನ ಸ್ವಂತ ಜೀವನದ ಮೇಲೆ ನಿಯಂತ್ರಣ ಕಳೆದುಕೊಳ್ಳುತ್ತಾನೆ. ಆದ್ದರಿಂದ ವ್ಯಕ್ತಿ ತನ್ನ ಮನಸ್ಸಿನ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಅವರು ಕರ್ನಾಟಕದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನದ ಭಾಗವಾಗಿ ಶಿಶುಗಳಿಗೆ ಪೋಲಿಯೊ ಲಸಿಕೆ ಹನಿ ಹಾಕಿದರು. ವಿವಿಯ ನಿವೃತ್ತ ಕುಲಪತಿಗಳನ್ನು ಗೌರವಿಸಲಾಯಿತು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಆಂಧ್ರಪ್ರದೇಶದ ರಾಜ್ಯಪಾಲ ನ್ಯಾ.ಅಬ್ದುಲ್ ನಜೀರ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಡಾ. ಶರಣ್ ಪ್ರಕಾಶ್ ಪಾಟೀಲ್,ಯು.ಟಿ. ಖಾದರ್, ವಿವಿ ಕುಲಪತಿ ಡಾ. ಭಗವಾನ್ ಉಪಸ್ಥಿತರಿದ್ದರು.



ದೇಶಕ್ಕೆ ಮಾದರಿಯಾಗಬೇಕು ಕರ್ನಾಟಕ

ಸಾಮಾಜಿಕ ಕಳಂಕದಿಂದಾಗಿ ಪೋಷಕರು ತಮ್ಮ ಕುಟುಂಬಗಳಲ್ಲಿ ಮಾದಕ ವ್ಯಸನದ ಬಗ್ಗೆ ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ. ಈ ಪಿಡುಗನ್ನು ನಿರ್ಮೂಲನೆ ಮಾಡಲು ಇಚ್ಛಾಶಕ್ತಿ ಪ್ರಮುಖವಾಗಿದೆ. ವಿದ್ಯಾರ್ಥಿಗಳು ತಾವು ತೆಗೆದುಕೊಂಡ ಮಾದಕ ದ್ರವ್ಯ ವಿರೋಧಿ ಪ್ರತಿಜ್ಞೆಯನ್ನು ತಮ್ಮ ಗೆಳೆಯರು ಮತ್ತು ಸಮುದಾಯಗಳಿಗೆ ತಿಳಿಸಬೇಕು. ಜಾಗೃತಿ ವೈಯಕ್ತಿವಾಗಿ ಪ್ರಾರಂಭವಾಗಬೇಕು. ನಂತರ ಅದು ತರಗತಿ ಕೊಠಡಿಗಳು, ಕ್ಯಾಂಪಸ್‌ಗಳು, ನಗರಗಳು ಮತ್ತು ಜಿಲ್ಲೆಗಳಿಗೆ ವಿಸ್ತರಿಸಬೇಕು. ಅಂತಿಮವಾಗಿ ಮಾದಕವಸ್ತು ಮುಕ್ತ ಕರ್ನಾಟಕ ಮತ್ತು ಮಾದಕವಸ್ತು ಮುಕ್ತ ಭಾರತಕ್ಕೆ ಕಾರಣವಾಗಬೇಕು. ಕರ್ನಾಟಕ ಭಾರತಕ್ಕೆ ಮಾದರಿಯಾಗಬೇಕು ಎಂದರು.

> ಯುವಜನರನ್ನು ಆರೋಗ್ಯವಂತರಾಗಿ, ಜಾಗೃತರಾಗಿ ಹಾಗೂ ಮಾದಕ ವ್ಯಸನದಿಂದ ಮುಕ್ತರಾಗಿ ಬೆಳೆಸುವುದು ಸಮಾಜದ ಎಲ್ಲರ ಸಾಮೂಹಿಕ ಜವಾಬ್ದಾರಿಯಾಗಿದೆ.
> ■ ಥಾವರ್‌ಚಂದ್ ಗೆಹಲೋತ್, ರಾಜ್ಯಪಾಲ

> ಒಂದು ರಾಷ್ಟ್ರದ ಆರೋಗ್ಯ ವ್ಯವಸ್ಥೆ ಅದರ ಸಾಮಾಜಿಕ ನ್ಯಾಯದ ಬದ್ಧತೆಯನ್ನು ಪ್ರತಿಬಿಂಬಿಸುವ ಕನ್ನಡಿ.
> ■ ನ್ಯಾ. ಎಸ್. ಅಬ್ದುಲ್ ನಜೀರ್, ಆಂಧ್ರಪ್ರದೇಶದ ರಾಜ್ಯಪಾಲ

ಸಂಚಾರ ದಟ್ಟಣೆಗೆ ಮುಕ್ತಿ: ಸಿಎಂ ಡಿಕೆಶಿ

ಬೆಂಗಳೂರು: ಬೆಂಗಳೂರಿನ ಸಂಚಾರ ದಟ್ಟಣೆ ಮುಂದಿನ ದಿನಗಳಲ್ಲಿ ಬಗೆಹರಿಸುವುದೇ ನಮ್ಮ ಉದ್ದೇಶ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಮೇಖ್ರಿ ವೃತ್ತದಿಂದ ಹೆಬ್ಬಾಳ ಜಂಕ್ಷನ್ ವರೆಗೂ ಸುರಂಗ ರಸ್ತೆ ನಿರ್ಮಾಣಕ್ಕೆ ಹೆಬ್ಬಾಳ ಜಂಕ್ಷನ್‌ನಲ್ಲಿ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.



ಬೆಂಗಳೂರಿಗೆ ಹೆಬ್ಬಾಗಿಲಿನಂತೆ ಹೆಬ್ಬಾಳ ಆಗೋಗಿದೆ. ಹೆಬ್ಬಾಳ ಭಾಗದ ಸಂಚಾರ ದಟ್ಟಣೆಗೆ ಒಂದಷ್ಟು ಮುಕ್ತಿ ನೀಡಿದ್ದೇವೆ. 2.5 ಕಿಲೋ ಮೀಟರ್ ಉದ್ದದ ಕಟ್ ಅಂಡ್ ಕವರ್ ಟನಲ್ ಇದಾಗಿದ್ದು. ಇದು ಟೋಲ್ ಮುಕ್ತವಾಗಿರಲಿದೆ. ಬಿಡಿಎ ತಮ್ಮ ಸಂಪತ್ತು, ಹಣದ ಮೂಲಕ ಈ ಯೋಜನೆ ಕೈಗೆತ್ತಿಕೊಂಡಿದ್ದಾರೆ ಎಂದರು.

ಜನರ ಬದುಕಿನಲ್ಲಿ ಬದಲಾವಣೆ ತರಲು ಹುಮ್ಮಸ್ಸಿನಿಂದ ನಾವು ಕೆಲಸ ಮಾಡುತ್ತಿದ್ದೇವೆ. ಮುಂದಿನ 50 ವರ್ಷಕ್ಕೆ ಯೋಜನೆ ರೂಪಿಸುತ್ತಿದ್ದೇವೆ. ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಹೆಬ್ಬಾಳ ದಿಂದ ಮೇಲೆ ಕಾವೇರಿ ನೀರು ನೀಡಲು ಅನುಮತಿ ಇರಲಿಲ್ಲ. ಈ ಮೇಕೆದಾಟು ಯೋಜನೆಗೆ ಸಂಬಂಧ ಸುಪ್ರೀಂ ಕೋರ್ಟ್ ನಮ್ಮ ಪರವಾಗಿ ತೀರ್ಪು ನೀಡಿದೆ ಎಂದು ತಿಳಿಸಿದರು.

ಕಟ್ ಆ್ಯಂಡ್ ಕವರ್ ಟನಲ್ ಮಾಹಿತಿ

ಹೆಬ್ಬಾಳ ಜಂಕ್ಷನ್‌ನಿಂದ ಯುಎಎಸ್ ಸಿಬ್ಬಂದಿ ವಸತಿ ನಿಲಯದವರೆಗೆ 2.228 ಕಿಲೋ ಮೀಟರ್ ಉದ್ದ ಸುರಂಗ ರಸ್ತೆ ಇರಲಿದೆ. ಭೂಮಿಯ ಒಳಗೆ ಸುಮಾರು 60 ಅಡಿ ಆಳದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಅಂದಾಜು 1,139 ಕೋಟಿ ರೂ. ವೆಚ್ಚಮಾಡಲಾಗುತ್ತಿದೆ. 6 ಪಥದ ರಸ್ತೆ ಅಂದರೆ ತಲಾ ಒಂದು ಮಾರ್ಗದಲ್ಲಿ ತಲಾ 3.5 ಮೀಟರ್ ಅಗಲ ಇರಲಿದ್ದು, ಕೇವಲ 18 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಈ ಯೋಜನೆಗಾಗಿ ಯಾವುದೇ ಖಾಸಗಿ ಜಾಗವನ್ನು ಸ್ವಾಧೀನಪಡಿಸಿಕೊಳ್ಳದೆ ಇರುವುದು ವಿಶೇಷವಾಗಿದೆ.

ಬಿಜೆಪಿಗೆ ಅನುಕೂಲಕರ ರೀತಿ ಎಸ್‌ಐಆರ್ ಪ್ರಕ್ರಿಯೆ: ಯತೀಂದ್ರ



ಮೈಸೂರು: ಚುನಾವಣಾ ಆಯೋಗವು ಬಿಜೆಪಿಗೆ ಅನುಕೂಲ ಆಗುವ ರೀತಿಯಲ್ಲಿ ಎಸ್ ಐಆರ್ ಪ್ರಕ್ರಿಯೆ ನಡೆಸುತ್ತಿದೆ' ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು.

ಭಾನುವಾರ ಮೈಸೂರಿನ ಜೆ.ಕೆ.ಮೈದಾನದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಮೈಸೂರು ವಿಭಾಗೀಯ ಮಟ್ಟದ ಎಸ್ ಐಆರ್ ಜಾಗೃತಿ ಸಮಾವೇಶದಲ್ಲಿ ಪಾಲ್ಗೊಂಡು ಮಾತ ನಾಡಿ, ಚುನಾವಣಾ ಆಯೋಗ ಪಕ್ಷಪಾತವಿಲ್ಲದೆ ಕಾರ್ಯ ನಿರ್ವಹಿಸಬೇಕು. ಆಗ ಮಾತ್ರ ಪ್ರಜಾಪ್ರಭುತ್ವ ಉಳಿಯಲು ಸಾಧ್ಯ ಎಂದರು.

ಹಿಂದೆಲ್ಲ ಪರಿಷ್ಕರಣೆ ನಡೆದಾಗ ಮತದಾರ ರನ್ನು ಸೇರಿಸುತ್ತಿದ್ದರೆ ಹೊರತು, ಕೈಬಿಡುತ್ತಿರ ಲಿಲ್ಲ. ಮತದಾರರಲ್ಲಿ ದಾಖಲೆ ಕೇಳುತ್ತಿರಲಿಲ್ಲ. ಆದರೆ ಈಗ ಎಸ್ ಐಆರ್ ಜಾರಿ ಮಾಡಿ ದಾಖಲೆಗಳನ್ನು ಕೇಳುತ್ತಿದ್ದಾರೆ. ಮತದಾರರ ಪರಿಷ್ಕರಣೆಯಲ್ಲಿ ತಮಿಳುನಾಡು, ಬಿಹಾರದಲ್ಲಿ ಲಕ್ಷಾಂತರ ಮತದಾರರನ್ನು ಕೈಬಿಡಲಾಗಿದ್ದು, ಇಲ್ಲೆಲ್ಲ ಬಿಜೆಪಿಗೆ ಹೆಚ್ಚು ಲಾಭ ಆಗಿದೆ ಎಂದು ಆರೋಪಿಸಿದರು.

ಅರ್ಜಿಯಲ್ಲಿ ತಪ್ಪು ಮಾಹಿತಿ ಕೊಟ್ಟರೆ ಅವರ ಹೆಸರು ಅಂತಿಮ ಪಟ್ಟಿಯಲ್ಲಿ ಬರುವುದಿಲ್ಲ. ಪ್ರತಿ ಮತದಾರರು ಅರ್ಜಿ ತುಂಬಲು ನಮ್ಮ ಬಿಎಲ್ ಒಗಳು ಸಹಾಯ ಮಾಡಬೇಕು. ಮಾಹಿತಿ ಸರಿ ಇರುವುದನ್ನು ಖಾತ್ರಿಪಡಿಸಿ ಕೊಳ್ಳಬೇಕು. ಸ್ವಲ್ಪ ಎಚ್ಚರ ತಪ್ಪಿದಲ್ಲಿ ಮುಂದೆ ಕಾಂಗ್ರೆಸ್ ಗೆಲ್ಲುವುದು ಕಷ್ಟ ಆಗಲಿದೆ' ಎಂದರು. ಎಸ್ ಐ ಆರ್ ನಲ್ಲಿ ಹೆಸರು ಬಿಟ್ಟು ಹೋದರೆ ಪೌರತ್ವ ರದ್ದಾಗಬಹುದು. ಸರ್ಕಾರಿ ಸೌಲಭ್ಯಗಳು ಸ್ಥಿದೇ ಹೋಗಬಹುದು. ಹೀಗಾಗಿ ಪ್ರತಿಯೊಬ್ಬರು ಅಗತ್ಯ ದಾಖಲೆ ಒದಗಿಸಬೇಕು ಎಂದರು. ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್‌ಇದ್ದರು.

ಪ್ರಿಯಾಂಕ್ ಖರ್ಗೆ, ನಲಪಾಡ್‌ಗೆ ಸಮನ್ಸ್ ಜಾರಿ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ಅವಹೇಳನ ಹಾಗೂ ಮಾನಹಾನಿ ಆರೋಪದ ದೂರು ಸಂಬಂಧ ಗೃಹಸಚಿವ ಪ್ರಿಯಾಂಕ್ ಖರ್ಗೆ, ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್‌ಗೆ ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿದೆ.

ಆರ್‌ಎಸ್‌ಎಸ್ ಕಾರ್ಯಕರ್ತ ಎ.ತೇಜಸ್ ನೀಡಿದ ದೂರು ಕುರಿತು ವಿಚಾರಣೆ ನಡೆಸಿದ ನ್ಯಾಯಾಲಯವು, ಪ್ರಕರಣದಲ್ಲಿ ಮೊದಲ ಆರೋಪಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಶಾಸಕ ದಿನೇಶ್ ಗುಂಡೂರಾವ್ 2ನೇ ಆರೋಪಿ ಮತ್ತು ಯುವ ಕಾಂಗ್ರೆಸ್ ಮುಖಂಡ ನಲಪಾಡ್ ಮೂರನೇ ಆರೋಪಿಯಾಗಿದ್ದಾರೆ. ಇವರಲ್ಲಿ ಎರಡನೇ ಆರೋಪಿ ಶಾಸಕ ದಿನೇಶ್ ಗುಂಡೂರಾವ್ ಅವರ ವಿರುದ್ಧದ ಆರೋಪ ಕೈಬಿಡಲಾಗಿದೆ. ಉಳಿದಂತೆ ಮೊದಲ ಆರೋಪಿ ಪ್ರಿಯಾಂಕ್ ಖರ್ಗೆ ಹಾಗೂ 3ನೇ ಆರೋಪಿ ಮೊಹಮ್ಮದ್ ನಲಪಾಡ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಸೂಚಿಸಿ, ಸಮನ್ಸ್ ಜಾರಿಗೊಳಿಸಿದೆ.





ಪ್ರಕರಣದ ಹಿನ್ನಲೆ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ಅವಹೇಳನ ಹಾಗೂ ಮಾನಹಾನಿ ಆರೋಪದ ಸಂಬಂಧ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ವಿರುದ್ಧ ಆರ್‌ಎಸ್‌ಎಸ್ ಕಾರ್ಯಕರ್ತ ಎ.ತೇಜಸ್ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೂರು ನೀಡಿದ್ದರು.

ದೂರಿನಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಅ.4ರಂದು ಮುಖ್ಯ ಮಂತ್ರಿಗೆ ಪತ್ರ ಬರೆದು, ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ಹೇರ ಬೇಕು. ಆದರಲ್ಲೂ ಸರ್ಕಾರಿ ಶಾಲಾ, ಕಾಲೇಜಿನ ಮೈದಾನದಲ್ಲಿ ಬೈಠಕ್ ಹಾಗೂ ಇತರ ಚಟುವಟಿಕೆಗಳನ್ನು ಮಾಡದಂತೆ ನಿರ್ಬಂಧಿಸಬೇಕು ಎಂದು ಮನವಿ ಮಾಡಿದ್ದಾರೆ. ಸಂಘದವರು ಸಮಾಜದಲ್ಲಿ ಭಯದ ವಾತಾವರಣ ಉಂಟುಮಾಡುತ್ತಾರೆ, ಮಕ್ಕಳು ಮತ್ತು ಯುವಕರಲ್ಲಿ ನಕಾರಾತ್ಮಕ ಶಕ್ತಿ ತುಂಬು ತ್ತಾರೆ. ಸಂಘದವರು ಮೂಲಭೂತವಾದಿ ಸಿದ್ಧಾಂತ ಗಳನ್ನು ಹೊಂದಿದ್ದಾರೆ. ಆದರಿಂದ ಅವರ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರುವಂತೆ ಪತ್ರದಲ್ಲಿ ಪ್ರಿಯಾಂಕ್ ಖರ್ಗೆ ವಿನಂತಿ ಮಾಡಿಕೊಂಡಿದ್ದಾರೆ. ಬಳಿಕ ಆರ್‌ಎಸ್‌ಎಸ್ ಬಗ್ಗೆ ಎಕ್ಸ್ ಖಾತೆಯಲ್ಲಿ ಕೆಲ ಪೋಸ್ಟ್‌ಗಳನ್ನು ಮಾಡಿದ್ದಾರೆ ಎಂದು ಎ.ತೇಜಸ್ ಅವರು ದೂರಿದ್ದಾರೆ.

ಆರ್‌ಎಸ್‌ಎಸ್ ಚಡ್ಡಿ ಒಳಗೆ ಏನೂ ಇಲ್ಲ ಎಂದ ನಲಪಾಡ್: ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ಸಾಮಾಜಿಕ ಜಾಲತಾಣದಲ್ಲಿ ಮಾತನಾಡುವಾಗ ಆರ್‌ಎಸ್‌ಎಸ್‌ನವರಿಗೆ ಚಡ್ಡಿ ಒಳಗಡೆ ಏನೂ ಇಲ್ಲ ಎಂದು ಹೇಳಿದ್ದರು. ಆ ಮೂಲಕ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಶಾಸಕ ದಿನೇಶ್ ಗುಂಡೂರಾವ್ ಮತ್ತು ಯುವ ಕಾಂಗ್ರೆಸ್ ಮುಖಂಡ ನಲಪಾಡ್ ಆರ್‌ಎಸ್‌ಎಸ್ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಾಗೂ ಮಾಧ್ಯಮದಲ್ಲಿ ಅವಹೇಳನಕಾರಿ, ಮಾನಹಾನಿಕಾರಿ ಹಾಗೂ ಬೆದರಿಕೆವೊಡ್ಡುವ ರೀತಿ ಹೇಳಿಕೆಯನ್ನು ನೀಡಿದ್ದಾರೆ ಎಂದು ತೇಜಸ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಿಯಾಂಕ್ ಖರ್ಗೆ ಪೋಸ್ಟ್‌ಗೆ ಮರುಟ್ವೀಟ್

ಪ್ರಿಯಾಂಕ್ ಖರ್ಗೆ ಅವರ ಎಕ್ಸ್ ಖಾತೆಯ ಪೋಸ್ಟ್‌ಗಳನ್ನು ಅನುಸರಿಸಿ, ಶಾಸಕ ದಿನೇಶ್ ಗುಂಡೂರಾವ್ ತಮ್ಮ ಎಕ್ಸ್ ಖಾತೆಯಲ್ಲಿ, ಖರ್ಗೆ ಹಾಗೂ ಅವರ ಕುಟುಂಬದವರನ್ನು ಕೊಲ್ಲುವ ಬೆದರಿಕೆ ಹಾಕುತ್ತಿರುವ ಅಂಧಭಕ್ತರ ಮನಸ್ಥಿತಿ ಯಾವುದು? ಅದು ತಾಲಿಬಾನ್ ಮನಃಸ್ಥಿತಿಯಲ್ಲವೆ? ಆರ್‌ಎಸ್‌ಎಸ್ ಒಂದು ಜೀವಮುಖಿ ಸಂಘಟನೆಯಾಗಿದ್ದರೆ, ಯಾಕೆ ಆ ಸಂಘಟನೆಯ ಕಾರ್ಯಕರ್ತರು ಕೇವಲ ಜೀವ ತೆಗೆಯುವ ಮಾತಾಡುತ್ತಾರೆ? ಪಾನ್ಸೋರೆ, ಗೌರಿ ಲಂಕೇಶ್, ಕಲಬುರಗಿಯವರ ಹತ್ಯೆಯಲ್ಲಿ ಯಾಕೆ ನೇರವಾಗಿ ಭಾಗಿಯಾಗುತ್ತಾರೆ? ಗಾಂಧಿ ಕೊಂದ ಗೋಡ್ಸೆಯನ್ನು ಯಾಕೆ ಆರಾಧಿಸುತ್ತಾರೆ? ಎನ್ನುವ ಪೋಸ್ಟ್ ಹಾಕಿದ್ದರು.

ಎರಡು ಕಾರ್ಮಿಕ ಸಂಹಿತೆ ಸ್ವಾಗತಿಸಿದ ಭಾರತೀಯ ಮಜ್ದೂರ್ ಸಂಘ

ಕಾರ್ಮಿಕ ಅಧಿವೇಶನಕ್ಕೆ ಪವನ್‌ಕುಮಾರ್ ಒತ್ತಾಯ

ಬೆಂಗಳೂರು: ಹೊಸ ಕಾರ್ಮಿಕ ಸಂಹಿತೆಗಳಲ್ಲಿ ಎರಡನ್ನು ಭಾರತೀಯ ಮಜ್ದೂರ್ ಸಂಘ (ಬಿಎಂಎಸ್) ಸ್ವಾಗತಿಸಿದೆ. ಉಳಿದೆರಡು ಸಂಹಿತೆಗಳ ಕುರಿತಾಗಿರುವ ಕಳವಳ ಬಗೆಹರಿಸುವುದಕ್ಕೆ ತತ್‌ಕ್ಷಣವೇ ಭಾರತೀಯ ಕಾರ್ಮಿಕ ಸಮ್ಮೇಳನ(ಕಾರ್ಮಿಕ ಅಧಿವೇಶನ)ವನ್ನು ಕರೆಯಬೇಕು. ಇಲ್ಲದಿದ್ದರೆ ಜುಲೈ ಕೊನೆ ವಾರದಲ್ಲಿ ನಡೆಯುವ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಎಚ್ಚರಿಕೆ ನೀಡಿದೆ. ಭಾರತೀಯ ಮಜ್ದೂರ್ ಸಂಘದ ರಾಷ್ಟ್ರೀಯ ಉಪಾಧ್ಯಕ್ಷ ಮತ್ತು ಮಾಧ್ಯಮ ಉಸ್ತುವಾರಿ ಪವನ್‌ಕುಮಾರ್ ಈ ಕುರಿತು ಹೊಸದಿಗಂತದೊಂದಿಗೆ ಮಾತನಾಡಿದ್ದಾರೆ.

ಬಿಎಂಎಸ್ 1980ರಿಂದಲೇ ಕಾರ್ಮಿಕ ಕಾನೂನುಗಳ ಕುರಿತಾಗಿ ಹೋರಾಟ ಆರಂಭಿಸಿತ್ತು. 2001ರಲ್ಲಿ ಎರಡನೇ ಕಾರ್ಮಿಕ ಆಯೋಗದ ಅಧ್ಯಕ್ಷ ರವೀಂದ್ರ ವರ್ಮ ಅವರು ಒಂದು ಶಿಫಾರಸ್ಸು ಮಾಡಿದ್ದರು. ಪ್ರಸಕ್ತ ಇರುವ ಕಾರ್ಮಿಕ ಕಾನೂನುಗಳು ದೇಶದ ಶೇ.7 ಜನರನ್ನು ಮಾತ್ರ ಪ್ರತಿನಿಧಿಸುತ್ತವೆ. ಆದ್ದರಿಂದ ಅವುಗಳನ್ನು ಉಳಿದ ಶೇ.93ಜನ ಕಾರ್ಮಿಕರಿಗೂ ಹೊಂದಿಕೊಳ್ಳುವಂತೆ ಮಾಡಬೇಕೆಂದು ತಿಳಿಸಿದ್ದರು.

ಆದರೆ, 2001ರಿಂದ 2015ರವರೆಗೆ ಕೇಂದ್ರ ಸರ್ಕಾರಗಳು ಈ ಕುರಿತು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಪವನ್ ಕುಮಾರ್ ವಿವರಿಸಿದ್ದಾರೆ.

ಶತಮಾನದ ಹಿಂದಿನ ಕಾನೂನುಗಳ ವಿಲೀನ: 2015ರಲ್ಲಿ ಈಗಿನ ಸರ್ಕಾರವು ಮಾತುಕತೆಯನ್ನು ಆರಂಭಿಸಿತು. ದೇಶದಲ್ಲಿರುವ 44 ಕಾರ್ಮಿಕ ಸಂಹಿತೆಗಳನ್ನು ಬಹಳ ಹಿಂದೆಯೇ ಮಾಡಲಾಗಿತ್ತು. ಮೊದಲ ಕಾನೂನು 1923ರಲ್ಲಿ ರಚಿಸಲಾಯಿತು, 1926ರಲ್ಲಿ ಎರಡನೇ ಕಾನೂನು ಮಾಡಲಾಯಿತು. 1923ರ ಕಾನೂನು ಇವತ್ತಿಗೂ ನಡೆಯುತ್ತದೆಯೇ ಎನ್ನುವ ಪ್ರಶ್ನೆಯಿತ್ತು. ತರುವಾಯ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರಚಿಸಿತು. ಚಾಲ್ತಿಯಲ್ಲಿರುವ 29 ಕಾನೂನುಗಳನ್ನು ಇವುಗಳಲ್ಲಿ ವಿಲೀನಗೊಳಿಸಿತು. ಕೆಲವು ಕಾನೂನುಗಳು ಜಿಎಸ್‌ಟಿ ಅನುಷ್ಠಾನಕ್ಕೆ ಬಂದಾಗ ಅದರಲ್ಲಿ ವಿಲೀನವಾಗಿವೆ ಎಂದು ತಿಳಿಸಿದ್ದಾರೆ.

ಹೊಸ ಕಾರ್ಮಿಕ ಸಂಹಿತೆಗಳಾದ ವೇತನ ಸಂಹಿತೆ 2019, ಕೈಗಾರಿಕಾ ಸಂಬಂಧ ಸಂಹಿತೆ 2020, ಸಾಮಾಜಿಕ ಭದ್ರತೆ ಸಂಹಿತೆ 2020 ಹಾಗೂ ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ 2020 ಕಳೆದ ವರ್ಷದಿಂದ ಜಾರಿಗೆ ಬಂದಿವೆ. ಈ ಪೈಕಿ ವೇತನ ಸಂಹಿತೆ 2019 ಮತ್ತು ಸಾಮಾಜಿಕ ಭದ್ರತಾ ಸಂಹಿತೆ 2020 ಅನ್ನು ಬಿಎಂಎಸ್ ಸ್ವಾಗತಿಸಿದೆ. ಯಾಕೆಂದರೆ, ದೇಶದಲ್ಲೀಗ ಪ್ರತಿಯೊಬ್ಬ ಕಾರ್ಮಿಕನೂ ಕನಿಷ್ಠ ವೇತನದ ವ್ಯಾಪ್ತಿಗೆ ಬರುತ್ತಾನೆ.


ಜತೆಗೆ ಪ್ರತೀ ಐದು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಈ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕೆಂದು ಕೇಂದ್ರ ಸರ್ಕಾರ ಹೇಳಿದೆ. ಕೇಂದ್ರ ಸರ್ಕಾರ ಕನಿಷ್ಠ ವೇತನ ಪರಿಷ್ಕರಿಸುವಾಗ ರಾಜ್ಯ ಸರ್ಕಾರಗಳೂ ಅದನ್ನು ಪರಿಷ್ಕರಿಸಲೇ ಬೇಕಾಗುತ್ತವೆ ಎಂದು ಹೇಳಿದ್ದಾರೆ. ಅದೇ ರೀತಿ ಸಾಮಾಜಿಕ ಭದ್ರತಾ ಸಂಹಿತೆಯಲ್ಲಿ ಇಎಸ್‌ಐಯಲ್ಲಿ ವ್ಯಾಪಕ ಬದಲಾವಣೆಗಳಾಗಿವೆ. ಮೊದಲು ಕೇವಲ ಉತ್ಪಾದನಾ ವಲಯದಲ್ಲಿ 10 ಜನ ಕಾರ್ಮಿಕರಿದ್ದರೆ ಅನ್ವಯವಾಗುತ್ತಿತ್ತು. ಈಗ ಉತ್ಪಾದನಾ, ಸ್ಥಾಪನಾ (ಎಸ್ಟಾಬ್ಲಿಷ್ಮೆಂಟ್) ವಲಯಗಳಲ್ಲಿಯೂ ಅನ್ವಯವಾಗುತ್ತದೆ. ಅಂದರೆ, ಶಾಲಾ-ಕಾಲೇಜು, ಚಾರಿಟೇಬಲ್ ಸಂಸ್ಥೆ, ಮಾಲ್ ಸಹಿತ ಎಲ್ಲಾ ಕಡೆಗಳಲ್ಲಿ ಇದು ಅನ್ವಯಿಸುತ್ತದೆ. ಮೊದಲು ಭೌಗೋಳಿಕ ಪ್ರದೇಶವನ್ನು ಸರ್ಕಾರ ನಿಗದಿಪಡಿಸುತ್ತಿತ್ತು. ಈಗ ಇದು ಇಡೀ ದೇಶ ವ್ಯಾಪಿಯಾಗಿದೆ ಎಂದು ತಿಳಿಸಿದ್ದಾರೆ.

ಸಂಹಿತೆಯಲ್ಲಿ ಒಳಗೊಂಡಿವೆ ಎಲ್ಲ ವಿಧದ ಮಾಧ್ಯಮ

ಈವರೆಗೆ ಮುದ್ರಣ ಮಾಧ್ಯಮಕ್ಕೆ ಸಂಬಂಧಿಸಿ ಮಾತ್ರ ಎರಡು ಕಾಯ್ದೆಗಳಿದ್ದವು. ವಿದ್ಯುನ್ಮಾನ ಮಾಧ್ಯಮ, ಡಿಜಿಟಲ್ ಮೊದಲಾದ ಮಾಧ್ಯಮಗಳ ನೌಕರರು ಯಾವುದೇ ಕಾಯ್ದೆಗಳ ವ್ಯಾಪ್ತಿಗೆ ಬರುತ್ತಿರಲಿಲ್ಲ. ಈಗ ಹೊಸ ಕಾರ್ಮಿಕ ಸಂಹಿತೆಗಳಲ್ಲಿ ಎಲ್ಲಾ ಪ್ರಕಾರದ ಮಾಧ್ಯಮಗಳು ಒಳಗೊಂಡಿವೆ. ಭವಿಷ್ಯದಲ್ಲಿ ಮಾಧ್ಯಮ ಜಗತ್ತಿನಲ್ಲಿ ಯಾವ ಬದಲಾವಣೆಯಾಗುತ್ತದೆ ಎಂಬುದು ಗೊತ್ತಿಲ್ಲದೇ ಇರುವುದರಿಂದ ಬಹಳ ಒತ್ತಡದ ಬಳಿಕ ಇತರೆ ಮಾಧ್ಯಮ ಎಂಬುದನ್ನೂ ಸೇರಿಸಲಾಗಿದೆ. ಆದ್ದರಿಂದ ಈಗ ಎಲ್ಲ ರೀತಿಯ ಮಾಧ್ಯಮಗಳಲ್ಲಿ ದುಡಿಯುವ ನೌಕರರು ಕಾನೂನು ಚೌಕಟ್ಟಿನೊಳಗೆ ಬಂದಿದ್ದಾರೆ ಎಂದು ಪವನ್ ಕುಮಾರ್ ತಿಳಿಸಿದ್ದಾರೆ.

ನನ್ನ ಬೆಂಬಲದಿಂದಲೇ ಎಚ್‌ಡಿಕೆ 2 ಬಾರಿ ಸಿಎಂ ಆಗಿದ್ದು: ಶಾಸಕ ಜಿಟಿಡಿ

ಮೈಸೂರು: ನನ್ನ ಬೆಂಬಲದಿಂದಲೇ ಎಚ್.ಡಿ.ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿಯಾದದ್ದು ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.



ಜಿ.ಟಿ. ದೇವೇಗೌಡರು ಎರಡೂ ಕಾಲನ್ನೂ ಜೆಡಿಎಸ್‌ನಿಂದ ಹೊರಗಿಟ್ಟಿದ್ದಾರೆ ಎಂಬ ಎಚ್.ಡಿ.ಕುಮಾರಸ್ವಾಮಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ, ಎಚ್.ಡಿ.ಕುಮಾರಸ್ವಾಮಿ ನನ್ನ ಬಗ್ಗೆ ಏನು ಹೇಳಿದ್ದಾರೆಯೋ ಗೊತ್ತಿಲ್ಲ. ಆದರೆ, ನಾನು ಸಚಿವನಾಗುವುದಕ್ಕೆ ಅವರೂ ಸಹಾಯ ಮಾಡಿದ್ದಾರೆ. ಕುಮಾರಪರ್ವ ಸಮಾವೇಶ ಮಾಡಿದ್ದು ಚಾಮುಂಡೇಶ್ವರಿ ಜನ ಮಾತ್ರ, ಬೇರಾವ ಕ್ಷೇತ್ರದಲ್ಲೂ ಇಲ್ಲಿಯಂತೆ ದೊಡ್ಡಮಟ್ಟದಲ್ಲಿ ನಡೆದಿಲ್ಲ ಎಂದರು.

ಕುಮಾರಸ್ವಾಮಿ ಅವರಿಗೆ ರಾಜ್ಯದಲ್ಲಿ ಪಕ್ಷ ಕಟ್ಟಲು ಶಕ್ತಿ ಇದೆ. ಜೆಡಿಎಸ್ ಉಳಿಸುವ ಕೆಲಸ ಅವರು ಮಾಡುತ್ತಾರೆ. ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಯಷ್ಟೇ ನನ್ನ ಗುರಿ. ಬೇರೆ ರಾಜಕಾರಣ ನನಗೆ ಗೊತ್ತಿಲ್ಲ. ಆ ಕಾರಣದಿಂದಲೇ ಜನರು ನನ್ನನ್ನು ಗೆಲ್ಲಿಸಿದ್ದಾರೆ. ನನ್ನ ಜನ ಗಟ್ಟಿ ಇದ್ದಾರೆ, ನನ್ನ ಜತೆ ಸದಾ ನಿಲ್ಲುತ್ತಾರೆ.

ಹಾಗಾಗಿಯೇ 2028ರ ಚುನಾವಣೆಯಲ್ಲೂ ನೀವೇ ಸ್ಪರ್ಧಿಸಬೇಕು, ನಿಮ್ಮ ಜತೆ ನಾವು ಇರುತ್ತೇವೆ ಎನ್ನುತ್ತಿದ್ದಾರೆ. ಜನರು ಏನು ಹೇಳುತ್ತಾರೆಯೋ ಅದನ್ನೇ ಮಾಡುತ್ತಾರೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟದಲ್ಲಿ ನಾನು ಆಗಿನ ಸಿಎಂ ಸಿದ್ದರಾಮಯ್ಯ ಅವರ ಪರವಾಗಿ ಮಾತನಾಡಿದ್ದಕ್ಕೆ, ಕಾಂಗ್ರೆಸ್‌ಗೆ ಹೋಗುತ್ತಾರೆ ಎಂದು ಕೆಲವರು ಹೇಳಿದ್ದರು. ನಾನು ಆ ಪಕ್ಷಕ್ಕೆ ಹೋಗಿದ್ದೇನೆಯೇ? ಡಿ.ಕೆ. ಶಿವಕುಮಾರ್ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿಲ್ಲ, ಚರ್ಚಿಸಿಯೂ ಇಲ್ಲ. ಎಲ್ಲ ಕ್ಷೇತ್ರಗಳಂತೆಯೇ ನನ್ನ ಕ್ಷೇತ್ರದ ಅಭಿವೃದ್ಧಿಗೂ 25 ಕೋಟಿ ರೂ. ಅನುದಾನ ಸರ್ಕಾರ ನೀಡಿದೆ ಎಂದರು.

ಸಂಪಾದಕೀಯ

ಜಲ ಕ್ಷಾಮ: ಬೇಕಿದೆ ಸಮನ್ವಿತ ದೃಷ್ಟಿ

ರಾಜ್ಯದಲ್ಲಿ ಮುಂಗಾರು ಕ್ಷೀಣಗೊಂಡಿದೆ. ಬರಗಾಲದ ಮಾತನ್ನೂ ಜನರಾಡುತ್ತಿದ್ದಾರೆ. ಇನ್ನೊಂದೆಡೆ ಮುಂಬರುವ ದಿನಗಳಲ್ಲಿ ಅಂತರ್ ರಾಜ್ಯ ಜಲ ವಿವಾದಗಳು ಹೊತ್ತಿಕೊಳ್ಳಬಹುದೇ ಎಂದು ರಾಜಕೀಯ ವಿಶ್ಲೇಷಕರು ಚರ್ಚಿಸುತ್ತಿದ್ದಾರೆ. ಇದರ ನಡುವೆ ರಾಜ್ಯಕ್ಕೆ ಆಗಮಿಸಿದ್ದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರ ಪಂಚಾಯಿತಿಮುಖಿ ಮಾತುಗಳು, ಮಳೆ ಕೊರತೆ, ಮೇಕೆದಾಟು ಚರ್ಚೆ ಮತ್ತು ಕೆಂಪೇಗೌಡ ಜಯಂತಿಯ ದಿನ ನಡೆದ ವೃಕ್ಷಾರೋಪಣೆಯಂತಹ ಘಟನೆಗಳನ್ನು ಒಟ್ಟಿಗೆ ನೋಡಿದರೆ ಇದು ಕೇವಲ ನೀರಿನ ವಿವಾದವಾಗಿರದೆ ಪರಿಸರ, ರಾಜಕೀಯ ಮತ್ತು ಅಭಿವೃದ್ಧಿ ಮಾದರಿಯ ಕುರಿತ ದೊಡ್ಡ ಚರ್ಚೆ ಎಂಬುದು ಸ್ಪಷ್ಟವಾಗುತ್ತದೆ.



ಕರ್ನಾಟಕದಲ್ಲಿ ಈ ಬಾರಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಆಗದಿರುವುದು ನಾಡಿನ ಜಲ ಹಂಚಿಕೆ ಕುರಿತ ಒತ್ತಡವನ್ನು ಇನ್ನಷ್ಟು ಹೆಚ್ಚಿಸಿದೆ. ಇಂತಹ ಸಂದರ್ಭದಲ್ಲಿ ಜಲಾಶಯಗಳ ತುಂಬುವಿಕೆ, ಕೃಷಿ ಅಗತ್ಯ, ನಗರ ನೀರು ಪೂರೈಕೆ ಮತ್ತು ಕುಡಿಯುವ ನೀರಿನ ಭದ್ರತೆ ದೊಡ್ಡ ಪ್ರಶ್ನೆಯಾಗಿ ಎದ್ದುನಿಂತಿದೆ. ಎರಡೂ ರಾಜ್ಯಗಳಲ್ಲೂ ನೀರು ಈಗ ಕೇವಲ ಸಂಪನ್ಮೂಲಕ್ಕೆ ಬದಲಾಗಿ ಹಕ್ಕಿನ ಪ್ರಶ್ನೆಯಾಗಿ, ರಾಜಕೀಯ ಶಕ್ತಿಯ, ಕೃಷಿ ಬದುಕಿನ ಮತ್ತು ಸಾರ್ವಜನಿಕ ಭಾವನೆಯ ಕೇಂದ್ರವಾಗಿದೆ. ಮೇಕೆದಾಟು ವಿಷಯವೂ ಈ ವಿಸ್ತೃತ ಹಿನ್ನೆಲೆಯ ಭಾಗವೇ. ಆದ್ದರಿಂದ ಈ ಯೋಜನೆಗೆ ಸಂಬಂಧಿಸಿದ ಚರ್ಚೆಗಳಲ್ಲಿ ತಾಂತ್ರಿಕ ವಿಚಾರಗಳ ಜೊತೆಗೆ ಅಂತರರಾಜ್ಯ ಭರವಸೆ, ನ್ಯಾಯಾಧಿಕಾರ ಮತ್ತು ವಿಶ್ವಾಸ ನಿರ್ಮಾಣವೂ ಮುಖ್ಯವಾಗುತ್ತದೆ. ನದಿ ಜೋಡಣೆ ಅಥವಾ ಜಲಸಂಗ್ರಹ ಯೋಜನೆಗಳನ್ನು ಕೇವಲ ರಾಜಕೀಯ ಘೋಷಣೆಯಾಗಿ ನೋಡದೆ, ಪರಿಸರ ಪರಿಣಾಮ ಮತ್ತು ದ್ವಿಪಕ್ಷ ರಾಜ್ಯಗಳ ಹಿತಾಸಕ್ತಿಯನ್ನಾಗಿ ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ಕೆಂಪೇಗೌಡರ ಜಯಂತಿಯ ದಿನ ಕರ್ನಾಟಕದಲ್ಲಿ ದಾಖಲೆ ಪ್ರಮಾಣದಲ್ಲಿ ಗಿಡ ನೆಡುವ ಕ್ರಮವು ಈ ಹಿನ್ನೆಲೆಯಲ್ಲಿ ಗಮನಾರ್ಹ. ಇದು ರಾಜ್ಯದೊಳಗಿನ ನೀರು-ಮಣ್ಣು-ಮರದ ಸಂಬಂಧವನ್ನು ನೆನಪಿಸುವ ಸಂಕೇತಾತ್ಮಕ ಕ್ರಮ. ನೀರಿನ ಸಮಸ್ಯೆಗೆ ಕೇವಲ ಜಲವಿತರಣೆ ಮೂಲಕ ಪರಿಹಾರ ಹುಡುಕುವುದಕ್ಕಿಂತ ಅರಣ್ಯ ವೃದ್ಧಿ, ಮಣ್ಣಿನ ತೇವಾಂಶ ಸಂರಕ್ಷಣೆ, ಕೆರೆ ಪುನರುಜ್ಜೀವನ ಮತ್ತು ಜಲಸಂಗ್ರಹಣೆಗಳಂತಹ ಪರಿಸರಾಧಾರಿತ ಕ್ರಮಗಳು ದೀರ್ಘಕಾಲೀನ ಪರಿಹಾರ ನೀಡಬಲ್ಲವು. ಕಾವೇರಿ, ಮಳೆ, ಅರಣ್ಯ, ನಗರೀಕರಣ, ಮತ್ತು ಕೃಷಿ-ಇವೆಲ್ಲವೂ ಒಂದಕ್ಕೊಂದು ಪೂರಕವಾಗಬೇಕಾಗಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಒಂದು ರಾಜ್ಯದ ತಾತ್ಕಾಲಿಕ ಪರಿಹಾರ ಇನ್ನೊಂದು ರಾಜ್ಯದಲ್ಲಿ ಅಸ್ಥಿರತೆಯನ್ನು ಉಂಟುಮಾಡಬಾರದು. ಆದ್ದರಿಂದ ರಾಜಕೀಯ ಹೇಳಿಕೆಗಳಿಗಿಂತ ದತ್ತಾಂಶ ಆಧಾರಿತ ಸಂವಾದ, ಪರಿಸರ ಸಂವೇದನಾಶೀಲ ಯೋಜನೆ ಮತ್ತು ಸಹಕಾರದ ಒಪ್ಪಂದಗಳು ಅಗತ್ಯ. ಮಹತ್ವದ ಸಂದೇಶ ನೀಡಲು ಮಹಾಪುರುಷರ ದಿನವೊಂದು ಉತ್ತಮ ವೇದಿಕೆಯಾಗಿ ಬಳಕೆಯಾಗಿದ್ದು ಉತ್ತಮ ಬೆಳವಣಿಗೆ. ಗಿಡಗಳನ್ನು ನೆಟ್ಟಷ್ಟೇ ಅವುಗಳ ರಕ್ಷಣೆಯೂ ಕ್ರಮವಾಗಬೇಕು. ಏಕೆಂದರೆ ಪರಿಸರ ಕಾಳಜಿಯಿಂದ ಮಾತ್ರ ಬೆಳೆಯುತ್ತದೆ. ಈಗ ಅಗತ್ಯವಿರುವುದು ಸಂಘರ್ಷದ ಭಾಷೆಯಲ್ಲ, ಸಹಕಾರದ ರಾಜಕೀಯ ಮತ್ತು ಪರಿಸರದ ದೂರದೃಷ್ಟಿ.

ಕೇಪ್ ವರ್ಡೆಯೆಂಬ ಪುಟ್ಟ ರಾಷ್ಟ್ರದ ದೊಡ್ಡ ಹೆಜ್ಜೆ

ಕೇಪ್ ವರ್ಡೆ ಎಂಬ ಅತಿಪುಟ್ಟ ರಾಷ್ಟ್ರ ಈ ಬಾರಿಯ ವಿಶ್ವಕಪ್ ಫುಟ್ಬಾಲಿನಲ್ಲಿ ನೀಡುತ್ತಿರುವ ನಿರ್ವಹಣೆಯು ಎಲ್ಲರ ಗಮನ ಸೆಳೆದಿದೆ. ಇದರ ಹಿಂದೆ ಸಾಕಷ್ಟು ಪರಿಶ್ರಮವೂ ಇದೆ.

ಪೃಥ್ವಿರಾಜ್ ಕುಲಕರ್ಣಿ



ಅದು 1456ರ ಇಸವಿ. ಪೋರ್ಚುಗಲ್ ನಾವಿಕರು ಅಂಟ್ಲಾಟಿಕ್ ಸಾಗರದಲ್ಲಿ ಮೀನುಗಾರಿಕೆ ಮಾಡುತ್ತಿದ್ದರು. ದೀರ್ಘಕಾಲದ ಸಮುದ್ರಯಾನದ ದಣಿವಿನಿಂದ ದಡ ಹುಡುಕ್ತಿದ್ದವರಿಗೆ ಒಂದು ದಿನ ದ್ವೀಪವೊಂದು ಗೋಚರವಾಯಿತು. ಮೀನುಗಾರರು ಕೆಲಕಾಲ ದಣಿವಾರಿಸಿ ಅಲ್ಲಿಂದ ಮರಳಿದರು. ಆದರೆ ಆ ದ್ವೀಪದ ಗುಂಗು ಅವರಿಂದ ಮರೆಯಾಗಲಿಲ್ಲ. ದ್ವೀಪದ ಸೌಂದರ್ಯವನ್ನು ನಾವಿಕರು ತಾವು ತೆರಳಿದಲ್ಲೆಲ್ಲಾ ಹೊಗಳಲಾರಂಭಿಸಿದರು. ಆಫ್ರಿಕಾದಿಂದ 600 ಕಿ.ಮೀ. ದೂರದಲ್ಲಿದ್ದ ಆ ದ್ವೀಪದ ಖ್ಯಾತಿ ಯುರೋಪ್ ಮತ್ತು ಅಮೆರಿಕದಂಥ ದೇಶಗಳಿಗೂ ಹರಡಿ ಅವರ ಕಣ್ಣುಗಳೂ ಹಿಗ್ಗಿದವು. ಹೀಗಾಗಿ ಆ ಪುಟ್ಟ ದ್ವೀಪ ಭೌಗೋಳಿಕ ವಸಾಹತು ಆಗಿ ಬೆಳೆಯಲು ತುಂಬಾ ವರ್ಷಗಳೇನು ಬೇಕಾಗಲಿಲ್ಲ. 1462ರಲ್ಲಿ ಈ ದ್ವೀಪ ಪೋರ್ಚುಗೀಸರ ಅಧಿಕೃತ ವಸಾಹತು ಆಗಿ ಬದಲಾಯಿತು. ದಿನಕಳೆದಂತೆ ದ್ವೀಪದ ವ್ಯಾಪಾರ ಹೆಚ್ಚಿತು. ಮಾಫಿಯಾ ಜನರ ಕಣ್ಣು ಗುಲಾಮ ವ್ಯಾಪಾರದ ಮೇಲೆ ಬಿತ್ತು. ದ್ವೀಪ ಗುಲಾಮರ ವ್ಯಾಪಾರಕೇಂದ್ರವಾಯಿತು. ಎಲ್ಲಾ ಅನಿಶ್ಚಿತತೆ, ಅವ್ಯವಸ್ಥೆಗಳು ಅಲ್ಲಿ ನಡೆದವು. ಮುಂದೊಂದು ದಿನ ಅಲ್ಲಿ ಸ್ವಾತಂತ್ರ್ಯ ಚಳುವಳಿಗಳಾದವು. 1975ರಲ್ಲಿ ದೇಶ ಸ್ವತಂತ್ರಗೊಂಡಿತು. ಮುಂದೆ ಆ ಪುಟ್ಟ ದ್ವೀಪದಲ್ಲಿ ಮಹತ್ವದ್ದೇನೂ ಸಂಭವಿಸಲಿಲ್ಲ. ಆದರೆ ಇಂದು ಆ ದ್ವೀಪವನ್ನು ಇಡೀ ವಿಶ್ವ ಕೊಂಡಾಡುತ್ತಿದೆ. ಆ ದ್ವೀಪ ಕೂಡ 15ನೇ ಶತಮಾನದ ಪೋರ್ಚುಗೀಸ್ ನಾವಿಕರನ್ನು, ಸ್ವಾತಂತ್ರ್ಯ ಕೊಡಿಸಿದ ಜನರನ್ನು ಕೊಂಡಾಡುತ್ತಿದೆ. ಹೆಸರೇ ಗೊತ್ತಿರದಿದ್ದ ದ್ವೀಪರಾಷ್ಟ್ರವೊಂದರ ಚರಿತ್ರೆಯನ್ನು ವಿಶ್ವ ಅರಸುತ್ತಿದೆ.

ಆ ದ್ವೀಪರಾಷ್ಟ್ರದ ಹೆಸರು ಕೇಪ್ ವರ್ಡೆ.

ಕೇಪ್ ವರ್ಡೆ ಹೆಸರನ್ನು ಬಹಳಷ್ಟು ಜನರು ಮೊದಲ ಬಾರಿಗೆ ಕೇಳಿದ್ದು ಕಳೆದ ಹದಿನೈದು ದಿನಗಳ ಹಿಂದೆಯಷ್ಟೆ. ಪುಟ್ಟ ದ್ವೀಪದ ಜನಸಂಖ್ಯೆ ಕೇವಲ 6 ಲಕ್ಷ. ಭೂ ವಿಸ್ತಾರ ಕೂಡ ಕಡಿಮೆ. ಆದರೆ ವಿಶ್ವದ ಶಕ್ತಿಯುತ ಮತ್ತು ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳೇ ಮಾಡಲಾಗದ ದಾಖಲೆಗಳನ್ನು ಆ ದೇಶ ಫಿಫಾ ವಿಶ್ವಕಪ್‌ನಲ್ಲಿ ಮಾಡುತ್ತಿದೆ. ವಿಶ್ವದ ಹಲವಾರು ರಾಷ್ಟ್ರಗಳು ಫಿಫಾ ವಿಶ್ವಕಪ್‌ಗೆ ಅರ್ಹತೆ ಗಿಟ್ಟಿಸಿಕೊಂಡಾಗ, ಇನ್ನು ಕೆಲವು ಫೈನಲಿಗೇರಿದಾಗ ವಿಶ್ವ ಹುಬ್ಬೇರಿಸುತ್ತದೆ. ಕೇಪ್ ವರ್ಡೆ ಕೂಡ ಆ ಸಾಲಿನಲ್ಲಿ ಬರುವ ದೇಶ. ಅಷ್ಟಕ್ಕೂ ಅದು ವಿಶ್ವ ಕಪ್‌ನಲ್ಲಿ ಮಾಡಿದ್ದೇನು? ಪ್ರವೇಶ ಗಿಟ್ಟಿಸಿಕೊಂಡಿದ್ದರ ಜೊತೆಗೆ ಉತ್ತಮ ಪ್ರದರ್ಶನ ನೀಡುತ್ತಿರುವುದು. ಆದರ ಹಿಂದಿನ ಕತೆ ರೋಚಕ. ವಿಶ್ವಕ್ಕೆ ಮಾದರಿ.

2000ದ ನಂತರವಷ್ಟೆ ಮೊಟ್ಟ ಮೊದಲ ಟರ್ಫ್ ಕ್ರೀಡಾಂಗಣವನ್ನು ಕಂಡ ಕೇಪ್ ವರ್ಡೆ, ಈ ಪರಿಯಲ್ಲಿ ವಿಶ್ವಕಪ್‌ನಲ್ಲಿ ಮಿಂಚುತ್ತಿದೆಯಲ್ಲಾ ಎಂಬ ಸಂಗತಿಯೂ ಫುಟ್‌ಬಾಲ್ ಪ್ರೇಮಿಗೆ ಕಾಡಲೇಬೇಕು. 6 ಲಕ್ಷ ಜನಸಂಖ್ಯೆ ಉಳ್ಳ ದೇಶ ಮಾಡಿದ ಸಾಧನೆ ನಮಗಂತೂ ಮುಜುಗರ ತರುತ್ತದೆ. ಮೈದಾನದಲ್ಲಿ ಮಿಂಚುವ ಕ್ರೀಡಾಪಟುಗಳಷ್ಟೇ ಮುಖ್ಯ ಎಂದ ಧೋರಣೆ ಕ್ರೀಡೆಯಲ್ಲಿದೆ. ಕೇಪ್ ವರ್ಡೆ ಅದನ್ನು ಸುಳ್ಳು ಮಾಡಿದೆ. 1975ರಲ್ಲಿ ಸ್ವಾತಂತ್ರ್ಯ ಸಿಕ್ಕಾಗ ಕೇಪ್ ವರ್ಡೆಯಲ್ಲಿ ಜನರೇ ಉಳಿದಿರಲಿಲ್ಲ. ಏಕೆಂದರೆ ಬದುಕಲು ಅಲ್ಲಿ ಏನೂ ಇರಲಿಲ್ಲ. ಜನ ಬದುಕು ಕಟ್ಟಿಕೊಳ್ಳಲು ವಲಸೆ ಹೋಗತೊಡಗಿದರು. ಆದರೆ ಆಲ್ಲೊಬ್ಬನಿಗೆ ಫುಟ್‌ಬಾಲ್ ತಂಡ ಕಟ್ಟುವ ಹುಚ್ಚು ಹತ್ತಿತು. ಅವನ ಹೆಸರು ಆಲೆಕ್ಸಾಂಡರ್ ಅಲಾಹಿನೋ. ಹಿಂದುಳಿದ ದೇಶದಲ್ಲಿ ಫುಟ್‌ಬಾಲ್‌ನ ಸಂಚಲನ ಮೂಡಿಸಿ ತಂಡ ಕಟ್ಟುವುದೆಂದರೆ ಅದು ಸಾಮಾನ್ಯ ಸಂಗತಿಯಾಗಿರಲಿಲ್ಲ. ಅಂತಹ ದುಸ್ಸಾಹಸಕ್ಕೆ ಕೈಹಾಕಿದ ಆಲೆಕ್ಸಾಂಡರ್ ಮೊದಲು ಅರಿವು ಮೂಡಿಸುವ ಕೆಲಸ ಮಾಡತೊಡಗಿದ. ಜಗತ್ತಿನಲ್ಲಿ ಫುಟ್‌ಬಾಲ್‌ಗೆ ದೊಡ್ಡ ವೇದಿಕೆಯಿದೆ,ನಮ್ಮ ಯುವಕರು ಅಲ್ಲಿಗೆ ಹೋದರೆ ಸಾಕಷ್ಟು ಹೆಸರಾಗುತ್ತದೆ ಎಂದು ಜನರಿಗೆ ಹೇಳತೊಡಗಿದ. ಆದರೆ ದೇಶದಲ್ಲಿ ಫುಟ್‌ಬಾಲ್ ಕ್ರೀಡಾಂಗಣವೇ ಇಲ್ಲ. ಅದಕ್ಕೂ ಹೆಚ್ಚಾಗಿ ಆಟಗಾರರೇ ಇಲ್ಲ! ಮಾಡುವುದಾದರೂ ಏನು? ಇದೆಲ್ಲಾ ಅಸಾಧ್ಯದ ಮಾತು ಎಂದೆಲ್ಲಾ ಮಾತುಗಳು ಕೇಳಿಬರಲು ಹೆಚ್ಚು ಸಮಯ ಬೇಕಾಗಲೇ ಇಲ್ಲ. ಆದರೆ ಆಲೆಕ್ಸಾಂಡರ್ ಸುಮ್ಮನೆ ಕೂರಲಿಲ್ಲ. ಕೇಪ್ ವರ್ಡೆಯ ಹಳ್ಳಿಗಳಿಗೆ ಪ್ರಯಾಣಿಸಿ ಮನೆಮನೆಯಿಂದ ಆಟಗಾರರನ್ನು ಕರೆ ತಂದ. ವಲಸೆ ಹೋದ ಯುವಕರನ್ನು ಮರಳಿ ಕರೆಸಿದ. ಅಲ್ಲಿಂದ ದ್ವೀಪದಲ್ಲಿ ಪವಾಡವೇ ನಡೆಯಿತು. ಫುಟ್‌ಬಾಲ್ ಕ್ಷೇತ್ರದಲ್ಲಿ ಹೊಸ ನಿಯಮಗಳು, ಹೊಸ ಆಟಗಾರರು, ಹೊಸ ತಾಲಿಮುಗಳು ಹುಟ್ಟುತ್ತಿರುವಾಗಲೇ ಕೇಪ್ ವರ್ಡೆಯಲ್ಲಿ ತಂಡವೊಂದು ಸಿದ್ಧವಾಗುತ್ತಿತ್ತು. 2000ರ ಸುಮಾರಿಗೆ ಮೊದಲ ಟರ್ಫ್ ಕಂಡ ಕೇಪ್ ವರ್ಡೆಯಲ್ಲಿ ಅಭ್ಯಾಸವೆಂದೂ ನಿಲ್ಲಲಿಲ್ಲ. ಜೊತೆಗೆ ಸ್ಥಳೀಯ ಕೂಟವನ್ನೂ ನಡೆಸಲಾರಂಭಿಸಿತು. ಅಲೆಕ್ಸಾಂಡರ್ ಕನಸಿನಂತೆ ದೇಶದ ಯುವಕರು ಫುಟ್‌ಬಾಲ್‌ನ ಅಭಿಮಾನಿಗಳಾಗಿಬಿಟ್ಟರು.



ಪರಿಶ್ರಮವಿದ್ದಲ್ಲಿ ಆದೆಲ್ಲಿಂದಲೋ ಫಲ ಸಿಕ್ಕೇ ಸಿಗುತ್ತದೆ ಎಂಬುದಕ್ಕೆ ದೊಡ್ಡ ಉದಾಹರಣೆ 2011ರ ಫಿಫಾ ನಿರ್ಧಾರ. 90ರ ದಶಕದಲ್ಲಿ ಆಫ್ರಿಕಾ ತಂಡಗಳನ್ನು ಕೀಳರಿಮೆಯಿಂದ ನೋಡುತ್ತಿದ್ದ ಬಗೆಗೆ ಟೀಕೆಗಳು ಎದುರಾದುದರಿಂದ ಫಿಫಾ 2011ರಲ್ಲಿ ಫುಟ್‌ಬಾಲ್ ಬೆಳವಣಿಗೆಗಾಗಿ ಅಭಿವೃದ್ಧಿ ನಿಧಿ ನೀಡಲು ತೀರ್ಮಾನಿಸಿತು. ಆದರಂತೆ ಕೇಪ್ ವರ್ಡೆ ಶ್ರಮದ ಬಗ್ಗೆ ಅರಿತ ಫಿಫಾ 10 ಮಿಲಿಯನ್ ಅನ್ನು ನಿಧಿಯಾಗಿ ಕೊಟ್ಟಿತು. ಈ ನಿಧಿ ಬಳಸಿಕೊಂಡ ಕೇಪ್ ವರ್ಡೆ ಫುಟ್‌ಬಾಲ್ ಕ್ರೀಡಾಂಗಣ, ಶ್ರೇಷ್ಠತಾ ಕೇಂದ್ರಗಳನ್ನು ಮಾಡಿತಲ್ಲದೆ ಹೊಸ ಕೂಟಗಳನ್ನೂ ಪರಿಚಯಿಸಿತು. ಇದು ವಿಶ್ವ ಫುಟ್‌ಬಾಲ್ ಕ್ಷೇತ್ರದಲ್ಲಿ ಇತಿಹಾಸವೇ ನಿರ್ಮಿಸಿತು. ಒಂದು ಕಾಲದಲ್ಲಿ ಫುಟ್‌ಬಾಲ್ ಕ್ರೀಡಾಂಗಣವೇ ಇಲ್ಲದ ಕೇಪ್ ವರ್ಡೆ ನೇಷನ್ಸ್ ಕಪ್ ಆಫ್ ಆಫ್ರಿಕಾ ಟೂರ್ನಿಗೆ ಅರ್ಹತೆ ಗಿಟ್ಟಿಸಿಕೊಂಡಿತು! ಅದು ಮತ್ತೊಂದು ದಂತಕಥೆಯಾಯಿತು. ಆಫ್ರಿಕನ್ ಕಪ್‌ನಲ್ಲಿ ಕ್ಯಾಂಬುರಂ ತಂಡವನ್ನು ಮಣಿಸಿದ ಕೇಪ್ ವರ್ಡೆ ಪೇಪರ್‌ಗಳಲ್ಲಿ ಹೆಡ್‌ಲೈನ್ ಆಗಲು ಹೆಚ್ಚಿನ ಸಮಯ ಬೇಕಾಗಲಿಲ್ಲ. ಕೇಪ್ ವರ್ಡೆಯ ಪ್ರತಿ ಮನೆಯ ಯುವಕರು ಫುಟ್‌ಬಾಲರ್ ಆಗಬೇಕೆಂಬ ಕನಸು ಮತ್ತು ಛಲ ಮೂಡಿಸಿಕೊಂಡರು. ಇದರ ಪರಿಣಾಮವಾಗಿ ವಿವಿಧ ಕೂಟಗಳಲ್ಲಿ ದೇಶ ಅತ್ಯುತ್ತಮ ಪ್ರದರ್ಶನ ನೀಡಲಾರಂಭಿಸಿತು. ಆದರೂ 2013ರ ನಂತರ ಅಷ್ಟೊಂದು ಪರಿಣಾಮಕಾರಿ ಪ್ರದರ್ಶನ ನೀಡದೆ, ದೊಡ್ಡ ಹಿನ್ನಡೆಯನ್ನೂ ಅನುಭವಿಸಿತು. ಆದರೆ 2022ರಲ್ಲಿ ಫಿಫಾ ಮತ್ತೊಮ್ಮೆ 10 ಮಿಲಿಯನ್ ನಿಧಿ ಕೊಟ್ಟಿತು. ಆದರೆ ಈ ಬಾರಿ ಗುರಿ ತಪ್ಪಲಿಲ್ಲ. ಅರ್ಹತಾ ಸುತ್ತಿಗೆ ಆಯ್ಕೆಯಾದ ತಂಡವು ಮೊದಲಿನ 4 ಪಂದ್ಯಗಳಲ್ಲಿ ಗಳಿಸಿದ್ದು ಮೂರೇ ಅಂಕ. ಎಲ್ಲರೂ ಸಾಮಾನ್ಯ ತಂಡದಂತೆ ಹೊರಬೀಳಲಿದೆ ಎಂದುಕೊಂಡಿದ್ದರು. ಆದರೆ ಆಗಿದ್ದು ಚಮತ್ಕಾರ! ಕೇಪ್ ವರ್ಡೆ 48 ತಂಡಗಳಲ್ಲಿ ಒಂದಾಗಿ ಫಿಫಾ ವಿಶ್ವಕಪ್‌ಗೆ ಅರ್ಹತೆ ಗಿಟ್ಟಿಸಿಕೊಂಡಿತು.

ಭಾರತದ ಕತೆ

ಈ ಸ್ಫೂರ್ತಿದಾಯಕ ಕತೆ ಒಂದು ಕಡೆ. ಮತ್ತೊಂದೆಡೆ 2022ರಲ್ಲಿ ವಿಶ್ವದಲ್ಲಿ ಹೆಚ್ಚು ಅಂತಾರಾಷ್ಟ್ರೀಯ ಗೋಲು ಗಳಿಸಿದವರ ಪಟ್ಟಿ ಬಿಡುಗಡೆಯಾಯಿತು. ಅದರಲ್ಲಿ ಎರಡನೇ ಸ್ಥಾನದಲ್ಲಿ ಭಾರತದ ಸುನೀಲ್ ಛೇಟ್ರಿ! ಆದರೆ ವಿಶ್ವಕಪ್ ಅರ್ಹತೆ ವಿಚಾರಕ್ಕೆ ಬಂದರೆ? ಯಾರೊಬ್ಬರಲ್ಲಿ ಉತ್ತರವೇ ಇಲ್ಲ. ವಿಶ್ವಕಪ್ ದೂರ, ಕನಿಷ್ಠ ಭಾರತ ಏಷ್ಯನ್ ಗೇಮ್ಸ್‌ಗೆ ಆಯ್ಕೆಯಾಗುವುದಕ್ಕೂ ಈ ಬಾರಿ ವಿಫಲಗೊಂಡಿದೆ. ಅಫ್ಘಾನಿಸ್ತಾನದಂಥ ತಂಡಗಳೊಂದಿಗೆ ಡ್ರಾ ಅಷ್ಟೇ ಮಾಡಿಕೊಂಡಿದೆ. ಭಾರತ ವಿಶ್ವಕಪ್‌ನಲ್ಲಿ ಆಯ್ಕೆ ಆಗದಿರುವ ವಿಚಾರ ಸಾಮಾನ್ಯ ಜನರಲ್ಲಿ ಮೂಡುತ್ತಲೇ ಇರುತ್ತದೆ. ಕೇಪ್ ವರ್ಡೆ ಅಂಥ ತಂಡಗಳು ಆಯ್ಕೆಯಾಗುವಾಗ ನಮ್ಮ ದೇಶದವರಿಗೆ ಆಗಿದ್ದೇನು ಎಂಬ ಪ್ರಶ್ನೆ ಬರುವುದು ಸಹಜ.

ಆದರೆ ವಾಸ್ತವವಾಗಿ ಭಾರತದ ಫುಟ್‌ಬಾಲ್ ಇತಿಹಾಸ ಅಷ್ಟೊಂದು ದುರ್ಬಲವಾಗಿಲ್ಲ. 1950-1962ರವರೆಗೆ ಕ್ರಿಕೆಟ್‌ಗಿಂತಲೂ ಹೆಚ್ಚು ಆದ್ಯತೆಯನ್ನು ಫುಟ್‌ಬಾಲ್ ಪಡೆದಿತ್ತು. ಆದರೆ ಇತ್ತೀಚಿನ ಪರಿಸ್ಥಿತಿಗಳನ್ನು ನೋಡಿದರೆ ಮುಂದೊಂದು ದಿನ ನಾವೂ ಫಿಫಾ ಆಡಲಿದ್ದೇವೆ ಎಂಬ ಭರವಸೆಯೇ ಬರುವುದಿಲ್ಲ. ನೋಡಿದವರಿಗೆ ಸರಳವಾಗಿ 130 ಕೋಟಿ ಜನರಲ್ಲಿ 11 ಜನರು ಆಡಲು ಸಿಗುವುದಿಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಆದರೆ ಅವರನ್ನು ಹುಡುಕಿ ತಯಾರಿಸುವುದು ನಮ್ಮ ದೇಶದಲ್ಲಿ ಅಷ್ಟೊಂದು ಸರಳವಾದ ಕೆಲಸವಲ್ಲ. ಒಂದು ಹಂತದಲ್ಲಿ ನೋಡಿದರೆ ನಮ್ಮಲ್ಲಿ ಕ್ರೀಡಾಪಟುಗಳನ್ನು ಪೂಜಿಸಲಾಗುತ್ತದೆ. ವಿರಾಟ್ ಕೊಹ್ಲಿ, ಮಹೇಂದ್ರ ಸಿಂಗ್ ಧೋನಿ, ಸಚಿನ್ ತೆಂಡೂಲ್ಕರ್ ಅಂಥವರನ್ನು ಇಡಿ ದೇಶವೇ ಕ್ರಿಕೆಟಿಗಿಂತಲೂ ಹೆಚ್ಚಾಗಿ ನೋಡುತ್ತದೆ. ಐಪಿಎಲ್‌ನ ಕೇವಲ ಒಂದು ಪಂದ್ಯ ನೋಡುವುದಕ್ಕೆ ಜನರು ದುಂಬಾಲು ಬೀಳುತ್ತಾರೆ. ಆದರೆ ಫುಟ್‌ಬಾಲ್ ಪಂದ್ಯವನ್ನು ನೋಡಿ ಪ್ರೋತ್ಸಾಹಿಸಿ ಎಂದು ನಮ್ಮ ದೇಶದ ಫುಟ್‌ಬಾಲ್ ತಂಡದ ನಾಯಕ ಸುನೀಲ್ ಛೇಟ್ರಿ ಕೇಳಿಕೊಳ್ಳಬೇಕಾದ ಪರಿಸ್ಥಿತಿಯಿದೆ.


ಹಾಗಾದರೆ ಫುಟ್‌ಬಾಲ್ ಹಿನ್ನಡೆಗೆ ಆಡಳಿತವೇ ಕಾರಣ ಎಂಬ ವಿಚಾರ ಮುಂದೆ ಬರಬಹುದು. ಟರ್ಫ್ ವಿಚಾರದಲ್ಲಿ ಭಾರತ ಗಮನಾರ್ಹ ಸಂಖ್ಯೆಗಳ ಗ್ರೌಂಡ್‌ಗಳನ್ನು ಹೊಂದಿದೆ. ಭಾರತದಲ್ಲಿ ಡುರಾಂಡೋ ಕಪ್ ಪಂದ್ಯಾವಳಿ ಬ್ರಿಟಿಷರ ಕಾಲದಿಂದಲೂ ನಡೆದುಬರುತ್ತಿದೆ. ಇದೊಂದು ಸಂಪ್ರದಾಯವಾಗಿ ಕಾರ್ಯ ನಿರ್ವಹಿಸುತ್ತಿದೆ ವಿನಃ ಆಯ್ಕೆಯ ಭಾಗವಾಗದಿರುವುದು ದುರದೃಷ್ಟಕರ ಸಂಗತಿ. ಈ ಕೂಟ ಬಿಟ್ಟರೆ ನಮ್ಮ ದೇಶದಲ್ಲಿ ನಡೆಯುವುದು ಇಂಡಿಯನ್ ಸೂಪರ್ ಲೀಗ್. ಅದು ಕ್ಲಬ್‌ಗಳ ಮಧ್ಯೆ ಆಗುವ ಕೂಟ. ಆದರೆ ಅಲ್ಲಿಯೂ ಕೆಲವು ಜಗಳಗಳಿವೆ. ಹಣಕಾಸಿನ ವಿಚಾರದಲ್ಲಿ ಗೊಂದಲಗಳಿವೆ. ಹೀಗಾಗಿ ಅಷ್ಟೋ ಇಷ್ಟೋ ಇದ್ದ ಆಸಕ್ತಿಯೂ ಆ ಗೊಂದಲಗಳಿಂದಾಗಿ ಹೊರಟು ಹೋದಂತಿದೆ.

ಫುಟ್‌ಬಾಲ್‌ನಲ್ಲಿ ಪರಿಣಿತಿ ಹೊಂದಿದವರು ಭಾರತದಲ್ಲಿ ಉಳಿಯುವುದಿಲ್ಲ. ಯಾವುದೋ ಕ್ಲಬ್‌ಗಾಗಿ ಆಡುತ್ತಾರೆ. ಅಥವಾ ಮುಂದೊಂದು ದಿನ ಯಾವುದೋ ದೇಶಕ್ಕಾಗಿ ಆಡುತ್ತಾರೆ. ಅವರು ಅಲ್ಲಿ ಆಡುವುದನ್ನು ನೋಡಿ ಖುಷಿ ಪಡುವ ನಮ್ಮ ಸಂಸ್ಥೆಗಳಿಗೆ ಅವರನ್ನು ನಮ್ಮಲ್ಲಿಗೇ ಕರೆಸಿ ಆಡಿಸಲಾಗುವುದಿಲ್ಲವೇ? ಹಾಗೆ ನೋಡಿದರೆ ಕೇಪ್ ವರ್ಡೆ ಕೂಡ ಇದನ್ನೇ ಮಾಡಿದ್ದು. ಸದ್ಯ ಇರುವ ತಂಡದಲ್ಲಿ 12 ಜನರು ವಲಸೆ ಹೋದವರೇ. ಮುಖ್ಯವಾಗಿ ನಾಯಕನೇ ವಲಸೆ ಹೋಗಿದ್ದ. ಆದರೆ ಬಿಟ್ಟುಕೊಡದ ಮನಸ್ಥಿತಿ ಕೇಪ್ ವರ್ಡೆಗಿತ್ತು. ತನ್ನ ಕ್ರೀಡಾ ವ್ಯವಹಾರಗಳ ಖರ್ಚುವೆಚ್ಚಗಳ ಪಟ್ಟಿಯನ್ನು ಸಾರ್ವಜನಿಕ ವಲಯದಲ್ಲಿ ಪ್ರಕಟಗೊಳಿಸಿರುವ ಕೇಪ್ ವರ್ಡೆ ಒಂದೊಂದು ರೂ. ಖರ್ಚನ್ನು ಕೂಡಾ ಬಹಿರಂಗಗೊಳಿಸುತ್ತದೆ. ಆದರೆ ಅದು ಭಾರತದಲ್ಲಿ ಸಾಧ್ಯವೇ?

ಹರೆಯದವರಿಗೆ ಲೈಂಗಿಕ ವಿಜ್ಞಾನ -3

ತಾರುಣ್ಯ ತಲ್ಲಣ

ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಹರೆಯದವರಿಗೆ ಲೈಂಗಿಕ ಶಿಕ್ಷಣವನ್ನು ನೀಡುವವರು ಮೊದಲೇ ತಯಾರಿ ನಡೆಸಬೇಕಾಗುತ್ತದೆ. ಮಾಹಿತಿಗಳನ್ನು ತಿಳಿಸುವ ವಿಧ, ಉಪಯೋಗಿಸುವ ಶಬ್ದಗಳು ಮತ್ತು ವಿಜ್ಞಾನದ ಹಿನ್ನೆಲೆಯಲ್ಲಿ ತಿಳಿಸಬೇಕಾಗಿರುವುದರಿಂದ ವಿಷಯವನ್ನು ಲಘುವಾಗಿ ಎಣಿಸಬಾರದು. ವಿಷಯವನ್ನು ಸಮಾಧಾನದಿಂದ ಆದಷ್ಟು ಸುಲಭವಾಗಿ ಅರ್ಥವಾಗುವಂತೆ ವಿವರಿಸಬೇಕು. ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಪ್ರತಿಕ್ರಿಯೆಗಳು, ಅವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು ಲೈಂಗಿಕ ಶಿಕ್ಷಕರ ಜಾಣ್ಮೆ.

ಗಂಡು ಮಕ್ಕಳಲ್ಲಿ ಸಹಜವಾಗಿ ಆಗುವ ಸ್ವಪ್ನಸ್ಖಲನವು ಎಷ್ಟೋ ಮಂದಿ ಹರೆಯದವರನ್ನು ಚಿಂತೆಗೀಡು ಮಾಡುತ್ತದೆ. ವೃಷಣದಲ್ಲಿ ಉತ್ಪತ್ತಿಯಾಗುವ ವೀರ್ಯವು ವೀರ್ಯಾಣು ಚೀಲದಲ್ಲಿ ಶೇಖರಣೆಯಾಗಿ ತುಂಬಿದಾಗ ಪಿಚಕಾರಿ ರೀತಿಯಲ್ಲಿ ಮೂತ್ರನಾಳದ ಮೂಲಕ ಹೊರ ಚೆಲ್ಲುತ್ತದೆ. ವೀರ್ಯಕ್ಕೂ, ನಮ್ಮ ಶರೀರದಲ್ಲಿರುವ ರಕ್ತಕ್ಕೂ ಯಾವುದೇ ಸಂಬಂಧವಿಲ್ಲ. ಒಂದು ತೊಟ್ಟು ವೀರ್ಯವು ಮೂವತ್ತು ತೊಟ್ಟು ರಕ್ತಕ್ಕೆ ಸಮ ಎಂಬ ತಪ್ಪು ಕಲ್ಪನೆಯು ಇಂದಿಗೂ ಸಮಾಜದಲ್ಲಿದೆ. ನಕಲಿ ವೈದ್ಯರು ಹರೆಯದವರಲ್ಲಿ ಸ್ವಪ್ನಸ್ಖಲನದ ಕುರಿತು ಭಯ ಉಂಟುಮಾಡುವುದನ್ನು ಕಾಣಬಹುದು. ಇದರಿಂದ ಹರೆಯದವರು ಭಯ ಮತ್ತು ಆತಂಕದಿಂದ ಬಳಲುತ್ತಾರೆ. ಸುಸ್ತು, ಹೊಟ್ಟೆ ನೋವು, ಉರಿಮೂತ್ರ, ಮೈಕೈ ನೋವು ಹೀಗೆ ಹಲವಾರು ದೈಹಿಕ ರೋಗಲಕ್ಷಣಗಳಿಂದ ಕಂಡ ಕಂಡ ವೈದ್ಯರನ್ನು ಭೇಟಿಯಾಗುತ್ತಾರೆ. ಎಲ್ಲ ರೀತಿಯ ವೈದ್ಯಕೀಯ ಪರೀಕ್ಷೆಗಳಿಗೂ ಒಳಪಡುತ್ತಾರೆ. ಪರೀಕ್ಷೆಗಳು ನಾರ್ಮಲ್ ಆದಾಗ ಪೋಷಕರೂ ಚಿಂತೆಗೀಡಾಗುವುದು ಸಹಜ. ಭಯ, ಆತಂಕ, ಕೆಲವೊಮ್ಮೆ ಖಿನ್ನತೆ, ಓದಿನಲ್ಲಿ ಏಕಾಗ್ರತೆ ಕಳೆದುಕೊಂಡು, ಓದಿದ್ದು ಮರೆತಂತೆನಿಸಬಹುದು. ನಿದ್ರಾಹೀನತೆಯಿಂದ ಬಳಲಬಹುದು. ಇಂಥವರಿಗೆ ಆಪ್ತ ಸಲಹೆ ಮತ್ತು ಆತಂಕ ನಿವಾರಣಾ ಔಷಧಗಳು ಅವಶ್ಯ. ಹರೆಯದ ಗಂಡು ಮಕ್ಕಳಲ್ಲಿ ಸ್ವಪ್ನಸ್ಖಲನವು ಸಹಜವಾದದ್ದು. ಆದರಿಂದ ಭವಿಷ್ಯದಲ್ಲಿ ಲೈಂಗಿಕ ಕ್ರಿಯೆಗಾಗಲೀ, ದಾಂಪತ್ಯ ಜೀವನಕ್ಕಾಗಲೀ ಕೊರತೆ ಉಂಟಾಗುವುದಿಲ್ಲ ಎಂಬುದನ್ನು ಆಪ್ತ ಸಲಹೆಯಲ್ಲಿ ಸ್ಪಷ್ಟಪಡಿಸಬೇಕು. ಹರೆಯದಲ್ಲಿ ಲೈಂಗಿಕ ಚೋದನಿಕೆಗಳ ಸ್ರವಿಸುವಿಕೆಯಿಂದ ಲೈಂಗಿಕ ಕುತೂಹಲಗಳು ಹೆಚ್ಚು. ಆದರಿಂದ ಗಂಡು ಹೆಣ್ಣುಗಳ ಆಕರ್ಷಣೆ, ಅನೈತಿಕ ಲೈಂಗಿಕ ಸಂಪರ್ಕ ಮತ್ತು ಕುತೂಹಲ ಸಹಜ. ಆದರಿಂದ ಮೂತ್ರ ಸಂಬಂಧೀ ಸೋಂಕು ರೋಗಗಳು, ಕೆಲವೊಮ್ಮೆ ಅಪಾಯಕರವಾದ ಎಚ್. ಐ.ವಿ. ಸೋಂಕು ಕಾಯಿಲೆಗಳಿಗೆ ತುತ್ತಾಗಬಹುದು. ಈ ಕುರಿತು ಸರಿಯಾದ ಮಾಹಿತಿ ಒದಗಿಸಬೇಕು. ಅನೈತಿಕ ಲೈಂಗಿಕ ಕ್ರಿಯೆಯೇ ಆಗಲಿ ಅಥವಾ ವಿವಿಧ ಲೈಂಗಿಕ ಕ್ರಿಯೆಗಳಿಂದ ದೂರವಿರಬೇಕೆಂಬ ಅಂಶವನ್ನು ಒತ್ತಿ ಹೇಳಬೇಕು. ಲಿಂಗ ಭೇದ ಕುರಿತು ಗೆಳೆಯರ ಉತ್ತರಗಳಿಗೆ ಬಲಿಯಾಗದಿರುವುದು, ಅವರೊಂದಿಗೆ ಲೈಂಗಿಕ ಕ್ರಿಯೆಗಳಿಗೊಳಗಾಗದಿರುವುದು ಅದರಿಂದ ಆಗುವ ಅಪಾಯಗಳ ಕುರಿತು ತಿಳಿಸಬೇಕು. ಲೈಂಗಿಕ ಚಟುವಟಿಕೆಗಳಿಗೆ ತೊಡಗಿಸಿಕೊಳ್ಳದಂತೆ ಕೆಟ್ಟ ಚಟದ ಗೆಳೆಯರು ಮದ್ಯ-ಮಾದಕ ವಸ್ತುಗಳನ್ನು ನೀಡಬಹುದು. ಅಂಥವರಿಂದ ದೂರವಿರಬೇಕು.

ಗೆಳೆಯರೊಂದಿಗೆ ಲೈಂಗಿಕ ವಿಷಯಗಳನ್ನು ಚರ್ಚಿಸುವುದು ಒಳ್ಳೆಯದಲ್ಲ. ಲೈಂಗಿಕ ವಿಷಯಗಳನ್ನು ಓದುವಾಗ ಎಚ್ಚರದಿಂದಿರಬೇಕು. ಅಪಾಯಕರ ಸ್ಥಳಗಳಿಗೆ ಒಬ್ಬರನ್ನೇ ಕರೆದೊಯ್ದರೆ ಬೇಡವೆಂದು ಖಚಿತವಾಗಿ ಹೇಳಬೇಕು. ಕೆಲವು ವಿಧದ ಕ್ಲಬ್ ನೃತ್ಯಗಳಲ್ಲಿ ಭಾಗವಹಿಸುವುದು ಒಳ್ಳೆಯದಲ್ಲ.

ಹರೆಯದ ಹೆಣ್ಣು ಮಕ್ಕಳು ಋತುಮತಿಯಾಗುವುದು ಸಹಜವಾದ ಕ್ರಿಯೆ. ಋತು ಕ್ರಿಯೆ ಕುರಿತು ಸರಿಯಾದ ಮಾಹಿತಿ, ಅದರ ಸಾಧಕ ಭಾದಕಗಳ ಕುರಿತು ಮಾಹಿತಿ ಹಂಚಿಕೊಳ್ಳುವುದು ಪೋಷಕರು ಮತ್ತು ಲೈಂಗಿಕ ಶಿಕ್ಷಕರು ಕೈಗೊಳ್ಳಬೇಕಾದದ್ದು ಮುಖ್ಯ. ಸುಮಾರು ಹನ್ನೆರಡು ವರ್ಷ ವಯಸ್ಸಿಗೆ ಪ್ರಾರಂಭವಾಗುವ ಋತುಚಕ್ರವು ಕೆಲವರಲ್ಲಿ ಸ್ವಲ್ಪ ಬೇಗನೇ ಆಗಬಹುದು. ಕೆಲವರಿಗೆ ಒಂದೆರಡು ವರ್ಷಗಳು ತಡವಾಗಿ ಆಗಬಹುದು. ಋತುಸ್ರಾವದ ಅರ್ಥವೇನು? ಎಂಬುದನ್ನು ಪೋಷಕರು ಮತ್ತು ಲೈಂಗಿಕ ಶಿಕ್ಷಕರು ವಿವರಿಸಬೇಕು. ಋತು ಕಾಲದಲ್ಲಿ ರಕ್ತ ಸ್ರಾವವಾಗುವುದನ್ನು ಕಂಡು ಕೆಲವು ಹೆಣ್ಣು ಮಕ್ಕಳು ಗಾಬರಿಗೊಳ್ಳುವುದುಂಟು. ಕೆಲವರಲ್ಲಿ ರಕ್ತಸ್ರಾವ ಹೆಚ್ಚಾಗಿ ಸುಸ್ತಾಗಬಹುದು. ತಿಂಗಳಿಗೊಂದಾವರ್ತಿಯಾಗುವ ಋತು ಚಕ್ರವು ಹರೆಯದ ಕೆಲವರಲ್ಲಿ ಎರಡು ಮೂರು ತಿಂಗಳು ಆಗಲಿಕ್ಕಿಲ್ಲ. ಹರೆಯದವರೊಂದಿಗೆ ಅವರ ಪೋಷಕರೂ ಗಾಬರಿಗೊಳ್ಳುತ್ತಾರೆ. ಇದನ್ನು ಕುರಿತು ಧೈರ್ಯ ಮತ್ತು ಸಮಾಧಾನದಿಂದಿರಬೇಕೆಂಬುದನ್ನು ಪೋಷಕರಿಗೂ ತಿಳಿಸಲು ಮರೆಯಬಾರದು. ಸಾಮಾನ್ಯವಾಗಿ ಮೂರು ದಿನಗಳು ಆಗುವ ರಕ್ತ ಸ್ರಾವವನ್ನು ಕಂಡು ಕೆಲವರು ದಿಗಿಲುಗೊಳ್ಳಬಹುದು. ಕೆಲವರು ಇದನ್ನು ಅಸಹ್ಯ ಭಾವದಿಂದ ನೋಡಬಹುದು. ಕೆಲವರಿಗೆ ಹೀಗಾದಾಗ ಶಾಲೆಗೆ ಹೋದಾಗ ರಕ್ತಸ್ರಾವದಿಂದ ಒಳ ಉಡುಪು ಒದ್ದೆಯಾಗಿ ಅದನ್ನು ನೋಡಿದ ಇತರರು ನಕ್ಕಾರು ಎಂದು ಶಾಲೆಗೆ ಹೋಗದಿರಬಹುದು. ಒಮ್ಮೆ ಸುಸ್ತಾದರೆ ತನಗೆ ಸುಸ್ತಾಗಿದೆ ಎಂದು ಹೇಳಿ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕು. ನಾಚಿಕೆಪಡಬಾರದು. ರಕ್ತ ತಡೆಯಲು ರಕ್ತಸ್ರಾವವನ್ನು ಹೀರಿಕೊಳ್ಳುವ ಪ್ಯಾಡ್‌ಗಳನ್ನು (ಡೈಪರ್) ಧರಿಸಲು ತರಬೇತಿ ಕೊಡಬೇಕು. ಆಗ ಹೊರಗಿನ ಉಡುಪು ಒದ್ದೆಯಾಗುವುದು ತಪ್ಪುತ್ತದೆ. ಋತುಮತಿಯಾಗುವ ಕ್ರಿಯೆಯು ಲೈಂಗಿಕ ಚೋದನಿಕೆಗಳ ಪರಿಣಾಮವೆಂದೂ, ಅದು ಹರೆಯದವರು ಭವಿಷ್ಯದಲ್ಲಿ ಲೈಂಗಿಕ ಕ್ರಿಯೆಗೆ ಮತ್ತು ತಾಯ್ತನಕ್ಕೆ ಸಿದ್ಧವಾಗುವ ಲಕ್ಷಣ ಎಂತಲೂ ವಿವರಿಸಬೇಕು.

ಹರೆಯದ ಗಂಡು ಮಕ್ಕಳಾಗಲೀ, ಹೆಣ್ಣು ಮಕ್ಕಳಾಗಲೀ ಲೈಂಗಿಕ ಚೋದನಿಕೆಗಳ ಸ್ರವಿಸುವಿಕೆಯಿಂದ ಲೈಂಗಿಕ ಭಾವನೆಗಳು ಉದ್ದೀಪನಗೊಳ್ಳುತ್ತವೆ. ಲೈಂಗಿಕ ಅಂಗಾಂಗಗಳ ಕುರಿತು ಕುತೂಹಲ, ಲೈಂಗಿಕ ವಿಷಯಗಳ ಕುರಿತಾದ ಆಸಕ್ತಿ ಇವು ಸಾಮಾನ್ಯ. ಗೆಳತಿಯರೊಂದಿಗೆ ಲೈಂಗಿಕ ವಿಷಯಗಳ ಮಾತನಾಡುವಾಗ ಮತ್ತು ಚರ್ಚಿಸುವಾಗ ಎಚ್ಚರದಿಂದಿರಬೇಕು.

ಲೈಂಗಿಕತೆ ಕುರಿತು ಆತ್ಮರಕ್ಷಣೆ ಮಾಡಿಕೊಳ್ಳುವುದು ಮತ್ತು ಶೀಲವನ್ನು ಕಾಪಾಡಿಕೊಳ್ಳುವುದು ಪ್ರಮುಖವಾದ ಅಂಶಗಳಲ್ಲೊಂದು. ಕೆಲವರಿಗೆ ಹೆಣ್ಣು ಮಕ್ಕಳೊಂದಿಗೆನಿಕಟವಾಗಿಮೈಮುಟ್ಟಿಮಾತನಾಡಿಸುವುದು,ಮೈತಾಗಿಸಿಕೊಂಡು ಪಕ್ಕದಲ್ಲಿ ಕುಳಿತುಕೊಳ್ಳುವುದು ಮತ್ತು ಲೈಂಗಿಕ ಅಂಗಾಂಗಗಳಿಗೆ ಸಂಬಂಧಿಸಿದಂತೆ ಖಾಸಗೀ ಭಾಗವನ್ನು ಮುಟ್ಟಿ ಮಾತನಾಡಿಸುವ ಅಭ್ಯಾಸವಿರುತ್ತದೆ. ಅಂಥವರಿಂದ ದೂರವಿರಬೇಕು. ಇದಕ್ಕೆ ಸುರಕ್ಷಿತ ಸ್ಪರ್ಶ (Good touch) ಮತ್ತು ಅಸುರಕ್ಷಿತ ಸ್ಪರ್ಶ (Bad touch) ಎಂದು ಕರೆಯುತ್ತಾರೆ. ಅಸುರಕ್ಷಿತ ಸ್ಪರ್ಶ (ಎದೆ, ಸೊಂಟ, ಕೆಳಗಿನ ಹೊಟ್ಟೆ, ತೊಡೆ, ಕೆನ್ನೆ ಇತ್ಯಾದಿ)ದಿಂದ ದೂರವಿರಬೇಕು. ಉಳಿದ ಅಂಗಾಂಗಗಳನ್ನು ಸ್ಪರ್ಶಿಸಿದರೆ ಅಪಾಯವಿಲ್ಲ. ಎಲ್ಲಕ್ಕಿಂತ ಮಾತನಾಡುವಾಗ, ಸಂಭಾಷಿಸುವಾಗ ದೂರವುಳಿಯಬೇಕೆಂದು ಹೇಳುವುದು ಅತ್ಯಂತ ಕ್ಷೇಮ. ಲೈಂಗಿಕ ಅಂಗಾಂಗಗಳ ಪ್ರದರ್ಶನ, ಹಾಸ್ಯ ಮಾಡುವಾಗ ಲೈಂಗಿಕ ಅಂಗಾಂಗಗಳನ್ನು ಏಕ ದೃಷ್ಟಿಯಿಂದ ನೋಡುವುದು, ಕಣ್ಣಿನಿಂದ ಸನ್ನೆ ಮಾಡುವುದು ಇವೂ ಅಪಾಯಕರ.

ಮೊದಲೇ ತಿಳಿಸಿದಂತೆ ಹರೆಯದವರಲ್ಲಿ ಲೈಂಗಿಕತೆ ಕುರಿತು ಕುತೂಹಲವಾದ ಯೋಚನೆಗಳು ಬರುತ್ತವೆ. ಅವುಗಳಲ್ಲಿ ಒಂದು ಅತ್ಯಂತ ಅಪಾಯಕಾರೀ ಯೋಚನೆ ಲೈಂಗಿಕ ಸಂಪರ್ಕ ಮಾಡಿ ಅನುಭವ ಪಡಬೇಕೆಂಬ ಯೋಚನೆ. ಅದೇ ರೀತಿ ಪ್ರೇಮ ಪ್ರಕರಣಗಳಿದ್ದಾಗ ಹುಡುಗ ಹುಡುಗಿಯನ್ನೋ ಅಥವಾ ಹುಡುಗಿ ಹುಡುಗನನ್ನೋ ಲೈಂಗಿಕ ಸಂಪರ್ಕಕ್ಕೆ ಪ್ರಚೋದಿಸಿ ಸಂಪರ್ಕ ಸಾಧಿಸಬಹುದು. ಇದರಿಂದ ಹೆಣ್ಣು ಮಕ್ಕಳು ಹರೆಯದ ಗರ್ಭಾವಸ್ಥೆಗೆ ಜಾರಬಹುದು. ಅಂಥ ಸಂದರ್ಭಗಳಲ್ಲಿ ಹರೆಯದ ಹೆಣ್ಣು ಮಕ್ಕಳು ಗರ್ಭ ಧರಿಸದಂತೆ ಇರುವ ಗರ್ಭ ನಿರೋಧಕ ಪರಿಕರಗಳ ಕುರಿತು ಸರಿಯಾದ ಮಾಹಿತಿ ನೀಡಬೇಕು.

ಸಾಮಾಜಿಕ ಜಾಲತಾಣಗಳು ಲೈಂಗಿಕತೆ ಕುರಿತು ಹರೆಯದವರ ಮನಸ್ಸನ್ನು ಕಲುಷಿತಗೊಳಿಸುತ್ತವೆ. ಫೇಸ್‌ಬುಕ್, ಯುಟ್ಯೂಬ್, ಇನ್ಸ್ಟಾಗ್ರಾಂ, ವಾಟ್ಸ್ ಆಪ್, ಇಂಟರ್ನೆಟ್ ಮುಂತಾದವು ಜನಪ್ರಿಯತೆಯನ್ನು ಹೆಚ್ಚಿಸುವುದಕ್ಕೆ ಅಶ್ಲೀಲ ಲೈಂಗಿಕ ದೃಶ್ಯಗಳನ್ನು, ಅಶ್ಲೀಲ ಮಾಹಿತಿಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡುತ್ತವೆ. ಅವನ್ನು ನೋಡಿದ ಹರೆಯದವರು ಅವುಗಳಿಂದ ಪುಳಕಿತರಾಗಿ ತಪ್ಪು ದಾರಿಗೆ ತೆರಳುತ್ತಿರುವುದನ್ನು ಇಂದು ವ್ಯಾಪಕವಾಗಿ ಕಾಣಬಹುದಾಗಿದೆ. ಇದರೊಂದಿಗೆ ದೃಶ್ಯ ಮಾಧ್ಯಮಗಳಲ್ಲಿ ತೋರಿಸುವ ಅಶ್ಲೀಲ ದೃಶ್ಯಗಳು ಹರೆಯದವರನ್ನು ತಪ್ಪು ದಾರಿಗೆಳೆಯುತ್ತಿವೆ. ಹರೆಯದವರಿಗೆ ಇವುಗಳ ಕುರಿತು ಎಚ್ಚರದಿಂದಿರಲು ಹೇಳಬೇಕು. ಹರೆಯದವರಿಗೆ ಲೈಂಗಿಕ ಶಿಕ್ಷಣ ನೀಡುವಲ್ಲಿ ಇಲ್ಲಿ ತಿಳಿಸಿರುವುದು ಕೇವಲ ಅತ್ಯಂತ ಮಹತ್ವದ ಅಂಶಗಳು. ಈ ಲೇಖನದಲ್ಲಿ ಹೆಚ್ಚು ಬರೆಯಲು ಸಾಧ್ಯವಿಲ್ಲ.

ಲೈಂಗಿಕ ಶಿಕ್ಷಣದ ಅಂಶಗಳನ್ನು ಹರೆಯದವರಿಗೆ ತಿಳಿಸುವುದು ಕೇವಲ ಲೈಂಗಿಕ ಶಿಕ್ಷಕರ ಜವಾಬ್ದಾರಿ ಒಂದೇ ಅಲ್ಲ. ಪೋಷಕರು ಬಾಲ್ಯದಲ್ಲಿಯೇ ಮಕ್ಕಳಿಗೆ ಸಮಯ ಸಿಕ್ಕಾಗಲೆಲ್ಲ ಪರೋಕ್ಷವಾಗಿ ಲೈಂಗಿಕ ಅಂಗಾಂಗಗಳ ರಚನೆ ಕುರಿತು ತಿಳಿಸಬೇಕು. ಅವರ ಸಾಮಾಜಿಕ ಜವಾಬ್ದಾರಿಗಳು, ಆತ್ಮರಕ್ಷಣೆ, ಇತರರೊಂದಿಗಿನ ಒಡನಾಟ, ಹೇಗಿರಬೇಕು, ಯಾವುದನ್ನು ಕೈಗೊಂಡರೆ ಒಳ್ಳೆಯದು, ಲೈಂಗಿಕ ಶೀಲ ಕಾಪಾಡಿಕೊಳ್ಳಲು ಅವರ ಸಾಮಾಜಿಕ ಜವಾಬ್ದಾರಿ ಇವುಗಳ ಕುರಿತು ತಿಳಿಸಬೇಕು. ಹೀಗೆ ಆರೋಗ್ಯ ಲೈಂಗಿಕ ಶಿಕ್ಷಣವು ಹರೆಯದವರನ್ನು ಭವಿಷ್ಯದಲ್ಲಿ ಪ್ರಜ್ಞಾವಂತ ವ್ಯಕ್ತಿಗಳಾಗಿ ರೂಪಿಸುವುದರಲ್ಲಿ ಸಂಶಯವಿಲ್ಲ.

ಕ್ಲೇಶವ ಕೊಡದಿರು 'ಕೇಶ'ವೇ!

ವಾರದ ವರಸೆ

ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಅಂದು ಮೆಟ್ರೋ ನಿಲ್ದಾಣ ಜನಸಂದಣಿಯಿಂದ ಕೂಡಿತ್ತು. ಎಲ್ಲರೂ ತಮ್ಮ ತಮ್ಮ ಲಗೇಜ್‌ಗಳನ್ನು 'ಬ್ಯಾಗೇಜ್ ಸ್ಕ್ಯಾನಿಂಗ್ ಯಂತ್ರ'ದೊಳಗೆ ಹಾಕಿ, ತಮ್ಮನ್ನು ತಾವು ಪರೀಕ್ಷೆಗೆ ಒಡ್ಡಿಕೊಳ್ಳುವ ತರಾತುರಿಯಲ್ಲಿದ್ದರು. ಆ ಯಾದಿಯಲ್ಲಿ ಇದ್ದ ಉದ್ದ ಕೂದಲಿನ, ತುಸು ಸಣ್ಣ ಮೈಕಟ್ಟಿನ ವ್ಯಕ್ತಿ ಇನ್ನೇನು, ಪುರುಷರು ಪರೀಕ್ಷೆಗೆ ಒಳಪಡಬೇಕಾದ ಸ್ಥಳಕ್ಕೆ ಹೋಗಿ ನಿಲ್ಲಬೇಕು ಎನ್ನುವಷ್ಟರಲ್ಲಿ, ಆ ವ್ಯಕ್ತಿಯ ಹಿಂಬದಿಯಲ್ಲಿ, ಕೊಂಚ ದೂರದಲ್ಲಿ ನಿಂತಿದ್ದ ಭದ್ರತಾ ಸಿಬ್ಬಂದಿ, "ಮೇಡಂ, ಅಲ್ಲಿ ಅಲ್ಲ.. ಇಲ್ಲಿ... ಇಲ್ಲಿ..." ಎನ್ನುತ್ತಾ ಮಹಿಳೆಯರ ಪರೀಕ್ಷಣಾ ಕೊಠಡಿಯತ್ತ ಕೈ ತೋರಿಸುತ್ತಾ, ಅವರನ್ನು ಅತ್ತ ಕಳುಹಿಸುವ ಯತ್ನದಲ್ಲಿದ್ದ. ಆದರೆ ಅಲ್ಲಿ ನಿಂತಿದ್ದ ವ್ಯಕ್ತಿ ತಿರುಗಿ ನೋಡಿದಾಗಲೇ ತಿಳಿದಿದ್ದು, ಅದು 'ಆಕೆ'ಯಲ್ಲ ಆತನೆಂದು.

ಇದರಿಂದ ಇತ್ತ ಭದ್ರತಾ ಸಿಬ್ಬಂದಿಯೂ ಅತ್ತ ಆ ವ್ಯಕ್ತಿಯೂ ಸ್ವಲ್ಪ ಇರುಸು ಮುರುಸಿಗೆ ಒಳಗಾಗಿದ್ದು ಸ್ಪಷ್ಟವಾಗಿ ಗೋಚರಿಸುವಂತಿತ್ತು. ಈ ಬಗೆಯ ಗೊಂದಲವೊಂದಕ್ಕೆ ಕಾರಣವಾದ ಅಂಶವೇನೆಂದು ಯೋಚಿಸಿದಾಗ ಗೊತ್ತಾಯಿತು, 'ಅವರ ತಲೆಯ ತುಂಬಾ ಸೊಂಪಾಗಿ ಬೆಳೆದು, ನಳನಳಿಸುವ ಕೇಶರಾಶಿ ಹರಡಿಕೊಂಡಿತ್ತು'. ಉದ್ದಕ್ಕೆ ಇಳಿ ಬಿಟ್ಟಂತಿದ್ದ ಆ ಕೇಶ ಸಿರಿಯನ್ನು ನೋಡುತ್ತಿದ್ದರೆ ಯಾರಿಗೇ ಆದರೂ ಆ ಸಿಬ್ಬಂದಿಯಂತೆ ಅನುಮಾನ ಹುಟ್ಟುವುದರಲ್ಲಿ ಹೆಚ್ಚುಗಾರಿಕೆ ಏನಿಲ್ಲ.

ಈ ಘಟನೆ ನಡೆಯುತ್ತಿರಬೇಕಾದರೆ, ಆ ವ್ಯಕ್ತಿಯಿಂದ 3-4 ಜನರ ಹಿಂದೆ ನಿಂತಿದ್ದ ವಯಸ್ಸಾದ ಇನ್ನೊಬ್ಬರು ರೇಗಿ ಹೋದವರಂತೆ ನೋಡುತ್ತಿದ್ದರು. ಆ ಪ್ರಹಸನ ನೋಡುತ್ತಾ ನಿಂತಿದ್ದ ಅವರೇಕೆ ಹಾಗೊಂದು ದುಸುಮುಸು ತೋರಿದರು ಎನ್ನುವುದಕ್ಕೆ ಫಳಗುಟ್ಟುತ್ತಿದ್ದ ಅವರ ಬೊಕ್ಕ ತಲೆ ಮೌನ ಸಾಕ್ಷಿ ನುಡಿದಂತಿತ್ತು. ಅವರು ಮತ್ತೆ ಮತ್ತೆ ತಡವರಿಸುತ್ತಾ ತಮ್ಮ ಬೋಳು ತಲೆಯ ಮೈದಾನದ ಮೇಲೆ, ತಮ್ಮದೇ ಬೆರಳುಗಳನ್ನು ಆಡಿಸುತ್ತಲಿದ್ದರು. ಹಾಗೂ ಈ ಪ್ರಸಂಗದ ಕೊನೆಗೊಮ್ಮೆ ಅವರು ಸಣ್ಣಗೆ ನಕ್ಕಿದ್ದು ದೇಶಾವರಿ ನಗೆ ಎನಿಸದೇ ಒಂದರ್ಥದಲ್ಲಿ 'ಕೇಶಾ'ವರಿ ನಗೆಯೇ ಎಂದೆನಿಸುತ್ತಿತ್ತು.



ಕೇಶ ಇದ್ದೂ, ಕೇಶ ಇಲ್ಲದೆಯೂ ಜನರು ಎದುರಿಸುವ ತರಹೇವಾರಿ ಕ್ಲೇಶಗಳ ಎರಡು ಸ್ಯಾಂಪಲ್‌ಗಳು ಅಂದು ಅಲ್ಲಿ ಮುಖಾಮುಖಿ ಆಗಿದ್ದವು ಎಂದು ಹೇಳಬಹುದು. ಬಹಳ ಸಮೃದ್ಧ ಕೂದಲು ಹೊಂದಿರುವವರು ಒಳಗೊಳಗೆ ಆನಂದಿಸುತ್ತಲೇ ಇರುವರಾದ್ದರಿಂದ ಅವರನ್ನು ಕೇಶಾನಂದ ಎಂದು ಕರೆದರೆ, ಅದರಿಂದ ಬೇಸರದ ಬೇಗೆಯಲ್ಲಿ ಬೆಂದು, ದುಃಖ-ದುಮ್ಮಾನಗಳಲ್ಲಿ ಮಿಂದೆದ್ದು ಬಳಲುವವರದ್ದು 'ಕ್ಲೇಶಾ'ವತಾರವೇ ಸೈ! ಏನೇ ಆಗಲಿ, ತಲೆಯೆಂಬ ಮೈದಾನದ ಮೇಲೆ ಸಾಕಷ್ಟು ಕೂದಲು ಬೆಳೆದಿರಬೇಕು. ಇಲ್ಲದೇ ಹೋದರೆ ಬೋಳುತಲೆಯ ಬಾಳು ಅದು ಬಾಳಲ್ಲ ಗೋಳು ಎಂದು ಕೆಲವರಾದರೂ ತಮ್ಮ ಗೋಳನ್ನು ತೋಡಿಕೊಳ್ಳದೇ ಇರಲಾರರು.

ಹಾಗೆ ನೋಡಿದರೆ ಈ ಕೂದಲು ಒಂದು ರೀತಿಯಲ್ಲಿ ಪಕ್ಷಪಾತಿಯೇ ಸರಿ. ಬೆಳೆಯುತ್ತಾ ಹೋದಂತೆ ತಿಂಗಳಿಗೆರಡು ಬಾರಿ ಕತ್ತರಿಸಿ ತೆಗೆಯುವ, ಆಗಾಗ ಬೋಳುಮಂಡೆ ಮಾಡಿಕೊಳ್ಳುವ, ಕ್ಷೌರಿಕರ ಅಂಗಡಿಗೆ ಹೊರಡುವ ಮುನ್ನ 'ಈ ಹಾಳಾದ ಕೂದಲು ಅದೆಷ್ಟು ಬೇಗ ಬೆಳೆಯುತ್ತಪ್ಪಾ..' ಎಂದೆಲ್ಲ ಹಿಡಿಶಾಪ ಹಾಕುವ ಅದೆಷ್ಟೋ ಜನರ ಮಂಡೆಯ ಮೇಲೆ ಈ ಕೂದಲು ಸದಾ ನಲಿದಾಡುತ್ತಲೇ ಇರುತ್ತದೆ. ಬೇಗ ಬೇಗನೇ ಬೆಳೆ ಬೆಳೆದು ನಿಂತು ಬೆಳ್‌ನಗೆ ಬೀರುವಂತೆ ತೊನೆದಾಡುತ್ತಿರುತ್ತದೆ. ಅದೇ ಇಲ್ಲದ ಕೂದಲಿಗಾಗಿ ಹಪಹಪಿಸುವವರನ್ನು ಅದು ಇನ್ನಿಲ್ಲದಂತೆ ಸತಾಯಿಸುತ್ತದೆ, ಪರಿ ಪರಿಯಾಗಿ ಪೀಡಿಸುತ್ತಲೇ ಇರುತ್ತದೆ. ಒಂದು ಸಣ್ಣ ಕೂದಲಿನ ಚಿಗುರು ಕಂಡರೂ ಅದನ್ನು ತನ್ನ ಮಡಿಲ ಕುಡಿಯೇ ಏನೋ ಎಂಬಂತೆ ಆರೈಕೆ ಮಾಡುವ, ಅದಕ್ಕಾಗಿ ಬಗೆ ಬಗೆಯ ಶ್ಯಾಂಪೂ, ತೈಲ, ಚಿಕಿತ್ಸೆಯಂಥ ವೈವಿಧ್ಯಮಯ ಪ್ರಯೋಗಕ್ಕೆ ಇಳಿಯುವವರ ಮುಂದೆ ಅದರದ್ದು ಬರಿಯ ಮೊಂಡಾಟ, ಹಟ. ಈಗ ಹೇಳಿ ಇದು ಪಕ್ಷಪಾತಿ ಧೋರಣೆ ಅಲ್ಲದೇ ಮತ್ತೇನು?

ಯಾವ್ಯಾವುದೋ ಬೆಳೆಯನ್ನು ಬೆಳೆದು ಯಶಸ್ವಿಯಾದ ಬೆಳೆಗಾರರನ್ನು ಕಂಡಿದ್ದೇವೆ. ನಮ್ಮೆಲ್ಲರಿಗೂ ಗೊತ್ತಿರುವಂತೆ ಇದರಲ್ಲೂ ಸಾಕಷ್ಟು ಕಷ್ಟ ಕಾರ್ಪಣ್ಯಗಳು, ಕಷ್ಟ-ನಷ್ಟಗಳು ಇದ್ದೇ ಇರುತ್ತವೆ. ಆದರೆ ಕೂದಲು ಬೆಳೆಸುವಲ್ಲಿನ ತೊಂದರೆ ತಾಪತ್ರಯ ಹಾಗೂ ದುಃಖ ದುಮ್ಮಾನಗಳಿವೆಯಲ್ಲ ಅದು ನಿಜಕ್ಕೂ ಅವೆಲ್ಲವನ್ನೂ ಒಂದು ಮಟ್ಟಿಗೆ ಮೀರಿಸುವಂಥದ್ದು ಎಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಆ ಬೆಳೆಗಾರರ ಸಂಕಷ್ಟಗಳಿಗಾದರೂ ಸ್ಪಂದಿಸುವವರಿದ್ದಾರೆ. ಅದಕ್ಕೆಂದೇ ಬೇರೆ ಬೇರೆ ಇಲಾಖೆಗಳಿವೆ. ಲೆಕ್ಕವಿಲ್ಲದಷ್ಟು ಯೋಜನೆಗಳೂ ಇರುತ್ತವೆ. ಇವುಗಳ ಅಡಿಯಲ್ಲಿ ಒಂದಷ್ಟು ಪ್ರೋತ್ಸಾಹ ಧನ, ಪರಿಹಾರ, ಬೆಂಬಲ ಬೆಲೆ ಇನ್ನೊಂದು ಮತ್ತೊಂದು ಎಲ್ಲವೂ ಇರುತ್ತವೆ. ಆದರೆ ಕೂದಲು ಬೆಳೆಸಿಕೊಳ್ಳುವ ಬೆಳೆಯ ಪ್ರಕ್ರಿಯೆ ಹಾಗಲ್ಲವೇ ಅಲ್ಲ. ಇಲ್ಲಿನ ಕಷ್ಟ-ನಷ್ಟ ಎಲ್ಲದಕ್ಕೂ ಬೋಳುತಲೆಯವರೇ ತಲೆ ಕೊಡದೆ ವಿಧಿಯೇ ಇಲ್ಲ. ಹೀಗಾಗಿ ಈ ಕೂದಲು ಕಸಿ ಎಂಬ ಪ್ರಕ್ರಿಯೆ ಅದೆಷ್ಟು ಜನರ ಹಣ, ಸಮಯ ಹಾಗೂ ನೆಮ್ಮದಿಯನ್ನು ಕಸಿಯುತ್ತಿದೆ ಎಂದು ಹೇಳಲೇ ಸಾಧ್ಯವಿಲ್ಲ ನೋಡಿ. ಬೇರೆ ಸಮಸ್ಯೆಗಳಿಗಾದರೂ ತಲೆ ಮೇಲೆ ಕೈ ಹೊತ್ತು ಕುಳಿತು, ಕ್ಷಣಕಾಲ ಆ ಸಮಸ್ಯೆಯ ತೀವ್ರತೆಯನ್ನು ತಣಿಸಿಕೊಳ್ಳಬಹುದು. ಆದರೆ ಬೋಳುತಲೆಯವರಿಗೆ ಆ ಒಂದು ಸಣ್ಣ ಅವಕಾಶವೂ ಇಲ್ಲ. ಏಕೆಂದರೆ ಅವರು ತಲೆಯ ಮೇಲೆ ಕೈ ಹೊತ್ತು ಕುಳಿತಿಕೊಳ್ಳೋಣ ಎಂದು ಕೈಯನ್ನು ತಲೆಯತ್ತ ಕೊಂಡು ಹೋದರೂ, ಆಗ ಕೈಗೆ ಕೂದಲೇ ಇಲ್ಲದ ಬೋಳು ಬೋಳು ತಲೆಯ ಭಾಗವೇ ತಾಗುವುದರಿಂದ ಮತ್ತೆ ಮತ್ತೆ ಕೂದಲಿಲ್ಲವಲ್ಲ ಎಂಬ ಚಿಂತೆಯೇ ತಲೆಯೊಳಗೂ, ಮನದೊಳಗೂ ಒಂದೇ ಸಮನೆ ನುಗ್ಗಿ, ನರಳಾಡುವಂತೆ ಮಾಡಿಬಿಡುತ್ತದೆ. 'ಅಯ್ಯೋ ಯಾರೂ ನಮ್ಮ ತಲೆಯ ಬಗ್ಗೆ ಗಮನಹರಿಸುವುದಿಲ್ಲ. ನಮ್ಮ ತಲೆ ಕಾಯುವವರೇ ಇಲ್ಲ' ಎಂಬ ಕೊರಗು ಯಾರನ್ನಾದರೂ ಆವರಿಸಿಕೊಳ್ಳಬಹುದು, ಆದರೆ ಬೋಳು ತಲೆಯವರನ್ನಲ್ಲ. ಏಕೆಂದರೆ ಈ ಬೋಳು ತಲೆಯವರ ತಲೆಯನ್ನು ಸದಾ ಕಾಯುವಂತೆ ನೋಡುವ, ಅದರ ಮೇಲೊಂದು ಕಣ್ಣನ್ನು ನೆಟ್ಟಿರುವಂತೆ, 'ಕೂದಲು ಬೆಳೆಸುವ ಚಿಕಿತ್ಸಾ ಕೇಂದ್ರ'ದ ಪ್ರತಿನಿಧಿಗಳು ಎಲ್ಲೆಲ್ಲೂ ಇರುತ್ತಾರೆ.

ಯಾವುದೇ ಆಹಾರ ಪದಾರ್ಥವನ್ನು ತಯಾರಿಸಿದಾಗ ಅದರ ಮೇಲೆ ಅಲಂಕಾರಕ್ಕೆಂದು ಬೇರೆ ಬೇರೆ ಸೊಪ್ಪು, ಒಣಹಣ್ಣಿನ ತುಂಡುಗಳು, ಸಾಸ್, ಕ್ರೀಮ್ ಇನ್ನೂ ಏನೇನನ್ನೋ ಎಲ್ಲಾ ಬಳಸುತ್ತಾರೆ. ಆದರೆ ಕೆಲವು ಪಾಕ ಪ್ರವೀಣರು, ಮಾತ್ರ ಅವುಗಳ ನಡುವೆ ಅಲ್ಲೆಲ್ಲೋ ಒಂದು ಎಳೆ ಕೂದಲನ್ನೂ ಸೇರಿಸಿಬಿಡುತ್ತಾರೆ. ಹ್ಞಾಂ! ಅದೂ ಒಂಥರಾ ಅವರು ತಮ್ಮ ಅಡುಗೆಗೆ ಬಳಸುವ ಸೀಕ್ರೆಟ್ ಪದಾರ್ಥ ಎನ್ನುವುದು, ಅದು ಆಹಾರದಲ್ಲಿದ್ದು ಕೈಗೋ ಬಾಯಿಗೋ ಸಿಕ್ಕಿದಾಗ ತಿಳಿಯುತ್ತದೆ. ಕೂದಲು ಇಲ್ಲದೇ ಇರುವುದು ಸಮಸ್ಯೆ ಸರಿ ಆದರೆ ಕೂದಲು ಇರುವುದೂ ಸಮಸ್ಯೆಯೇ? ಎಂದು ಯಾರನ್ನಾದರೂ ಕೇಳಿದರೆ "ಖಂಡಿತ ಹೌದು ಅದೂ ಸಮಸ್ಯೆಯೇ!" ಎಂದು ರೆಸ್ಟೋರೆಂಟ್‌ಗಳ ಮಾಲಿಕರು, ಅಡುಗೆಯವರು ಒತ್ತಿ ಒತ್ತಿ ಹೇಳುತ್ತಾರೆ. ಮನುಷ್ಯರು ತಮ್ಮ ಹಸಿವನ್ನು ಅಷ್ಟು ಸುಲಭಕ್ಕೆ ನಿಯಂತ್ರಿಸಿಕೊಳ್ಳಲಾರರಂತೆ. ಆದರೆ ಆಹಾರದಲ್ಲಿ ಕಾಣಸಿಗುವ ಒಂದೇ ಒಂದು ಸಣ್ಣ ಕೂದಲೂ ಹಸಿವೆಯನ್ನು ಹೇಳ ಹೆಸರಿಲ್ಲದಂತೆ ಮಾಯ ಮಾಡಿಬಿಡುತ್ತದೆ, ಅಷ್ಟೇ ಅಲ್ಲದೇ ಅದರೊಂದಿಗೆ ಕೋಪವನ್ನೂ ಬೋನಸ್ ಆಗಿ ಕೊಡಿಸುತ್ತದೆ. ಏನೇ ಹೇಳಿ ಅಡುಗೆ ಮಾಡುವಾಗ ನಮ್ಮ ಮನಸ್ಸು, ಹೃದಯವನ್ನು ಅದಕ್ಕೆ ನೀಡಬೇಕೇ ವಿನಾ ನಮ್ಮ ಕೂದಲನ್ನಲ್ಲ!

ಕೂದಲು ಇಲ್ಲದ ಕಾರಣಕ್ಕೆ ಬೋಳುತಲೆ ಆಗುವುದು ಗೊತ್ತು. ಆದರೆ ಕೆಲವರು ಬೇಕೆಂದೇ ಆಗಾಗ ಕೂದಲನ್ನು ನುಣ್ಣಗೆ ಕತ್ತರಿಸಿಕೊಂಡೋ ಅಥವಾ ಬೋಳಿಸಿಕೊಂಡೋ ಬೋಳುತಲೆ ಮಾಡಿಕೊಳ್ಳುತ್ತಾರೆ. ಬಹುಶಃ ತಮ್ಮ ಕೂದಲನ್ನು ಕೊಂಕಿಸುವ ಯಾವ ಸಣ್ಣ ಅವಕಾಶವನ್ನೂ ಯಾರಿಗೂ ಕೊಡಬಾರದು ಎಂಬ ಕಾರಣಕ್ಕೆ ಅವರು ಹಾಗೆ ಮಾಡುವುದಿರಬೇಕು. ಏನೇ ಆದರೂ, ಕೂದಲು ಕೊಂಕಿಸುವ ಮಾತು ಹಾಗಿರಲಿ, ಹೆಚ್ಚಿನವರ ಪಾಲಿಗೆ ಕೂದಲ ಕಾರಣಕ್ಕೆ ಅನ್ಯರು ಆಡುವ ಕೊಂಕು ಮಾತುಗಳೇ ಹೆಚ್ಚು ದುಬಾರಿಯಾಗುವುದು. ಈ ಸಮಸ್ಯೆಗೆ 'ವಿಗರಸ್' ಆಗಿ ಏನಾದರೂ ಮಾಡಿ ಪರಿಹಾರ ಕಂಡುಕೊಳ್ಳಬೇಕೆಂಬ ಕಾರಣಕ್ಕೇ 'ವಿಗ್'ನ ಮೊರೆ ಹೋಗುತ್ತಿದ್ದಾರೆ! ಅಂದರೆ ಮನುಷ್ಯರಾದ ನಾವು ಕಾಲಕ್ಕೆ ತಕ್ಕಂತೆ ವಿಜ್ಞಾನವನ್ನಷ್ಟೇ ಅಲ್ಲ 'ವಿಗ್'ಜ್ಞಾನವನ್ನೂ ಹೊಂದಿರಬೇಕಾಗುತ್ತದೆ. ಏನೇ ಆಗಲಿ ಆ ಕೇಶವು ಯಾರಿಗೂ ಕ್ಲೇಶವನ್ನು ಉಂಟು ಮಾಡದಿರಲಿ ಎಂಬ ಆಶಯದೊಂದಿಗೆ ಈ 'ಮಂಡೆ' ಸಮಾಚಾರ ಮುಕ್ತಾಯ!

ಓವರ್‌ಡೋಸ್: ಜಗತ್ತು ಕಪ್ಪು ಬಿಳುಪಿನಿಂದ ಕಲರ್‌ಫುಲ್‌ನತ್ತ ಬದಲಾಗಿದೆ. ಹೌದು ಅದಕ್ಕೆ ಅತ್ಯುತ್ತಮ ಉದಾಹರಣೆ ಬಗೆ ಬಗೆಯ ಬಣ್ಣಗಳನ್ನು ಬಳಸಿಕೊಳ್ಳುತ್ತಿರುವ ಕೂದಲು!

ಕಿರುಸುದ್ದಿ

ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ ಸತತ 120ನೇ ತಿಂಗಳ ಕಾರ್ಯಕ್ರಮ

ಕುಂದಾಪುರ : ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ವಿನೂತನ ಕಾರ್ಯಕ್ರಮ ಸರಣಿಯಡಿ ಸತತ 120 ನೇ ತಿಂಗಳ ಕಾರ್ಯಕ್ರಮ ಭಾನುವಾರ ಜರುಗಿತು. ನಿವೃತ್ತ ಅಧ್ಯಾಪಕ ಸದಾಶಿವ ಐತಾಳ್, ನಿವೃತ್ತ ಪ್ರಾಧ್ಯಾಪಕ ಎಂ. ರತ್ನಾಕರ ಪೈ, ಶಂಕರ ನಾಗಪ್ಪ ಬಿಲ್ಲವ, ಭಾಗವತ ಸುಬ್ರಹ್ಮಣ್ಯ ನಾವುಡ, ಶಿಕ್ಷಕಿ ಸೌಜನ್ಯ ಹಾಗೂ ಅಕಾಡೆಮಿ ಅಧ್ಯಕ್ಷ ಭಾಸ್ಕರ್ ಕೊಗ್ಗ ಕಾಮತ್ ಉಪಸ್ಥಿತರಿದ್ದರು. ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿಯ ಅರ್ಥಧಾರಿ ಎಚ್. ಶಂಕರ ನಾಗಪ್ಪ ಬಿಲ್ಲವ, ಹೆಮ್ಮಾಡಿ ಹಾಗೂ 2025–26 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉಪ್ಪಿನಕುದ್ರು ಸರಕಾರಿ ಪ್ರೌಢ ಶಾಲೆಯಲ್ಲಿ ಪ್ರಥಮ ಸ್ಥಾನ ಪಡೆದ ಚಂದನ್ ಅವರನ್ನು ಅಕಾಡೆಮಿ ವತಿಯಿಂದ ಸನ್ಮಾನಿಸಲಾಯಿತು. ಶಂಕರ ನಾಗಪ್ಪ ಬಿಲ್ಲವರಿಂದ ಯಕ್ಷಗಾನ, ಜಾನಪದ ಏಕಪಾತ್ರಾಭಿನಯ ನಡೆಯಿತು. ನಿವೃತ್ತ ಶಿಕ್ಷಕ ಉದಯ ಭಂಡಾರ್‌ಕಾರ್ ಹಟ್ಟಿಯಂಗಡಿ ಕಾರ್ಯಕ್ರಮ ನಿರೂಪಿಸಿದರು.

ಮಹಾಲಿಂಗೇಶ್ವರ ಒಕ್ಕೂಟದ ತ್ರೈಮಾಸಿಕ ಸಭೆ

ಪುತ್ತೂರು: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಾಲಿಂಗೇಶ್ವರ ಒಕ್ಕೂಟ ತ್ರೈಮಾಸಿಕ ಸಭೆ ಪುತ್ತೂರು ಯೋಜನಾ ಕಚೇರಿಯ ಸಭಾಂಗಣದಲ್ಲಿ ಒಕ್ಕೂಟದ ಅಧ್ಯಕ್ಷೆ ಸ್ವರ್ಣಲತಾ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭ ತಂಬಾಕು ವಿರೋಧಿ ದಿನ ಆಚರಿಸಲಾಯಿತು. ನಗರ ಸಭೆಯ ಮಾಜಿ ಉಪಾಧ್ಯಕ್ಷೆ ವಿದ್ಯಾ ಗೌರಿಯವರು ತಂಬಾಕಿನಿಂದ ಆಗುವ ದುಷ್ಪರಿಣಾಮದ ಬಗ್ಗೆ ಮಾತನಾಡಿ, ತಂಬಾಕು ಸೇವನೆಯು ದೇಹಕ್ಕೆ ತುಂಬಾ ಹಾನಿಕಾರಕ. ಶ್ವಾಸಕೋಶದ ಕ್ಯಾನ್ಸರ್ ದವಡೆ ಕ್ಯಾನ್ಸರ್ ಮುಂತಾದ ಕಾಯಿಲೆ ಬರುತ್ತದೆ ಹಾಗೂ ನಮ್ಮ ದೇಹದ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತದೆ. ಮನೆಯ ನೆಮ್ಮದಿಯೂ ಹಾಳಾಗುವುದರಿಂದ ತಂಬಾಕು ಮುಕ್ತ ಬದುಕು ನಮ್ಮದಾಗಲಿ ಎಂದರು.

ವಲಯದ ಮೇಲ್ವಿಚಾರಕ ಜೀವನ್ ಯೋಜನೆಗೆ ಸಂಬಂಧಪಟ್ಟ ವಿಷಯವನ್ನು ತಿಳಿಸಿದರು. ವೇದಿಕೆಯಲ್ಲಿ ಒಕ್ಕೂಟದ ನೂತನ ಅಧ್ಯಕ್ಷ ಕೆ. ಜಯರಾಮ್ ಕುಲಾಲ್, ಜನಜಾಗೃತಿಯ ವಲಯದ ಉಪಾಧ್ಯಕ್ಷ ಗಣೇಶ ಬೆದ್ರಾಳ, ಕಾರ್ಯದರ್ಶಿ ಜಯಂತಿ, ಉಪಾಧ್ಯಕ್ಷರಾದ ಪುಂಡರಿಕ, ಜೊತೆ ಕಾರ್ಯದರ್ಶಿ ಸೀತಾರಾಮ್ ಆಚಾರ್ಯ, ಕೋಶಾಧಿಕಾರಿ ಶ್ರೀನಿವಾಸ, ವಿಮಲ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸೇವಾ ಪ್ರತಿನಿಧಿ ನಳಿನಾಕ್ಷಿ ಸ್ವಾಗತಿಸಿ, ವನಿತಾ ವಂದಿಸಿದರು.

ಇಂದ್ರಪ್ರಸ್ಥ ವಿದ್ಯಾಲಯದಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಕಾರ್ಯಕ್ರಮ

ಉಪ್ಪಿನಂಗಡಿ: ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಮಾಹಿತಿ ಕಾರ್ಯಾಗಾರವನ್ನು ಇಲ್ಲಿನ ಇಂದ್ರಪ್ರಸ್ಥ ವಿದ್ಯಾಲಯದಲ್ಲಿ ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿದ್ದ ಬೆಂಗಳೂರಿನ ಪರ್ಯಾವರಣ ಸಂರಕ್ಷಣಾ ಗತಿ ವಿಧಿಯ ರಾಜ್ಯ ಸಂಯೋಜಕ ಜಯರಾಮ ಬೊಳ್ಳಾಜೆ ಅವರು ವಿದ್ಯಾರ್ಥಿಗಳಿಗೆ ನಿತ್ಯಜೀವನದಲ್ಲಿ ಪರಿಸರ ಎಂಬ ವಿಷಯದ ಕುರಿತು ಮಾತನಾಡಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಮಾತು ಕೇವಲ ಪರಿಸರ ದಿನಕ್ಕೆ ಮಾತ್ರ ಸೀಮಿತವಾಗಿರದೆ, ಪರಿಸರದ ಬಗೆಗಿನ ಕಾಳಜಿ ನಿಯತವಾಗಿರಬೇಕು ಎಂದರು. ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ರವಿ ಇಳಂತಿಲ ಉಪಸ್ಥಿತರಿದ್ದರು. ಶಾಲಾ ಮುಖ್ಯಗುರು ವೀಣಾ ಆರ್. ಪ್ರಸಾದ್ ಮಾರ್ಗದರ್ಶನ ಮಾಡಿದರು. ಸಹ ಶಿಕ್ಷಕಿ ನಿಶಿತಾ ಕೆ. ಕೆ. ಸ್ವಾಗತಿಸಿ, ಸಹಶಿಕ್ಷಕ ಕರುಣಾಕರ ನಿರೂಪಿಸಿದರು.

ಪೊಲೀಸ್ ಇಲಾಖೆಗೆ ಅರ್ಜಿ ಸಲ್ಲಿಸುವ, ಪರೀಕ್ಷಾ ವಿಧಾನ ಮಾಹಿತಿ ಕಾರ್ಯಾಗಾರ

ಕಾರ್ಕಳ : ಉಡುಪಿ ಜಿಲ್ಲಾ ಪೊಲೀಸ್ ಮತ್ತು ಕಾರ್ಕಳ ಪೊಲೀಸ್ ಇಲಾಖೆ ಆಶ್ರಯದಲ್ಲಿ ಕಾರ್ಕಳ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಇದ ರ ಸಹಯೋಗದೊಂದಿಗೆ , ಪೊಲೀಸ್ ಇಲಾಖೆಗೆ ಅರ್ಜಿ ಸಲ್ಲಿಸುವ ಮತ್ತು ಪರೀಕ್ಷಾ ವಿಧಾನದ ಬಗ್ಗೆ ಮಾಹಿತಿ ಕಾರ್ಯಾಗಾರ ಜೂನ್ 29 ಸೋಮವಾರ ಸಂಜೆ 4 ಗಂಟೆಗೆ ಕಾರ್ಕಳದ ಮಂಜುನಾಥ ಪೈ ಸಭಾಭವನ ನಡೆಯಲಿದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಪೊಲೀಸ್ ಕಾನ್‌ಸ್ಟೇಬಲ್ ಗಳ ನೇರ ನೇಮಕಾತಿ ಮೂಲಕ 3395 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು 2026 ರ ಜು.3 ಕೊನೆಯ ದಿನವಾಗಿದ್ದು ಪೊಲೀಸ್ ಇಲಾಖೆ ಹುದ್ದೆಗೆ ಈ ಭಾಗದ ಹೆಚ್ಚಿನ ಯುವಕ ಯುವತಿಯರು ಇಲಾಖೆಯಲ್ಲಿ ಆಯ್ಕೆ ಗೊಳ್ಳಲೆಂಬ ಉದ್ದೇಶದಿಂದ ಅರ್ಜಿ ಸಲ್ಲಿಸುವ , ಪರೀಕ್ಷಾ ವಿಧಾನದ ಬಗ್ಗೆ ಪೊಲೀಸ್ ಇಲಾಖೆಯ ಹಿರಿಯ, ಅನುಭವಿ ಅಧಿಕಾರಿಗಳಿಂದ ಮಾಹಿತಿ ನೀಡಲಾಗುವುದು ಯುವಕ, ಯುವತಿಯರು ವಿದ್ಯಾರ್ಥಿಗಳು ಹಾಗೂ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಐ ಪಿ ಎಸ್ ಮತ್ತು ಕಾರ್ಕಳ ಡಿವೈ ಎಸ್ ಪಿ ವಿಜಯ ಪ್ರಸಾದ್ ಕಾರ್ಕಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುದ್ರಾಡಿ: ಕೆಂಪೇಗೌಡ ಜಯಂತಿ ಆಚರಣೆ

ಹೆಬ್ರಿ: ಬೆಂಗಳೂರು ನಗರದ ನಿರ್ಮಾತೃ ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯ ಆಡಳಿತಗಾರರಾಗಿದ್ದರು. ಕೃಷಿ ಅಭಿವೃದ್ಧಿಗೆ ಸದಾ ಪ್ರೋತ್ಸಾಹ ನೀಡುತ್ತಾ ಬಂದಿದ್ದರು. ಸಾಮಾಜಿಕ ಸುಧಾರಕರಾಗಿ, ಸಾಂಸ್ಕೃತಿಕ ರಾಯಭಾರಿ ಏಯಾಗಿ ಅವರು ನೀಡಿದ ಸೇವೆ, ತ್ಯಾಗ, ಆದರ್ಶ ಎಲ್ಲರಿಗೂ ಅನುಕರಣೀಯ ಎಂದು ಮುದ್ರಾಡಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಲ್ಲಾಡಿ ಚಂದ್ರಶೇಖರ ಭಟ್ ಹೇಳಿದರು. ಅವರು ಎಂಎನ್‌ಡಿಎಸ್‌ಎಂ. ಅನುದಾನಿತ ಪ್ರೌಢಶಾಲೆಯಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆಯಲ್ಲಿ ಕೆಂಪೇಗೌಡರ ಸಾಧನೆ ಬಗ್ಗೆ ಮಾತನಾಡಿದರು. ಶಿಕ್ಷಕರಾದ ಮಹೇಶ್ ನಾಯ್ಕ್, ಶ್ಯಾಮಲಾ, ರಘುಪತಿ ಹೆಬ್ಬಾರ್, ಅನುಷಾ, ಶಾಲಾ ವಿದ್ಯಾರ್ಥಿ ನಾಯಕ ಪ್ರತೀಕ್ ಮತ್ತಿತರರಿದ್ದರು. ದಿಶಾಂತ್ ಸ್ವಾಗತಿಸಿ, ಗಗನ್ ವಂದಿಸಿದರು.



ಫರಂಗಿಪೇಟೆ ಶ್ರೀರಾಮ ವಿದ್ಯಾ ಸಂಸ್ಥೆಯಲ್ಲಿ 2026 -2027 ಸಾಲಿನ ಯಕ್ಷ ಶಿಕ್ಷಣ ತರಗತಿಗೆ ಚಾಲನೆ ನೀಡಲಾಯಿತು. ಶಾಲಾ ಆಡಳಿತ ಮಂಡಳಿ ಕಾರ್ಯದರ್ಶಿ ಎ.ಕೆ. ಜಯರಾಮ ಶೇಕ, ಶಾಲಾ ಸಂಚಾಲಕ ಎ.ಗೋವಿಂದ ಶೆಣೈ, ಯಕ್ಷ ಧ್ರುವ ಪಟ್ಲ ಫೌಂಡೇಷನ್‌ನ ಬಂಟ್ವಾಳ ತಾಲೂಕು ಘಟಕದ ಅಧ್ಯಕ್ಷ ದಿವಾಕರ ಶೆಟ್ಟಿ ಪರಾರಿ ಗುತ್ತು, ಯಕ್ಷಗಾನ ಗುರು ರಕ್ಷಿತ್ ಶೆಟ್ಟಿ ಪಡ್ರೆ, ಶಾಲಾ ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ದಿನೇಶ್ ಶೆಟ್ಟಿ ಕೊಟ್ಟಿಂಜ, ಶಾಲಾ ಮುಖ್ಯಸ್ಥ ದೇವದಾಸ ಕೆ. ಆರ್. ಕೊಡ್ಮಾಣ್, ಶಾಲಾ ಶಿಕ್ಷಕ ರಕ್ಷಿತ್ ಉಪಸ್ಥಿತರಿದ್ದರು.

ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸಭೆ

ತುರ್ತು ಸ್ಪಂದನಾ ಘಟಕ ರಚನೆ

ಕಡಬ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಡಬ ಇದರ ಆಶ್ರಯದಲ್ಲಿ ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ಘಟಕದ ವಾರ್ಷಿಕ ಕೋರ್ ಕಮಿಟಿ ಸಭೆಯು ಶ್ರೀ ಜಯದುರ್ಗಾ ದೇವಸ್ಥಾನದ ಸಭಾಂಗಣದಲ್ಲಿ ನಡೆಯಿತು.

ದ.ಕ. ಜಿಲ್ಲಾ ನಿರ್ದೇಶಕ ಎ. ಬಾಬು ನಾಯ್ಕ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ ನಡೆಯುತ್ತಿರುವ ಶೌರ್ಯ ಕಾರ್ಯಕ್ರಮ ಕಡಬ ತಾಲೂಕಿನಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದು, ಸಮಾಜಮುಖಿ ಚಟುವಟಿಕೆಗಳ ಮೂಲಕ ಜನಮನ್ನಣೆ ಗಳಿಸಿದೆ ಎಂದು ಶ್ಲಾಘಿಸಿದರು.

ಶೌರ್ಯ ಕಾರ್ಯಕ್ರಮದ ಯೋಜನಾಧಿಕಾರಿ ಜೈವಂತ್ ಪಟಗಾರ ಮಾತನಾಡಿ, ಶೌರ್ಯ ಕಾರ್ಯಕ್ರಮದ ಆಶಯ ಹಾಗೂ ಉದ್ದೇಶಗಳನ್ನು ವಿವರಿಸಿದರು. ತಾಲೂಕಿನ ಶೌರ್ಯ ಘಟಕಗಳ ಮಾಸಿಕ ಸಭೆ, ಶ್ರಮದಾನ ಕಾರ್ಯಕ್ರಮಗಳು ಹಾಗೂ

ತುರ್ತು ಸ್ಪಂದನಾ ಘಟಕ ರಚನೆ
ತಾಲೂಕಿನ ಶೌರ್ಯ ವಿಪತ್ತು ನಿರ್ವಹಣಾ ಚಟುವಟಿಕೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ರೂಪಿಸುವ ಉದ್ದೇಶದಿಂದ 25 ಸದಸ್ಯರ ತುರ್ತು ಸ್ಪಂದನಾ ಘಟಕವನ್ನು ರಚಿಸಲಾಯಿತು.

ಘಟಕಗಳ ಬಲವರ್ಧನೆ ಕುರಿತು ಮಾಹಿತಿ ಮತ್ತು ಮಾರ್ಗದರ್ಶನವನ್ನು ನೀಡಿದರು.

ಕಡಬ ತಾಲೂಕಿನ ಯೋಜನಾಧಿಕಾರಿ ಪ್ರಕಾಶ್ ಕುಮಾರ್ ಮಾತನಾಡಿದರು. ಕರಾವಳಿ ಪ್ರಾದೇಶಿಕ ವಿಭಾಗದ ಜನಜಾಗೃತಿ ವೇದಿಕೆಯ ಮೇಲ್ವಿಚಾರಕ ನಿತೇಶ್ ಕೆ., ಕಡಬ ತಾಲೂಕಿನ ಮೇಲ್ವಿಚಾರಕರು, ಶೌರ್ಯ ವಿಪತ್ತು ನಿರ್ವಹಣಾ ತಂಡದ ಸಂಯೋಜಕರು, ವಿವಿಧ ಘಟಕಗಳ ಪ್ರತಿನಿಧಿಗಳು ಹಾಗೂ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಡಬ ವಲಯದ ಮೇಲ್ವಿಚಾರಕ ವಿಜೇಶ್ ಜೈನ್ ಸ್ವಾಗತಿಸಿ, ಕೃಷಿ ಮೇಲ್ವಿಚಾರಕ ಸೋಮೇಶ್ ವಂದಿಸಿದರು.

ಈಳವ, ತೀಯಾ, ಬಿಲ್ಲವ ವಿಭಾಗದಿಂದ ಬೇರ್ಪಡಿಸಲು ತೀಯಾ ಮಹಾಸಭಾದ ರಾಜ್ಯ ಸಮಿತಿ ಆಗ್ರಹ

ಪ್ರತ್ಯೇಕ ಜಾತಿಯಾಗಿ ಅಂಗೀಕರಿಸಿ

ಕಾಸರಗೋಡು: ಮಲಬಾರಿನ ಹಿಂದು ಸಮುದಾಯದ ಅತಿದೊಡ್ಡ ವಿಭಾಗಗಳಲ್ಲಿ ಒಂದಾಗಿರುವ ಸುಮಾರು 60 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ತೀಯಾ ಸಮುದಾಯವನ್ನು ಪ್ರಸ್ತುತ ಆಡಳಿತಾತ್ಮಕವಾಗಿ ಸೇರಿಸಲಾಗಿರುವ ಈಳವ – ತೀಯಾ – ಬಿಲ್ಲವ ವಿಭಾಗದಿಂದ ಬೇರ್ಪಡಿಸಿ ಪ್ರತ್ಯೇಕ ಜಾತಿಯಾಗಿ ಅಂಗೀಕರಿಸಬೇಕು ಮತ್ತು ಅದೇ ರೀತಿಯಲ್ಲಿ ಒಬಿಸಿ ಮೀಸಲಾತಿಯಲ್ಲಿ ಜನಸಂಖ್ಯಾನುಪಾತಕ್ಕೆ ಅನುಗುಣವಾಗಿ ವಿಶೇಷ ಸಬ್ ಕೋಟಾವನ್ನು ಮಂಜೂರು ಮಾಡಬೇಕು ಎಂದು ತೀಯಾ ಮಹಾಸಭಾದ ರಾಜ್ಯ ಸಮಿತಿಯು ಮಲಪ್ಪುರಂನಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದೆ.

ಸಾಮಾಜಿಕ ನ್ಯಾಯದ ಭಾಗವಾಗಿದೆ

ತೀಯಾ ಸಮುದಾಯಕ್ಕೆ ತನ್ನದೇ ಆದ ಇತಿಹಾಸ, ಸಾಮಾಜಿಕ, ಸಾಂಸ್ಕೃತಿಕ ಪರಂಪರೆ, ಆಚಾರ ಅನುಷ್ಠಾನಗಳು ಮತ್ತು ಸಾಮಾಜಿಕ ಅಸ್ತಿತೆ ಇರುವುದರಿಂದ ಆಡಳಿತಾತ್ಮಕ ದಾಖಲೆಗಳು ಹಾಗೂ ಸರಕಾರದ ನೀತಿಗಳಲ್ಲಿಯೂ ಅದೇ ಅಸ್ತಿತೆ ಪ್ರತಿಬಿಂಬಿಸಬೇಕಾಗಿರುವುದು ಸಂವಿಧಾನವು ಖಾತರಿಪಡಿಸಿರುವ ಸಾಮಾಜಿಕ ನ್ಯಾಯದ ಭಾಗವಾಗಿದೆ ಎಂದು ಪದಾಧಿಕಾರಿಗಳು ಹೇಳಿದ್ದಾರೆ.

ನಿಖರವಾದ ಮಾಹಿತಿ ಲಭ್ಯವಾಗುತ್ತಿಲ್ಲ

ತೀಯಾರು ಮತ್ತು ಈಳವರು ಬೇರೆ ಬೇರೆ ಜಾತಿಗಳು ಎಂಬ ವಿಷಯವನ್ನು ಕೇರಳ ಇನ್‌ಸ್ಟಿಟ್ಯೂಟ್ ಫಾರ್ ರಿಸರ್ಚ್, ಟ್ರೈನಿಂಗ್ ಆ್ಯಂಡ್ ಡೆವಲಪ್‌ಮೆಂಟ್ ಸ್ಟಡೀಸ್ ಆಫ್



ಶೆಡ್ಯೂಲ್ಡ್ ಕಾಸ್ಟ್ಸ್ , ಶೆಡ್ಯೂಲ್ಡ್ ಟ್ರೈಬ್ಸ್ ಆ್ಯಂಡ್ ಆದರ್ ಬ್ಯಾಕ್‌ವರ್ಡ್ ಕ್ಲಾಸಸ್ ನಡೆಸಿದ ಅಧ್ಯಯನದ ಆಧಾರದ ಮೇಲೆ ಹಿಂದುಳಿದ ವರ್ಗಗಳ ಆಯೋಗಕ್ಕೆ ತಿಳಿಸಲಾಗಿದೆ. ಆದರೂ ಆಡಳಿತಾತ್ಮಕವಾಗಿ ಎರಡೂ ಸಮುದಾಯಗಳನ್ನು ಒಂದೇ ವಿಭಾಗವಾಗಿ ಪರಿಗಣಿಸುವ ಪರಿಸ್ಥಿತಿ ಮುಂದುವರಿಯುತ್ತಿದೆ ಎಂದು ಸಂಘಟನೆಯು ಆರೋಪಿಸಿದೆ. ಇದರಿಂದಾಗಿ ತೀಯಾ ಸಮುದಾಯದ ನೈಜ ಜನಸಂಖ್ಯೆ, ಶೈಕ್ಷಣಿಕ ಮಟ್ಟ, ಉದ್ಯೋಗ ಪ್ರಾತಿನಿಧ್ಯ, ಸಾಮಾಜಿಕ, ಆರ್ಥಿಕ ಪ್ರಗತಿ ಇವುಗಳ ಬಗ್ಗೆ ನಿಖರವಾದ ಮಾಹಿತಿ ಲಭ್ಯವಾಗುತ್ತಿಲ್ಲ ಎಂದು ಪದಾಧಿಕಾರಿಗಳು ಉಲ್ಲೇಖಿಸಿದರು.

ಗಮನಾರ್ಹ ಕ್ರಮ ತೆಗೆದುಕೊಂಡಿಲ್ಲ

ಈ ವಿಷಯದಲ್ಲಿ ಕಾನೂನು ಪರಿಹಾರ ಕೋರಿ ತೀಯಾ ಮಹಾಸಭಾದ ನೇತೃತ್ವದಲ್ಲಿ ಕೇರಳ ಹೈಕೋರ್ಟ್‌ಗೆ ಮೊರೆ ಹೋಗಲಾಗಿತ್ತು. ನ್ಯಾಯಾಲಯವು ಸರಕಾರಕ್ಕೆ ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ವಿಷಯವನ್ನು ಕಾನೂನುಬದ್ಧವಾಗಿ ಪರಿಗಣಿಸಿ ಅಗತ್ಯದ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದ್ದರೂ ಇಲ್ಲಿಯವರೆಗೆ ಗಮನಾರ್ಹ ಕ್ರಮ ತೆಗೆದುಕೊಂಡಿಲ್ಲ ಎಂದು ಸಂಘಟನೆ ತಿಳಿಸಿದೆ. ಇದರ ಪರಿಣಾಮವಾಗಿ ನ್ಯಾಯಾಲಯದ ಆದೇಶ ಜಾರಿಗೊಳಿಸದಿರುವ ಸಂಬಂಧ ನ್ಯಾಯಾಲಯ ನಿಂದನೆ ಅರ್ಜಿಯನ್ನು ಹೈಕೋರ್ಟ್‌ನಲ್ಲಿ ಸಲ್ಲಿಸಲಾಗಿದೆ ಎಂದು ಮುಖಂಡರು ವಿವರಿಸಿದರು.

ಮನವಿಗಳನ್ನು ಸಲ್ಲಿಸಲಾಗಿದೆ

ಈ ವಿಷಯದ ಕುರಿತು ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ವಿವಿಧ ರಾಜಕೀಯ ಪಕ್ಷಗಳ ನಾಯಕರು, ಸಚಿವರು, ಸಂಸದರು, ಶಾಸಕರು, ಹಿಂದುಳಿದ ವರ್ಗಗಳ ಆಯೋಗ, ಇಲಾಖಾ ಕಾರ್ಯದರ್ಶಿಗಳು ಮತ್ತು ಇತರ ಸಂಬಂಧಿತ ಸರಕಾರಿ ಅಧಿಕಾರಿಗಳಿಗೆ ಸಮಗ್ರವಾದ ಮನವಿಗಳನ್ನು ಸಲ್ಲಿಸಲಾಗಿದೆ. ರಾಜ್ಯಾದ್ಯಂತ ಜನಜಾಗೃತಿ ಕಾರ್ಯಕ್ರಮಗಳು ಮತ್ತು ಕಾನೂನು ಮಧ್ಯಸ್ಥಿಕೆಗಳನ್ನು ಬಲಪಡಿಸಲಾಗುವುದು ಎಂದು ನಾಯಕರು ತಿಳಿಸಿದರು.

ಮುಂಬರುವ ಜಾತಿ ಜನಗಣತಿಯಲ್ಲಿ ತೀಯಾರನ್ನು ಇಟಿಬಿ ವಿಭಾಗದ ಭಾಗವಾಗಿ ಪರಿಗಣಿಸದೆ ತೀಯಾ ಎಂಬ ಪ್ರತ್ಯೇಕ ಜಾತಿಯಾಗಿ ವಿಶೇಷವಾಗಿ ನಮೂದಿಸಿ ನಿಖರವಾದ ಜನಸಂಖ್ಯೆಯನ್ನು ಲೆಕ್ಕ ಹಾಕಬೇಕು. ನೈಜ ಜನಸಂಖ್ಯೆಯ ಆಧಾರದ ಮೇಲೆ ಮಾತ್ರ ಸಾಮಾಜಿಕ ನ್ಯಾಯ, ಕಲ್ಯಾಣ ಯೋಜನೆಗಳು, ಶೈಕ್ಷಣಿಕ ಅವಕಾಶಗಳು, ಉದ್ಯೋಗ ಮೀಸಲಾತಿ ಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯ ಎಂದು ನಾಯಕರು ಅಭಿಪ್ರಾಯಪಟ್ಟರು.

ತುರ್ತಾಗಿ ಆದೇಶ ಹೊರಡಿಸಬೇಕು

ಹೆಚ್ಚುವರಿಯಾಗಿ ಶಾಲಾ ಪ್ರವೇಶ ದಾಖಲೆ, ಎಸ್‌ಎಸ್‌ಎಲ್‌ಸಿ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ, ಜನನ ಮರಣ ಪ್ರಮಾಣಪತ್ರ, ರೇಷನ್ ಕಾರ್ಡ್ ಮತ್ತು ಇತರ ಎಲ್ಲಾ ಸರಕಾರಿ ದಾಖಲೆಗಳಲ್ಲಿ ಈಳವ/ ತೀಯಾ ಎಂಬ ಸಂಯುಕ್ತ ನಮೂದನ್ನು ಕೊನೆಗೊಳಿಸಿ ತೀಯಾ ಎಂಬ ಹೆಸರನ್ನು ಪ್ರತ್ಯೇಕವಾಗಿ ನಮೂದಿಸಲು ರಾಜ್ಯ ಸರಕಾರವು ತುರ್ತಾಗಿ ಆದೇಶ ಹೊರಡಿಸಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಲಾಗಿದೆ.

ತೀಯಾ ಮಹಾಸಭಾದ ರಾಜ್ಯಾಧ್ಯಕ್ಷ ಗಣೇಶ್ ಅರಮಂಗಾನಂ, ರಾಜ್ಯ ಕಾರ್ಯದರ್ಶಿ ಪ್ರೇಮಾನಂದನ್ ನಡುತ್ತೋಡಿ, ರಾಜ್ಯ ಸಹ ಸಂಯೋಜಕ ಜಯಪ್ರಕಾಶ್ ಕೊಟ್ಟಾಯಿಲ್, ತೀಯಾ ಮಹಾಸಭಾ ಮಲಪ್ಪುರಂ ಜಿಲ್ಲಾಧ್ಯಕ್ಷ ಅಯ್ಯಪ್ಪನ್ ಪಟ್ಟಾಳತ್ತಿಲ್, ಜಿಲ್ಲಾ ಕಾರ್ಯದರ್ಶಿ ಪ್ರಶಾಂತ್ ಮೇಲ್ಮುರಿ, ಜಿಲ್ಲಾ ಕೋಶಾಧಿಕಾರಿ ರಿನೀಶ್ ವಿ.ಕೆ., ರಾಜ್ಯ ಉಪಾಧ್ಯಕ್ಷೆ ಸೌದಾಮಿನಿ ನಾರಾಯಣನ್, ಜಿಲ್ಲಾ ಉಪಾಧ್ಯಕ್ಷ ಗೋಪಾಲಕೃಷ್ಣನ್, ಜಿಲ್ಲಾ ಜೊತೆ ಕಾರ್ಯದರ್ಶಿ ರಾಜಗೋಪಾಲನ್ ಗೋಷ್ಠಿಯಲ್ಲಿದ್ದರು.

ಪ್ರಮುಖರ ಉಲ್ಲೇಖ

ಒಬಿಸಿ ವಿಭಾಗದೊಳಗಿನ ವಿವಿಧ ಸಮುದಾಯಗಳಿಗೆ ಜನಸಂಖ್ಯೆ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಯ ಆಧಾರದ ಮೇಲೆ ಸೌಲಭ್ಯಗಳನ್ನು ಒದಗಿಸಿಕೊಟ್ಟ ರೀತಿಯಲ್ಲಿ ತೀಯಾ ಸಮುದಾಯಕ್ಕೂ ಜನಸಂಖ್ಯಾನುಪಾತಕ್ಕೆ ಅನುಗುಣವಾಗಿ ವಿಶೇಷ ಸಬ್ ಕೋಟಾವನ್ನು ಮಂಜೂರು ಮಾಡಬೇಕು. ಹಾಗಾದಲ್ಲಿ ಮಾತ್ರ ಸಂವಿಧಾನದ 15 (4), 16 (4), 46ನೇ ವಿಧಿಗಳು ಕಲ್ಪಿಸಿರುವ ಸಾಮಾಜಿಕ ನ್ಯಾಯ, ಸಮಾನತೆ, ಹಿಂದುಳಿದ ವರ್ಗಗಳ ಉನ್ನತಿಯ ಗುರಿಗಳು ಸಾಕಾರಗೊಳ್ಳುತ್ತವೆ ಎಂದು ಸಂಘಟನೆಯ ಪ್ರಮುಖರು ಉಲ್ಲೇಖಿಸಿದರು.

ಗಂಗೊಳ್ಳಿ ಎಸ್.ವಿ.ನ ಪಿಯು, ಕನ್ನಡ, ಆಂಗ್ಲ ಮಾಧ್ಯಮದ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಕುಂದಾಪುರ: ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಜೀವನದ ಬಹುಮುಖ್ಯವಾದ ಘಟ್ಟ. ಈ ಸಂದರ್ಭ ತೆಗೆದುಕೊಳ್ಳುವ ನಿರ್ಧಾರ ಜೀವನದ ಮುಂದಿನ ಹಾದಿಯನ್ನು ನಿರ್ಧರಿಸುತ್ತದೆ. ಯಾವುದೇ ನಿರ್ಧಾರ ತೆಗೆದುಕೊಳ್ಳಬೇಕಾದರೂ ಕಷ್ಟಪಟ್ಟು ತೆಗೆದುಕೊಳ್ಳದೆ ಇಷ್ಟಪಟ್ಟು ತೆಗೆದುಕೊಳ್ಳಬೇಕು ಎಂದು ಗಂಗೊಳ್ಳಿ ಉದ್ಯಮಿ ಜಿ.ವೆಂಕಟೇಶ ಶೆಣೈ ಹೇಳಿದರು.

ಅವರು ಗಂಗೊಳ್ಳಿ ಜಿ.ಎಸ್.ವಿ.ಎಸ್. ಅಸೋಸಿಯೇಶನ್‌ನಿಂದ ಗಂಗೊಳ್ಳಿ ಎಸ್.ವಿ. ಪ.ಪೂ. ಕಾಲೇಜು, ಎಸ್.ವಿ. ಕನ್ನಡ ಮಾಧ್ಯಮ ಪ್ರೌಢ ಶಾಲೆ, ಎಸ್.ವಿ. ಆಂಗ್ಲ ಮಾಧ್ಯಮ ಶಾಲೆ ಗಂಗೊಳ್ಳಿ ಇಲ್ಲಿನ 2025– 26ನೇ ಸಾಲಿನ ಎಸ್ಸೆಸ್ಸೆಲ್ಸಿ –ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕಾಲೇಜಿನ ಗುಜ್ಜಾಡಿ ಗೋಪಾಲ ನಾಯಕ್ ರೋಟರಿ ಒಳಾಂಗಣದಲ್ಲಿ ಶನಿವಾರ ಜರಗಿದ ಸಮ್ಮಾನ ಸಮಾರಂಭದಲ್ಲಿ ಅತಿಥಿಯಾಗಿ ಮಾತನಾಡಿದರು.

ಜಿ.ಎಸ್.ವಿ.ಎಸ್.ಅಸೋಸಿಯೇಶನ್ ಅಧ್ಯಕ್ಷ ಡಾ.ಕಾಶೀನಾಥ ಪೈ ಅಧ್ಯಕ್ಷತೆ ವಹಿಸಿದ್ದರು. ದ್ವಿತೀಯ ಪಿಯು ಪರೀಕ್ಷೆಯಲ್ಲಿ ರಾಜ್ಯಮಟ್ಟ ದಲ್ಲಿ ರ್‍ಯಾಂಕ್



ಪಡೆದ ಗೌತಮಿ ಜಿ. ನಾಯಕ್, ಧನ್ಯ ಪೂಜಾರಿ, ಸಿಂಧು ಖಾರ್ವಿ, ನವ್ಯಶ್ರೀ ಕೆ., ಎಸ್ಸೆಸ್ಸೆಲ್ಸಿ ಪರೀಕ್ಷೆ ಯಲ್ಲಿ ರ್‍ಯಾಂಕ್ ಪಡೆದ ಶ್ರೀನಿವಾಸ ವಿ. ಪೈ, ಅತ್ಯುತ್ತಮ ಸಾಧನೆ ಮಾಡಿದ ಶ್ರೇಜಸ್ ಪೂಜಾರಿ ಅವರನ್ನು ಸನ್ಮಾನಿಸಲಾಯಿತು.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ಪ್ರತೀಕ ಕೊಠಾರಿ , ನವ್ಯಶ್ರೀ ಕೆ. ಅವರಿಗೆ ಕುಂದಾಪುರದ ಡಾ.ಉಮೇಶ ಪುತ್ರನ್ ನೀಡಿದ ತಲಾ 25 ಸಾವಿರ ರೂ., ವಾಣಿಜ್ಯ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಗೌತಮಿ ಜಿ.ನಾಯಕ್, ಸಿಂಚನ, ಮಾನ್ಯ ಖಾರ್ವಿಗೆ ನಗರ ಕೃಷ್ಣಾನಂದ ನಾಯಕ್ ನೀಡಿದ ತಲಾ 5 ಸಾವಿರ ರೂ.ಗಳ ನೀಡಿ ಗೌರವಿಸಲಾಯಿತು. ಎಸ್ಸೆಸ್ಸೆಲ್ಸಿ –ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು , ವಿಷಯವಾರು ಶೇ.100 ಅಂಕ ಪಡೆದ ವಿಷಯ ಶಿಕ್ಷಕರನ್ನು ಗೌರವಿಸಲಾಯಿತು.

ಜಿ.ಎಸ್.ವಿ.ಎಸ್. ಅಸೋಸಿಯೇಶನ್ ಕಾರ್ಯದರ್ಶಿ ಎಚ್.ಗಣೇಶ ಕಾಮತ್, ಎನ್.ಅಶ್ವಿನ್ ನಾಯಕ್ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲೆ ಕವಿತಾ ಎಂ.ಸಿ. ಸ್ವಾಗತಿಸಿ, ಸಂಚಾಲಕ ಎನ್. ಸದಾಶಿವ ನಾಯಕ್ ಪ್ರಸ್ತಾವನೆಗೈದರು. ಪ್ರೌಢಶಾಲಾ ವಿಭಾಗ ಉಪಪ್ರಾಂಶುಪಾಲ ಗೋಪಾಲ ದೇವಾಡಿಗ ಅತಿಥಿಗಳ ಗೌರವಿಸಿದರು. ಉಪನ್ಯಾಸಕರಾದ ಪವಿತ್ರಾ, ಪ್ರಫುಲ್ಲಾ, ಶಿಕ್ಷಕರಾದ ಸುಜಾತಾ, ಆದಿನಾಥ ಕಿಣಿ ವಿದ್ಯಾರ್ಥಿಗಳ ಪಟ್ಟಿ ವಾಚಿಸಿದರು. ಉಪನ್ಯಾಸಕ ನರೇಂದ್ರ ಎಸ್.ಗಂಗೊಳ್ಳಿ ನಿರೂಪಿಸಿ, ಆಂಗ್ಲ ಮಾಧ್ಯಮ ಶಾಲೆ ಮುಖ್ಯ ಶಿಕ್ಷಕ ರಾಘವೇಂದ್ರ ಶೇರುಗಾರ್ ವಂದಿಸಿದರು.

ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಕಾರ್ಯಕ್ರಮ

ದುಶ್ಚಟಗಳಿಗೆ ಬಲಿಯಾಗಬೇಡಿ: ಡಿವೈಎಸ್ಪಿ

ವೀರಾಜಪೇಟೆ: ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದೆ ಆರೋಗ್ಯವಂತ ಸಮಾಜವನ್ನು ನಿರ್ಮಿಸಬೇಕು. ಅದಕ್ಕಾಗಿ ಮಾದಕ ದ್ರವ್ಯಗಳ ವಿರುದ್ಧ ಯುದ್ಧ ಸಾರಬೇಕಿದೆ ಎಂದು ವೀರಾಜಪೇಟೆ ಉಪವಿಭಾಗದ ಡಿವೈಎಸ್ಪಿ ಮಹೇಶ್ ಕುಮಾರ್ ಹೇಳಿದರು.

ಕೊಡಗು ಜಿಲ್ಲಾ ಪೊಲೀಸ್ ಇಲಾಖೆ, ವೀರಾಜಪೇಟೆ ಪೊಲೀಸ್ ಠಾಣೆ , ಸಂತ ಅನ್ನಮ್ಮ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಮಾದಕ ವಸ್ತುಗಳ ಸೇವನೆ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜಿಲ್ಲಾ ಪೊಲೀಸ್ ಇಲಾಖೆಯ ಕ್ರೈಂ ವಿಭಾಗದ ಅಧಿಕಾರಿ ಸಚಿನ್ ಮಾತನಾಡಿ, ಡ್ರಗ್ಸ್ ಸೇವನೆಯು ಒಂದು ಪಿಡುಗಾಗಿದ್ದು ಅದನ್ನು ನಿಯಂತ್ರಣ ಮಾಡದಿದ್ದರೆ ಸಮಾಜ ಹಾಗೂ ರಾಷ್ಟ್ರಕ್ಕೆ ಆಪತ್ತು ಎಂದು ಹೇಳಿದರು. ಸಾಕ್ಷ್ಯ ಚಿತ್ರಗಳ ಮೂಲಕ ಮಾದಕ ವಸ್ತುಗಳ ವಿಧಗಳು, ಸೇವನೆಯ ಪರಿಣಾಮಗಳು ಹಾಗೂ ಆರೋಗ್ಯದ ಮೇಲೆ ಆಗುವ ಹಾನಿಗಳ ಕುರಿತು ಉದಾಹರಣೆ ಸಹಿತ ವಿವರಿಸಿದರು.



ಡ್ರಗ್ ನಿರ್ಮೂಲನೆ ಮಾಡಬೇಕು

ಉತ್ತಮ ಹವ್ಯಾಸಗಳನ್ನು ಬೆಳಸಿಕೊ ಳ್ಳಲು ವಿದ್ಯಾರ್ಥಿಗಳು ಉತ್ತಮ ಸ್ನೇಹಿತರ ಗೆಳೆತನ ಮಾಡಬೇಕು. ಭವ್ಯ ಭಾರತದಲ್ಲಿ ಯುವ ಜನತೆ ಮೇಲೆ ಅಪಾರ ನಿರೀಕ್ಷೆಯಿದ್ದು ಡ್ರಗ್ ನಿರ್ಮೂಲನೆಯನ್ನು ಮಾಡಬೇಕು. ಡ್ರಗ್ಸ್ ಪ್ರಪಂಚದಲ್ಲಿ ಅತೀ ದೊಡ್ಡ ಸಾಮಾಜಿಕ ಪಿಡುಗಾಗಿದ್ದು ಅದರ ನಿರ್ಮೂಲನೆ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ.

■ ಮಹೇಶ್ ಕುಮಾರ್

ಅಧ್ಯಕ್ಷತೆ ವಹಿಸಿದ್ದ ಸಂತ ಅನ್ನಮ್ಮ ಪ.ಪೂ.ಕಾಲೇಜಿನ ಪ್ರಾಂಶುಪಾಲ ರೆ. ಫಾ. ಮದಲೈ ಮುತ್ತು ಮಾತನಾಡಿ, ಯುವ ಜನರು ಮಾದಕ ವಸ್ತುಗಳ ಸೇವನೆಗೆ ಬಲಿಯಾಗದೆ ಸ್ವಾಸ್ಥ್ಯ ಸಮಾಜವನ್ನು ನಿರ್ಮಾಣ ಮಾಡಬೇಕು. ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ ದೈಹಿಕವಾಗಿ ಹಾಗೂ ಮಾನಸಿಕ ವಾಗಿ ಸದೃಢರಾಗಿ ಎಂದು ಹೇಳಿದರು.

ಈ ಸಂದರ್ಭ ಡ್ರಗ್ಸ್ ಜಾಗೃತಿಯ ಘೋಷಣಾ ಫಲಕ ಹಿಡಿದು ವಿದ್ಯಾರ್ಥಿಗಳು ಡ್ರಗ್ಸ್ ಮುಕ್ತ ಸಮಾಜ ನಿರ್ಮಿಸುವುದಾಗಿ ಘೋಷಣೆ ಮಾಡಿದರು.

ವೀರಾಜಪೇಟೆ ಪೊಲೀಸ್ ವೃತ್ತ ನಿರೀಕ್ಷಕ ಪಿ. ಅನೂಪ್ ಮಾದಪ್ಪ, ನಗರ ಪೊಲೀಸ್ ಠಾಣಾಧಿಕಾರಿ ಪ್ರಮೋದ್, ಅಪರಾಧ ವಿಭಾಗದ ಠಾಣಾಧಿಕಾರಿ ಕಾವೇರಪ್ಪ, ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಲತಾ ಉಪಸ್ಥಿತರಿದ್ದರು.

ಉಪನ್ಯಾಸಕ ವಿವೇಕ್ ಸ್ವಾಗತಿಸಿ ನಿರೂಪಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರು, ಪೊಲೀಸ್ ಇಲಾಖೆಯ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಕ್ಷಣ ಇಲಾಖೆಯಿಂದ ಮಾನ್ಯತೆ ರದ್ದು ಆದೇಶ | ಶ್ರೀ ಸೀತಾರಾಘವ ವಿದ್ಯಾವರ್ಧಕ ಸಂಘ ಸ್ಪಷ್ಟನೆ

ಪೆರ್ನಾಜೆ ಅನುದಾನಿತ ಕನ್ನಡ ಶಾಲೆ ಉಳಿಸಲು ಸತತ ಪ್ರಯತ್ನ

ಪುತ್ತೂರು: ತಾಲೂಕಿನ ಪೆರ್ನಾಜೆಯ ಶ್ರೀ ಸೀತಾರಾಘವ ವಿದ್ಯಾವರ್ಧಕ ಸಂಘದ ಸಾರಥ್ಯದಲ್ಲಿ 1966–67ನೇ ಸಾಲಿನಿಂದ ನಡೆಯುತ್ತಿದ್ದ ಕನ್ನಡ ಮಾಧ್ಯಮ ಶಾಲೆಯನ್ನು ಮಕ್ಕಳ ಸಂಖ್ಯೆ ಆಧಾರದಲ್ಲಿ ಮಾನ್ಯತೆ ಹಿಂದಕ್ಕೆ ಪಡೆದು ಶಿಕ್ಷಣ ಇಲಾಖೆ ಆದೇಶ ನೀಡಿದೆ. ಆದರೆ, ಸಂಘ ಹೊಸ ಆಡಳಿತ ಮಂಡಳಿ ನೇತೃತ್ವದಲ್ಲಿ ಅನುದಾನಿತ ಕನ್ನಡ ಮಾಧ್ಯಮ ಶಾಲೆ ಉಳಿಸಲು ಯತ್ನಿಸುತ್ತಿದೆ ಎಂದು ಸಂಘದ ಅಧ್ಯಕ್ಷ ಗೋಪಾಡ್ಕರ್ ಮತ್ತು ಕಾರ್ಯದರ್ಶಿ ಡಾ.ಬಿ.ಜಿ. ಆವಟಿ ಹೇಳಿದ್ದಾರೆ.

ಶನಿವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾವರ್ಧಕ ಸಂಘವು ಶಾಲೆ ಮನ್ನಡೆಸಿದ್ದು, 9ನೇ ತರಗತಿಯವರೆಗಿನ ಮಕ್ಕಳಿಗೆ ಪರೀಕ್ಷೆ ನಡೆಸಿದೆ. ಆದರೂ ಇಲಾಖೆಯು ಮಾನ್ಯತೆ ರದ್ದು ಆದೇಶ ಹೊರಡಿಸಿದೆ. ಇದೀಗ ಕೆಲವರು ಶಾಲೆಯ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಇದರಿಂದ ಶಾಲೆಯಲ್ಲಿ



ಕಲಿಯುತ್ತಿರುವ ಮಕ್ಕಳು ಮತ್ತು ಅವರ ಪೋಷಕರ ಮನಸಿನಲ್ಲಿ ಅನಗತ್ಯ ಗೊಂದಲಗಳ ಸೃಷ್ಟಿ ಮಾಡುವಂತಾಗಿದೆ. ಪ್ರಸ್ತುತ ನಾನಾ ತರಗತಿಗಳಲ್ಲಿ ಒಟ್ಟು 75 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕರು 2026ರ ಏ.15ರಂದು ನೀಡಿದ ಆದೇಶದ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಕನ್ನಡ ಮಾಧ್ಯಮ ಶಾಲೆ ಉಳಿಸಿಕೊಡುವಂತೆ ವಿನಂತಿಸಿದ್ದೇವೆ. ಶಾಲೆಯ ಮಾನ್ಯತೆ ರದ್ದು ಮಾಡಬಾರದೆಂದು ನ್ಯಾಯಾಲಯದಲ್ಲಿ ಕೇಳಿದ್ದೇವೆ. ಪ್ರಸ್ತುತ ನ್ಯಾಯಾಲಯದ ವಿಚಾರಣೆ ನಡೆಯುತ್ತಿದ್ದು, ನಾವು ಶಾಲೆಯನ್ನು ನಡೆಸುತ್ತಿದ್ದೇವೆ. ಮಾನ್ಯತೆ ಹಿಂದಕ್ಕೆ ಪಡೆದುಕೊಂಡ ಕಾರಣ ಶಾಲೆಯಲ್ಲಿದ್ದ ಇಬ್ಬರು ಶಿಕ್ಷಕರ ವೇತನಾನುದಾನ, ಬಿಸಿಯೂಟ ಇತ್ಯಾದಿಗೆ ತೊಡಕಾಗಿದೆ. ಮಕ್ಕಳಿಗೆ ಸಮಸ್ಯೆಯಾಗಬಾರದೆಂಬ ಕಾರಣಕ್ಕೆ ಆಡಳಿತ ಮಂಡಳಿಯೇ ಎಲ್ಲವನ್ನೂ ಭರಿಸುತ್ತಿದೆ. ಸಂಘವು ಶಾಲೆಯಲ್ಲಿ ಮಕ್ಕಳಿಗೆ ಸಂಪೂರ್ಣ ಉಚಿತ ಶಿಕ್ಷಣದ ಭರವಸೆ ನೀಡಿದೆ. ದಾನಿಗಳಿಂದ ದೇಣಿಗೆ ಸಂಗ್ರಹಿಸಿ ಮಕ್ಕಳಿಗೆ ಉಚಿತ ಕನ್ನಡ ಮಾಧ್ಯಮ ಶಿಕ್ಷಣ ನಡೆಸುವುದು ನಮ್ಮ ಉದ್ದೇಶ ಎಂದರು.

ಶಾಲೆ ಮುಂದುವರೆಸುತ್ತೇವೆ

ನ್ಯಾಯಾಂಗ ಹೋರಾಟದಲ್ಲಿ ನ್ಯಾಯ ಸಿಗುವ ಭರವಸೆ ಇದೆ. ಒಂದು ವೇಳೆ ಶಾಲೆಯ ಅನುದಾನ ಮುಂದುವರಿಸದೇ ಇದ್ದಲ್ಲಿ ಇಬ್ಬರು ಶಿಕ್ಷಕರಿಗೆ ಆಡಳಿತ ಮಂಡಳಿಯಿಂದಲೇ ವೇತನ ನೀಡಲಾಗುವುದು , ಉಳಿದ ವಿಷಯಗಳ ಶಿಕ್ಷಕರನ್ನು ನೇಮಿಸಿಕೊಂಡು ಶಾಲೆ ಮುಂದುವರಿಸಲಿದ್ದೇವೆ. ಯಾವುದೇ ಕಾರಣಕ್ಕೂ ಶಾಲೆಯನ್ನು ಮುಚ್ಚುವ ಪ್ರಶ್ನೆಯೇ ಇಲ್ಲ. 1966–67ರಿಂದ ಅನುದಾನಿತ ಶಾಲೆಯಾಗಿ ನಡೆದು ಬಂದಿದ್ದನ್ನು, ಅನುದಾನ ರಹಿತ ಶಾಲೆಯಾಗಿ ಮುಂದುವರಿಸಲು ಸಿದ್ಧರಿದ್ದೇವೆ. ಹೀಗಾಗಿ ದಾಖಲಾತಿ ಪಡೆದ ಮಕ್ಕಳು ಮತ್ತು ಅವರ ಪೋಷಕರು ವಿಚಲಿತರಾಗಬಾರದು. ಜೂ. 30ರಂದು ನ್ಯಾಯಾಲಯದ ಆದೇಶ ಹೊರಬೀಳುವ ಸಾಧ್ಯತೆ ಇದೆ. ಜು.30ರವರೆಗೂ ಶಾಲಾ ದಾಖಲಾತಿಗೆ ಅವಕಾಶವಿದೆ ಎಂದು ಹೇಳಿದರು.

ಶಾಲೆ ಇರುವ ಜಾಗವು ಅರಣ್ಯ ಇಲಾಖೆಗೆ ಸೇರಿದ್ದಾಗಿದೆ. 1966–67ರಲ್ಲಿ ಶಾಲೆ ಮತ್ತು ಹಾಸ್ಟೆಲ್ ನಡೆಸಲು ಈ ಜಾಗ ನೀಡಲಾಗಿತ್ತು. ಇಲ್ಲಿಯವರೆಗೂ ಅದೇ ಉದ್ದೇಶಕ್ಕಾಗಿ ಜಾಗ ಬಳಕೆಯಾಗಿದೆ. ಇನ್ನು ಮುಂದೆಯೂ ಅದೇ ಉದ್ದೇಶಕ್ಕಾಗಿ ಬಳಕೆಯಾಗಲಿದೆ. ಪ್ರಸ್ತುತ ಶ್ರೀ ಸೀತಾರಾಘವ ವಿದ್ಯಾವರ್ಧಕ ಸಂಘ ಮತ್ತು ಶಾಲೆಯ ವಿರುದ್ಧ ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಇದರಲ್ಲಿ ಯಾವುದೇ ಹುರಳಿಲ್ಲ. ಮಕ್ಕಳಿಗೆ ಕೇವಲ ಅಂಕ ಆಧರಿತ ಶಿಕ್ಷಣ ಸಿಕ್ಕದರೆ ಸಾಲದು ಎಂಬ ನೆಲೆಯಲ್ಲಿ ಸ್ವರೂಪ ಶಿಕ್ಷಣ ಸಂಸ್ಥೆಯ ಜತೆ ಸಂಯೋಜನೆ ಮಾಡಿಕೊಂಡು ಸಾಮರ್ಥ್ಯ ಶಿಕ್ಷಣ ನೀಡಲು ಆರಂಭಿಸಿದ್ದೇವೆ ಎಂದು ಡಾ.ಬಿ.ಜಿ. ಆವಟಿ ಮತ್ತು ಗೋಪಾಡ್ಕರ್ ಹೇಳಿದರು.

ಶಾಲೆಯ ಸಂಚಾಲಕ ಜಯಪ್ರಕಾಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪತ್ರಕರ್ತರೊಂದಿಗೆ ಸಂವಾದ ಕಾರ್ಯಕ್ರಮ | ಶಾಸಕ ವಿ. ಸುನಿಲ್ ಆರೋಪ

ವಿಘ್ನ ಸಂತೋಷಿಗಳಿಗೆ ಥೀಂ ಪಾರ್ಕ್ ಬಲಿ

ಕಾರ್ಕಳ: ಕಾರ್ಕಳದಲ್ಲಿ ವಿಘ್ನ ಸಂತೋಷಿಗಳ ಗುಂಪಿಗೆ ಥೀಮ್ ಪಾರ್ಕ್, ಎಣ್ಣೆ ಹೊಳೆ, ಯಕ್ಷ ರಂಗಾಯಣ ಬಲಿಯಾಗಿದೆ ಎಂದು ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ಹೇಳಿದ್ದಾರೆ.

ಅವರು ಕಾರ್ಕಳ ಪತ್ರಿಕಾಭವನದಲ್ಲಿ ಶನಿವಾರ ಕಾರ್ಕಳ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಕರ್ತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಪರಶುರಾಮ ಥೀಮ್ ಪಾರ್ಕ್ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಯೋಜನೆಯ ಇಂದಿನ ಸ್ಥಿತಿಗೆ ಕಾಂಗ್ರೆಸ್ ನಾಯಕ ಮುನಿಯಾಲು ಉದಯಕುಮಾರ್ ಶೆಟ್ಟಿ ಕಾರಣ ಎಂದು ಆರೋಪಿಸಿದರು. ಅಭಿವೃದ್ಧಿ ವಿಷಯವನ್ನು ರಾಜಕೀಯಕ್ಕೆ ಬಳಸುತ್ತಿರುವ ಕಾಂಗ್ರೆಸ್ ಜನರ ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿದೆ ಎಂದು ಟೀಕಿಸಿದರು. ಪರಶುರಾಮ ಥೀಮ್ ಪಾರ್ಕ್ ಆವರಣದಲ್ಲಿ ಕಾರ್ಯಕ್ರಮ ನಡೆಸಲು ಜಿಲ್ಲಾಡಳಿತ ಅನುಮತಿ ನೀಡಬೇಕು ಎಂದು ಆಗ್ರಹಿಸಿದ ಅವರು, ಸಾರ್ವಜನಿಕ ಆಸ್ತಿಯನ್ನು ಜನರ ಬಳಕೆಗೆ ಮುಕ್ತಗೊಳಿಸಬೇಕು ಎಂದರು.

ಬಹುಕಾಲದ ಬೇಡಿಕೆಯಾಗಿದೆ



ಕಾರ್ಕಳಕ್ಕೆ ಹೊಸ ರೈಲು ಸಂಪರ್ಕ ಬೇಕು ಎನ್ನುವುದು ಬಹುಕಾಲದ ಬೇಡಿಕೆಯಾಗಿದೆ. ಈಗಾಗಲೇ ಉಡುಪಿ- ಕಾರ್ಕಳ- ಧರ್ಮಸ್ಥಳ- ಸಕಲೇಶಪುರ ಹಾಗೂ ಶಿವಮೊಗ್ಗ-ಶೃಂಗೇರಿ-ಧರ್ಮಸ್ಥಳ ಸಂಪರ್ಕಿಸುವ ರೈಲು ಮಾರ್ಗದ ಪ್ರಸ್ತಾವನೆ ಕೇಂದ್ರದ ಮುಂದಿದ್ದು, ಆರಣ್ಯ ಇಲಾಖೆ ತಾಂತ್ರಿಕ ತೊಡಕುಗಳ ನಿವಾರಿಸಬೇಕಿದೆ

■ ವಿ. ಸುನಿಲ್ ಕುಮಾರ್, ಶಾಸಕ

ಮೂಲ ಸೌಲಭ್ಯಕ್ಕೆ ಅನುದಾನ

ರಸ್ತೆ, ಸೇತುವೆ, ಕುಡಿಯುವ ನೀರು, ವಿದ್ಯುತ್, ಗ್ರಾಮೀಣ ಸಂಪರ್ಕ ರಸ್ತೆ ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಳಸಲಾಗಿದೆ. ಸಂಪರ್ಕವಿಲ್ಲದ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದ್ದು, ಜನವಸತಿ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯ ಒದಗಿಸಲಾಗಿದೆ. ಅಭಿವೃದ್ಧಿಯ ಈ ವೇಗವನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶದಿಂದ ‘ಸ್ವರ್ಣ ಕಾರ್ಕಳ’ ಪರಿಕಲ್ಪನೆಯಡಿ ಹೊಸ ಯೋಜನೆಗಳ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಕಳ ಪುರಸಭೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಮಹಿಳಾ ಸಿಬ್ಬಂದಿಯೊಂದಿಗೆ ಯೋಜನಾ ನಿರ್ದೇಶಕರು ಅನುಚಿತವಾಗಿ ವರ್ತಿಸಿದ್ದಾರೆ ಎಂಬ ಆರೋಪದ ಕುರಿತು ಮಾತನಾಡಿದ ಅವರು, ಆರೋಪಗಳು ಸತ್ಯವಾಗಿದ್ದರೆ ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಸರ್ಕಾರ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಸರ್ಕಾರಿ ಕಚೇರಿಗಳಲ್ಲಿ ಮಹಿಳಾ ಸಿಬ್ಬಂದಿಯ ಗೌರವ ಮತ್ತು ಸುರಕ್ಷತೆಗೆ ಧಕ್ಕೆಯಾಗಬಾರದು ಎಂದರು.

ಸರಕಾರ ಸ್ಪಂದಿಸುತ್ತಿಲ್ಲ

ಮೂರು ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದರೂ ಈ ಸಮಸ್ಯೆ ಬಗೆಹರಿಸಲು ಯಾವುದೇ ದೃಢ ನಿರ್ಧಾರ ಕೈಗೊಂಡಿಲ್ಲ. ಭೂಮಾಪಕರ ಪ್ರತಿಭಟನೆ ನಡೆಯುತ್ತಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಟೀಕಿಸಿದರು.

ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ರಾಜಕೀಯಕ್ಕಿಂತ ಜನಹಿತವೇ ಮುಖ್ಯವಾಗಬೇಕು. ಮೂಲಸೌಕರ್ಯ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ಕೃಷಿ ಹಾಗೂ ಉದ್ಯೋಗ ಸೃಷ್ಟಿಗೆ ಸಂಬಂಧಿಸಿದ ಯೋಜನೆಗಳಿಗೆ ಆದ್ಯತೆ ನೀಡುವ ಮೂಲಕ ಕಾರ್ಕಳವನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸುವ ಗುರಿಯಿದೆ ಎಂದು ಅವರು ತಿಳಿಸಿದರು.

ಕಾರ್ಕಳದ ಆಸ್ಮಿತೆಯಾದ ಕಾರ್ಲ ಕಜೆ, ಬಿಳಿ ಬೆಂಡೆ ಸೇರಿದಂತೆ ಸ್ಥಳೀಯ ಉತ್ಪನ್ನಗಳನ್ನು ರಾಷ್ಟ್ರಮಟ್ಟದಲ್ಲಿ ಬ್ರ್ಯಾಂಡ್ ಆಗಿ ಪರಿಚಯಿಸುವ ಪ್ರಯತ್ನ ನಡೆಸಲಾಗಿದೆ. ಇದರ ಜೊತೆಗೆ ಖಾಸಗಿ ಸಹಭಾಗಿತ್ವದಲ್ಲಿ ಉದ್ಯೋಗ ಮೇಳ, ಪಶುಪರ ಉತ್ಸವ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ದ್ವೇಷದ ರಾಜಕಾರಣ ಮಾಡಿಲ್ಲ

ನನ್ನ ರಾಜಕಾರಣ ಹಿಂದುತ್ವ, ಅಭಿವೃದ್ಧಿ, ಯುವ ನಾಯಕತ್ವ ಎನ್ನುವ ಮೂರು ಅಂಶಗಳನ್ನೊಂದಿಗೆ ಪಕ್ಷದ ಸಿದ್ಧಾಂತ, ಕಾರ್ಯಕರ್ತರಿಗೆ ಬದ್ಧನಾಗಿ ಕೆಲಸ ಮಾಡುತ್ತಿದ್ದು, ನನ್ನ 21 ವರ್ಷಗಳ ರಾಜಕಾರಣದಲ್ಲಿ ಎಂದಿಗೂ ದ್ವೇಷದ ರಾಜಕಾರಣ ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ ಎಂದರು.

ಪತ್ರಕರ್ತರು ಕೇಳಿದ ವಿವಿಧ ಪ್ರಶ್ನೆಗಳಿಗೆ ಉತ್ತರಿಸಿದ ಶಾಸಕ ಸುನಿಲ್ ಕುಮಾರ್, ಕ್ಷೇತ್ರದ ಪ್ರಮುಖ ಅಭಿವೃದ್ಧಿ ಯೋಜನೆಗಳು, ಸರ್ಕಾರದ ವಿವಿಧ ನೀತಿಗಳು ಹಾಗೂ ಪ್ರಸ್ತುತ ರಾಜಕೀಯ ಬೆಳವಣಿಗೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಕಾರ್ಕಳ ಪತ್ರಕರ್ತರ ಸಂಘದ ಅಧ್ಯಕ್ಷ ಮೊಹಮ್ಮದ್ ಶರೀಫ್ ಉಪಸ್ಥಿತರಿದ್ದರು.

ಮಕ್ಕಳಿಗೆ ಹೊಸ ಅನುಭವ ನೀಡಿದ ಪುಸ್ತಕ ಪ್ರದರ್ಶನ ಕಾರ್ಯಕ್ರಮ



ಕಾಸರಗೋಡು: ಬೋವಿಕ್ಕಾನ ಸಮೀಪದ ಬೆಳ್ಳಿಪ್ಪಾಡಿ ಮಧುವಾಹಿನಿ ಗ್ರಂಥಾಲಯದ ಆಶ್ರಯದಲ್ಲಿ ಐಶ್ವರಿ ಚಿತ್ರರಂಜನ್ ಎಲ್‌ಪಿ ಶಾಲೆಯ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಪುಸ್ತಕ ಪ್ರದರ್ಶನ ಸಮಾರಂಭವು ಮಕ್ಕಳಿಗೆ ಹೊಸ ಅನುಭವ ನೀಡುವಲ್ಲಿ ಯಶಸ್ವಿಯಾಯಿತು.

ಯಾವ ರೀತಿಯ ಪುಸ್ತಕಗಳನ್ನು ಓದಬೇಕು, ಓದಿರುವುದನ್ನು ಯಾವ ರೀತಿಯಲ್ಲಿ ಮನನ ಮಾಡಬೇಕು, ಪುಸ್ತಕಗಳ ಓದಿನಿಂದ ಲಭಿಸಬಹುದಾದ ಲಾಭಗಳೇನು, ಪುಸ್ತಕ ಓದುವಿಕೆಯಿಂದ ಜ್ಞಾನ ಭಂಡಾರವನ್ನು ಹೇಗೆ ವೃದ್ಧಿಸಿಕೊಳ್ಳಬಹುದು ಮುಂತಾದ ವಿಚಾರಗಳ ಕುರಿತು ಮಕ್ಕಳಿಗೆ ಸಮರ್ಪಕವಾದ ವಿವರಣೆಗಳನ್ನು ನೀಡಲಾಯಿತು. ಅಲ್ಲದೆ ಮಕ್ಕಳ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ಒದಗಿಸಲಾಯಿತು.

ಕೇರಳ ಗ್ರಂಥಾಲಯದ ಪಿತಾಮಹ ಎಂದೇ ಪ್ರಸಿದ್ಧಿ ಹೊಂದಿರುವ ಪಿ.ಎನ್.ಪಣಿಕ್ಕರ್ ಸ್ಮರಣಾರ್ಥವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಬರಹಗಾರ ರಾಘವನ್ ಬೆಳ್ಳಿಪ್ಪಾಡಿ ಅವರು ಪಿ.ಎನ್.ಪಣಿಕ್ಕರ್ ಅವರ ಕುರಿತು ಉಪನ್ಯಾಸ ನೀಡಿದರು. ಶಾಲಾ ಮುಖ್ಯೋಪಾಧ್ಯಾಯ ಸುನೀಲ್ ಕುಮಾರ್ ಸಿ. ಪುಸ್ತಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಪ್ರಮುಖರಾದ ಹರೀಶ್‌ಪ್ರಸಾದ್ ಪಿ., ರಜಿತಾ, ಧನ್ಯಾ ಮತ್ತು ವಿಷ್ಣುಪ್ರಿಯಾ ಕೆ. ಮಾಂಡವದವರು ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು. ಜಯಕಲಾ ಸಿ.ಎಸ್. ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದರು. ಪಿ.ಶೃತಿ ಸ್ವಾಗತಿಸಿ, ಶೋಭಾ ಚರಮ್ ವಂದಿಸಿದರು.

ಪರಿಸರದ ಸಮತೋಲನ ರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯ



ಬಂಟ್ವಾಳ : ಪರಿಸರವು ಮಾನವನ ಜೀವನದ ಅವಿಭಾಜ್ಯ ಅಂಗವಾಗಿದೆ. ಗಾಳಿ, ನೀರು, ಮಣ್ಣು, ಸಸ್ಯಗಳು ಮತ್ತು ಪ್ರಾಣಿಗಳು ಸೇರಿ ಪರಿಸರವನ್ನು ರೂಪಿಸುತ್ತವೆ. ಪರಿಸರದ ಸಮತೋಲನ ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು ಹೇಳಿದ್ದಾರೆ.

ಗುರುವಾರ ವೀರಕಂಭ ಗ್ರಾಮದ ಮಜಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯುವವಾಹಿನಿ ಮಾಣಿ ಘಟಕ ವತಿಯಿಂದ ಮಜಿ ಶಾಲಾ ಮುಖಮಂಟಪಕ್ಕೆ ಅಳವಡಿಸಿದ ಸೀಟ್ ಮುಚ್ಚಿಗೆ ಸಮರ್ಪಣೆ ಹಾಗೂ ಶಾಲಾ ಆವರಣದಲ್ಲಿ ಹಣ್ಣಿನ ಗಿಡ ನೆಟ್ಟು ‘ಯುವ ವೃಕ್ಷೋತ್ಸವ’ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪರಿಸರವು ಜೀವಿಗಳ ಅಸ್ತಿತ್ವಕ್ಕೆ ಅಗತ್ಯವಾದ ಸಂಪನ್ಮೂಲಗಳ ಒದಗಿಸುತ್ತದೆ. ಶುದ್ಧ ಗಾಳಿ, ಕುಡಿಯುವ ನೀರು ಮತ್ತು ಆಹಾರ ಉತ್ಪಾದನೆಗೆ ಆರೋಗ್ಯಕರ ಪರಿಸರ ಅತ್ಯಗತ್ಯ. ಪರಿಸರದ ಸಮತೋಲನದಿಂದ ಪ್ರಕೃತಿಯ ವ್ಯವಸ್ಥೆ ಸುಗಮವಾಗಿ ಕಾರ್ಯನಿರ್ವಹಿಸುತ್ತದೆ ಎಂದರು.

ಯುವ ವಾಹಿನಿಯ ಖಜಾಂಚಿ ಮತ್ತು ಜಿಲ್ಲಾ ಪ್ರಶಸ್ತಿ ವಿಜೇತ ಶಿಕ್ಷಕಿ ಡಾ. ತ್ರಿವೇಣಿ ರಮೇಶ್ ಮಾತನಾಡಿ, ಪರಿಸರ ದಿನದಂದು ಗಿಡಗಳನ್ನು ನೆಟ್ಟು ಕೇವಲ ಒಂದು ದಿನದ ಆಚರಣೆಗೆ ಸೀಮಿತವಾಗಿರದೆ ತಿಂಗಳುಗಳ ಕಾಲ ಅದರ ಪೋಷಣೆ ಜವಾಬ್ದಾರಿಯನ್ನು ಹೊತ್ತುಕೊಂಡು ಮಾಸಾಚರಣೆ ವಿನೂತನ ಜವಾಬ್ದಾರಿ, ವಿದ್ಯಾರ್ಥಿಗಳು ಪರಿಸರದ ಕಾಳಜಿ, ಸ್ವಚ್ಛತೆ ಜಾಗೃತಿ, ಸೇವಾ ಮನೋಭಾವವನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಅಭಿನಂದನೆ

ಶಾಲೆಯ ಬೇಡಿಕೆಯಂತೆ ಶಾಲಾ ಮುಖ ಮಂಟಪಕ್ಕೆ ಶೀಟ್ ಮುಚ್ಚಿಗೆಯನ್ನು ಒದಗಿಸಿದ ಯುವವಾಹಿನಿ ಮಾಣಿ ಘಟಕದ ಅಧ್ಯಕ್ಷ ಗಣೇಶ್ ಶೀ ಸಾಯೀ ಅವರನ್ನು ಅಭಿನಂದಿಸಲಾಯಿತು.

ಯುವವಾಹಿನಿ ಮಾಣಿ ಘಟಕದ ಉಪಾಧ್ಯಕ್ಷ ಸುಜಿತ್ ಅಂಚನ್, ಸದಸ್ಯರಾದ ಪ್ರತೀಕ್, ರೇಣುಕಾ ಕಣಿಯೂರು, ವೀರಕಂಭ ಪಂ. ನಿ.ಪೂ. ಉಪಾಧ್ಯಕ್ಷ ಜನಾರ್ಧನ ಪೂಜಾರಿ ಗೋಳಿಮಾರು, ಪ್ರಗತಿಪರ ಕೃಷಿಕ ಜಯಪ್ರಕಾಶ್ ತೆಕ್ಕಿಪಾಪು, ಶಾಲಾ ವಿದ್ಯಾರ್ಥಿ ನಾಯಕ ಮೊಹಮ್ಮದ್ ಹಾರೂನ್ ಫರ್ಹಾನ್ ಉಪಸ್ಥಿತರಿದ್ದರು.

ಮುಖ್ಯ ಶಿಕ್ಷಕಿ ಬೆನಡಿಕ್ಟಾ ಆಗ್ನೇಸ್ ಮಂಡೋನ್ಸ ಸ್ವಾಗತಿಸಿ, ಶಿಕ್ಷಕ ತೌಸೀಫ್ ಅಹ್ಮದ್ ವಂದಿಸಿ, ಹಿರಿಯ ಶಿಕ್ಷಕಿ ಸಂಗೀತ ಶರ್ಮಾ ಪಿ.ಜಿ. ನಿರೂಪಿಸಿದರು.

ಭಾರಿ ಟ್ರಕ್‌ಗಳ ಸಂಚಾರದಿಂದ ಹದಗೆಡುತ್ತಿದೆ ರಾಷ್ಟ್ರೀಯ ಹೆದ್ದಾರಿ



ಸುರತ್ಕಲ್: ಪಣಂಬೂರು ಬಳಿಯ ರಾಷ್ಟ್ರೀಯ ಹೆದ್ದಾರಿ ಭಾರಿ ಟ್ರಕ್‌ಗಳ ಸಂಚಾರದಿಂದ ಹದಗೆಡುತ್ತಿದೆ. ಹಡಗಿಗೆ ಬರುವ ಆಮದು ಸರಕು ಮತ್ತು ರಫ್ತಿಗೆ ಹೋಗುವ ಸರಕುಗಳ ಗೋದಾಮು ಇಲ್ಲಿದ್ದು, ನಿತ್ಯ ನೂರಾರು ಘನ ವಾಹನಗಳು ಹೆದ್ದಾರಿಯನ್ನು ಬಳಸುತ್ತಿವೆ.

ಗೋದಾಮಿನಿಂದ ನೇರವಾಗಿ ಸರ್ವಿಸ್ ರಸ್ತೆ ಮೂಲಕ ಹೆದ್ದಾರಿಗೆ ಸಂಪರ್ಕವಿಲ್ಲ. ವಾಹನಗಳು ಹೆದ್ದಾರಿಗೆ ಬಂದು ತಿರುವು ಪಡೆಯುವ ಅನಿವಾರ್ಯತೆ ಇದೆ. ಅಧಿಕ ಭಾರದ ಲಾರಿಗಳು ತಿರುವು ಪಡೆಯುವಾಗ ರಸ್ತೆ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದ್ದು, ಆಳವಾದ ಹೊಂಡಗಳು ಉಂಟಾಗುತ್ತಿವೆ. ಇದರಿಂದ ಪಾಟ್ ಹೋಲ್ ಸಮಸ್ಯೆಗೆ ಕಾರಣ ವಾಗುತ್ತಿದೆ.

ಸ್ಥಳೀಯರು ಹೆದ್ದಾರಿ ಇಲಾಖೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಗೋದಾಮಿನಿಂದ ಹೆದ್ದಾರಿಗೆ ಸಂಪರ್ಕಿಸುವ ಸರ್ವಿಸ್ ರಸ್ತೆಯನ್ನು ಕಾಂಕ್ರೀಟ್ ಮಾಡಿದರೆ ಸಮಸ್ಯೆ ಪರಿಹಾರವಾಗಲಿದೆ. ಇದರಿಂದ ಭಾರಿ ವಾಹನಗಳು ನೇರವಾಗಿ ಹೆದ್ದಾರಿಗೆ ಸೇರಬಹುದು. ತಿರುವಿನಿಂದ ಉಂಟಾಗುವ ರಸ್ತೆ ಹಾನಿ ತಪ್ಪುತ್ತದೆ. ಹೆದ್ದಾರಿ ಗುಣಮಟ್ಟ ಉಳಿಯಲು ಮತ್ತು ಸುಗಮ ಸಂಚಾರಕ್ಕೆ ಸರ್ವಿಸ್ ರಸ್ತೆ ಕಾಂಕ್ರಿಟೀಕರಣ ಅನಿವಾರ್ಯವಾಗಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

‘ಪ್ರಗತಿ ಸ್ಫೂರ್ತಿ- ಉನ್ನತಿ-2026’ ವ್ಯಕ್ತಿತ್ವ ವಿಕಸನ, ಕೌಶಲ್ಯಾಭಿವೃದ್ಧಿ ಕಾರ್ಯಾಗಾರ



ಮಂಗಳೂರು: ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ, ನಾಯಕತ್ವ ಗುಣಗಳ ವಿಕಸನ ಹಾಗೂ ಜೀವನ ಕೌಶಲ್ಯಗಳ ಅಭಿವೃದ್ಧಿಯನ್ನು ಉದ್ದೇಶವಾಗಿಟ್ಟುಕೊಂಡು, ವಿಶ್ವ ಕೊಂಕಣಿ ಕೇಂದ್ರದ ಸಹಯೋಗದಲ್ಲಿ ಶ್ರೀ ಪೂರ್ಣಾನಂದ ಸೇವಾ ಪ್ರತಿಷ್ಠಾನ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕುಡಾಳ್ ದೇಶಸ್ಥ ಆದ್ಯ ಗೌಡ್ ಬ್ರಾಹ್ಮಣ ಸಂಘದ ಸಂಯುಕ್ತ ಆಶ್ರಯದಲ್ಲಿ ನಾಲ್ಕು ದಿನಗಳ ವಸತಿ ಸಹಿತ ಚಟುವಟಿಕೆ ಆಧಾರಿತ ‘ಪ್ರಗತಿ ಸ್ಫೂರ್ತಿ ಮತ್ತು ಉನ್ನತಿ–2026’ ವ್ಯಕ್ತಿತ್ವ ವಿಕಸನ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕಾರ್ಯಾಗಾರದ 2ನೇ ದಿನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಉನ್ನತ ಅಧಿಕಾರಿಗಳಾದ ಚೇತನ್ ಆರೋರಾ, ಅಗ್ನೀವ ಚಕ್ರಬೋರ್ತಿ ಮತ್ತು ಸುಜಾತ ಕುಮಾರ್ ಅವರು ಭವಿಷ್ಯದ ಆರ್ಥಿಕ ಗುರಿಗಳನ್ನು ಸಾಧಿಸಲು ಹೇಗೆ ನಿಯಮಿತವಾಗಿ ಹೂಡಿಕೆ ಮಾಡಬೇಕು ಎಂಬುದರ ಬಗ್ಗೆ ಮಾಹಿತಿ ನೀಡಿದರು.

ಮಾಹಿತಿ ನೀಡಿದರು

ವಿದ್ಯಾರ್ಥಿಗಳಿಗೆ ಬ್ಯಾಂಕಿನಿಂದ ಸಿಗುವಂತಹ ಸವಲತ್ತುಗಳ ಬಗ್ಗೆ ಹಾಗೂ ಶಿಕ್ಷಣ ಸಾಲಗಳ ಬಗ್ಗೆ ಶಿಬಿರಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸಂವಾದದಲ್ಲಿ ಪಾಲ್ಗೊಂಡರು. ಸರಕಾರದ ಯೋಜನೆಗಳ ಅರಿವನ್ನು ಮೂಡಿಸುವುದರೊಂದಿಗೆ ಮ್ಯೂಚುವಲ್ ಫಂಡ್ಸ್ ಎಸ್.ಐ.ಪಿ.ಯ ಅಗತ್ಯತೆ ಬಗ್ಗೆ ಮತ್ತು ನಮ್ಮಲ್ಲಿರುವ ಹಣವನ್ನು ಹೇಗೆ ಸರಿಯಾಗಿ ನಿರ್ವಹಣೆ ಮಾಡಬೇಕು ಎಂಬುದರ ಬಗ್ಗೆ ತಿಳುವಳಿಕೆ ನೀಡಿದರು.

ಈ ಸಂದರ್ಭ ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ ಸಿ.ಎ. ನಂದಗೋಪಾಲ ಶೆಣೈ, ಮೆಲ್ವಿನ್ ರೊಡ್ರಿಗಸ್, ಡಿ. ರಮೇಶ ನಾಯಕ್ ಮೈರಾ, ಸುಚಿತ್ರಾ ರಮೇಶ್ ನಾಯಕ್, ಡಾ. ವಿಜಯಲಕ್ಷ್ಮೀ ನಾಯಕ್ , ರವೀಂದ್ರ ನಾಯಕ್ ಕುಂಟಲ್ಪಾಡಿ, ಮತ್ತು ರಾಮಕೃಷ್ಣ ಪ್ರಭು ಮಾರಿಬೆಟ್ಟು, ಸಂದೀಪ್ ಪ್ರಭು ವಗ್ಗ, ಶಿವರಾಂ ಪ್ರಭು ಮಾರಿಬೆಟ್ಟು ಮತ್ತಿತರರಿದ್ದರು.

ಚೇತನ್ ಶೆಣೈ ಸ್ವಾಗತಿಸಿ, ಕುಮಾರಿ ಹಿಮಾನಿ ಪ್ರಭು ವಂದಿಸಿದರು.

ಕನ್ಯಾಡಿ ಸರಕಾರಿ ಶಾಲೆಯಲ್ಲಿ ‘ಯಕ್ಷಧ್ರುವ- ಯಕ್ಷ ಶಿಕ್ಷಣ’ ಅಭಿಯಾನ ತರಗತಿ ಉದ್ಘಾಟನೆ



ಬೆಳ್ತಂಗಡಿ: ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಕನ್ಯಾಡಿ 2, ಇದರ 2026–27ನೇ ಶೈಕ್ಷಣಿಕ ವರ್ಷದ ಯಕ್ಷದ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಆಶ್ರಯದಲ್ಲಿ ‘ಯಕ್ಷಧ್ರುವ– ಯಕ್ಷ ಶಿಕ್ಷಣ’ ಅಭಿಯಾನದ ತರಗತಿ ಶಾಲೆಯ ಸಭಾಂಗಣದಲ್ಲಿ ದೀಪ ಬೆಳಗಿಸುವ ಮೂಲಕ ಶುಭಾರಂಭಗೊಂಡಿತು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಕೆ. ನಂದ, ಯಕ್ಷದ್ರುವ ಪಟ್ಲ ಫೌಂಡೇಶನ್ ಬೆಳ್ತಂಗಡಿ ಘಟಕ ಅಧ್ಯಕ್ಷ ಸುರೇಶ್ ಶೆಟ್ಟಿ, ಕಾರ್ಯದರ್ಶಿ ಶಿತಿಕಂಠ ಭಟ್, ಪಟ್ಲ ಫೌಂಡೇಶನ್ ಟ್ರಸ್ಟಿ ಭುಜಬಲಿ ಧರ್ಮಸ್ಥಳ, ಬೆಳ್ತಂಗಡಿ ತಾಲೂಕಿನ ಯಕ್ಷ ಶಿಕ್ಷಣ ತರಗತಿ ಶಿಕ್ಷಕ ಅರುಣ್ ಕುಮಾರ್ ಧರ್ಮಸ್ಥಳ, ಶಾಲಾ ಎಸ್‌ಡಿಎಂಸಿ ಉಪಾಧ್ಯಕ್ಷೆ ಹೇಮಲತಾ, ಶಾಲಾ ಮುಖ್ಯ ಶಿಕ್ಷಕಿ ಪುಷ್ಪಾ ಎನ್. ಉಪಸ್ಥಿತರಿದ್ದರು.

ಪಟ್ಲ ಫೌಂಡೇಶನ್ ಬೆಳ್ತಂಗಡಿ ಘಟಕದ ಅಧ್ಯಕ್ಷ ಸುರೇಶ್ ಶೆಟ್ಟಿ ಉದ್ಘಾಟಿಸಿ ಯಕ್ಷಧ್ರುವ ಪಟ್ಲ ಫೌಂಡೇಶನ್‌ನ ಸಮಾಜಮುಖಿ ಸೇವಾ ಕಾರ್ಯಗಳನ್ನು ಶ್ಲಾಘಿಸಿ, ಕಾರ್ಯಕ್ರಮಕ್ಕೆ ಶುಭ ಕೋರಿದರು.

ಪ್ರಯೋಜನ ಪಡೆಯಿರಿ

ಪಟ್ಲ ಫೌಂಡೇಶನ್ ಟ್ರಸ್ಟಿ ಭುಜಬಲಿ ಪ್ರಸ್ತಾವಿಸಿ, ಪಟ್ಲ ಫೌಂಡೇಶನ್ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ಯಕ್ಷ ಶಿಕ್ಷಣ ನೀಡಿ ಪ್ರೋತ್ಸಾಹಿಸುತ್ತಿದ್ದು ವಿದ್ಯಾರ್ಥಿಗಳು ಯೋಜನೆ ಪೂರ್ಣ ಪ್ರಯೋಜನ ಪಡೆಯಬೇಕು ಎಂದು ನುಡಿದು ಶುಭ ಹಾರೈಸಿದರು. ಪಟ್ಲ ಫೌಂಡೇಶನ್ ತಾಲೂಕು ಘಟಕ ಕಾರ್ಯದರ್ಶಿ ಶಿತಿ ಕಂಠ ಭಟ್ ಕಾರ್ಯಕ್ರಮಕ್ಕೆ ಸರ್ವ ಯಶಸ್ಸು ಹಾರೈಸಿದರು. ಯಕ್ಷದ್ರುವ ಯಕ್ಷ ತರಗತಿಯ ಶಿಕ್ಷಕ ಅರುಣ್ ಕುಮಾರ್ ಧರ್ಮಸ್ಥಳ ಅವರಿಗೆ ವಿದ್ಯಾರ್ಥಿಗಳಿಂದ ವೀಳ್ಯ ಹಸ್ತಾಂತರಿಸಲಾಯಿತು.

ಯಕ್ಷಗಾನದ ಪಠ್ಯ ಪುಸ್ತಕವನ್ನು ಪಟ್ಲ ಫೌಂಡೇಶನ್ ಟ್ರಸ್ಟಿ ಭುಜಬಲಿ ಯಕ್ಷ ತರಗತಿ ಶಿಕ್ಷಕರಿಗೆ ಹಸ್ತಾಂತರಿಸಿದರು . ಎಸ್ ಡಿ ಎಂ ಸಿ ಸದಸ್ಯ ರೂಪೇಶ್ ಕೆ,ಶಾಲಾ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿ ವೃಂದ ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕಿ ಪುಷ್ಪಾ ಎನ್ ಸ್ವಾಗತಿಸಿ, ಸಹಶಿಕ್ಷಕಿ ವಿಜಯ ವಂದಿಸಿ , ಅತಿಥಿ ಶಿಕ್ಷಕಿ ಜಯಶ್ರೀ ನಿರೂಪಿಸಿದರು.

ಹರಿಹರ ಪಲ್ಲತ್ತಡ್ಕದಲ್ಲಿ ಒಕ್ಕೂಟಗಳ ಪದಗ್ರಹಣ



ಸುಬ್ರಹ್ಮಣ್ಯ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಸೇರಿಕೊಂಡು ಹಲವಾರು ಕುಟುಂಬಗಳು ಉನ್ನತಿಯನ್ನು ಸಾಧಿಸಿದೆ. ಬದುಕಿನಲ್ಲಿ ಅಭಿವೃದ್ಧಿ ಹೊಂದಿ ಸ್ವಾವಲಂಬಿ ಜೀವನ ನಡೆಸಲು ಗ್ರಾಮಾಭಿವೃದ್ಧಿ ಯೋಜನೆ ಬೆನ್ನೆಲುಬಾಗಿ ಕಾರ್ಯ ನಿರ್ವಹಿಸಿದೆ ಎಂದು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆಯ ಸುಳ್ಯ ತಾಲೂಕು ಅಧ್ಯಕ್ಷ ಎಂ.ವೆಂಕಪ್ಪ ಗೌಡ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಮತ್ತು ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ ಸುಬ್ರಹ್ಮಣ್ಯ ವಲಯ ಇವುಗಳ ಸಂಯುಕ್ತ ಆಶ್ರಯದಲ್ಲಿ ಹರಿಹರ ಪಲ್ಲತ್ತಡ್ಕದಲ್ಲಿ ಶನಿವಾರ ನಡೆದ ಹರಿಹರ ಪಲ್ಲತ್ತಡ್ಕ, ಐನೆಕಿದು, ಬಾಳುಗೋಡು ಮತ್ತು ಕೊತ್ನಡ್ಕ ಪ್ರಗತಿ ಬಂಧು ಸ್ವಸಹಾಯ ಸಂಘ ಒಕ್ಕೂಟಗಳ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಹರಿಹರೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು ಅಧ್ಯಕ್ಷತೆ ವಹಿಸಿದ್ದರು. ಗುತ್ತಿಗಾರಿನ ಶ್ರೀ ಮುತ್ತಪ್ಪ ತಿರುವಪ್ಪ ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ವೆಂಕಟ್ ವಳಲಂಬೆ ಮುಖ್ಯ ಅತಿಥಿಗಳಾಗಿದ್ದರು. ಸುಳ್ಯ ತಾಲೂಕು ಯೋಜನಾಧಿಕಾರಿ ಮಾಧವ ಗೌಡ, ಜನ ಜಾಗೃತಿ ವೇದಿಕೆ ವಲಯಾಧ್ಯಕ್ಷ ಸತೀಶ್ ಟಿ.ಎನ್., ಬಾಳುಗೋಡು ಒಕ್ಕೂಟ ಸ್ಥಾಪಕಾಧ್ಯಕ್ಷೆ ಉಷಾ ಕಿರಿಭಾಗ, ಒಕ್ಕೂಟಗಳ ವಲಯಾಧ್ಯಕ್ಷ ತೀರ್ಥರಾಮ ದೋಣಿಪಳ್ಳ, ಭಜನಾ ಪರಿಷತ್ ವಲಯಾಧ್ಯಕ್ಷ ಚಂದ್ರಶೇಖರ ಕೊಂದಾಳ, ವಲಯ ಮೇಲ್ವಿಚಾರಕ ಬಾಲಕೃಷ್ಣ ಗೌಡ ಕೆ., ಸೇವಾ ಪ್ರತಿನಿಧಿಗಳಾದ ನಾಗವೇಣಿ, ರೇಖಾ ವೇದಿಕೆಯಲ್ಲಿದ್ದರು.

ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರನ್ನು, ನವಜೀವನ ಸಮಿತಿ ಸದಸ್ಯರನ್ನು, ಭಜನಾ ಪರಿಷತ್‌ನ ಪದಾಧಿಕಾರಿಗಳನ್ನು, ಒಕ್ಕೂಟಗಳ ನಿ.ಪೂ. ಪದಾಧಿಕಾರಿಗಳನ್ನು , ದಾಖಲಾತಿ ಸಮಿತಿ ಸದಸ್ಯರನ್ನು ಗೌರವಿಸಲಾಯಿತು. ಒಲಿಂಪ್ಯಾಡ್ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಸ್ತಾಂತರಿಸಲಾಯಿತು.

ಗಿರೀಶ್ ಎಂ.ಟಿ. ಸ್ವಾಗತಿಸಿ, ಪುಷ್ಪಾವತಿ ವಂದಿಸಿ, ನಿತಿನ್ ಕುಮಾರ್ ನಿರೂಪಿಸಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-61) ಡ್ರಾ ಜೂನ್ 28ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
ME 893044 (PATTAMBI)

Consolation Prize Rs.5,000/-
MA 893044 MB 893044 MC 893044 MD 893044
MF 893044 MG 893044 MH 893044 MJ 893044
MK 893044 ML 893044 MM 893044

2nd Prize Rs.25,00,000/- [25 Lakhs]
MK 646661 (PATTAMBI)

3rd Prize Rs. 5,00,000/- [5 Lakhs]
MD 124517 (THAMARASSERY)

FOR THE TICKETS ENDING WITH THE FOLLOWING NUMBERS

4th Prize Rs.5,000/-
0281 0683 0762 0838 0848 0978 1075 2074 2483 2525
4316 6629 7377 7836 8451 8656 9563 9581 9781

5th Prize Rs.2,000/-
0090 5081 7522 8398 8516 9020

6th Prize Rs.1,000/-
0113 0657 1069 1329 1676 1969 3142 3569 3605 3829 3919
4071 4105 5582 5609 5901 6653 6758 6778 8217 8547 8934
9277 9536 9854

7th Prize Rs.500/-
0230 0269 0574 0789 0860 0879 1015 1118 1322 1446 1609
1634 1719 1849 2075 2439 2499 2554 2598 2684 2803 3079
3091 3093 3134 3292 3490 3497 3556 3597 3866 3924 3994
4254 4262 4427 4622 4818 4966 4969 5022 5050 5097 5252
5375 5804 5972 5976 6115 6195 6333 6572 6614 6668 6992
7060 7379 7418 7421 7435 7487 7866 7919 7951 8087 8359
8525 8543 8549 8679 8856 9092 9166 9518 9588 9678

8th Prize Rs.200/-
0002 0094 0275 0318 0456 0493 0523 0571 0593 0753 0820
0830 0846 0894 0956 1072 1106 1205 1461 1599 1892 1956
2069 2087 2132 2312 2386 2580 2741 2767 2811 3198 3296
3303 3329 3342 3692 3708 3799 3875 3979 4022 4191 4243
4466 4525 4530 4543 4590 4663 4677 4678 4976 4983 4990
5052 5506 5521 5545 5583 5658 5665 5895 5909 5911 6045
6393 6461 6666 6737 6796 7078 7229 7238 7292 7303 7412
7625 7631 7856 7947 7950 8176 8246 8447 8486 8700 8793
9028 9218 9420 9479

9th Prize Rs.100/-
0019 0059 0158 0192 0232 0300 0486 0591 0614 0634 0731
0856 0886 1093 1150 1186 1275 1315 1317 1342 1358 1376
1377 1447 1558 1561 1770 1794 1855 1910 1925 2109 2164
2377 2519 2565 2751 2790 3152 3164 3193 3202 3233 3358
3392 3444 3487 3591 3629 3661 3760 3767 3871 3882 4008
4055 4203 4218 4295 4308 4365 4404 4411 4551 4641 4673
4701 4719 4760 4843 4863 4911 4975 4991 5008 5037 5128
5286 5421 5510 5536 5640 5679 5706 5721 5796 5814 5867
5894 6088 6258 6274 6311 6402 6520 6580 6626 6661 6880
6908 6927 6977 7087 7114 7120 7156 7192 7199 7323 7869
7904 7938 7952 8042 8088 8189 8205 8282 8484 8534 8615
8618 8648 8659 8664 8678 8761 8880 8970 8999 9019 9064
9213 9270 9398 9404 9450 9464 9528 9532 9604 9613 9619
9638 9692 9822 9863 9897 9967 9989

ನಿಗದಿತ ಅವಧಿಯಲ್ಲಿ ಫಿಲೋಮಿನಾ ಕಾಲೇಜ್ ದ್ವಿತೀಯ, ಚತುರ್ಥ ಸೆಮಿಸ್ಟರ್ ಪರೀಕ್ಷಾ ಫಲಿತಾಂಶ ಪ್ರಕಟ

ಶೈಕ್ಷಣಿಕ ಸಾಧಕ ವಿದ್ಯಾರ್ಥಿಗಳಿಗೆ ಆಡಳಿತದ ಶುಭ ಹಾರೈಕೆ

ಪುತ್ತೂರು: ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ 2025–26ನೇ ಶೈಕ್ಷಣಿಕ ವರ್ಷದ ದ್ವಿತೀಯ ಹಾಗೂ ಚತುರ್ಥ ಸೆಮಿಸ್ಟರ್ ಪದವಿ ಪರೀಕ್ಷೆಗಳ ಫಲಿತಾಂಶವನ್ನು ಶನಿವಾರ ಪ್ರಕಟಿಸಲಾಗಿದೆ. ಜೂ. 2ರಂದು ಆರಂಭಗೊಂಡ ಪರೀಕ್ಷೆಗಳು ಜೂ. 15ರಂದು ಯಶಸ್ವಿಯಾಗಿ ಪೂರ್ಣಗೊಂಡಿದ್ದವು. ಮೌಲ್ಯಮಾಪನ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ಎಲ್ಲಾ ಪದವಿ ಕೋರ್ಸ್‌ಗಳ ಫಲಿತಾಂಶವನ್ನು ನಿಗದಿತ ಸಮಯದಲ್ಲೇ ಪ್ರಕಟಿಸುವ ಮೂಲಕ ಕಾಲೇಜಿನ ಪರೀಕ್ಷಾ ವಿಭಾಗ ಮತ್ತೊಮ್ಮೆ ತನ್ನ ಕಾರ್ಯಕ್ಷಮತೆಯನ್ನು ಸಾಬೀತುಪಡಿಸಿದೆ.



ವಿಭಾಗವಾರು ಅಗ್ರಸ್ಥಾನ ಪಡೆದ ವಿದ್ಯಾರ್ಥಿಗಳು

ಬಿ.ಎ. 2ನೇ ಸೆಮಿಸ್ಟರ್– ಸೃಷ್ಟಿ ಶೆಣೈ 519 ಅಂಕ (94.36%), 4 ನೇ ಸೆಮಿಸ್ಟರ್– ಫಾತಿಮತ್ ಮಿಜ್ನಾ– 571 ಅಂಕ (95.17%)

ಬಿ.ಕಾಂ: 2 ನೇ ಸೆಮಿಸ್ಟರ್–ಆದಿತಿ ಡಿ. 624 ಅಂಕ (96%), 4 ನೇ ಸೆಮಿಸ್ಟರ್–ಅಫ್ರೀನಾ 573 ಅಂಕ (95.50%)

ಬಿ.ಎಸ್ಸಿ: 2 ನೇ ಸೆಮಿಸ್ಟರ್–ಶ್ರೀವಿದ್ಯಾ ಎನ್. 679 ಅಂಕ (97%), 4 ನೇ ಸೆಮಿಸ್ಟರ್ –ಅಶ್ವಿನಿ 734 ಅಂಕ (97.87%)

ಬಿ.ಬಿ.ಎ.: 2 ನೇ ಸೆಮಿಸ್ಟರ್–ಮೋನಿಷಾ ಎಸ್. 584 ಅಂಕ (89.85%), 4ನೇ ಸೆಮಿಸ್ಟರ್ –ವೈಷ್ಣಾ ಎಂ.ಪಿ. 563 ಅಂಕ (93.83%)

ಬಿ.ಬಿ.ಎ. (ಬಿಸಿನೆಸ್ ಅನಾಲಿಟಿಕ್ಸ್): 4ನೇ ಸೆಮಿಸ್ಟರ್–ತೇಜಸ್ವಿ 595 ಅಂಕ (91.54%)

ಬಿ.ಸಿ.ಎ.: 2 ನೇ ಸೆಮಿಸ್ಟರ್–ಪ್ರತ್ಯಕ್ಷ ಪಿ.ಎ. 570 ಅಂಕ (87.69%), 4 ನೇ ಸೆಮಿಸ್ಟರ್ –ಶ್ರವಣ್ ಕೆ. 619 ಅಂಕ (88.43%)

ಬಿ.ಸಿ.ಎ. (ಎಐ ಮತ್ತು ಎಂಎಲ್): 2 ನೇ ಸೆಮಿಸ್ಟರ್–ಆವೇಕ್ಷಾ ಜಿ. 629 ಅಂಕ (96.77%), 4 ನೇ ಸೆಮಿಸ್ಟರ್–ಕೆ. ಸಹನಾಜ್ 684 ಅಂಕ (97.71%)

ಬಿ.ಸಿ.ಎ. (ಡೇಟಾ ಅನಾಲಿಟಿಕ್ಸ್): 2 ನೇ ಸೆಮಿಸ್ಟರ್– ಸಿಹಾ ಶಾಮ್ರಾ 574 ಅಂಕ (88.31%)

ಬಿ.ಎಸ್ಸಿ (ಡೇಟಾ ಸೈನ್ಸ್): 2ನೇ ಸೆಮಿಸ್ಟರ್– ಶರಣ್ಯಾ ಕೆ.ಎಸ್ – 674 ಅಂಕ (96.29%)

ಅಭಿನಂದನೆಗಳು

ಸ್ವಾಯತ್ತ ಕಾಲೇಜಿನ ಪರೀಕ್ಷಾ ವ್ಯವಸ್ಥೆ ಅತ್ಯಂತ ವ್ಯವಸ್ಥಿತ, ಪಾರದರ್ಶಕ, ಸಮಯಬದ್ಧವಾಗಿ ನಡೆಸಿ, ನಿಗದಿತ ಅವಧಿಯಲ್ಲೇ ಫಲಿತಾಂಶ ಪ್ರಕಟಿಸಿರುವುದು ಪರೀಕ್ಷಾ ವಿಭಾಗದ ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ. ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಅಭಿನಂದನೆಗಳು ಹಾಗೂ ಮುಂದಿನ ಶೈಕ್ಷಣಿಕ ಪಯಣದಲ್ಲಿಯೂ ಇದೇ ಸಾಧನೆಯನ್ನು ಮುಂದುವರಿಸುವಂತೆ ಶುಭ ಹಾರೈಸುತ್ತೇನೆ.

■ ಪ್ರಾಂಶುಪಾಲರು, ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜು

ಪ್ರಾಚೀನ ಹಸ್ತಪ್ರತಿಗಳಲ್ಲಿರುವ ಭಾರತೀಯ ವೈದ್ಯಶಾಸ್ತ್ರದ ಅನಾವರಣ ಇಂದಿನ ಅಗತ್ಯ: ಡಾ. ನಾರಾಯಣಂ ಶ್ರೀಕಾಂತ್

• **ಉಡುಪಿ:** ಭಾರತೀಯ ಪ್ರಾಚೀನ ಹಸ್ತಪ್ರತಿಗಳಲ್ಲಿ ಅಡಗಿರುವ ಸಾಂಪ್ರದಾಯಿಕ ವೈದ್ಯಶಾಸ್ತ್ರ ಪದ್ಧತಿಯನ್ನು ಹೊರಜಗತ್ತಿಗೆ ಪರಿಚಯಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಹೊಸದೆಹಲಿಯ ಕೇಂದ್ರೀಯ ಆಯುರ್ವೇದೀಯ ವಿಜ್ಞಾನ ಅನುಸಂಧಾನ ಪರಿಷತ್ ಸಂಸ್ಥೆಯ ಉಪ ಮಹಾನಿರ್ದೇಶಕರಾದ ಡಾ. ನಾರಾಯಣಂ ಶ್ರೀಕಾಂತ್ ಅಭಿಪ್ರಾಯಪಟ್ಟಿದ್ದಾರೆ.

ಉಡುಪಿಯ ಗೀತಾ ಮಂದಿರದ ಶ್ರೀ ಪುತ್ತಿಗೆ ನೃಸಿಂಹ ಸಭಾಭವನದಲ್ಲಿ ಶ್ರೀ ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಮತ್ತು ಕಿರಿಯ ಪಟ್ಟದ ಶ್ರೀ ಸುಶೀಂದ್ರತೀರ್ಥ ಶ್ರೀಪಾದರ ಪರಮಾನುಗ್ರಹದೊಂದಿಗೆ ನಡೆದ ಆಯುರ್ವೇದ ಹಸ್ತಪ್ರತಿಗಳ ಲಿಪ್ಯಂತರಕರಣ ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ



ಅವರು ಮಾತನಾಡುತ್ತಿದ್ದರು.

ಶ್ರೀ ವಾದಿರಾಜ ಸಂಶೋಧನ ಪ್ರತಿಷ್ಠಾನ ಉಡುಪಿ, ಭಾರತ ಸರ್ಕಾರದ ಅಧೀನದ ಹೊಸದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಕೇಂದ್ರೀಯ ಆಯುರ್ವೇದೀಯ ವಿಜ್ಞಾನ ಅನುಸಂಧಾನ ಪರಿಷತ್ ಇವುಗಳ ಜಂಟಿ ಸಹಭಾಗಿತ್ವದಲ್ಲಿ ಎರಡು ವಾರಗಳ ಕಾಲ ಈ ವಿಶಿಷ್ಟ ಕಾರ್ಯಾಗಾರ ಆಯೋಜನೆಗೊಂಡಿತ್ತು.

ಮುಖ್ಯ ಅತಿಥಿಯಾಗಿದ್ದ ಹಿರಿಯ ವಿದ್ವಾಂಸ ಡಾ. ಪಾದೇಕಲ್ ವಿಷ್ಣು ಭಟ್ ಅವರು ಹಸ್ತಪ್ರತಿಗಳ ಲಿಪಿಗಳ ಸೊಗಸು ಮತ್ತು ಸ್ವಾರಸ್ಯಕರ ಸಂಗತಿಗಳನ್ನು ವಿವರಿಸಿದರು. ಬೆಂಗಳೂರಿನ ಕೇಂದ್ರೀಯ ಆಯುರ್ವೇದ ಸಂಸ್ಥೆಯ ನಿರ್ದೇಶಕ ಡಾ. ಟಿ. ಮಹೇಶ್ವರ್ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಎರಡು ವಾರಗಳ ಕಾಲ ಪ್ರಮುಖ ಸಂಪನ್ಮೂಲ ವ್ಯಕ್ತಿಯಾಗಿದ್ದ ಹೊಸದಿಲ್ಲಿಯ ಸಂಸ್ಕೃತ ವಿದ್ವಾಂಸ ಡಾ. ದಿಲೀಪ್ ಕುಮಾರ್ ಕಾರ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಉದ್ಯಾವರ ಮತ್ತು ಹಾಸನದ ಎಸ್‌ಡಿಎಂ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಶ್ರೀ ಪುತ್ತಿಗೆ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಕಾರ್ಯಾಗಾರದಲ್ಲಿ ಉಡುಪಿಯ ಪ್ರಾಚ್ಯ ಸಂಚಯ ಪ್ರತಿಷ್ಠಾನದ ಡಾ. ಕೃಷ್ಣಯ್ಯ, ತುಳು ಲಿಪಿ ವಿದ್ವಾಂಸ ಹಾಗೂ 'ಸುಗುಣಮಾಲಾ' ಪತ್ರಿಕೆಯ ಸಂಪಾದಕ ಮಹಿತೋಷ ಆಚಾರ್ಯ, ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀನಿಕೇತನ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಜಿ.ಪಿ. ಕಲ್ಲಾಪುರ, ಬೆಂಗಳೂರಿನ ಐಜಿಎನ್‌ಸಿ ಸಂಸ್ಥೆಯ ಡಾ. ಸಮೀರ ಭಟ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ವಿದ್ವಾನ್ ಶ್ರೀಧರ ಆಚಾರ್ಯ ಸ್ಲೇಯ ಸಂಯೋಜಕರಾಗಿ ಸಹಕರಿಸಿದರು. ಶ್ರೀ ವಾದಿರಾಜ ಸಂಶೋಧನ ಪ್ರತಿಷ್ಠಾನದ ನಿರ್ದೇಶಕ ಹಾಗೂ ಮುಖ್ಯ ಸಂಘಟಕ ಡಾ. ಬಿ. ಗೋಪಾಲಾಚಾರ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಬೀಳ್ಕೊಡುಗೆ



ಎರಡು ದಿನಗಳ ಕಾಲ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸಲು ಬೆಂಗಳೂರಿಗೆ ಆಗಮಿಸಿದ್ದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಆರೋಗ್ಯ ಸಚಿವ ಯು.ಟಿ.ಖಾದರ್ ಅವರು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಬೀಳ್ಕೊಟ್ಟರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ.ಸಲೀಂ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಉಪಸ್ಥಿತರಿದ್ದರು.

ಕಿರುಸುದ್ದಿ


ಅರಿವಿನ ದೀವಿಗೆ ಶರಣರ ವಚನಗಳು



• **ಸೇಲಂ/ಬೆಂಗಳೂರು :** ಬಸವಾದಿ ಶರಣರ ವಚನಗಳು ಅರಿವಿನ ದೀವಿಗೆಯಾಗಿದೆ. ಇವುಗಳನ್ನು ತಮಿಳಿಗೆ ಭಾಷಾಂತರಿಸಿ ಮಕ್ಕಳಿಗೆ ಕಲಿಸಿ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕರೆ ನೀಡಿದ್ದಾರೆ. ತಮಿಳುನಾಡಿನ ಸೇಲಂನಲ್ಲಿ ತಮಿಳುನಾಡು ವೀರಶೈವ ಕೌನ್ಸಿಲ್ ಮತ್ತು ಚೀಫ್ ಜಂಗಮ್ ಸೋಸಿಯಲ್ ವೆಲ್ಫೇರ್ ಅಸೋಸಿಯೇಷನ್ ಆಯೋಜಿಸಿದ್ದ, ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಚನಗಳು ಸಂಸ್ಕಾರ ನೀಡುತ್ತವೆ. ಜೀವನಧರ್ಮ ಸಾರುತ್ತವೆ. ವೀರಶೈವ ಮಠ ಮಾನ್ಯಗಳು ದೇಶದ ಅಭಿವೃದ್ಧಿಗೆ ನೀಡಿರುವ ಕೊಡುಗೆ ಅಪಾರವಾದ್ದು, ಕರ್ನಾಟಕದ ವೀರಶೈವ ಲಿಂಗಾಯತ ಮಠಗಳು ಆಶ್ರಯ, ಅನ್ನ ಮತ್ತು ಅರಿವು (ಶಿಕ್ಷಣ) ಎಂಬ ತ್ರಿವಿಧ ದಾಸೋಹದ ಮೂಲಕ ಎಲ್ಲ, ಜಾತಿ, ಜನಾಂಗ, ಮತ, ಧರ್ಮದವರಿಗೂ ಗುಣಮಟ್ಟದ ಶಿಕ್ಷಣ ನೀಡಿವೆ ಎಂದರು. ಸಂಘಟನೆಯಲ್ಲಿ ಬಲವಿದೆ. ಕರ್ನಾಟಕ, ಮಹಾರಾಷ್ಟ್ರದಲ್ಲಿ ವೀರಶೈವ ಲಿಂಗಾಯತರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಕೇರಳ, ತಮಿಳುನಾಡು, ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಲಿಂಗಾಯತ, ವೀರಶೈವರಿದ್ದಾರೆ. ನಾವೆಲ್ಲರೂ ಸಂಘಟನೆಯಲ್ಲಿ ಬಲವಿದೆ, ವಿಘಟನೆಯಲ್ಲಿ ದೌರ್ಬಲ್ಯವಿದೆ ಎಂಬುದನ್ನು ಅರಿಯಬೇಕು ಎಂದರು. ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ಪ್ರಧಾನ ಕಾರ್ಯದರ್ಶಿ ರೇಣುಕಾ ಪ್ರಸನ್ನ, ಶಿವಗಾನಪ್ರಿಯ ಸ್ವಾಮೀಜಿ ಸೇರಿದಂತೆ ಇತರರಿದ್ದರು.

ಸಾನ್ವಿ ಲಾಲ್ವಾನಿ ಜು.4ರಂದು ರಂಗಪ್ರವೇಶ

• **ಬೆಂಗಳೂರು:** ನಟನಂ ಇನ್ಸ್ಟಿಟ್ಯೂಟ್ ಆಫ್ ಡ್ಯಾನ್ಸ್‌ನಿಂದ ಜು. 4 ರಂದು ನಗರದ ಗಾಯನ ಸಮಾಜದಲ್ಲಿ ಸಂಜೆ 5.15 ಗಂಟೆಗೆ, ಸಾನ್ವಿ ಲಾಲ್ವಾನಿ ಅವರ ಭರತನಾಟ್ಯ ರಂಗಪ್ರವೇಶ ನೃತ್ಯಸಮ್ಮೋಹನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.



ಪ್ರತಿಭಾ ಲಾಲ್ವಾನಿ ಹಾಗೂ ಶೀತಲ್ ಲಾಲ್ವಾನಿ ಅವರ ಪುತ್ರಿ ಸಾನ್ವಿ, ನಟನಂ ಇನ್ಸ್ಟಿಟ್ಯೂಟ್ ಆಫ್ ಡ್ಯಾನ್ಸ್‌ನ ನಿರ್ದೇಶಕಿ ಗುರು ಆಚಾರ್ಯೆ ಡಾ. ರಕ್ಷಾ ಕಾರ್ತಿಕ್ ಅವರ ಶಿಷ್ಯೆಯಾಗಿದ್ದಾರೆ.

ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ 12ನೇ ತರಗತಿ ವಿದ್ಯಾರ್ಥಿನಿಯಾಗಿರುವ ಸಾನ್ವಿ, ಭರತನಾಟ್ಯದ ಸೌಂದರ್ಯ, ಭಾವಾಭಿವ್ಯಕ್ತಿ ಹಾಗೂ ಲಯಬದ್ಧತೆಯನ್ನು ಪ್ರತಿಬಿಂಬಿಸುವ ವೈವಿಧ್ಯಮಯ ನೃತ್ಯ ಸಂಯೋಜನೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಂತ ತ್ಯಾಗರಾಜರು, ಪುರಂದರ ದಾಸರು, ಆಂಡಾಳ್, ಮುತ್ತಯ್ಯ ಭಾಗವತರ್, ಊತುಕಾಡು ವೆಂಕಟ ಕವಿ ಸೇರಿದಂತೆ ಹಲವು ಮಹಾನ್ ವಾಗ್ಗೇಯಕಾರರ ಕೃತಿಗಳು ವಿವಿಧ ರಾಗ ಹಾಗೂ ತಾಳಗಳಲ್ಲಿ ಮೂಡಿಬರಲಿವೆ.

ಒಂದೇ ದಿನದಲ್ಲಿ 15 ಲಕ್ಷ ಸಸಿ ನೆಟ್ಟು ಸಾಧನೆ: 12 ಗಂಟೆ ಅವಧಿಯಲ್ಲಿ ಐತಿಹಾಸಿಕ ಗುರಿ

ಗಿನ್ನಿಸ್ ದಾಖಲೆಗೆ ಬಿಡಿಎ ಸಸ್ಯ ಅಭಿಯಾನ

• **ಬೆಂಗಳೂರು:** ಒಂದೇ ದಿನದಲ್ಲಿ 15 ಲಕ್ಷ ಸ್ಥಳೀಯ ಸಸಿಯನ್ನು ನೆಡಲಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ)ದ ಅಭಿಯಾನ ಅಧಿಕೃತವಾಗಿ ಗಿನ್ನಿಸ್ ವಿಶ್ವ ದಾಖಲೆ ಪಟ್ಟಿಗೆ ಸೇರಿದೆ.

ಬೆಂಗಳೂರು ನಗರ ಪರಿಸರ ಪುನಶ್ಚೇತನ ಮಿಷನ್ 2026–30 ರ ಪ್ರಮುಖ ಭಾಗವಾಗಿ ಬಿಡಿಎ ಶನಿವಾರ ಒಂದೇ ದಿನದಲ್ಲಿ 15 ಲಕ್ಷ ಸ್ಥಳೀಯ ಜಾತಿಯ ಸಸಿಯನ್ನು ನೆಡುವ ಮೂಲಕ ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸಿದೆ. ಇದು ನಗರ ಪ್ರದೇಶದಲ್ಲಿ ಕೈಗೊಂಡ ಅತಿದೊಡ್ಡ ಸಮನ್ವಯಿತ ಹಸಿರು ಅಭಿಯಾನದಲ್ಲಿ ಒಂದಾಗಿದೆ. ಈ ಐತಿಹಾಸಿಕ ಸಾಧನೆಯು 12 ಗಂಟೆಗಳ ಅವಧಿಯಲ್ಲಿ ವಿವಿಧ ಸ್ಥಳಗಳಲ್ಲಿ ತಂಡವೊಂದು ಅತಿ ಹೆಚ್ಚು ಸಸಿಗಳನ್ನು ನೆಟ್ಟ ಸಾಧನೆ ಎಂಬ ವಿಭಾಗದಲ್ಲಿ ಗಿನ್ನಿಸ್ ವಿಶ್ವ ದಾಖಲೆಯಾಗಿ ಮಾನ್ಯತೆ ಪಡೆದಿದೆ.

ವಿಶ್ವ ದಾಖಲೆ ಪ್ರಮಾಣ ಪತ್ರ ಸ್ವೀಕಾರ: ಬಿಡಿಎಯ ಈ ಮಹತ್ವದ ಸಾಧನೆಗೆ ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನ ತೀರ್ಪುಗಾರ ರಿಷಿ ನಾಥ್ ಅವರಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ಅಧಿಕೃತವಾದ ಗಿನ್ನಿಸ್ ರೆಕಾರ್ಡ್ ಪ್ರಮಾಣಪತ್ರವನ್ನು ಸ್ವೀಕರಿಸಿದರು.

ನಾಡಪ್ರಭು ಕೆಂಪೇಗೌಡ ಜಯಂತಿಯ ಅಂಗವಾಗಿ ಆಯೋಜಿಸಲಾದ ಈ ಮಹತ್ವಾಕಾಂಕ್ಷಿ ಹಸಿರು ಅಭಿಯಾನದಲ್ಲಿ ಸಾರ್ವಜನಿಕರು, ವಿವಿಧ ಸರ್ಕಾರಿ ಇಲಾಖೆಗಳು, ಶಿಕ್ಷಣ ಸಂಸ್ಥೆಗಳು, ನಿವಾಸಿಗಳ ಕಲ್ಯಾಣ ಸಂಘಗಳು, ಕಾರ್ಪೊರೇಟ್ ಸಂಸ್ಥೆಗಳು, ಸರ್ಕಾರೇತರ ಸಂಘಟನೆಗಳು, ಪರಿಸರ ಸಂಘಟನೆಗಳು ಹಾಗೂ ಸಾವಿರಾರು ಸ್ವಯಂ ಸೇವಕರು ಉತ್ಸಾಹದಿಂದ ಭಾಗವಹಿಸಿ, ಬೆಂಗಳೂರಿನ ಹಸಿರು ಪರಂಪರೆಯನ್ನು ಪುನರುಜ್ಜೀವನಗೊಳಿಸುವ ಸಂಕಲ್ಪದಲ್ಲಿ ಕೊಡುಗೆ ನೀಡಿದ್ದಾರೆ.

ಈ ಬೃಹತ್ ಸಸಿ ನೆಡುವ ಅಭಿಯಾನವು ನಾಡಪ್ರಭು ಕೆಂಪೇಗೌಡ ಬಡಾವಣೆ, ಬನಶಂಕರಿ 6ನೇ ಹಂತ, ಶಿವರಾಮ ಕಾರಂತ ಬಡಾವಣೆ, ಆಕ್ಸಿಜನ್ ಟ್ರೀ ಪಾರ್ಕ್‌ಗಳು, ಮಿಯಾವಾಕಿ ಅರಣ್ಯ ವಲಯಗಳು ಹಾಗೂ ಗುರುತಿಸಲಾದ ಇತರ ಹಸಿರು ಪ್ರದೇಶಗಳಲ್ಲಿ ನಡೆಯಿತು.



ಬಡಾವಣೆವಾರು	ಗಿಡ	ನೆಡಲಾದ ವಿವರ
ಬಡಾವಣೆ ಹೆಸರು	ಗುರಿ	ನೆಡಲಾದ ಗಿಡ
ಕೆಂಪೇಗೌಡ ಬಡಾವಣೆ	6,90,000	6,77,500
ಶಿವರಾಮ ಕಾರಂತ ಬಡಾವಣೆ	7,05,000	7,12,250
ಬನಶಂಕರಿ 6ನೇ ಹಂತ	1,05,000	1,05,800
ಒಟ್ಟು	15,00,000	14,95,550

ಹಸಿರು ಬೆಂಗಳೂರು ಕಾರ್ಯಕ್ರಮದ ಮೂಲಕ 15 ಲಕ್ಷ ಸಸಿಗಳನ್ನು ನೆಟ್ಟು ಪರಿಸರ ಉಳಿಸುವ ಕೆಲಸ ಮಾಡಿದ್ದೇವೆ. ಗಿನ್ನಿಸ್ ದಾಖಲೆಯಾಗಿ ಇದು ಮಾರ್ಪಟ್ಟಿದೆ. ಇದು ನನ್ನ ಒಬ್ಬನ ಸಾಧನೆಯಲ್ಲ. ಸಮಸ್ತ ಬೆಂಗಳೂರಿನ ಸಾಧನೆ.
■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ



ಗಿನ್ನಿಸ್ ವಿಶ್ವ ದಾಖಲೆ ಬೆಂಗಳೂರಿನ ಪ್ರತಿಯೊಬ್ಬ ನಾಗರಿಕರಿಗೂ ಸೇರಿದ್ದು, ಪರಿಸರ ಸಂರಕ್ಷಣೆ ಎನ್ನುವುದು ಸಾಮೂಹಿಕ ಹೊಣೆಗಾರಿಕೆಯಿಂದ ಆರಂಭವಾಗುತ್ತದೆ ಎಂಬುದನ್ನು ಇದು ಸಾಬೀತುಪಡಿಸಿದೆ. ಒಂದೇ ದಿನದಲ್ಲಿ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವುದು ಕೇವಲ ವಿಶ್ವ ದಾಖಲೆಯಲ್ಲ; ಇದು ಮುಂದಿನ ಪೀಳಿಗೆಗೆ ನೀಡುತ್ತಿರುವ ನಮ್ಮ ಬದ್ಧತೆಯ ಸಂಕೇತವಾಗಿದೆ.
■ **ಎನ್.ಎ.ಹ್ಯಾರಿಸ್,** ಬಿಡಿಎ ಅಧ್ಯಕ್ಷ

ಈಗ ನಮ್ಮ ಮುಖ್ಯ ಆದ್ಯತೆ ನೆಟ್ಟಿರುವ ಪ್ರತಿಯೊಂದು ಸಸಿಯ ಸಂರಕ್ಷಣೆ, ನಿರ್ವಹಣೆ ಹಾಗೂ ಆರೋಗ್ಯಕರ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳುವುದಾಗಿದೆ. ಈ ಸಾಧನೆ ಅತ್ಯಂತ ಸೂಕ್ಷ್ಮ ಯೋಜನೆ, ವೈಜ್ಞಾನಿಕ ಅನುಷ್ಠಾನ ಹಾಗೂ ಎಲ್ಲರ ಸಮನ್ವಯದ ಫಲವಾಗಿದೆ.
■ **ಪಿ. ಮಣಿವಣ್ಣನ್,** ಬಿಡಿಎ ಆಯುಕ್ತ

ಪತ್ರಕರ್ತ ಎನ್.ಎಸ್.ಶಂಕರ್ ನಿಧನ

• **ಬೆಂಗಳೂರು:** ಹಿರಿಯ ಪತ್ರಕರ್ತ, ಚಲನಚಿತ್ರ ನಿರ್ದೇಶಕ, ಸಾಹಿತಿ ಎನ್.ಎಸ್ ಶಂಕರ್ (67) ಭಾನುವಾರ ನಿಧನರಾಗಿದ್ದಾರೆ. ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಶಂಕರ್ ಅವರು ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ.



ಪತ್ರಕರ್ತರಾಗಿ ವೃತ್ತಿಜೀವನ ಆರಂಭಿಸಿದ್ದ ಅವರು ಲಂಕೇಶ್ ಪತ್ರಿಕೆ, ಪ್ರಜಾವಾಣಿ, ಮುಂಗಾರು, ಸುದ್ದಿ ಸಂಗಾತಿ ಹಾಗೂ ಸುದ್ದಿ ಟಿವಿಯಲ್ಲಿ ಕಾರ್ಯನಿರ್ವಹಿಸಿದ್ದ ಅವರು ಚಲನಚಿತ್ರ ಸಂಭಾಷಣೆ ಕ್ಷೇತ್ರದಲ್ಲೂ ಹೆಸರು ಗಳಿಸಿದ್ದರು. 1997ರಲ್ಲಿ ತೆರೆಕಂಡ ಉಲ್ಟಾ ಪಲ್ಟಾ ಸಿನಿಮಾ ನಿರ್ದೇಶನದ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು.

ಶಂಕರ್ ಅವರ ನಿಧನಕ್ಕೆ ಮಾಜಿ ಸಿಎಂ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ತಮ್ಮ ಲೇಖನಿಯ ಮೂಲಕ ಸಮಾಜದ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ವೀಕ್ಷಿಸುತ್ತಾ, ಸದಾ ಬೌದ್ಧಿಕ ಮತ್ತು ವೈಚಾರಿಕ ಆಲೋಚನೆಗಳಿಗೆ ಮುನ್ನುಡಿ ಬರೆಯುತ್ತಿದ್ದ ಕ್ರಿಯಾಶೀಲ ವ್ಯಕ್ತಿಯಾಗಿದ್ದರು ಎಂದು ಸಿಎಂ ಡಿ.ಕೆ ಶಿವಕುಮಾರ್ ಅವರು ಸಂತಾಪ ತಿಳಿಸಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಎಂ.ಎನ್. ಅನುಚೇತ್ ಅವರು ಸಂತಾಪ ವ್ಯಕ್ತಪಡಿಸಿದ್ದು, ವಿವಿಧ ಮುಂಚೂಣಿ ಪತ್ರಿಕೆಗಳಲ್ಲಿ ಅವರು ನಿರ್ವಹಿಸಿದ ಜವಾಬ್ದಾರಿ ಹಾಗೂ ಅವರ ಬರಹಗಳು ಸದಾ ಸ್ಮರಣೀಯ. ಚಲನಚಿತ್ರ ನಿರ್ದೇಶನ, ಅನುವಾದ ಹಾಗೂ ಸಾಹಿತ್ಯ ಕ್ಷೇತ್ರದಲ್ಲೂ ಅವರು ಅಪಾರ ಕೊಡುಗೆ ನೀಡಿದ್ದಾರೆ. ಅವರ ನಿಧನದಿಂದ ಮಾಧ್ಯಮ ಮತ್ತು ಸಾಂಸ್ಕೃತಿಕ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದಿದ್ದಾರೆ.

ನಾಳೆ ಬಿ.ಎನ್.ಮೂರ್ತಿ ಅವರ ಸ್ಮರಣ ಸಂಚಯ ಕೃತಿ ಲೋಕಾರ್ಪಣೆ

• **ಬೆಂಗಳೂರು:** ವಿಶ್ವ ಹಿಂದು ಪರಿಷದ್ ಕರ್ನಾಟಕ ವತಿಯಿಂದ ಜೂ. 30ರಂದು ಸಂಜೆ 6 ಗಂಟೆಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಬಸವನಗುಡಿಯಲ್ಲಿ ಬಿ.ಎನ್. ಮೂರ್ತಿ ಅವರ ಸ್ಮರಣ ಸಂಚಯ ಧ್ಯೇಯಮೂರ್ತಿ ಪುಸ್ತಕ ಲೋಕಾರ್ಪಣಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ ದಿವ್ಯ ಸಾನಿಧ್ಯವಹಿಸಲಿದ್ದು, ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಸಹ ಭೌದ್ಧಿಕ್ ಪ್ರಮುಖ್ ಸುಧೀರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವಿಶ್ವ ಹಿಂದು ಪರಿಷದ್ ಹೊಸದಿಲ್ಲಿ ಕೇಂದ್ರೀಯ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ, ವಿಶ್ವ ಹಿಂದು ಪರಿಷದ್ ಕರ್ನಾಟಕ ದಕ್ಷಿಣ ಅಧ್ಯಕ್ಷ ದೀಪಕ್ ರಾಜ್ ಗೋಪಾಲ್, ಹಿರಿಯ ಪತ್ರಕರ್ತ ದು.ಗು.ಲಕ್ಷ್ಮಣ ಉಪಸ್ಥಿತರಿರಲಿದ್ದಾರೆ.

ಅಂದ್ರಹಳ್ಳಿ ವಾರ್ಡಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ರಂಗೋಲಿ ಭಾರತೀಯ ಸಂಸ್ಕತಿಯ ಭಾಗ

• **ಕೆಂಗೇರಿ:** ಭಾರತೀಯ ಸಂಸ್ಕೃತಿಯಲ್ಲಿ ರಂಗೋಲಿಗೆ ವಿಶೇಷವಾದ ಸ್ಥಾನಮಾನವಿದೆ, ರಂಗೋಲಿ ಕೇವಲ ಮನೆಯನ್ನು ಅಲಂಕರಿಸುವ ಕಲೆಯಲ್ಲ ಬದಲಾಗಿ ಸಕಾರಾತ್ಮಕತೆ, ಅದೃಷ್ಟ ಮತ್ತು ಸಂಪತ್ತಿನ ಸಂಕೇತವಾಗಿದೆ ಎಂದು ಎಸ್.ಟಿ.ಮೋರ್ಚಾ ಮಾಜಿ ಅಧ್ಯಕ್ಷ ಪ್ರಕಾಶ್.ಟಿ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಅಂದ್ರಹಳ್ಳಿ ವಾರ್ಡಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶಾಸಕ ಎಸ್. ಟಿ.ಸೋಮಶೇಖರ್ ಅವರ ನೇತೃತ್ವದಲ್ಲಿ ಮಹಿಳೆಯರಿಗಾಗಿ ಮನೆ ಮನೆ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಿ ಮಾತನಾಡಿದ ಅವರು, ರಂಗೋಲಿ ಭಾರತೀಯ ಜಾನಪದ ಕಲೆಯ



ವರ್ಣರಂಜಿತ ಮತ್ತು ಸೃಜನಶೀಲ ಅಭಿವ್ಯಕ್ತಿಯ ಮಹತ್ವ ತಿಳಿಯುತ್ತದೆ ಎಂದು ತಿಳಿಸಿದರು.

ಹಿಂದೂ ಸಂಪ್ರದಾಯದಲ್ಲಿ ಹಬ್ಬ ಹರಿದಿನಗಳಲ್ಲಿ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದರಿಂದ ಮಂಗಳಕರ ವಾತಾವರಣ ಸೃಷ್ಟಿಯಾಗುತ್ತದೆ ಎಂದು ಭಾವಿಸಿ ರಂಗೋಲಿ ಆಧ್ಯಾತ್ಮಿಕ ದೃಷ್ಟಿಕೋನ ಮತ್ತು ಪ್ರಯೋಜನಗಳನ್ನು ಹೊಂದಿದೆ ಎಂದು ತಿಳಿಸಿದರು.

ಅಂದ್ರಹಳ್ಳಿ ವಾರ್ಡ್ ವ್ಯಾಪ್ತಿಯ ಬಡಾವಣೆಗಳಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಮಹಿಳೆಯರು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ವಿವಿಧ ರೀತಿಯ ರೋಗೋಲಿಯನ್ನು ಬಿಡಿಸಿ ಹಬ್ಬದ ವಾತಾವರಣ ಸೃಷ್ಟಿಸಿದರು. ಈ ಸಂದರ್ಭದಲ್ಲಿ ಶಿವಮೂರ್ತಿ, ರಾಜು.ಸಿ.ಎಂ.ಸಂತೋಷ್, ದೀಪು, ಯೋಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಹಿಂದೂ, ಮುಸ್ಲಿಮ್, ಕ್ರೈಸ್ತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮಕ್ಕಳ ಶಿಕ್ಷಣಕ್ಕೂ ಮಸೀದಿ ಮೀಸಲಿರಲಿ

• **ಬೆಂಗಳೂರು:** ಮಸೀದಿ ಎಂದರೆ ಪ್ರಾರ್ಥನೆಗೆ ಮಾತ್ರ ಮೀಸಲಿಡದೆ. ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ, ಜ್ಞಾನ, ಸಂಘಟನೆ, ಅನ್ಯಾಯದ ವಿರುದ್ಧ ಹೋರಾಟ ಮಾಡುವ ಮೂಲಕ ಜಾತಿ, ಧರ್ಮ ಮೀರಿ ಸಾಮಾಜಿಕ ನ್ಯಾಯ ಪಡೆಯುವ ಮೂಲಕ ಎಲ್ಲಾ ಧರ್ಮಿಯರಲ್ಲಿ ಸ್ನೇಹ, ವಿಶ್ವಾಸದಿಂದ ಜೀವನ ಸಾಗಿಸುವ ಕೆಲಸ ಮಾಡಬೇಕಾಗಿದೆ ಎಂದು ಕೆಪಿಸಿಸಿ ವಕ್ತಾರೆ ಎಚ್. ಕುಸುಮಾ ಅಭಿಪ್ರಾಯಪಟ್ಟರು.

ಮತ್ತಿಕೆರೆಯ ಮಸೀದಿಯಲ್ಲಿ ಮಸ್ಜಿದ್–ಎ ತಾಹಾ ಬೈತುಲ್ ಮಾಲ್ ಕಮಿಟಿ ಪ್ರತಿ ವರ್ಷದಂತೆ ಈ ವರ್ಷವೂ ಎಸ್‌ಎಸ್‌ಎಲ್‌ಸಿ–ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ನೂರಕ್ಕೂ ಹೆಚ್ಚು ಹಿಂದೂ, ಮುಸ್ಲಿಮ್, ಕ್ರೈಸ್ತ ಸಮುದಾಯದ ವಿದ್ಯಾರ್ಥಿಗಳಿಗೆ



ನೀಡಿದ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಿಸಿ ಮಾತನಾಡಿ, ನಮಗೆ ಸಿಗಬೇಕಾದ ಸವಲತ್ತು ಪಡೆಯಬೇಕಾದರೆ ಮೊದಲು ಶಿಕ್ಷಣ, ಜ್ಞಾನವಂತರಾಗುವ ವಾತಾವರಣವನ್ನು ಪೋಷಕರು ನಿರ್ಮಾಣ ಮಾಡಬೇಕೆಂದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಮಾತನಾಡಿ, ಮತ್ತಿಕೆರೆ ಮಸೀದಿಯಲ್ಲಿ ಆಡಳಿತ ಮಂಡಳಿಯವರು ಕನ್ನಡ ಕಲಿಸುವ ಮತ್ತು ತನ್ನ ಸುತ್ತಮುತ್ತಲಿನ ಬ್ರಾಹ್ಮಣ, ಅರ್ಚಕ ಎನ್ನದೆ ಹಿಂದೂ, ಕ್ರೈಸ್ತ ಮಕ್ಕಳಿಗೂ ಹಲವಾರು ವರ್ಷಗಳಿಂದ ಪ್ರತಿಭಾ ಪುರಸ್ಕಾರವನ್ನು ನೀಡುವ ಮೂಲಕ ಶಿಕ್ಷಣಕ್ಕೆ ಸಹಾಯ ಮಾಡುವ ಮೂಲಕ ಕನ್ನಡಿಗರು, ಭಾರತೀಯರು ನಾವೆಲ್ಲರೂ ಒಂದೇ ತಾಯಿಯ ಮಕ್ಕಳು ಎಂದು ಸಾರುವ ಮೂಲಕ ಮಾನವೀಯ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡುತ್ತಿದೆ. ಇತರ ಧರ್ಮಿಯರು ನಾವೆಲ್ಲರೂ ಒಂದೇ ಭಾರತೀಯ ಮಕ್ಕಳು ಎಂದು ತಿಳಿದು ಬಾಳುವ ಕೆಲಸವಾಗಬೇಕಾಗಿದೆ ಎಂದು ಮನವರಿಕೆ ಮಾಡಿಕೊಟ್ಟರು.

ಕೆಂಗಲ್ ಹನುಮಂತಯ್ಯ ವಾರ್ಡ್‌ನಲ್ಲಿ ಕೆಂಪೇಗೌಡ ಜಯಂತಿ

ಅಭಿವೃದ್ಧಿಗೆ ನಾಡಪ್ರಭುವಿನ ಪ್ರೇರಣೆ

• **ಕೆಂಗೇರಿ:** ನಾಡಪ್ರಭು ಕೆಂಪೇಗೌಡ ಅವರ ದೂರದೃಷ್ಟಿ ಚಿಂತನೆಯಿಂದ ಬೆಂಗಳೂರು ನಗರವನ್ನು ನಿರ್ಮಾಣ ಮಾಡಿದ್ದರಿಂದ ಅಭಿವೃದ್ಧಿಯಾಗಲು ಸಾಧ್ಯವಾಯಿತು ಎಂದು ಬಿಬಿಎಂಪಿ ಮಾಜಿ ಸದಸ್ಯ ರ.ಆಂಜನಪ್ಪ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗಲ್ ಹನುಮಂತಯ್ಯ ವಾರ್ಡ್‌ನ ಶಿವಕುಮಾರ ಸ್ವಾಮೀಜಿ ರಸ್ತೆ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ನಾಡುಪ್ರಭು ಕೆಂಪೇಗೌಡರು ಯಾವುದೇ ಜಾತಿ ಮತ್ತು ಪಕ್ಷಕ್ಕೆ ಸೀಮಿತವಾಗದೆ ಸರ್ವಧರ್ಮಗಳ ನಾಯಕರಾಗಿ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಬೆಂಗಳೂರಿನಲ್ಲಿ 54 ವಿವಿಧ ಪೇಟೆಗಳನ್ನು ನಿರ್ಮಾಣ ಮಾಡಿ ಎಲ್ಲಾ ಜಾತಿಯ ಜನರ ಅನುಕೂಲಕ್ಕಾಗಿ ವ್ಯಾಪಾರ ವಹಿವಾಟು ನಡೆಸಲು ಅಕ್ಕಿಪೇಟೆ, ಕುಂಬಾರಪೇಟೆ, ಮಂಡಿಪೇಟೆ, ಬಳೆಪೇಟೆ, ಚಿಕ್ಕ ಪೇಟೆ,ಉಪ್ಪಾರಪೇಟೆ ಮುಂತಾದ ಪೇಟೆಗಳನ್ನು ನಿರ್ಮಾಣ ಮಾಡಿ ಬೆಂಗಳೂರು ಅಭಿವೃದ್ಧಿ ಹೊಂದಲು



ಸಾಧ್ಯವಾಯಿತು ಎಂದು ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಮಾಜಿ ಖಜಾಂಚಿ ಸಿ.ಎಂ. ಮಾರೇಗೌಡ ಮಾತನಾಡಿ, ಜನರ ಅನುಕೂಲಕ್ಕಾಗಿ ಕೃಷಿ ಮತ್ತು ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಕೆರೆ ಕಟ್ಟೆ ನಿರ್ಮಾಣ ಮಾಡಲು ಮುಂದಾಗಿ ಧರ್ಮಾಂಬುದಿ ಕೆರೆ, ಕೆಂಪಾಂಬುದಿ ಕೆರೆ, ಹಲಸೂರು ಸಂಪಂಗಿ ಕೆರೆ, ಕಾರಂಜಿ ಕೆರೆ ಮುಂತಾದ ಕೆರೆಗಳನ್ನು ನಿರ್ಮಿಸಿ, ಕೆಲವು ಕಲ್ಯಾಣಿಗಳನ್ನು ನಿರ್ಮಿಸುವುದರ ಜೊತೆಗೆ ಹಲವಾರು ದೇವಸ್ಥಾನಗಳನ್ನು ನಿರ್ಮಾಣ ಮಾಡಿ ಬೆಂಗಳೂರಿನ ಗವಿಗಂಗಾಧರೇಶ್ವರ, ಕಾಡು ಮಲ್ಲೇಶ್ವರ, ದೊಡ್ಡ ಗಣಪತಿ, ಧರ್ಮರಾಯ ದೇವಸ್ಥಾನ ನಿರ್ಮಾಣ ಒತ್ತು ನೀಡಿ ಇವರಲ್ಲಿದ್ದ ದೈವ ಭಕ್ತಿಯನ್ನು ಹೊರಿಸಿದ್ದಾರೆ ಎಂದು ತಿಳಿಸಿದರು. 600ಕ್ಕೂ ಹೆಚ್ಚು ಹಿರಿಯ ನಾಗರಿಕರಿಗೆ ಸನ್ಮಾನಿಸಲಾಯಿತು. ಬಿಜೆಪಿ ನಗರ ಮಂಡಲ ಅಧ್ಯಕ್ಷ ಜಯರಾಮೇಗೌಡ, ನಗರಸಭೆ ಮಾಜಿ ಸದಸ್ಯ ಮೈಲಸಂದ್ರ ಮುನಿರಾಜು, ರಾಜ್ಯ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ಎಂ.ರುದ್ರೇಶ್, ಮಾಜಿ ಅಧ್ಯಕ್ಷ ಅನಿಲ್ ಚಳಗೇರಿ, ಜಿ.ಮುನಿರಾಜು, ರಾಜ್ಯ ಒಕ್ಕಲಿಗರ ಸಂಘದ ಮಾಜಿ ಖಜಾಂಚಿ ಸಿ.ಎಂ. ಮಾರೇಗೌಡ, ಸೂಲಿಕೆರೆ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಮೋಹನ್ ಕುಮಾರ್, ಬಿಜೆಪಿ ಮುಖಂಡರಾದ ಸ್ವಾಟ್ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

ಶೇ. 96.40 ಪಲ್ಸ್ ಪೋಲಿಯೊ ಲಸಿಕೆ

• **ಬೆಂಗಳೂರು:** ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ನಗರ ಪಾಲಿಕೆಗಳಲ್ಲಿ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ. ಜಿಬಿಎ ವ್ಯಾಪ್ತಿಯಲ್ಲಿ ಶೇ. 96.40ರಷ್ಟು ಪಲ್ಸ್ ಪೋಲಿಯೊ ಲಸಿಕೆ ನೀಡಲಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ ಒಟ್ಟು 0–5 ವರ್ಷದ ಮಕ್ಕಳ ಸಂಖ್ಯೆ 11,47,872 ಇದ್ದು, ಭಾನುವಾರ 11,06,535 ಮಕ್ಕಳಿಗೆ ಪೋಲಿಯೊ ಹನಿ ಹಾಕಲಾಗಿದೆ. ನಗರ ಪಾಲಿಕೆವಾರು ಲಸಿಕೆ ಹಾಕಲಾದ ಪ್ರಮಾಣದಲ್ಲಿ ಕೇಂದ್ರ–ಶೇ.95.45, ಪೂರ್ವ–ಶೇ.99.48, ಪಶ್ಚಿಮ–ಶೇ.94.34, ಉತ್ತರ–ಶೇ.98.22, ದಕ್ಷಿಣ –ಶೇ.95.13, ಒಟ್ಟು –ಶೇ.96.40 ಗುರಿ ಸಾಧಿಸಿದೆ.

ಒಂದೇ ನಂಬರಿನಲ್ಲಿ ಎರಡು ಬಸ್ ಸಂಚಾರ

12 ಮಿನಿಬಸ್ ವಶ: ಇಬ್ಬರ ಬಂಧನ

• **ಬೆಂಗಳೂರು:** ಒಂದೇ ನೋಂದಣಿ ಸಂಖ್ಯೆ ಹೊಂದಿದ್ದ ಎರಡು ಬಸ್ ಓಡಿಸುತ್ತಿದ್ದ ಆರೋಪಿಗಳನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿ, ಆರೋಪಿಗಳಿಂದ 12 ಮಿನಿಬಸ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಸೈಯದ್ ನಜೀರ್ (40), ತಮಿಳುನಾಡು ಮೂಲದ ಸಾರಿಗೆ ಆಪರೇಟರ್ ನಾಗರಾಜ್ (52) ಬಂಧಿತ ಆರೋಪಿಗಳಾಗಿದ್ದಾರೆ.

ಜೂ.23 ರಂದು ಹೆಡ್ ಕಾನ್ಸ್‌ಟೆಬಲ್ ಕೇದಾರಲಿಂಗ ತಾಂಬೆ ಮತ್ತು ಕಾನ್ಸ್‌ಟೇಬಲ್ ಕೇಶವಮೂರ್ತಿ ಅವರು ಮಣಿಪಾಲ್ ಕೌಂಟಿ ರಸ್ತೆಯಲ್ಲಿ ಬೈಕ್‌ನಲ್ಲಿ ಗಸ್ತು ತಿರುಗುತ್ತಿದ್ದರು. ಈ ವೇಳೆ ವೇಗವಾಗಿ ಬಂದ ಮಿನಿಬಸ್ ಅವರ ಮೋಟರ್‌ಸೈಕಲ್ ಅನ್ನು ಓವರ್‌ಟೇಕ್ ಮಾಡಿತು. ಅದರ ನೋಂದಣಿ ಸಂಖ್ಯೆ ಕೆಎ–51–ಬಿ–5959 ತಾಂಬೆ ಗಮನಿಸಿದ್ದರು. ಆದರೆ, ಕೇವಲ ಒಂದು ನಿಮಿಷದ ನಂತರ ಅದೇ ಮಾದರಿಯ ಮತ್ತೊಂದು ಅದೇ ನೋಂದಣಿ ಸಂಖ್ಯೆ ಹಾಕಿದ ಮಿನಿಬಸ್ ವೇಗವಾಗಿ ಹಾದುಹೋಯಿತು.

ಇದರಿಂದ ಆಶ್ಚರ್ಯಚಕಿತರಾದ ಪೊಲೀಸರು ತಕ್ಷಣವೇ ಆ ವಾಹನಗಳನ್ನು ಬೆನ್ನಟ್ಟಿ ಬೇಗೂರು ಕೆರೆ ರಸ್ತೆಯ ಬಳಿ ತಡೆದರು. ತನಿಖೆ ನಡೆಸಿದಾಗ ಎರಡೂ ವಾಹನಗಳು ಸೈಯದ್ ನಜೀರ್‌ಗೆ ಸೇರಿದ್ದು ಎಂಬುದು ತಿಳಿದುಬಂದಿದೆ. ಆತ ಕೇವಲ ಒಂದು ವಾಹನಕ್ಕೆ ಮಾತ್ರ ತೆರಿಗೆ ಪಾವತಿಸಿ, ಅದೇ ನಂಬರ್ ಅನ್ನು ಮತ್ತೊಂದು ವಾಹನಕ್ಕೂ ಬಳಸಿ ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿರುವುದನ್ನು ಒಪ್ಪಿಕೊಂಡಿದ್ದಾನೆ.

ಗಾರ್ಮೆಂಟ್ಸ್ ನೌಕರರ ಸಾಗಣೆಗೆ ಬಳಕೆ: ಪೊಲೀಸ್ ಇನ್ಸ್‌ಪೆಕ್ಟರ್ ಅಜರುದ್ದೀನ್ ನೇತೃತ್ವದ ತಂಡವು ತನಿಖೆ ನಡೆಸಿದಾಗ ಭಾರಿ ವಂಚನೆ ಬಯಲಾಗಿದೆ. ಸೈಯದ್ ನಜೀರ್ ಹಳೆಯ ಸ್ಕ್ರಾಪ್ ವಾಹನಗಳನ್ನು ಖರೀದಿಸಿ, ಅವುಗಳನ್ನು ದುರಸ್ತಿ ಮಾಡಿ, ಮರುಬಣ್ಣ ಬಳಿಯುತ್ತಿದ್ದನು. ಮತ್ತೊಬ್ಬ ಆರೋಪಿ ನಾಗರಾಜ್, ಅಸಲಿ ಬಸ್‌ಗಳ ಮಾದರಿ ಮತ್ತು ನಂಬರ್‌ಗಳನ್ನು ನಜೀರ್‌ಗೆ ಒದಗಿಸುತ್ತಿದ್ದನು. ಈ ನಂಬರ್‌ಗಳನ್ನು ಬಳಸಿ ನಜೀರ್ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಗಾರ್ಮೆಂಟ್ಸ್ ಕಾರ್ಖಾನೆಗಳ ನೌಕರರನ್ನು ಕರೆದೊಯ್ಯಲು ಈ ಮಿನಿಬಸ್‌ಗಳನ್ನು ಬಳಸುತ್ತಿದ್ದನು. ಪ್ರತಿ ನಕಲಿ ದಾಖಲೆ ಮತ್ತು ನಂಬರ್ ಒದಗಿಸಿದ್ದಕ್ಕೆ ನಾಗರಾಜ್ ಕಮಿಷನ್ ಪಡೆಯುತ್ತಿದ್ದನು. ಈ ವಂಚನೆಯ ಮೂಲಕ ಆರೋಪಿಗಳು ರಸ್ತೆ ತೆರಿಗೆ, ನೋಂದಣಿ ಶುಲ್ಕ, ಪ್ರಯಾಣಿಕರ ವಾಹನ ತೆರಿಗೆ ಮತ್ತು ಫಿಟ್ನೆಸ್ ಪ್ರಮಾಣಪತ್ರ ಶುಲ್ಕವನ್ನು ಪಾವತಿಸದೇ ವಂಚಿಸುತ್ತಿದ್ದರು. ಸದ್ಯ ಪೊಲೀಸರು 12 ಮಿನಿಬಸ್‌ಗಳನ್ನು ವಶಪಡಿಸಿಕೊಂಡಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಿರುಸುದ್ದಿ

ಶ್ರೀಮಂಗಲ: ಮರದಿಂದ ಬಿದ್ದ ಕಾರ್ಮಿಕನ ಮನೆಗೆ ಶಾಸಕ ಪೊನ್ನಣ್ಣ ಭೇಟಿ

• **ಶ್ರೀಮಂಗಲ:** ಮರದಿಂದ ಬಿದ್ದು ಗಾಯಗೊಂಡಿದ್ದ ಬಾಳೆಕೌವ್ವ ಭಾಗದ ಕಾರ್ಮಿಕ ಕಾಳರವರ ಮನೆಗೆ ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಕೆಲ ತಿಂಗಳ ಹಿಂದೆ ಕೆಲಸ ಮಾಡುತ್ತಿದ್ದ ಸಂದರ್ಭ, ಮರದಿಂದ ಬಿದ್ದು ಸೊಂಟ ಭಾಗಕ್ಕೆ ತೀವ್ರವಾದ ಗಾಯಗಳೊಂದಿಗೆ ಕಾಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಿಡುಗಡೆಯಗಿದ್ದಾರೆ. ಅವರ ಚಿಕಿತ್ಸೆಗೆ ಪೂರ್ಣ ಪ್ರಮಾಣದ ಸಹಾಯವನ್ನು ಶಾಸಕರು ನೀಡಿ ಸಹಕರಿಸಿದ್ದರು. ಇಂದು ಕಾಳರವರ ಮನೆಗೆ ಭೇಟಿ ನೀಡಿದ ಶಾಸಕರು, ಅವರ ಆರೋಗ್ಯ ವಿಚಾರಿಸಿ ಶೀಘ್ರ ವಾಗಿ ಗುಣಮುಖರಾಗಿ ಬರುವಂತೆ ಹಾರೈಸಿದರು. ಈ ಸಂದರ್ಭ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಸೇರಿದಂತೆ ಪಕ್ಷದ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಬೆದರಿಕೆ: ಡಾಕ್ಯೂಮೆಂಟ್ ರೈಟರ್ ದೂರು

• **ಉಪ್ಪಿನಂಗಡಿ:** ಭೂ ದಾಖಲೆಗಳನ್ನು ದಾಖಲೀಕರಿಸುವ ವೇಳೆ ಪಕ್ಕದ ಜಮೀನನ್ನು ಸೇರಿಸಿದ ತಪ್ಪಿಗೆ ಡಾಕ್ಯೂಮೆಂಟ್ ರೈಟರ್ ವಿರುದ್ಧ ಆಕ್ರಮಣಕಾರಿಯಾಗಿ ವರ್ತಿಸಿ, ಅವಾಚ್ಯ ಪದಗಳಿಂದ ನಿಂದಿಸಿದ ಬಗ್ಗೆ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕರಾಯ ಗ್ರಾಮದ ನಿವಾಸಿಯಾಗಿರುವ ಕೆ.ಎಸ್. ಅಬ್ದುಲ್ಲಾ ಎಂಬವರು ದೂರು ನೀಡಿದ್ದು, ಅವರು ಕರಾಯದ ಪೆಟ್ರೋಲ್ ಪಂಪಿನಲ್ಲಿ ತನ್ನ ದ್ವಿಚಕ್ರ ವಾಹನಕ್ಕೆ ಪೆಟ್ರೋಲ್ ತುಂಬಿಸಿ ಹೊರಡುವ ಸಮಯದಲ್ಲಿ ಇನೋವಾ ಕಾರಿನಲ್ಲಿ ಬಂದ ಚರಣ್ ಎಂಬವರು ದ್ವಿಚಕ್ರ ವಾಹನಕ್ಕೆ ಕಾರನ್ನು ಅಡ್ಡವಾಗಿರಿಸಿ ಸಂಚಾರಕ್ಕೆ ತಡೆಯೊಡ್ಡಿರುವುದಲ್ಲದೆ, ಅವಾಚ್ಯ ಪದಗಳಿಂದ ನಿಂದಿಸಿರುತ್ತಾರೆಂದು ದೂರಿನಲ್ಲಿ ತಿಳಿಸಿದ್ದಾರೆ.

ಕರಾಯ ಗ್ರಾಮದ ವ್ಯಕ್ತಿಯೋರ್ವರ ಭೂ ದಾಖಲೆಗಳ ದಾಖಲೀಕರಣದ ವೇಳೆ ಆರೋಪಿತರ ಭೂಮಿಯು ಸೇರಿರುವುದಕ್ಕೆ ತಾನೇ ಕಾರಣವೆಂದು ಭಾವಿಸಿ ತನ್ನ ವಿರುದ್ಧ ಈ ಕೃತ್ಯಗೈದಿರುತ್ತಾರೆಂದು ದೂರಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ನಿಧನ ಸುದ್ದಿ

ರಾಜಗೋಪಾಲ್ ಎಂ.ಕೆ.



• **ಮಂಗಳೂರು:** ನಗರದ ಬಾಲಾಂಜನೇಯ ಜಿಮ್ನಾಷಿಯಮ್‌ನ ಸ್ಥಾಪಕ ಸದಸ್ಯರಾಗಿದ್ದ ದಿ.ಎಂ. ಕೃಷ್ಣಪ್ಪ ಶೆಟ್ಟಿಗಾರರ ಪುತ್ರ ರಾಜಗೋಪಾಲ್ ಎಂ.ಕೆ. (51) ತೀವ್ರ ಹೃದಯಾಘಾತದಿಂದಾಗಿ ಸಂಘನಿಕೇತನ ಬಳಿಯಿರುವ ತಮ್ಮ ಸ್ವಗೃಹದಲ್ಲಿ ಜೂ.25 ರಂದು ನಿಧನರಾದರು.

ಇವರು ಪತ್ನಿ, ಪುತ್ರ ಹಾಗೂ ಅಪಾರ ಬಂಧು ಮಿತ್ರರನ್ನು ಆಗಲಿದ್ದಾರೆ.

ತೇರಪ್ಪ ಪಾಟಾಳಿ ಶರವು



• **ಬಡಗನ್ನೂರು:** ಬಡಗನ್ನೂರು ಗ್ರಾಮದ ಶರವು ನಿವಾಸಿ ಹಿರಿಯ ಯಕ್ಷಗಾನ ಕಲಾವಿದ ತೇರಪ್ಪ ಪಾಟಾಳಿ ಶರವು (85) ಅಲ್ಪಕಾಲದ ಅನಾರೋಗ್ಯದಿಂದ ಜೂ.27 ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪತ್ನಿ ಅಮ್ಮಣ್ಣಿ ಪುತ್ರರಾದ ಉದಯಕುಮಾರ್, ದಾಮೋದರ ಪಾಟಾಳಿ, ಬಾಲಕೃಷ್ಣ ಪಾಟಾಳಿ ಹಾಗೂ ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಬಂಧುಮಿತ್ರರು ಹಾಗೂ ಕುಟುಂಬಸ್ಥರನ್ನು ಆಗಲಿದ್ದಾರೆ.

ರತಿ ಎಂ. ಶೆಟ್ಟಿ



• **ಮುಲ್ಕಿ:** ಬಪ್ಪನಾಡು ದೇವಸ್ಥಾನದ ರಾ. ಹೆದ್ದಾರಿ ಪಕ್ಕ ಸುಮಾರು ನಾಲ್ಕು ದಶಕಗಳ ಕಾಲ ಶ್ರೀ ದುರ್ಗಾ ಭವನ ಊಟದ ಹೊಟೇಲ್ ನಡೆಸುತ್ತಿದ್ದ ರತಿ ಎಂ. ಶೆಟ್ಟಿ (94) ಬಪ್ಪನಾಡು ಸಮೀಪದ ಸ್ವಗೃಹದಲ್ಲಿ ಜೂ.26ರಂದು ನಿಧನ ಹೊಂದಿದರು. ಅವರು ಇಬ್ಬರು ಪುತ್ರರು, ಪುತ್ರಿಯನ್ನು ಆಗಲಿದ್ದಾರೆ.

ಸುಮತಿ ಭಟ್



• **ಆಲಂಕಾರು:** ಇಲ್ಲಿಗೆ ಸಮೀಪದ ಬೀರಂತಡ್ಕದ ನಿವಾಸಿ, ನಿವೃತ್ತ ವಾಯುಪಡೆ ಯೋಧ ಉದನೇಶ್ವರ ಭಟ್ ಅವರ ಪತ್ನಿ ಸುಮತಿ (62) ಅವರು ಶನಿವಾರ ಬೆಂಗಳೂರಿನಲ್ಲಿ ಮಗನ ನಿವಾಸದಲ್ಲಿ ನಿಧನರಾದರು. ಅವರು ಪತಿ,ಪುತ್ರ, ಪುತ್ರಿ ಹಾಗೂ ಬಂಧುವರ್ಗವನ್ನು ಆಗಲಿದ್ದಾರೆ.







ಕೆಸರಿನ ಗದ್ದೆಯಲ್ಲಿ ಆಡಿ ಸಂಭ್ರಮಿಸಿದ ಕಟೀಲು ಶಾಲಾ ಮಕ್ಕಳು!

• **ಕಟೀಲು:** ಅಜಾರಿನ ದೂಮಾವತಿ ದೈವಸ್ಥಾನದ ಬಳಿಯ ಶೇಖರ ಪೂಜಾರಿಯವರ ಪೂರ್ತಿ ಗದ್ದೆಯಲ್ಲಿ ಕೆಸರು ಮಣ್ಣು, ಆ ಮಣ್ಣಿನಲ್ಲಿ ನೆರೆದ ಮಕ್ಕಳೆಲ್ಲ ಇಷ್ಟೀ ಅನ್ನದೆ ಕುಣಿದು, ಕುಪ್ಪಳಿಸಿದರು. ನಡೆದು, ಆಡಿದರು. ಓಡಿ, ಹಾಡಿದರು. ಈ ಸಂದರ್ಭ ಬಿದ್ದರೂ, ಎದ್ದವರು ಒಂಚೂರೂ ಬೇಸರಿಸದೆ ಮತ್ತೆ ಆಟವಾಡಿದರು.

ಇಷ್ಟೆಲ್ಲ ಸಂಭ್ರಮಿಸುತ್ತಿದ್ದರೂ ಎದುರಿಗೆ ನಿಂತ ಅವರ ಶಾಲಾ ಶಿಕ್ಷಕಿಯರು, ಅಧ್ಯಾಪಕರು ಏನೂ ಬೈಯಲಿಲ್ಲ. ಬದಲಾಗಿ ಸ್ಪರ್ಧೆಗಳನ್ನು ಏರ್ಪಡಿಸಿ, ಹಿಂದಕ್ಕೆ ಹಿಂದಕ್ಕೆ ಓಡಿಸಿದರು. ಮುಂದಕ್ಕೆ ಓಡಿಸಿದರು. ಗೆದ್ದವರಿಗೆ ಬಹುಮಾನ ಕೊಡುತ್ತೇವೆ ಅಂದರು. ನಿಧಿ ಶೋಧ ಮಾಡಿಸಿ ಹುಡುಕಿದವರಿಗೆ ಕೊಟ್ಟರು.

ಇಂತಹದ್ದೊಂದು ಕೆಸರಿನ ಗದ್ದೆಯಲ್ಲಿ ಮಕ್ಕಳ ಸಂಭ್ರಮಕ್ಕೆ ಅವಕಾಶ ಮಾಡಿಕೊಟ್ಟಿದ್ದು, ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಳ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಗಳು. ಇಲ್ಲಿನ ಮುನ್ನೂರಕ್ಕೂ ಹೆಚ್ಚು ಮಕ್ಕಳು ಶನಿವಾರ ಮಣ್ಣಿನಲ್ಲಿ ಆಟವಾಡಿ ಖುಷಿ ಪಟ್ಟರು.

> **ತುಂಬಾ ಗಮತ್**
> ಕೆಸರ್‌ಡೊಂಜಿ ದಿನೊ ತುಂಬ ಒಳ್ಳೆದಾಗಿದೆ. ಎಲ್ಲರ ಜೊತೆಗೆ ಆಡುವಾಗ ನಮಗೆ ಗಮ್ಮತ್ತಾಯಿತು.
> ■ ಪ್ರಥಮ್, 7ನೇ ತರಗತಿ

ಗದ್ದೆಯ ಖುಷಿಯನ್ನು ಬಿಡ ಲಾಗದೆ ಮತ್ತೂ ಆಟವಾಡುತ್ತಿದ್ದ ಮಕ್ಕಳನ್ನು ಬನ್ನಿರಾ, ಸಾಕು ಸಾಕು ಬನ್ನಿ ಬೇಗ ಎಂದು ಬೈದುಕೊಂಡೇ ಮೇಲಕ್ಕೆ ಕರೆದರು.

> **ಖುಷಿ ಪಟ್ಟರು**
> ಮಕ್ಕಳು ಪಾಡ್ದನ ಕಲಿತು ಹಾಡಿದರು. ತುಳು ಪದ್ಯ ಹಾಡಿ, ಕುಣಿದರು. ತುಂಬ ಖುಷಿ ಪಟ್ಟರು.
> ■ ಸೌಮ್ಯ, ಶಿಕ್ಷಕಿ

ಕಿನ್ನಿಗೋಳಿ ಪ. ಪಂ.ನ ಸದಸ್ಯರಾದ ಲೋಕಯ್ಯ ಸಾಲಿಯಾನ್ ಹಾಗೂ ಪ್ರಕಾಶ್ ಆಚಾರ್ ಉದ್ಘಾಟಿಸಿದರು. ಕಟೀಲು ಶಾಲೆಗಳ ಸಂಯೋಜನಾಧಿಕಾರಿ ದಯಾನಂದ್ ಮಾಡ, ಶಿಕ್ಷಕ ರಕ್ಷಕ ಸಂಘದ ದೇವಿ ಪ್ರಸಾದ್, ಮುಖ್ಯ ಶಿಕ್ಷಕರಾದ ಸರೋಜಿನಿ, ಚಂದ್ರಶೇಖರ ಭಟ್ ಮುಂತಾದವರಿದ್ದರು. ಅನುಷಾ ದಿವಾಣ, ವೈಷ್ಣವಿ ನಿರೂಪಿಸಿದರು.

ಕೃಷಿಕ ಶೇಖರ್ ಪೂಜಾರಿ ಕೃಷಿ, ಭತ್ತ, ಗದ್ದೆ, ಕೆಸರಿನಲ್ಲಿ ಇಳಿದಾಗ ಆಗುವ ಪ್ರಯೋಜನಗಳನ್ನು ಮತ್ತು ಭತ್ತದ ಗದ್ದೆಯನ್ನು ಸಿದ್ಧಗೊಳಿಸಲು ಬೇಕಾಗುವ ವ್ಯವಸ್ಥೆಗಳ ಬಗ್ಗೆ ಮಾಹಿತಿ ನೀಡಿದರು. ಕೋಣಗಳನ್ನು ಓಡಿಸಿ ಗದ್ದೆಯ ಉಳುಮೆ ನಾಟಿ ಬಗ್ಗೆ ತಿಳಿಸಿದರು.

500 ವರ್ಷ ಇತಿಹಾಸದ ಉಳ್ಳಾಲ ಸೋಮನಾಥ ಕೆರೆ ಜೀರ್ಣೋದ್ಧಾರ ಕಾರ್ಯಕ್ಕೆ ಮುಹೂರ್ತ

ಜಲಸಂಪತ್ತಿಗೆ ಮತ್ತೆ ಗತ ವೈಭವ ಭಾಗ್ಯ

• **ಉಳ್ಳಾಲ:** ಉಳ್ಳಾಲದಲ್ಲಿರುವ ಸುಮಾರು 500 ವರ್ಷಗಳಷ್ಟು ಪುರಾತನವಾದ ಕೆರೆಯೊಂದು ಮತ್ತೆ ಗತ ವೈಭವ ಪಡೆಯುವ ಕಾಲ ಕೂಡಿಬಂದಿದೆ.

ಚೌಟ ರಾಜವಂಶದ ಆರಾಧ್ಯ ದೇವರಾಗಿರುವ ಸೋಮೇಶ್ವರದ ಶ್ರೀ ಸೋಮನಾಥ ದೇವರು ವರ್ಷಕ್ಕೊಮ್ಮೆ ದೈವಪಾತ್ರಿಗಳೊಂದಿಗೆ ವೈಭವಯುತ ಮೆರವಣಿಗೆಯಲ್ಲಿ ಮೇಲಂಗಡಿಯ ಶ್ರೀ ಗೋಪಾಲಕೃಷ್ಣ ಮಠ (ಸೋಮನಾಥ ಚಾವಡಿ) ದಲ್ಲಿರುವ ಸೋಮನಾಥ ಕೆರೆಗೆ ಅವಭೃತ ಸ್ನಾನಕ್ಕೆ ಆಗಮಿಸುತ್ತಿದ್ದರು. ಅವರೊಂದಿಗೆ ಬರುತ್ತಿದ್ದ ದರ್ಶನಪಾತ್ರಿಗಳು ಜಳಕ ಮಾಡುತ್ತಿದ್ದ ಕೆರೆಗಳು ಹಾಗೂ ಅವಧಿಕ್ಕೆ ಸಂಬಂಧಿಸಿದ ಅನೇಕ ಪುರಾತನ ಕಟ್ಟುಕಟ್ಟಲೆಗಳು ಕಾಲಕ್ರಮೇಣ ನಿಂತುಹೋಗಿ ತಮ್ಮ ಐತಿಹಾಸಿಕ ಹಾಗೂ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಕಳೆದುಕೊಂಡಿವೆ.

ರಾಣಿ ಅಬ್ಬಕ್ಕ ದೇವಿಯವರು ಆರಾಧನೆ ಮಾಡುತ್ತಿದ್ದ ದೈವ–ದೇವರ ಪೂರ್ವ ಕಟ್ಟುಕಟ್ಟಲೆಗಳನ್ನು ಪುನರಾರಂಭಿಸುವುದು ಹಾಗೂ ಶಿಥಿಲಾವಸ್ಥೆಯಲ್ಲಿರುವ ಸಾನ್ನಿಧ್ಯಗಳನ್ನು ಪುನಃ ಪ್ರತಿಷ್ಠಾಪಿಸುವ ಮೂಲಕ ಉಳ್ಳಾಲದ ಈ ಪವಿತ್ರ ಭೂಮಿಗೆ ಮರುಚೈತನ್ಯ ಮೂಡಿಸುವ ಮಹತ್ವದ ಉದ್ದೇಶದಿಂದ ನಡೆದ ಐದು ದಿನಗಳ ಅಷ್ಟಮಂಗಲ ಪ್ರಶ್ನೆಯಲ್ಲಿ ಸೂಚಿಸಿರುವಂತೆ ಹತ್ತೊಂಬತ್ತನೇ





> » ಶ್ರೀ ಸೋಮನಾಥ ದೇವರು ವರ್ಷಕ್ಕೊಮ್ಮೆ ದೈವಪಾತ್ರಿಗಳೊಂದಿಗೆ ಅವಭೃತ ಸ್ನಾನಕ್ಕೆ ಆಗಮಿಸುತ್ತಿದ್ದ ಕೆರೆ
> » ಉಳ್ಳಾಲದ ಈ ಪವಿತ್ರ ಭೂಮಿಗೆ ಮರುಚೈತನ್ಯ ಮೂಡಿಸುವ ಉದ್ದೇಶ
> » ಶ್ರೀ ಗೋಪಾಲಕೃಷ್ಣ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿ ಜೀರ್ಣೋದ್ಧಾರ ಕಾರ್ಯಕ್ಕೆ ಮುಹೂರ್ತ

ಪರಿಹಾರ ಸೇವೆಯ ಅಂಗವಾಗಿ ಭಾನುವಾರ ಬೆಳಗ್ಗೆ ಗಂಟೆ 8ಕ್ಕೆ ಶ್ರೀ ಗೋಪಾಲಕೃಷ್ಣ ಮಠದಲ್ಲಿರುವ ಶ್ರೀ ಗೋಪಾಲಕೃಷ್ಣ ದೇವರಿಗೆ ಹಾಲು ಪಾಯಸ ಸೇವೆ, ಒಂದು ಲೀಟರ್ ತುಪ್ಪ, ಹೂವು, ಫಲವಸ್ತು ಹಾಗೂ ಹಣ್ಣುಕಾಯಿಗಳನ್ನು ಸಮರ್ಪಿಸಲಾಯಿತು.

ವಿಶೇಷ ಪ್ರಾರ್ಥನೆ

ನಾವು ಕೈಗೊಂಡಿರುವ ಈ ಮಹತ್ಕಾರ್ಯಕ್ಕೆ ದೇವರ ಅನುಗ್ರಹ ಲಭಿಸಿ, ಉಳ್ಳಾಲದ ಪವಿತ್ರ ನೆಲಕ್ಕೆ ಮರುಚೈತನ್ಯ ದೊರೆತು ಪ್ರಾಚೀನ ವೈಭವ ಮರುಕಳಿಸಲಿ ಎಂದು ಪ್ರಾರ್ಥಿಸಲಾಯಿತು. ಅಲ್ಲದೆ, ಕೆರೆಯ ಜೀರ್ಣೋದ್ಧಾರದ ಕಾರ್ಯವು ಯಾವುದೇ ವಿಘ್ನಗಳಿಲ್ಲದೆ, ದೈವ ಸಂಕಲ್ಪಾನುಸಾರ ಸುಸೂತ್ರವಾಗಿ ನೆರವೇರಲೆಂದು ಶ್ರೀ ಗೋಪಾಲಕೃಷ್ಣ ಚಾವಡಿಯ ಅರ್ಚಕರಾದ ಜಯಂತ್ ಭಟ್ ಅವರ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಬಳಿಕ ಪ್ರಸಾದವನ್ನು ಅರಮನೆಗೆ ಕೊಂಡೊಯ್ಯಲಾಯಿತು.

ಅನಂತರ ದರ್ಶನ ಪಾತ್ರಿಗಳು ಜಳಕ ಮಾಡುತ್ತಿದ್ದ ಐತಿಹಾಸಿಕ ಕೆರೆಯ ಬಳಿ ತೆರಳಿ ಪ್ರಾರ್ಥನೆ ಸಲ್ಲಿಸಿ, ದೇವರ ಪ್ರಸಾದವನ್ನು ಕೆರೆಗೆ ಸಮರ್ಪಿಸುವ ಮೂಲಕ ಜೀರ್ಣೋದ್ಧಾರ ಕಾರ್ಯಕ್ಕೆ ಮುಹೂರ್ತ ನೆರವೇರಿಸಲಾಯಿತು.

ಕರಸೇವೆ

ಈ ಸಂದರ್ಭದಲ್ಲಿ ಆರ್‌ಎಸ್‌ಎಸ್‌ನ ತಾಲೂಕು ಸಹ ಕಾರ್ಯವಾಹರಾದ ಮನೋಹರ್, ವಿಶ್ವ ಹಿಂದೂ ಪರಿಷತ್‌ನ ಉಳ್ಳಾಲ ಪ್ರಖಂಡ ಉಪಾಧ್ಯಕ್ಷ ಪ್ರಭಾಕರ ಮಾಡೂರು, ಸಹ ಸಂಚಾಲಕ ಸುಧಾಕರ ಮಾಡೂರು, ಉಳ್ಳಾಲ ನಗರ ಕಾರ್ಯದರ್ಶಿ ಕಿಶನ್ ತಾರಿಪಡ್ಪು, ಉಳ್ಳಾಲ ನಗರ ಸತ್ಸಂಗ ಪ್ರಮುಖ್ ಚೇತನ್, ಬಜರಂಗದಳದ ಜಿಲ್ಲಾ ಪ್ರಮುಖ್ ಅರ್ಜುನ್ ಮಾಡೂರು, ಹಿಂದೂ ರುದ್ರಭೂಮಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸುಂದರ, ಶ್ರೀ ಗೋಪಾಲಕೃಷ್ಣ ಮಠದ ಯುಸಿಯಸ್ ವಂಶಸ್ಥರಾದ ಅರುಣ್ ಭಟ್, ರಾಣಿ ಅಬ್ಬಕ್ಕ ಕಾರ್ಯದಳದ ಸದಸ್ಯರಾದ ವಸಂತ್, ದಿನೇಶ್, ಗಣೇಶ್, ಹರ್ಷವರ್ಧನ, ಧನಂಜಯ ಹಾಗೂ ಡಾ.ಲತಾ ರೈ ಮೊದಲಾದವರು ಕರಸೇವೆಯಲ್ಲಿ ಭಾಗವಹಿಸಿದರು.

ಮನಸ್ಸು, ಕರ್ಮ ಉತ್ತಮವಿದ್ದರೆ ಸಕಲವೂ ಸೌಭಾಗ್ಯ: ಮಾಣಿಲ ಶ್ರೀ



• **ವಿಟ್ಲ:** ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯವಾಗಬೇಕು. ಗುರು ಮತ್ತು ಗುರಿ ಜೀವನದಲ್ಲಿ ಬಹಳ ಮುಖ್ಯವಾಗಿದೆ. ಮನಸ್ಸು, ಭಾವ, ಕರ್ಮ ಉತ್ತಮವಾಗಿದ್ದಾಗ ಎಲ್ಲವನ್ನೂ ಪಡೆಯಬಹುದು ಎಂದು ಮಾಣಿಲ ಶ್ರೀಧಾಮ ಶ್ರೀ ಮಹಾಲಕ್ಷ್ಮೀ ಕ್ಷೇತ್ರದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಹೇಳಿದರು.

ಮಾಣಿಲ ಶ್ರೀಧಾಮ ಶ್ರೀ ದುರ್ಗಾ ಮಹಾಲಕ್ಷ್ಮೀ ಕ್ಷೇತ್ರದಲ್ಲಿ 27ನೇ ವರ್ಷದ 48 ದಿನಗಳ ಕಾಲ ನಡೆಯುವ ವರಮಹಾಲಕ್ಷ್ಮೀ ವ್ರತಾಚರಣೆಯ ಆಮಂತ್ರಣ ಪತ್ರ ಬಿಡುಗಡೆ ಮಾಡಿ ಆಶೀರ್ವಚನ ನೀಡಿದರು.

ಸಮಾಜದ ಮನೆತನಗಳ ಬಗ್ಗೆ ಪ್ರತಿಯೊಬ್ಬರು ಅರಿಯಬೇಕು. ಜನ್ಮಾಂತರದ ಪಾಪವನ್ನು ಕಳೆಯುವ ಕೆಲಸವಾಗಬೇಕು. ಸಮಾಜದಲ್ಲಿ ಸಂತ ನಿರ್ಲಿಪ್ತತೆಯಲ್ಲಿ ಇರುವ ಕಾರ್ಯ ವಾಗಬೇಕು. ಅಂತರ್ಗತವಾದ ಪ್ರಾರ್ಥನೆ ಭಗವಂತನಿಗೆ ಹತ್ತಿರವಾಗಿದೆ. ಭಕ್ತಿಯಿದ್ದಾಗ ಶಕ್ತಿಯನ್ನು ಅರಿಯಲು ಸಾಧ್ಯ ಎಂದರು.

ಶ್ರೀ ವರಮಹಾಲಕ್ಷ್ಮೀ ವ್ರತಾಚರಣೆ ಸಮಿತಿ ಅಧ್ಯಕ್ಷ ಡಾ. ಹರೀಶ್ ಬೊಟ್ಟಾರಿ ಚೆವಾರು, ಉದ್ಯಮಿ ಗೋಪಾಲಕೃಷ್ಣ ಪೈ, ಕಾರಳಮುಗೇರುಗುತ್ತು ಅಮರನಾಥ ಅಜಿಲ ಅರಿಕಲ್ಲು, ಕ್ಯಾಂಪ್ಕೋ ನಿರ್ದೇಶಕ ಸತೀಶ್ ಚಂದ್ರ ಭಂಡಾರಿ, ಕಾಟುಕುಕ್ಕೆ ಮುಖ್ಯ ಶಿಕ್ಷಕ ಹರಿಪ್ರಸಾದ್ ಶೆಟ್ಟಿ ಮೇಲೇಂಗಿ, ಕಲ್ಕಟೆ ವೆಂಕಟ್ರಮಣ ಭಟ್, ಕ್ಷೇತ್ರದ ಟ್ರಸ್ಟಿಗಳಾದ ಚಂದ್ರಶೇಖರ ಮೂಲ್ಯ, ದೇವಪ್ಪ ಕುಲಾಲ್ ಪಂಜಿಕಲ್ಲು, ಮಹಿಳಾ ಸಮಿತಿಯ ರೇವತಿ ಪೆರ್ನೆ ಮತ್ತಿತರರು ಉಪಸ್ಥಿತರಿದ್ದರು.

ಕೆಯ್ಯೂರು ನಾರಾಯಣ ಭಟ್ ಸ್ವಾಗತಿಸಿದರು. ಎಚ್. ಕೆ. ನಯನಾಡು ಕಾರ್ಯಕ್ರಮ ನಿರ್ವಹಿಸಿದರು.

ಮನಸ್ಸಿಗೆ ನೆಮ್ಮದಿ ಕೊಡುವ ಕಲೆ ಯಕ್ಷಗಾನ: ವಾಸುದೇವ ಐತಾಳ



• **ಬಡಗನ್ನೂರು:** ತಾನು ಪಡೆದ ಖ್ಯಾತಿಯನ್ನು ಇತರೆ ಕಲಾವಿದರಿಗೆ ಧಾರೆಯುವುದು ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಮುಖ್ಯ ಉದ್ದೇಶ. ನಮ್ಮ ಮಣ್ಣಿನ ಕಲೆಯ ಮೂಲಕ ಸಂಸ್ಕೃತಿಯನ್ನು, ಏಕಾಗ್ರತೆ, ಆತ್ಮಸ್ಥೈರ್ಯವನ್ನು ಮೂಡುವುದು. ಮನಸ್ಸಿಗೆ ನೆಮ್ಮದಿ ಕೊಡುವ ಕಲೆ ಯಕ್ಷಗಾನದ ಕಲೆ ಎಂದು ಯಕ್ಷಧ್ರುವ ಯಕ್ಷ ಶಿಕ್ಷಣ ಸಮಿತಿ ಪ್ರಧಾನ ಸಂಚಾಲಕ ವಾಸುದೇವ ಐತಾಳ ಪಣಂಬೂರು ಹೇಳಿದರು.

ಅವರು ಪಟ್ಟೆ ಶ್ರೀಕೃಷ್ಣ ವಿದ್ಯಾ ಸಂಸ್ಥೆಗಳಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಶನ್ ಮಂಗಳೂರು ಸಹಯೋಗದೊಂದಿಗೆ ನಡೆದ ಉಚಿತ ಯಕ್ಷ ಶಿಕ್ಷಣ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದರು.

ಸಂಸ್ಥೆಯ ನಿರ್ದೇಶಕ ಗಣರಾಜ ಕುಂಬ್ಳೆ ಪ್ರಾಸ್ತಾವಿಕ ಮಾತನಾಡಿ, ಯಕ್ಷ ಗಾನ ಕಲೆ ಅತ್ಯಂತ ಪ್ರಿಯವಾದ ಕಲೆ. ಪುರಾಣದ ಪರಿಚಯ ಮಾಡಿಕೊಡುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಯಕ್ಷಗಾನದ ಕಲೆಯನ್ನು ಪರಿಚಯಿಸುವ ಮುಖಾಂತರ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ, ಆತ್ಮಸ್ಥೈರ್ಯವನ್ನು ಉಂಟು ಮಾಡುತ್ತದೆ ಎಂದು ಹೇಳಿದರು.

ವಿದ್ಯಾಸಂಸ್ಥೆಯ ಅಧ್ಯಕ್ಷ ಗೋಪಾಲಕೃಷ್ಣ ಭಟ್ ಸಭಾಧ್ಯಕ್ಷತೆ ವಹಿಸಿ, ಯಕ್ಷಗಾನ ಕಲೆಯು ಸರ್ವಾಂಗೀಣ ಬೆಳವಣಿಗೆಗೆ ಕಾರಣವಾಗುತ್ತದೆ. ಯಕ್ಷಗಾನದ ಕಲೆಯನ್ನು ಮಕ್ಕಳಿಗೆ ನೀಡುವುದರ ಮೂಲಕ ಸುಸಂಸ್ಕೃತ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಶ್ರದ್ಧೆಯಿಂದ ಕಲಿತಾಗ ಸಂಸ್ಕಾರ, ಶಿಸ್ತು ತಾನಾಗಿಯೇ ಬರುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ವಿದ್ಯಾಸಂಸ್ಥೆ ಸಂಚಾಲಕ ವಿಘ್ನೇಶ್ ಹಿರಣ್ಯ, ಪುತ್ತೂರು–ಸುಳ್ಯ ಯಕ್ಷಧ್ರುವ ಯಕ್ಷ ಶಿಕ್ಷಣ ಸಮಿತಿ ಸಂಚಾಲಕ ಪ್ರಶಾಂತ್ ರೈ ಮುಂಡಾಲಗುತ್ತು, ನಾಟ್ಯಗುರು ಚಂದ್ರಶೇಖರ್ ಸುಳ್ಯಪದವು ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಕಿ ಪುಷ್ಪಾವತಿ ಸ್ವಾಗತಿಸಿ, ಲತಾ ವಂದಿಸಿದರು. ಶಿಕ್ಷಕಿ ಸ್ವರ್ಣಶ್ರೀ ಕಾರ್ಯಕ್ರಮ ನಿರ್ವಹಿಸಿದರು.

ದೇವಸ್ಥಾನದ ವೈಶಿಷ್ಟ್ಯ ವಿವರಿಸಿದ ತೋನ್ಸೆ ಜಯಕೃಷ್ಣ ಶೆಟ್ಟಿ

ಸಿದ್ಧಿ ವಿನಾಯಕ ಮಂದಿರಕ್ಕೆ ಸಿಎಂ ಡಿಕೆಶಿ



• **ಉಡುಪಿ:** ಖಾಸಗಿ ಕಾರ್ಯಕ್ರಮವೊಂದರ ನಿಮಿತ್ತ ಇತ್ತೀಚೆಗೆ ಮುಂಬಯಿಗೆ ಆಗಮಿಸಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಅವರು ನಗರದ ಪ್ರಭಾ ದೇವಿ ಪ್ರದೇಶದಲ್ಲಿರುವ ಐತಿಹಾಸಿಕ ಶ್ರೀ ಸಿದ್ಧಿ ವಿನಾಯಕ ಮಂದಿರಕ್ಕೆ ಭೇಟಿ ನೀಡಿ ಗಣಪತಿಯ ದರುಶನ ಪಡೆದರು.

ಈ ಸಂದರ್ಭ ಅವರ ಜೊತೆಗಿದ್ದ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆ ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿಯ ಸಂಸ್ಥಾಪಕ ತೋನ್ಸೆ ಜಯಕೃಷ್ಣ ಶೆಟ್ಟಿ ಅವರು ಮುಖ್ಯಮಂತ್ರಿಗಳಿಗೆ ಸಿದ್ಧಿವಿನಾಯಕ ದೇವಸ್ಥಾನದ ಇತಿಹಾಸ ಹಾಗೂ ಅದರ ವಿಶಿಷ್ಟತೆಗಳ ಕುರಿತು ಮಾಹಿತಿ ನೀಡಿದರು.

ಬಳಿಕ ಅದೇ ಆವರಣದಲ್ಲಿರುವ ಹನುಮಾನ್ ಮಂದಿರಕ್ಕೂ ಭೇಟಿ ನೀಡಿದ ಸಿಎಂ ಅವರು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಈ ಸಂದ ರ್ಭದಲ್ಲಿ ತೋನ್ಸೆ ಜಯಕೃಷ್ಣ ಶೆಟ್ಟಿ ಅವರೊಂದಿಗೆ 'ಚಿನ್ನರ ಬಿಂಬ' ಸಂಸ್ಥೆಯ ರೂವಾರಿ ಪ್ರಕಾಶ್ ಶೆಟ್ಟಿ ಅವರು ಉಪಸ್ಥಿತರಿದ್ದರು.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರಥಮ ಬಾರಿಗೆ ಮುಂಬಯಿಗೆ ಆಗಮಿಸಿದ ಡಿ.ಕೆ. ಶಿವಕುಮಾರ್ ಅವರನ್ನು ನಗರದ ವಿಮಾನ ನಿಲ್ದಾಣದಿಂದಲೇ ಬರಮಾಡಿಕೊಂಡ ತೋನ್ಸೆ ಜಯಕೃಷ್ಣ ಶೆಟ್ಟಿ ಅವರು, ಸಿಎಂ ಜೊತೆ ಜಂಟಿಯಾಗಿ ಸಂಚರಿಸಿ ಪ್ರಮುಖ ವಿಷಯಗಳ ಕುರಿತು ಸಂಕ್ಷಿಪ್ತವಾಗಿ ಚರ್ಚಿಸುವ ಅವಕಾಶ ಪಡೆದುಕೊಂಡರು.

ಹಿಂದು ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಬಲವಂತದ ಮತಾಂತರ ಖಂಡಿಸಿ

ಕುಶಾಲನಗರದಲ್ಲಿ ನಾಳೆ ಜನಾಂದೋಲನ ಜಾಗೃತಿ ಸಭೆ

• **ಕುಶಾಲನಗರ:** ಹಿಂದು ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಬಲವಂತದ ಮತಾಂತರ ಖಂಡಿಸಿ ಹಿಂದೂ ಸುರಕ್ಷಾ ಸಮಿತಿ ವತಿಯಿಂದ ಜೂ.30 ರಂದು ಕುಶಾಲನಗರದಲ್ಲಿ ಜನಾಂದೋಲನ ಜಾಗೃತಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಪ್ರಮುಖ ಬಿ.ಅಮೃತ್ ರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಶಾಲನಗರದ ಕಾವೇರಿ ನಿಸರ್ಗ ಧಾಮದಲ್ಲಿ ಮುಸಲ್ಮಾನರ ವ್ಯಾಪಾರ ಕೇಂದ್ರದಲ್ಲಿ ನಡೆದಿರುವ ಮತಾಂತರ ಖಂಡಿಸಿ ಜನಜಾಗೃತಿ ಸಭೆ ಹಮ್ಮಿ ಕೊಳ್ಳಲಾಗಿದೆ. ಇದಕ್ಕೆ ಕುಶಾಲನಗರದ ವಿವಿಧ ಸಮುದಾಯಗಳ ಮುಖಂಡರು ಬೆಂಬಲ ಸೂಚಿಸಿದ್ದಾರೆ. ಅಂದು ಬೆಳಗಿನಿಂದ ಮಧ್ಯಾಹ್ನದ ತನಕ ಕುಶಾಲನಗರದ ವರ್ತಕರು ಅರ್ಧ ದಿನ ಸ್ವಯಂ ಪ್ರೇರಿತವಾಗಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಬೇಕೆಂದು ಮನವಿ ಮಾಡಿದರು.



ಅಪ್ರಾಪ್ತನ ಮತಾಂತರ ಪ್ರಕರಣದ ಹಿಂದೆ ಬಹುದೊಡ್ಡ ಜಾಲವಿದೆ. ಈಗಾಗಲೇ ಮೂವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಬಾಲಕನಿಗೆ ಸುನ್ನತ್ ಮಾಡಿಸಿದ ಕೇರಳದ ಮಂಜೇರಿಯಲ್ಲಿರುವ ಕೇಂದ್ರದ ಲೈಸೆನ್ಸ್ ಮುಟ್ಟುಗೋಲು ಹಾಕಬೇಕಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ಪೋಕ್ಸೋ ಕಾಯ್ದೆ ಕೂಡಾ ದಾಖಲಾಗಬೇಕೆಂದು ಆಗ್ರಹಿಸಿದರು.

ಆತಂಕಕಾರಿ ಬೆಳವಣಿಗೆ

ಕುಶಾಲನಗರ ಗೌಡ ಸಮಾಜದ ಅಧ್ಯಕ್ಷ ಚಿಲ್ಲನ ಗಣಿಪ್ರಸಾದ್ ಮಾತನಾಡಿ, ಬೇರೆ ಬೇರೆ ಪ್ರದೇಶಗಳಲ್ಲಿ ವರದಿಯಾಗುತ್ತಿದ್ದ ಬಲವಂತದ ಮತಾಂತರ ಪ್ರಕರಣ ಕೊಡಗಿನ ಕುಶಾಲನಗರಕ್ಕೂ ಕಾಲಿಟ್ಟಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದರ ವಿರುದ್ಧ ಹಿಂದೂ ಸಮುದಾಯ ಪ್ರತಿಭಟಿಸಬೇಕಿದೆ. ಈ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಜನಜಾಗೃತಿ ಕಾರ್ಯಕ್ರಮದಲ್ಲಿ ಗೌಡ ಸಮುದಾಯ ಬಾಂಧವರು ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು.

ಗೋಷ್ಠಿಯಲ್ಲಿ ಹಾಜರಿದ್ದ ಕುಶಾಲನಗರದ ಆರ್ಯ ವೈಶ್ಯ ಮಂಡಳಿ ಉಪಾಧ್ಯಕ್ಷ ಅಶೋಕ್, ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್. ರಾಜಶೇಖರ್, ದೇವಾಂಗ ಸಂಘದ ಅಧ್ಯಕ್ಷ ಡಿ.ವಿ.ರಾಜೇಶ್, ಕೊಡವ ಸಮಾಜ ಕಾರ್ಯದರ್ಶಿ ಸಂಜು ಬೆಳ್ಳಿಯಪ್ಪ ಅವರು ಕೂಡಾ ಬಲವಂತದ ಮತಾಂತರ ಘಟನೆಯನ್ನು ಖಂಡಿಸಿದರು. ತಮ್ಮ ತಮ್ಮ ಸಮುದಾಯ ಬಾಂಧವರು ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಈ ಸಂದರ್ಭ ಹಿಂದೂ ಸುರಕ್ಷಾ ಸಮಿತಿಯ ಭರತ್ ಮಾಚಯ್ಯ, ಮಂಜುನಾಥ್ ಇದ್ದರು.

ಕಾಲ್ಚೆಂಡಿನ ಸಮರ
ಫಿಫಾ ವಿಶ್ವಕಪ್ | ಯುಎಸ್‌ಎ, ಮೆಕ್ಸಿಕೋ, ಕೆನಡಾ | ಜೂನ್ 11-ಜುಲೈ 19
FIFA
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ, 29 ಜೂನ್ 2026
ಮಂಗಳೂರು

ಸೋಮವಾರದ ಪಂದ್ಯ (ನಾಕೌಟ್)

ಬ್ರೆಜಿಲ್-ಜಪಾನ್ (ರಾತ್ರಿ 10:30)

ಜರ್ಮನಿ ಪರಾಗ್ವೆ (ಮಧ್ಯರಾತ್ರಿ 2:00)

ಕಿರುಸುದ್ದಿ

ಇಂಗ್ಲೆಂಡ್‌ಗೆ ಗೆಲುವು

• **ಲಾರ್ಡ್ಸ್:** ಮ್ಯಾಟ್ ಹಾಜ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನೊಂದಿಗೆ ಇಂಗ್ಲೆಂಡ್ ಮಹಿಳೆಯರ ತಂಡವು ನ್ಯೂಜಿಲೆಂಡ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ಆ ಮೂಲಕ ವಿಂಡೀಸ್ ಸೆಮಿಫೈನಲ್‌ಗೇರಿತು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತು. ಮೆಲ್ಲಿ ಕೇರ್ 42 ರನ್ ಗಳಿಸಿದರು. ಸೋಫಿ ಡಿವೈನ್ 30 ರನ್ ಗಳಿಸಿದರು. ಗುರಿ ಬೆನ್ನತ್ತಿದ ಇಂಗ್ಲೆಂಡ್ 17.2 ಓವರ್‌ಗಳಲ್ಲೇ 1 ವಿಕೆಟ್ ಮಾತ್ರ ಕಳೆದುಕೊಂಡು 164 ರನ್ ಗಳಿಸಿತು. ಮ್ಯಾಟ್ ಹಾಜ್ 53 ಬಾಲ್‌ಗಳಲ್ಲಿ 89 ರನ್ ಗಳಿಸಿ ಅಜೇಯರಾಗಿದ್ದರು. ಸೋಫಿಯಾ 38 ಬಾಲ್‌ಗಳಲ್ಲಿ 49★ ರನ್ ಗಳಿಸಿದರು.

ಯುಎಸ್ ಓಪನ್: ಫೈನಲ್‌ಗೆ ಶ್ರೀಕಾಂತ್

• **ನ್ಯೂ ಯಾರ್ಕ್:** ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಪಾರುಪತ್ಯ ಮುಂದುವರಿದಿದೆ. ಸೆಮಿಫೈನಲ್ ಪಂದ್ಯದಲ್ಲಿ ಅನುಭವಿ ಕಿದಂಬಿ ಶ್ರೀಕಾಂತ್ ಭರ್ಜರಿ ಪ್ರದರ್ಶನ ನೀಡಿದ್ದು, ಮೂರು ಸೆಟ್‌ಗಳ ರೋಚಕ ಪಂದ್ಯದಲ್ಲಿ ಜಪಾನ್‌ನ ವೈ ಒಕೊಮೋಟೋ ಅವರೊಂದಿಗೆ ಜಯ ಸಾಧಿಸಿ ಫೈನಲ್‌ಗೆ ಲಗ್ಗೆ ಹಾಕಿದ್ದಾರೆ. ಕಿದಂಬಿ ಶ್ರೀಕಾಂತ್ ಮತ್ತು ರೌಣಕ್ ಚೌಹಾಣ್ ಸೆಮಿಫೈನಲ್‌ಗೇರಿದ್ದರು. ರೌಣಕ್ ಎಲ್. ವೈ ಸು ಅವರೊಂದಿಗೆ ಸೋತು ತಮ್ಮ ಅಭಿಯಾನಕ್ಕೆ ಓಟ ನಿಲ್ಲಿಸಿದರು. ಇತ್ತ ಮತ್ತೊಂದು ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ ಕರಾರುವಾಕ್ ಪ್ರದರ್ಶನದೊಂದಿಗೆ 22–20,15–21,21–19ರಿಂದ ಗೆದ್ದರು.

ಸರ್ವೇಶ್ ರಾಷ್ಟ್ರೀಯ ದಾಖಲೆ

• **ಭುವನೇಶ್ವರ:** ಶುಕ್ರವಾರ ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆದ 65ನೇ ರಾಷ್ಟ್ರೀಯ ಅಂತರ-ರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮಹಾರಾಷ್ಟ್ರದ ಸರ್ವೇಶ್ ಕುಶಾರೆ 2.31 ಮೀಟರ್ ಎತ್ತರಕ್ಕೆ ಜಿಗಿಯುವ ಮೂಲಕ ಪುರುಷರ ಹೈಜಂಪ್ ರಾಷ್ಟ್ರೀಯ ದಾಖಲೆಯನ್ನು ಮುರಿದರು.

31 ವರ್ಷದ ಸರ್ವೇಶ್ ಕುಶಾರೆ, 2018ರಿಂದ ಲುಬ್ಬಾಕ್‌ನಲ್ಲಿ ತೇಜಸ್ವಿನ್ ಶಂಕರ್ ಅವರ ಹಿಂದಿನ ರಾಷ್ಟ್ರೀಯ ಹೈಜಂಪ್ ದಾಖಲೆಯಾದ 2.29 ಮೀಟರ್ ಎತ್ತರವನ್ನು ಉತ್ತಮಗೊಳಿಸಿದರು. ಕುಶಾರೆ ಅವರ ಈ ಪ್ರಯತ್ನವು 2018 ರಲ್ಲಿ ಗುವಾಹಟಿಯಲ್ಲಿ ಬಿ. ಚೇತನ್ ಸ್ಥಾಪಿಸಿದ 2.25 ಮೀಟರ್ ಕೂಟ ದಾಖಲೆಯನ್ನು ಸಹ ಸುಧಾರಿಸಿತು. ಏಷ್ಯನ್ ಕ್ರೀಡಾಕೂಟದ ಅರ್ಹತಾ ಅಂಕವಾದ 2.19 ಮೀಟರ್ ಅನ್ನು ಈಗಾಗಲೇ ದಾಟಿದ್ದ ಕುಶಾರೆ, ತಮ್ಮ ಮೂರನೇ ಪ್ರಯತ್ನದಲ್ಲಿ 2.31 ಮೀಟರ್ ಎತ್ತರಕ್ಕೆ ದಾಖಲೆಯ ಕ್ಲಿಯರೆನ್ಸ್ ಗಳಿಸಿದರು.

ಬೆನ್ ಸ್ಟೋಕ್ಸ್ ದಿಢೀರ್ ನಿವೃತ್ತಿ!

• **ನಾಟಿಂಗ್‌ಹ್ಯಾಮ್:** ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ಮಧ್ಯದಲ್ಲಿ ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ದಿಢೀರ್ ನಿವೃತ್ತಿ ಘೋಷಿಸಿದರು. ತಂಡವು ತಮ್ಮ ಸಾಮಾಜಿಕ ಮಾಧ್ಯಮ ಹಾತೆಗಳಲ್ಲಿ ಪ್ರಕಟಿಸಿದ ವೀಡಿಯೊದಲ್ಲಿ, ನಿರ್ಧಾರ ಪ್ರಕಟಿಸಿದ್ದಾರೆ. 35 ವರ್ಷದ ಸ್ಟೋಕ್ಸ್ 2011ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದರು. 2022 ರಿಂದ ಇಂಗ್ಲೆಂಡ್‌ನ ಟೆಸ್ಟ್ ತಂಡದ ನಾಯಕರಾಗಿದ್ದಾರೆ. ಇಂಗ್ಲೆಂಡ್‌ನ ಸಾರ್ವಕಾಲಿಕ ಶ್ರೇಷ್ಠ ನಾಯಕರಲ್ಲಿ ಒಬ್ಬರಾದ ಬೆನ್ ಸ್ಟೋಕ್ಸ್ ಈ ಟೆಸ್ಟ್ ಪಂದ್ಯದ ಕೊನೆಯಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಲು ನಿರ್ಧರಿಸಿದ್ದಾರೆ. ಈ ಹಿಂದೆ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಗುಂಪು ಘರ್ಷಣೆಯಲ್ಲಿ ಭಾಗಿಯಾಗಿದ್ದಾರೆಂದು ಹೇಳಲಾಗಿತ್ತು. ಈ ಒಂದು ಪಂದ್ಯದಿಂದ ದೂರ ಉಳಿದಿದ್ದ ಅವರು, ಮೂರನೇ ಪಂದ್ಯಕ್ಕೆ ಮತ್ತೆ ನಾಯಕರಾಗಿ ಮರಳಿದ್ದರು.


ದ.ಆಫ್ರಿಕಾಗೆ ಗೆಲುವು

• **ಲಾರ್ಡ್ಸ್:** ಸಾಂಘಿಕ ಪ್ರದರ್ಶನದೊಂದಿಗೆ ಮಿಂಚಿರುವ ದ.ಆಫ್ರಿಕಾ ಮಹಿಳೆಯರ ತಂಡವು ಬಾಂಗ್ಲಾ ವಿರುದ್ಧದ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಇದರೊಂದಿಗೆ ವಿಶ್ವಕಪ್ ಪಂದ್ಯಾವಳಿಯ ಸೆಮಿಫೈನಲ್‌ಗೇರಿದೆ. ಭಾನುವಾರದ ಪಂದ್ಯದಲ್ಲಿ ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 117 ರನ್ ಗಳಿಸಿತು. ಸೊಭಾನಾ ಮೋಸ್ತ್ರಿ 42 ರನ್ ಗಳಿಸಿದರು. ಗುರಿ ಬೆನ್ನತ್ತಿದ ದ.ಆಫ್ರಿಕಾ 19.2 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 118 ರನ್ ಗಳಿಸಿತು. ಡೆರ್ಕಸೆನ್ 45 ರನ್ ಗಳಿಸಿದರು. ಬ್ರಿಟ್ಸ್ 20 ರನ್ ಗಳಿಸಿದರು. ಚೋಲೆ ಕೊನೆಯಲ್ಲಿ ಬೇಕಾದ 8 ರನ್ ಗಳಿಸಿ ಗೆಲುವು ಖಾತ್ರಿ ಪಡಿಸಿದರು.

ಅರ್ಜೆಂಟೀನಾ ಅಧಿಪತ್ಯ

ಮೆಸ್ಸಿ ಮೋಡಿಗೆ ಮತ್ತೊಂದು ಜಯ | ಗುಂಪು ಹಂತದಲ್ಲಿ ಹಾಲಿ ಚಾಂಪಿಯನ್ನರು ಟಾಪ್ | ಹೊರನಡೆದ ಇರಾನ್

• **ಆರ್ಲಿಂಗ್ಟನ್(ಡಲ್ಲಾಸ್):** ಫುಟ್‌ಬಾಲ್ ಲೋಕದಲ್ಲಿ ಲಿಯೋನೆಲ್ ಮೆಸ್ಸಿ ಇದ್ದ ತಂಡ ಮಿಂಚುವುದು ಖಚಿತ. ಮೆಸ್ಸಿ ಮೈದಾನಕ್ಕಿಳಿದರೆ ದಾಖಲೆಯೊಂದಾಗುವುದು ಖಚಿತ. ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ತಾರೆ ಲಿಯೋನೆಲ್ ಮೆಸ್ಸಿ ದಾಖಲೆಗಳ ಮಸಿಯಿಂದ ಚರಿತ್ರೆಗಳನ್ನು ಬರೆಯುತ್ತಿರುವ ಮೆಸ್ಸಿ ಮತ್ತೊಂದು ದಿನ ಮತ್ತೊಂದು ಇತಿಹಾಸ ನಿರ್ಮಿಸಿ ತಮ್ಮ ತಂಡಕ್ಕೆ ಗೆಲುವು ತಂದುಕೊಟ್ಟರು. ಕಳೆದ ಪಂದ್ಯದಲ್ಲಿ ಇತಿಹಾಸದ ಬೆಸ್ಟ್ ಫುಟ್‌ಬಾಲರ್ ಎಂಬ ಬಿರುದನ್ನು ವಿಶ್ವಕಪ್‌ನಲ್ಲಿ ಅತಿ ಹೆಚ್ಚು ಗೋಲ್ ಬಾರಿಸಿದ ಆಟಗಾರ ಎಂಬ ದಾಖಲೆಯೊಂದಿಗೆ ಪಡೆದಿದ್ದ ಮೆಸ್ಸಿ, ಈಗ 7 ಸತತ ವಿಶ್ವಕಪ್ ಪಂದ್ಯದಲ್ಲಿ ಗೋಲು ಬಾರಿಸಿದ ಸಾಹಸ ಎಂಬ ಇತಿಹಾಸ ಮಾಡಿದರು. ಶನಿವಾರ ರಾತ್ರಿ ಅರ್ಜೆಂಟೀನಾ ಹಾಗೂ ಜಾರ್ಡನ್ ತಂಡಗಳು ಎದುರಾಗಿದ್ದವು. ನಿರೀಕ್ಷಿತ ಫಲಿತಾಂಶ ಹೊರಬಂದಿದ್ದು, ಅರ್ಜೆಂಟೀನಾ 3–1ರಿಂದ ಗೆಲುವು ಸಾಧಿಸಿದೆ. ಲಿಯೋನೆಲ್ ಮೆಸ್ಸಿ ಮತ್ತೊಮ್ಮೆ ಗೋಲು ದಾಖಲಿಸಿ ವಿಶ್ವಕಪ್‌ನಲ್ಲಿ ತಮ್ಮ ದಾಖಲೆ ಗೋಲುಗಳ ಸಂಖ್ಯೆಯನ್ನು 19ಕ್ಕೆ ಏರಿಸಿದರೆ, ಜಿಯೋವಾನಿ ಲೊ ಸೆಲ್ಸೊ ಈ ವಿಶ್ವಕಪ್‌ನಲ್ಲಿ ಮೆಸ್ಸಿ ಹೊರತುಪಡಿಸಿ ಅರ್ಜೆಂಟೀನಾ ಪರ ಗೋಲು ಗಳಿಸಿದ ಮೊದಲ ಆಟಗಾರರಾದರು.



ಮೆಸ್ಸಿ ಮತ್ತೊಂದು ದಾಖಲೆ

ವಿಶ್ವಕಪ್‌ನಲ್ಲಿ ಸತತ ಏಳನೇ ಪಂದ್ಯದಲ್ಲೂ ಗೋಲು ದಾಖಲಿಸಿ ಮತ್ತೊಂದು ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದರು. ಈ ಮೂಲಕ ಫ್ರಾನ್ಸ್‌ನ ಜಸ್ಟ್ ಫಾಂಟೇನ್ ಹಾಗೂ ಬ್ರೆಜಿಲ್‌ನ ಜೈರ್ಜಿನ್ಹೊ ಅವರ ಸತತ ಆರು ಪಂದ್ಯಗಳಲ್ಲಿ ಗೋಲು ದಾಖಲಿಸಿದ ದಾಖಲೆಯನ್ನು ಹಿಂದಿಕ್ಕಿದರು.

19ನೇ ನಿಮಿಷಕ್ಕೆ ಮೊದಲ ಗೋಲ್

ಗುಂಪಿನಲ್ಲಿ ಮೊದಲ ಸ್ಥಾನ ಈಗಾಗಲೇ ಖಚಿತವಾಗಿದ್ದ ಕಾರಣ ಕೋಚ್ ಲಿಯೋನೆಲ್ ಸ್ಕಲೋನಿ ಆರಂಭಿಕ ತಂಡದಲ್ಲಿ ಒಂಬತ್ತು ಬದಲಾವಣೆಗಳನ್ನು ಮಾಡಿದ್ದರು. ಮೊದಲ ಬಾರಿಗೆ ಈ ವಿಶ್ವಕಪ್‌ನಲ್ಲಿ ಆರಂಭಿಕ ಅವಕಾಶ ಪಡೆದ ಲೊ ಸೆಲ್ಸೊ 19ನೇ ನಿಮಿಷದಲ್ಲಿ ನೇರ ಫ್ರೀ–ಕಿಕ್ ಮೂಲಕ ಸುಂದರ ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. 31ನೇ ನಿಮಿಷದಲ್ಲಿ ಲೌಟಾರೊ ಮಾರ್ಟಿನೆಸ್ ಪೆನಾಲ್ಟಿಯನ್ನು ಗೋಲಾಗಿ ಪರಿವರ್ತಿಸಿ ಅರ್ಜೆಂಟೀನಾದ ಮುನ್ನಡೆಯನ್ನು 2–0ಕ್ಕೆ ಹೆಚ್ಚಿಸಿದರು. ದ್ವಿತೀಯಾರ್ಧದ 60ನೇ ನಿಮಿಷದಲ್ಲಿ ಮೆಸ್ಸಿ ಮೈದಾನಕ್ಕಿಳಿದರೆ, 80ನೇ ನಿಮಿಷದಲ್ಲಿ ತಮ್ಮ ಸೊಗಸಾದ ಗೋಲಿನ ಮೂಲಕ ಪಂದ್ಯಕ್ಕೆ ಮೆರಗು ನೀಡಿದರು. 55ನೇ ನಿಮಿಷಕ್ಕೆ ಮುಸಾ ಜಾರ್ಡನ್ ಪರ ಒಂದು ಗೋಲು ಗಳಿಸಿದರು.

ಕೊಲಂಬಿಯಾ- ಪೋರ್ಚುಗಲ್ ಪಂದ್ಯ ಡ್ರಾ

• **ಮಿಯಾಮಿ ಗಾರ್ಡನ್ಸ್:** ಈಗಾಗಲೇ ನಾಕೌಟ್ ಹಂತದ ಸ್ಥಾನ ಖಚಿತಪಡಿಸಿಕೊಂಡಿದ್ದ ಕೊಲಂಬಿಯಾ ಮತ್ತು ಪೋರ್ಚುಗಲ್ ನಡುವಿನ ಪಂದ್ಯ ಗೋಲುರಹಿತ (0–0) ಡ್ರಾದಲ್ಲಿ ಅಂತ್ಯಗೊಂಡಿತು. ಇದರೊಂದಿಗೆ ಕೊಲಂಬಿಯಾ ಏಳು ಅಂಕಗಳೊಂದಿಗೆ ಗುಂಪು ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಪೋರ್ಚುಗಲ್ ಐದು ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆಯಿತು. ಈ ಫಲಿತಾಂಶದೊಂದಿಗೆ ಕೊಲಂಬಿಯಾ ರೌಂಡ್ ಆಫ್ 32ರಲ್ಲಿ ಘಾನಾವನ್ನು ಎದುರಿಸಲಿದ್ದು, ಪೋರ್ಚುಗಲ್ ಕ್ರೊಯೇಷಿಯಾ ವಿರುದ್ಧ ಸೆಣಸಲಿದೆ. ಎರಡೂ ತಂಡಗಳು ನಿರಂತರ ಪ್ರಯತ್ನ ಪಟ್ಟರೂ ಗೋಲುಗಳು ದಾಖಲಾಗಲೇ ಇಲ್ಲ. ಫಾರ್ವರ್ಡರ್‌ಗಳು ಆಕ್ರಮಣಕಾರಿ ಆಟ ಆಡುತ್ತಲೇ ಇದ್ದರೆ, ಇತ್ತ ಡಿಫೆಂಡರ್‌ಗಳು ಅದನ್ನು ತಡೆಯುತ್ತಲೇ ಇದ್ದರು. ಹೀಗಾಗಿ ಪಂದ್ಯ ಡ್ರಾದಲ್ಲೇ ಅಂತ್ಯಗೊಂಡಿತು.

ತಾರೆಯರ ಸಮಾಗಮ: 64,478 ಪ್ರೇಕ್ಷಕರಿಂದ ಕಿಕ್ಕಿರಿದ ಮೈಯಾಮಿ ಡಾಲ್ಫಿನ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯವನ್ನು ಕೊಲಂಬಿಯಾದ ಮಾಜಿ ಫುಟ್‌ಬಾಲ್ ತಾರೆ ಕಾರ್ಲೋಸ್ ವಾಲ್ಡೆರಾಮಾ, ಫಿಫಾ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಎನ್‌ಬಿಎ ತಾರೆ ಜಿಮ್ಮಿ ಬಟ್ಲರ್, ಹಾಲಿವುಡ್ ನಟ ಮ್ಯಾಟ್ ಡೇಮನ್ ಸೇರಿದಂತೆ ಹಲವು ಗಣ್ಯರು ವೀಕ್ಷಿಸಿದರು.

ಇಂಗ್ಲೆಂಡ್‌ಗೆ ಸುಲಭ ಜಯ



• **ಈಸ್ಟ್ ರುದರ್‌ಫೋರ್ಡ್:** ಜೂಡ್ ಬೆಲ್ಲಿಂಗ್ಹ್ಯಾಮ್ ಹಾಗೂ ನಾಯಕ ಹ್ಯಾರಿ ಕೇನ್ ದ್ವಿತೀಯಾರ್ಧದಲ್ಲಿ ಗಳಿಸಿದ ಗೋಲುಗಳ ನೆರವಿನಿಂದ ಇಂಗ್ಲೆಂಡ್ 2026ರ ಫಿಫಾ ವಿಶ್ವಕಪ್‌ನ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಪನಾಮಾವನ್ನು 2–0 ಗೋಲುಗಳಿಂದ ಮಣಿಸಿ ನಾಕೌಟ್ ಹಂತಕ್ಕೆ ಅಗ್ರಸ್ಥಾನಿಯಾಗಿ ಪ್ರವೇಶಿಸಿತು. ಮಳೆ ಸುರಿಯುತ್ತಿದ್ದ ವಾತಾವರಣದಲ್ಲೂ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ಅಭಿಮಾನಿಗಳ ಜೋರಾದ ಬೆಂಬಲದ ನಡುವೆ ಮೊದಲಾರ್ಧದಲ್ಲಿ ಉಭಯ ತಂಡಗಳು ಗೋಲುರಹಿತವಾಗಿದ್ದವು. ಇಂಗ್ಲೆಂಡ್‌ನ ಪ್ರಮುಖ ಸ್ಟ್ರೈಕರ್ ಹ್ಯಾರಿ ಕೇನ್ ಮೊದಲ 45 ನಿಮಿಷಗಳಲ್ಲಿ ಕೇವಲ 10 ಬಾರಿ ಮಾತ್ರ ಚೆಂಡು ಸ್ಪರ್ಶಿಸುವ ಮೂಲಕ ಪನಾಮಾ ರಕ್ಷಣಾ ಪಡೆ ಅವರನ್ನು ಕಟ್ಟಿಹಾಕಿತ್ತು. 62ನೇ ನಿಮಿಷದಲ್ಲಿ ಬುಕಾಯೊ ಸಾಕಾ ನೀಡಿದ ಕಾರ್ನರ್ ಕಿಕ್ ಅನ್ನು ಜೂಡ್ ಬೆಲ್ಲಿಂಗ್ಹ್ಯಾಮ್ ಸಮರ್ಥವಾಗಿ ಗೋಲಾಗಿ ಪರಿವರ್ತಿಸಿ ಇಂಗ್ಲೆಂಡ್‌ಗೆ ಮುನ್ನಡೆ ತಂದುಕೊಟ್ಟರು. ಐದು ನಿಮಿಷಗಳ ಬಳಿಕ ಬೆಲ್ಲಿಂಗ್ಹ್ಯಾಮ್ ನೀಡಿದ ಅದ್ಭುತ ಕ್ರಾಸ್‌ಗೆ ಹ್ಯಾರಿ ಕೇನ್ ಹೆಡರ್ ಮೂಲಕ ಗೋಲು ದಾಖಲಿಸಿ ತಂಡದ ಗೆಲುವು ಖಚಿತಪಡಿಸಿದರು.



ಇರಾನ್ ಹೊರನೂಕಿ ನಾಕೌಟ್‌ಗೆ ಆಸ್ಟ್ರಿಯಾ

• **ಕ್ಯಾನ್ಸಾಸ್ ಸಿಟಿ:** ವಿಶ್ವಕಪ್ ಜೆ ಗುಂಪಿನ ಕೊನೆಯ ಪಂದ್ಯದಲ್ಲಿ ಆಸ್ಟ್ರಿಯಾ ಮತ್ತು ಅಲ್ಜೀರಿಯಾ 3–3 ಗೋಲುಗಳ ರೋಚಕ ಡ್ರಾಗೆ ತೃಪ್ತಿಪಟ್ಟರೂ, ಈ ಫಲಿತಾಂಶ ಎರಡೂ ತಂಡಗಳನ್ನು ನಾಕೌಟ್ ಹಂತಕ್ಕೇರಿಸಿತು. ಇದೇ ವೇಳೆ ಇರಾನ್ ವಿಶ್ವಕಪ್ ಪಂದ್ಯಾವಳಿಯಿಂದಲೇ ಹೊರಬಿತ್ತು.

ಪಂದ್ಯದ ಅಂತಿಮ ಕ್ಷಣಗಳಲ್ಲಿ ಸತತ ತಿರುವುಗಳು ಕಂಡುಬಂದವು. 2–2 ಸಮಬಲದಲ್ಲಿದ್ದ ವೇಳೆ ಹೆಚ್ಚುವರಿ ಸಮಯದಲ್ಲಿ ರಿಯಾದ್ ಮಹ್ರೆಜ್ ತಮ್ಮ ಎರಡನೇ ಗೋಲು ದಾಖಲಿಸಿ ಅಲ್ಜೀರಿಯಾಗೆ 3–2 ಮುನ್ನಡೆ ತಂದುಕೊಟ್ಟರು. ಇದರಿಂದ ಆಸ್ಟ್ರಿಯಾ ಹೊರಬೀಳುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಕ್ಷಣಗಳಲ್ಲೇ ಸಾಸಾ ಕಲೈಡ್ಜಿಕ್ ಹೆಡರ್ ಮೂಲಕ ಸಮಬಲ ಸಾಧಿಸಿ ಆಸ್ಟ್ರಿಯಾದ ನಾಕೌಟ್ ಕನಸನ್ನು ಜೀವಂತವಾಗಿರಿಸಿದರು. ಈ ಫಲಿತಾಂಶದೊಂದಿಗೆ ಆಸ್ಟ್ರಿಯಾ ಗುಂಪಿನಲ್ಲಿ ಅರ್ಜೆಂಟೀನಾದ ಬಳಿಕ ಎರಡನೇ ಸ್ಥಾನ ಪಡೆದು 1982ರ ನಂತರ ಮೊದಲ ಬಾರಿಗೆ ನಾಕೌಟ್ ಹಂತಕ್ಕೇರಿತು. ರೌಂಡ್ ಆಫ್ 32ರಲ್ಲಿ ಯುರೋಪಿಯನ್ ಚಾಂಪಿಯನ್ ಸ್ಪೇನ್‌ನ್ನು ಎದುರಿಸಲಿದೆ.



32ರ ಸುತ್ತಿಗೆ ಕಾಂಗೋ

• **ಅಟ್ಲಾಂಟಾ:** 52 ವರ್ಷಗಳ ಬಳಿಕ ವಿಶ್ವಕಪ್‌ಗೆ ಮರಳಿದ್ದ ಕಾಂಗೋ, ಉಜ್ಬೇಕಿಸ್ತಾನ ವಿರುದ್ಧ 3–1 ಗೋಲುಗಳ ಭರ್ಜರಿ ಕಮ್‌ಬ್ಯಾಕ್ ಗೆಲುವು ಸಾಧಿಸಿ ತನ್ನ ಇತಿಹಾಸದಲ್ಲೇ ಮೊದಲ ಬಾರಿಗೆ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಪಂದ್ಯದ 10ನೇ ನಿಮಿಷದಲ್ಲೇ ಎಲ್ಡೋರ್ ಶೊಮುರೊದೋವ್ ಗಳಿಸಿದ ಗೋಲಿನಿಂದ ಉಜ್ಬೇಕಿಸ್ತಾನ ಮುನ್ನಡೆ ಸಾಧಿಸಿತ್ತು. ಇದರಿಂದ ಕಾಂಗೋದ ಕನಸು ಅಂತ್ಯವಾಗುವಂತೆ ಕಂಡಿತ್ತು. ಆದರೆ ದ್ವಿತೀಯಾರ್ಧದಲ್ಲಿ ಅದ್ಭುತ ಹೋರಾಟ ಪ್ರದರ್ಶಿಸಿದ ಆಫ್ರಿಕನ್ ತಂಡ ಪಂದ್ಯವನ್ನು ಸಂಪೂರ್ಣವಾಗಿ ತಿರುಗಿಸಿತು. 68ನೇ ನಿಮಿಷದಲ್ಲಿ ಯೋಯಾನೆ ವಿಸ್ಸಾ ಅವರು ಪೆನಾಲ್ಟಿಯನ್ನು ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿ ಕಾಂಗೋಗೆ ಸಮಬಲ ತಂದುಕೊಟ್ಟರು. ಬಳಿಕ 78ನೇ ನಿಮಿಷದಲ್ಲಿ ಫಿಸ್ಟನ್ ಮಯೆಲೆ ಗೋಲು ದಾಖಲಿಸಿ ತಂಡಕ್ಕೆ 2–1 ಮುನ್ನಡೆ ನೀಡಿದರು. ಹೆಚ್ಚುವರಿ ವೇಳೆಯಲ್ಲಿ ವಿಸ್ಸಾ ಮತ್ತೊಂದು ಅದ್ಭುತ ಗೋಲು ಬಾರಿಸುವ ಮೂಲಕ 3–1 ಅಂತರದ ಗೆಲುವು ಖಚಿತಪಡಿಸಿದರು.

ಮಳೆಯ ಮಧ್ಯೆಯೂ ಮಿಂಚಿದ ಮಂಗಳೂರು

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ಮಳೆ ಕಾಡಿದ ಪಂದ್ಯದಲ್ಲಿ ಆರಂಭಿಕ ವೆಂಕಟೇಶ ಎಂ(45, 25 ಎ, 4ಹಿ4, 6ಹಿ3) ಹಾಗೂ ಸ್ಪಿನ್ ಬೌಲರ್ ರತನ್ ಬಿ.ಆರ್.(3ವಿ,16 ರನ್) ಅವರು ಉತ್ತಮ ಪ್ರದರ್ಶನ ನೀಡುವ ಮೂಲಕ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟರು.

ಇಲ್ಲಿಯ ರಾಜನಗರ ಕೆಎಸ್ ಸಿಎ ಮೈದಾನದಲ್ಲಿ ನಡೆಯುತ್ತಿರುವ ಮಹರಾಜ ಟ್ರೋಫಿ ಟಿ–20 ಕ್ರಿಕೆಟ್ ಟೂರ್ನಿಯ ಭಾನುವಾರದ ಪಂದ್ಯದಲ್ಲಿ ಮಂಗಳೂರು, ಶಿವಮೊಗ್ಗ ಯೋಧಾಸ್ ತಂಡವನ್ನು 8 ವಿಕೆಟ್ ಅಂತರದಿಂದ ಮಣಿಸಿತು. ಮಳೆಯಿಂದ 17 ಓವರ್‌ಗೆ ಸೀಮಿತವಾದ ಪಂದ್ಯದಲ್ಲಿ ಶಿವಮೊಗ್ಗ 20 ಓವರ್‌ಗಳಲ್ಲಿ 112 ರನ್ ಗಳಿಸಿತು. ಗುರಿ ಬೆನ್ನತ್ತಿದ ಮಂಗಳೂರು ತಂಡದ ವೆಂಕಟೇಶ ಎಂ. ಹಾಗೂ ನಿಕಿನ್ ಜೋಸ್ (31, 25 ಎ, 4ಹಿ2,6ಹಿ2) 81 ರನ್‌ಗಳ ಜೊತೆಯಾಟದ ಆಸರೆ ಪಡೆಯಿತು. ನಿಕಿನ್ ಔಟಾದ ಬಳಿಕ ಎಸ್.ಅಕೀಲ್(22) ರನ್ ಗಳಿಸಿದರು. ಐದು ರನ್‌ಗಳಿಂದ ಅರ್ಧ ಶತಕ ವಂಚಿತರಾದ ವೆಂಕಟೇಶ ವಿಕೆಟ್ ಒಪ್ಪಿಸಿದರು. ಆರ್.ವಾದ್ವಾ ಹಾಗೂ ನಿಕೀಲ್ ಸೇರಿ ಇನ್ನೂ 24 ಎಸೆತ ಬಾಕಿ ಇರುವಾಗಲೇ ತಂಡವನ್ನು ಗೆಲುವಿನ ದಂಡ ಮುಟ್ಟಿಸಿದರು.

ಸಂಕ್ಷಿಪ್ತ ಸ್ಕೋರ್
ಶಿವಮೊಗ್ಗ ಯೋಧಾಸ್
113/8 (17 ವಿಜೆಡಿ)
ಮಂಗಳೂರು: 118/2(12.4)

ಮಳೆಯ ಆಟ: ಶಿವಮೊಗ್ಗ ತಂಡಕ್ಕೆ ಮಳೆಯ ಜೊತೆಗೆ ಮಂಗಳೂರ ತಂಡದ ಬೌಲರ್‌ಗಳೂ ಕಾಡಿದರು. ಆರಂಭದಲ್ಲಿ ವಿ.ಕೌಶಿಕ್ ಒಂದೇ ಓವರ್‌ನಲ್ಲಿ ನವೀನ ಎಂ.ಜಿ(10), ಕೆ.ವಿ.ಅನೀಶ್ ಅವರ ವಿಕೆಟ್ ಪಡೆದರು. ಲವನಿತ್ ಸಿಸೋಡಿಯಾ(35) ಹೊರತು ಪಡಿಸಿ ಉಳಿದ ಆಟಗಾರು ಬೇಗನೇ ವಿಕೆಟ್ ಕಳೆದುಕೊಂಡರು. ಈ ಮೂಲಕ ಶಿವಮೊಗ್ಗ 17 ಓವರ್‌ಗೆ 8 ವಿಕೆಟ್ ಕಳೆದುಕೊಂಡು 113 ರನ್ ಗಳಿಸಿತು. ಮಳೆಯಿಂದ ಎರಡು ಬಾರಿ ಪಂದ್ಯ ಸ್ಥಗಿತವಾಗಿತ್ತು.

ಅಲ್ಲೂ-ಇಲ್ಲೂ ಸೋತ ಭಾರತ

ಐರ್ಲೆಂಡ್ ಸರಣಿ ಪರಾಭವ!

• **ಬೆಲ್‌ಫಾಸ್ಟ್:** ಭಾರತ ಕ್ರಿಕೆಟ್ ಇತಿಹಾಸದಲ್ಲೇ ಮರೆಯಲಾಗದ ಆಘಾತವೊಂದು ಎದುರಾಗಿದೆ. 2ನೇ ಪಂದ್ಯದಲ್ಲೂ ಸೋತಿರುವ ಭಾರತ ಇತಿಹಾಸದಲ್ಲಿ ಮೊದಲನೇ ಬಾರಿಗೆ ಐರ್ಲೆಂಡ್ ಅಂಥ ತಂಡದೊಂದಿಗೆ ಸರಣಿ ಸೋತಿದೆ. ಭಾರತದ 16 ಸರಣಿ ಗೆಲುವಿನ ಓಟವು ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಐರ್ಲೆಂಡ್‌ನೊಂದಿಗೆ ಸೋತು ನಿಂತಿದೆ. ಒಂದೆಡೆ ವಿಶ್ವಕಪ್‌ನಲ್ಲಿ, ಮತ್ತೊಂದೆಡೆ ಐರ್ಲೆಂಡ್ ವಿರುದ್ಧ ಸೋತ ಭಾರತ ತತ್ತರಿಸಿದರೆ, ಅತ್ತ ಐರ್ಲೆಂಡ್ ಐತಿಹಾಸಿಕ ಸಾಧನೆ ಮಾಡಿ ಸಂಭ್ರಮಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಐರ್ಲೆಂಡ್ 20 ಓವರ್‌ಗಳಲ್ಲಿ 154 ರನ್ ಗಳಿಸಿತು. ಹ್ಯಾರಿ ಟೆಕ್ಟರ್ 53, ಬೆನ್ 37 ರನ್ ಗಳಿಸಿದರು. ಗುರಿ ಬೆನ್ನತ್ತಿದ ಭಾರತ 20 ಓವರ್‌ಗಳಲ್ಲಿ 153 ರನ್ ಗಳಿಸಿತು. 1 ರನ್‌ನಿಂದ ವಿರೋಚಿತ ಸೋಲನುಭವಿಸಿತು.

ಐರ್ಲೆಂಡ್ 20 ಓವರ್‌ಗಳಲ್ಲಿ 154/8
ಭಾರತ 20 ಓವರ್‌ಗಳಲ್ಲಿ 153/9

ಹ್ಯಾರಿ ಟೆಕ್ಟರ್ ಆಸರೆ: ಪ್ರಿನ್ಸ್ ಯಾದವ್ ಮತ್ತು ಸೂರ್ಯಾಂಶ್ ಶೇಡ್ಗೆ ಮೊದಲ ಬಾರಿಗೆ ನೀಲಿ ಜೆರ್ಸಿಯಲ್ಲಿ ಕಾಣಿಸಿಕೊಂಡರು. ಬೆನ್ ಹಾಗೂ ಹ್ಯಾರಿ ಭಾರತೀಯ ಬೌಲರ್‌ಗಳ ಬಸವಳಿಸಿದರು. 47 ಬಾಲ್‌ಗಳಲ್ಲಿ 53 ರನ್ ಗಳಿಸಿದ ಹ್ಯಾರಿ 5 ಬೌಂಡರಿ, 1 ಸಿಕ್ಸರ್ ಬಾರಿಸಿದ ನಂತರ ವಿಕೆಟ್ ಒಪ್ಪಿಸಿದರು. ಜಾರ್ಜ್ ಡೆಕ್ರಾಲ್ 19 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು.

ತತ್ತರಿಸಿದ ಭಾರತ: ಗುರಿ ಬೆನ್ನತ್ತುವಾಗ ಭಾರತ ಭಾರೀ ಆಘಾತ ಎದುರಿಸಿತು. ಸಂಜು ಸ್ಯಾಮ್ಸನ್, ಅಭಿಷೇಕ್ ಶರ್ಮಾ, ಶ್ರೇಯಸ್ ಅಥವಾ ಕಿಶನ್ ಯಾರೊಬ್ಬರೂ ನಿಲ್ಲಲಿಲ್ಲ. ತಿಲಕ್ ವರ್ಮಾ, ಶಿವಂ ದುಬೆ ಕೊಂಚ ಹೊತ್ತು ಆಸರೆಯಾದರು. ನಿಧಾನಗತಿ ಬ್ಯಾಟಿಂಗ್ ಮಾಡಿದ ತಿಲಕ್ ವರ್ಮಾ 46 ಬಾಲ್‌ಗಳಲ್ಲಿ 55 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ದುಬೆ ಹೋರಾಟವೂ 20 ರನ್‌ಗೆ ಸೀಮಿತವಾಯಿತು.

ಹರ್ಷಿತ್ ಹೋರಾಟ: ಕೊನೆಯ 2 ಓವರ್‌ಗಳಲ್ಲಿ 34 ರನ್ ಬೇಕಿದ್ದವು. ಹರ್ಷಿತ್ ರಾಣಾ 19ನೇ ಓವರ್‌ನಲ್ಲಿ 14 ರನ್ ಕಸಿದರು. ಕೊನೆಯ ಓವರ್‌ನಲ್ಲಿ 20 ರನ್ ಬೇಕಿದ್ದವು. ರಾಣಾ ಒಂದು ಬೌಂಡರಿ ಬಾರಿಸಿದರು. ಒಂದು ನೋಬಾಲ್ ರನ್ ಸಿಕ್ಕಿತು. ಕೊನೆಯ 2 ಬಾಲ್‌ಗಳಲ್ಲಿ 8 ರನ್ ಬೇಕಿದ್ದವು. ರಾಣಾ ವಿಕೆಟ್ ಒಪ್ಪಿಸಿದರು. ಪ್ರಿನ್ಸ್ ಯಾದವ್ ಕೊನೆಯ ಬಾಲ್ ಸಿಕ್ಸ್ ಬಾರಿಸಿದರೂ, ಭಾರತ 1 ರನ್‌ನಿಂದ ಸೋತಿತು.

ಟಿ20 ವಿಶ್ವಕಪ್: ಕೌರ್ ಪಡೆ ಕಪ್ ಕನಸು ಭಗ್ನ

• **ಲಾರ್ಡ್ಸ್:** ಭಾರತದ ಟಿ20 ವಿಶ್ವಕಪ್ ಆಸೆ ಲೀಗ್ ಹಂತದಲ್ಲೇ ಕೊನೆಗೊಂಡಿದ್ದು, ಆಸ್ಟ್ರೇಲಿಯಾ ವಿರುದ್ಧ ಭಾರತ ಮಹಿಳಾ ತಂಡ 6 ವಿಕೆಟ್‌ಗಳ ಆಘಾತಕಾರಿ ಸೋಲನುಭವಿಸಿದೆ.

ಕೌರ್ ಬ್ಯಾಟಿಂಗ್ ಹೋರಾಟದ ನಡುವೆಯೂ ಭಾರತ ಬೌಲಿಂಗ್ ವೇಳೆ ವಿಫಲತೆಯಿಂದ ಸೋಲನುಭವಿಸಿತು. ಬಾಂಗ್ಲಾದೇಶ ತಂಡವನ್ನು ಸೋಲಿಸಿರುವ ದ.ಆಫ್ರಿಕಾ ತಂಡವು ಸೆಮಿಫೈನಲ್‌ಗೆ ಲಗ್ಗೆ ಹಾಕಿದೆ. ಭಾನುವಾರದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಮಾಡಿತು. ಕೌರ್ 56, ಶೆಫಾಲಿ 36 ರನ್‌ಗಳ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 170 ರನ್ ಗಳಿಸಿತು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಪೆರ್ರಿ 56, ಗಾರ್ಡನರ್ 53★ ರನ್‌ಗಳ ಬ್ಯಾಟಿಂಗ್‌ನೊಂದಿಗೆ 19 ಓವರ್‌ಗಳಲ್ಲಿ 4 ವಿಕೆಟ್‌ಗೆ 174 ರನ್ ಗಳಿಸಿ ಗೆದ್ದಿತು.

ಮಂಧಾನ-ಶೆಫಾಲಿ ಮಿಂಚಿನಾಟ: ಆರಂಭದಲ್ಲಿ ಮಂಧಾನ ಮತ್ತು ಶೆಫಾಲಿ ಚಾಣಾಕ್ಷ ಬ್ಯಾಟಿಂಗ್ ಮಾಡಿದರು. ನಂತರ ಶೆಫಾಲಿ ಬೌಂಡರಿ ಬಾರಿಸುವತ್ತ ಸಾಗಿದರು. ಮಂಧಾನ ಸೆಟ್ ಆಗುತ್ತಾ ಲೀಲಾಜಾಲವಾಗಿ ಬೌಂಡರಿಗಳನ್ನು ಬಾರಿಸಿದರು. 6 ಓವರ್‌ಗಳಲ್ಲಿ ಭಾರತ 43 ರನ್ ಗಳಿಸಿತು. ಮಧ್ಯಮ ಓವರ್ ಆರಂಭದಲ್ಲಿ 26 ಬಾಲ್‌ಗಳಲ್ಲಿ 34 ರನ್ ಗಳಿಸಿದ್ದ ಶೆಫಾಲಿ ವಿಕೆಟ್ ಒಪ್ಪಿಸಿದರು. ಮಂಧಾನ 34 ರನ್‌ಗೆ ಔಟಾದರು.

ಕೌರ್ ಅಬ್ಬರ: ಮಧ್ಯಮ ಓವರ್‌ಗಳಲ್ಲಿ ಭಾರತ 2 ವಿಕೆಟ್‌ಗೆ 72 ರನ್ ಗಳಿಸಿತು. ಕೌರ್ ಕೊಂಚ ಹೊತ್ತು ಸೆಟ್ ಆದರು. ಬಳಿಕ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ರಾಡ್ರಿಗ್ಸ್ 34 ರನ್ ಗಳಿಸಿದ್ದಾಗ ನಿವೃತ್ತರಾದರು. ಕೊನೆಯ ಎರಡು ಓವರ್‌ಗಳಲ್ಲಿ ಹರ್ಮನ್‌ಪ್ರೀತ್ ಕೌರ್ ಆಸೀಸ್ ಪಡೆಯ ದಂಡಿಸಿ ದರು. 6 ಬೌಂಡರಿ 3 ಸಿಕ್ಸರ್ ಚಾಡಿಸಿದ ಅವರು, 27 ಬಾಲ್ ಮಾತ್ರದಲ್ಲಿ 56 ರನ್ ಬಾರಿಸಿದರು.

ಭಾರತ 20 ಓವರ್‌ಗಳಲ್ಲಿ 170/4
ಆಸ್ಟ್ರೇಲಿಯಾ 19 ಓವರ್‌ಗಳಲ್ಲಿ 174/4

ಆಸೀಸ್‌ಗೆ ಆಘಾತ: ಗುರಿ ಬೆನ್ನತ್ತಿದ ಆಸ್ಟ್ರೇಲಿಯಾಗೆ ಆರಂಭಿಕ ಆಘಾತ ಎದುರಾಯಿತು. ರೇಣುಕಾ ಸಿಂಗ್ ಮೊದಲನೇ ಓವರ್‌ನಲ್ಲೇ ಜಾರ್ಜಿಯಾ ವಾಲ್ ವಿಕೆಟ್ ಕಿತ್ತರು. ಬಳಿಕ ಒಂದಾದ ಬೆತ್ ಮೂನಿ ಮತ್ತು ಫಿಯೋಬಿ ಲಿಚ್‌ಫೀಲ್ಡ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇನಲ್ಲಿ 49 ರನ್ ಕಸಿಯಿತು. ಆದರೆ ಮತ್ತೊಮ್ಮೆ ಆಪತ್ಬಾಂಧವರಾಗಿ ಕಾಣಿಸಿಕೊಂಡ ಶ್ರೀಚಾರಣಿ ಲಿಚಫೀಲ್ಡ್ ವಿಕೆಟ್ ಕಿತ್ತರು. ಮುಂದಿನ ಓವರ್‌ನಲ್ಲಿ ಮೂನಿ ದೀಪ್ತಿ ಶರ್ಮಗೆ ವಿಕೆಟ್ ಒಪ್ಪಿಸಿದರು.

ಗಾರ್ಡನರ್ ಅಬ್ಬರ: ಮಧ್ಯಮ ಓವರ್‌ಗಳಲ್ಲಿ ಆಸ್ಟ್ರೇಲಿಯಾಗೆ ಗಾರ್ಡನರ್ ಮತ್ತು ಎಲ್ಲಿಸ್ ಪೆರ್ರಿ ಆಸರೆಯಾದರು. ಸೆಟ್ ಆಗುವತ್ತ ಸಾಗಿದ ಪೆರ್ರಿ ನಿಧಾನ ಬ್ಯಾಟಿಂಗ್ ಮಾಡಿದರೆ ಅತ್ತ ಗಾರ್ಡನರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. 2 ಸಿಕ್ಸರ್ ಹಾಗೂ ಎರಡು ಬೌಂಡರಿಗಳನ್ನು ಬಾರಿಸಿ ಪಂದ್ಯದ ದಿಕ್ಕನ್ನೇ ಬದಲಾಯಿಸಿದರು. ಕೊನೆಯ 7 ಓವರ್‌ಗಳಲ್ಲಿ ಆಸೀಸ್‌ಗೆ 69 ರನ್ ಬೇಕಿದ್ದವು. ದೀಪ್ತಿ 7 ರನ್ ಮಾತ್ರ ಬಿಟ್ಟುಕೊಟ್ಟರು. ಚಾರಣಿ 16 ರನ್ ಬಿಟ್ಟುಕೊಟ್ಟರು. 16ನೇ ಓವರ್‌ನಲ್ಲಿ ಶೆಫಾಲಿ 12 ರನ್ ಬಿಟ್ಟುಕೊಟ್ಟರು. 4 ಓವರ್‌ಗಳಲ್ಲಿ 34 ರನ್ ಬೇಕಿದ್ದವು. ನಿಲ್ಲದ ಪೆರ್ರಿ ಹಾಗೂ ಗಾರ್ಡನರ್ ಪಂದ್ಯ ಕಸಿದರು. ಕೊನೆಗೆ ಪೆರ್ರಿ 56 ರನ್‌ಗೆ ವಿಕೆಟ್ ಒಪ್ಪಿಸಿದರು. ಗಾರ್ಡನರ್ ಪಂದ್ಯ ಮುಗಿಸಿದರು.

ಇಂದಿನಿಂದ ವಿಂಬಲ್ಡನ್ ಸಂಭ್ರಮ

• **ಲಂಡನ್:** ವಿಶ್ವದ ಕ್ರೀಡಾಭಿಮಾನಿಗಳ ದುಪ್ಪಟ್ಟು ಖುಷಿ. ಒಂದು ಕಡೆ ಫಿಫಾ ವಿಶ್ವಕಪ್ ಅಬ್ಬರವಾದರೆ ಇನ್ನೊಂದೆಡೆ ಮಹಿಳೆಯರ ಟಿ20 ವಿಶ್ವಕಪ್. ಈ ನಡುವೆ ಟೆನಿಸ್ ಅಭಿಮಾನಿಗಳ ಫೇವರಿಟ್ ಗ್ರ್ಯಾಂಡ್‌ಸ್ಲಾಮ್ ವಿಂಬಲ್ಡನ್ ಪಂದ್ಯಾವಳಿಯು ಸೋಮವಾರದಿಂದ ಆರಂಭವಾಗಲಿದೆ.



ವರ್ಷದ ಮೂರನೇ ಹಾಗೂ ಐತಿಹಾಸಿಕ ಟೂರ್ನಿಯಾಗಿರುವ ವಿಂಬಲ್ಡನ್ ಪ್ರತಿ ವರ್ಷದಂತೆ ರೋಮಾಂಚನಕಾರಿ ಫೈಟ್‌ಗಳಿಂದ ಕೂಡಿರಲಿದೆ. ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್, ದಿಗ್ಗಜ ನೋವಾಕ್ ಜೊಕೊವಿಚ್, ಫ್ರೆಂಚ್ ಓಪನ್ ಚಾಂಪಿಯನ್ ಅಲೆಕ್ಸಾಂಡರ್ ಜ್ವೆರೆವ್ ಸೇರಿದಂತೆ ಪ್ರಮುಖರ ಆಟ ಮೆರಗು ಮೂಡಿಸಲಿದೆ. ವಿಶ್ವದ ನಂಬರ್ 1 ಆಟಗಾರ್ತಿ ಅರಿನಾ ಸಬಲೆಂಕಾ, ಟೆನಿಸ್ ಲೋಕದಲ್ಲೇ ಸಂಚಲನ ಮೂಡಿಸಿರುವ ಸೆರೆನಾ ವಿಲಿಯಮ್ಸ್, ಈಗಾ ಸ್ವಿಯಾಟೆಕ್, ಜೋವಿಕ್ ಸೇರಿದಂತೆ ಪ್ರಮುಖರು ಪಂದ್ಯಗಳ ಉತ್ಸಾಹ ಜನರಲ್ಲಿರಲಿದೆ. ವರ್ಷದ ಮೂರನೇ ಗ್ರ್ಯಾಂಡ್‌ಸ್ಲಾಮ್ ಅನಿಸುವ ಈ ಪಂದ್ಯಾವಳಿಗೆ ರೋಚಕ ಇತಿಹಾಸವಿದೆ. ಅಲ್ಲಿ ಅಸಾಮಾನ್ಯ ನಿಯಮಗಳಿವೆ. ಒಂದೇ ಸಮವಸ್ತ್ರ, ಶಿಸ್ತು ಬದ್ಧ ಆಟ, ಹೀಗೆ ಹತ್ತಾರು ಸಂಗತಿಗಳು ನೋಡುಗರನ್ನು ಸೆಳೆಯುತ್ತವೆ. ಹೀಗಾಗೇ ಇದನ್ನು ಪ್ರಮುಖ ಗ್ರ್ಯಾಂಡ್‌ಸ್ಲಾಮ್ ಎಂದೂ ಪರಿಗಣಿಸಲಾಗುತ್ತದೆ. ಟೆನಿಸ್ ಲೋಕದಲ್ಲಿ ಹಬ್ಬದಂತೆ ಆಚರಿಸಲ್ಪಡುವ ಈ ಪಂದ್ಯಾವಳಿಗೆ ಈಗಾಗಲೇ ಅದ್ದೂರಿ ಚಾಲನೆ ಸಿಕ್ಕಾಗಿದೆ. ಅರ್ಹತಾ ಸುತ್ತಿನ ಪಂದ್ಯಗಳು ಮುಕ್ತಾಯಗೊಂಡು ಪ್ರಮುಖ ಸುತ್ತು ಶುರುವಾಗಬೇಕಿದೆ.

ಶುರುವಾಗಿದ್ದು
1877

ಮಾದರಿ: ಗ್ರಾಸ್
ಹಾಲಿ ಚಾಂಪಿಯನ್ಸ್: ಯಾನಿಕ್ ಸಿನ್ನರ್(ಪುರುಷರಲ್ಲಿ), ಈಗಾ ಸ್ವಿಯಾಟೆಕ್(ಮಹಿಳೆಯರಲ್ಲಿ)


ಅತಿ ಹೆಚ್ಚು ಕಪ್:
ರೋಜರ್ ಫೆಡ್ರರ್(ಪುರುಷರಲ್ಲಿ), ಮಾರ್ಟಿನಾ ನವ್ರಾಟಿಲೋವಾ

ಪ್ರಮುಖ ಪಂದ್ಯ
ಯಾನಿಕ್ ಸಿನ್ನರ್–ಮಿಯೋಮಿರ್ ಕೆಟ್ಸ್‌ಮಾನ್ಲೊವಿಚ್ (ಸಂಜೆ 6:00)
ಮುಲ್ಲರ್–ಪೌಲ್ (ಸಂಜೆ: 4:40)

ಮಹಿಳೆಯರ ವಿಭಾಗ
ಕ್ರಿಸ್ಟೈನ್–ಜೋವಿಕ್ (ಮಧ್ಯಾಹ್ನ 3:30)
ಪೇಗುಲಾ–ದರ್ಜಾ (ಮಧ್ಯಾಹ್ನ 3:30)

ಪದಬಂಧ

»ರಾಜಾ ಸಂಗಮೇಶ ಹಿರೇಮಠ



6029

ಎಡದಿಂದ ಬಲಕ್ಕೆ
1.ಅಡ್ಡಾಡುವುದು–ಪ್ರಯಾಣ (3)
3.ಬೈತಲೆಯಲ್ಲಿ ಧರಿಸಿದ ಆಭರಣ (3)
5.ಸಿಹಿಯಾದ ಪೇಯ–ಷರಬತ್ತು (3)
7.ಮೇಲಿರುವ ವಿಶಾಲವಾದ ಆಕಾಶ (3)
9.ಚಿನ್ನದಂತೆ ಹೊಳೆಯುವ ಮೇರುಪರ್ವತ (5)
11.ನಡುಗು–ಕಂಪಿಸುವಿಕೆಯಿದು (5)
14.ಕೋಲೆಬಸವನನ್ನು ಹೀಗೂ ಕರೆಯುತ್ತೇವೆ (3)
15.ಒಂದು ವಸ್ತುವಿನ ಮೂಲಾಂಶವಿದು (3)
16.ಅಮೂಲ್ಯ ವಸ್ತುಗಳನ್ನಿಡುವ ಪೆಟ್ಟಿಗೆ (3)
17.ಇದು ಲೋಹದ ಕಂಬಿ (3)

ಮೇಲಿನಿಂದ ಕೆಳಕ್ಕೆ
1.ಆಯ್ದು ಕೂಡಿಸಿದ ಸಾಹಿತ್ಯಭಾಗಗಳ ಸಂಗ್ರಹ (4)
2.ಸವಿ–ರುಚಿಯಿಂದ ಕೂಡಿದ ಅಡುಗೆ (4)
4.ಆತ್ಮಶಕ್ತಿಯನ್ನು ಹೀಗೂ ಹೇಳುತ್ತೇವೆ (4)
6.ಅಡವಿಯಿಲ್ಲಿ ತಲೆಕೆಳಗಾಗಿದೆ (2)
8.ಇದು ವಿಷ್ಣುವಿನ ವಾಹನ (3)
10.ಅನುಚರರಿಗೆ ಕೊಟ್ಟ ಚೊಂಬು (3)
11.ಗತಿಯ ನಡುವೆ ಇರುವ ಅರಿವು (4)
12.ಲೋಹಗಳು ಸಿಗುವ ಮೂಲಸ್ಥಳ (2)
13. ಈತ ಒಳ್ಳೆಯ ಮನಸ್ಸಿನವನು–ದೇವತೆ (4)
14. ಅಮರಿಕೊಳ್ಳು–ಬೆನ್ನುಹತ್ತುವಿಕೆಯಿದು (4)

6028 ಉತ್ತರ

ಎಡದಿಂದ ಬಲಕ್ಕೆ:
1.ದಂಡಪ್ರಮಾಣ
3.ಮಹಾತ್ಮ 4.ಮೂಷಿಕ
5.ಸಂಸತ್ತು 9.ಯಮಪಾಶ
11.ದಕ್ಷಿಣಾದಿ 13.ಚಂದನ
15.ಅಜಿತ 16.ಬಳಕೆ
17.ಕನವರಿಸು

ಮೇಲಿನಿಂದ ಕೆಳಕ್ಕೆ :
1.ದಂತಮೂಲಿಯ
2.ಸಂಭ್ರಮ 3.ಮಹತ್ತು
6.ಸಹೃದಯ 7.ಅಂಶಭೇದ
8.ಬಾಣ 10.ಮಚ್ಚೆ
12.ದಿಕ್ಕುತಪ್ಪಿಸು 13.ಚಂಡಿಕೆ
14.ನರಕ

ಕಿರುಸುದ್ದಿ

ಲೈಂಗಿಕ ದೌರ್ಜನ್ಯ: ಓರ್ವನ ಬಂಧನ

ಬೆಳ್ತಂಗಡಿ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪರಾರಿಯಾಗಿದ್ದ ಮತ್ತೋರ್ವ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ವೇಣೂರು ಪೊಲೀಸರು ಮೂಡಬಿದಿರೆ ಬಳಿ ಬಂಧಿಸಿದ್ದಾರೆ. 2023 ರಲ್ಲಿ ಸಂತ್ರಸ್ತ ಬಾಲಕಿ 5.6 ವರ್ಷದ ಸಂದರ್ಭ ಈ ಕೃತ್ಯ ನಡೆದಿದ್ದು ಸಂತ್ರಸ್ತ ಮಗುವಿನ ಸಂಬಂಧಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಹಾಗೂ ಸ್ಥಳೀಯ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ಜೊತೆಗೂಡಿ ಆಕೆಯ ಮೇಲೆ ಲೈಂಗಿಕವಾಗಿ ದೌರ್ಜನ್ಯ ಎಸಗಿದ್ದಾರೆ. ಆರೋಪಿಗಳಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಓರ್ವ ಬಾಲಕನನ್ನು (16) ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇನ್ನೋರ್ವ ಆರೋಪಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ (18) ಪರಾರಿಯಾಗಿದ್ದ ಎನ್ನಲಾಗುತ್ತಿದ್ದು ಆತನಿಗಾಗಿ ಪೊಲೀಸರು ಹುಡುಕಾಟ ನಡೆಸಿ ಮೂಡಬಿದಿರೆಯಲ್ಲಿ ವಶಕ್ಕೆ ಪಡೆದಿದ್ದಾರೆ. ಸಂತ್ರಸ್ತೆಯ ತಾಯಿ ನೀಡಿದ ದೂರಿನಂತೆ ವೇಣೂರು ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕಾಯಿದೆಯಂತೆ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರಿದಿದೆ. ಬೆಳ್ತಂಗಡಿ ಉಪ ವಿಭಾಗದ ಡಿವೈಎಸ್ಪಿ ರೋಹಿಣಿ.ಸಿ.ಕೆ ಮಾರ್ಗದರ್ಶನದಲ್ಲಿ ಬೆಳ್ತಂಗಡಿ ವೃತ್ತ ನಿರೀಕ್ಷಕ ರವಿ ಬಿ.ಎಸ್. ನೇತೃತ್ವದ ವೇಣೂರು ಪೊಲೀಸ್ ಠಾಣೆಯ ಅಕ್ಷಯ್ ಡವಗಿ ತಂಡ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಆಟೋ ರಿಕ್ಷಾ ಕಳವು

ಬಂಟ್ವಾಳ: ಬಿ ಸಿ ರೋಡಿನ ಶ್ರೀ ಚಂಡಿಕಾ ಪರಮೇಶ್ವರಿ ದೇವಸ್ಥಾನದ ಬಳಿ ನಿಲ್ಲಿಸಲಾಗಿದ್ದ ಆಟೋ ರಿಕ್ಷಾವೊಂದನ್ನು ಕಳವುಗೈದ ಘಟನೆ ನಡೆದಿದೆ. ಅರಳ ಗ್ರಾಮದ ನಿವಾಸಿ ಭುವನೇಶ್ವರ (42) ಅವರು ತನ್ನ ಕೆಎ19 ಎಎ2420 ನೋಂದಣಿ ಸಂಖ್ಯೆಯ ಆಟೋ ರಿಕ್ಷಾವನ್ನು ಜೂನ್ 25 ರಂದು ಸಂಜೆ 4.20ಕ್ಕೆ ಬಿ ಸಿ ರೋಡು ಚಂಡಿಕಾ ಪರಮೇಶ್ವರಿ ದೇವಸ್ಥಾನದ ಬಳಿ ನಿಲ್ಲಿಸಿ ಬಿ ಸಿ ರೋಡು ಪೇಟೆಗೆ ಹೋಗಿ ವಾಪಸು ಸಂಜೆ 5 ಗಂಟೆಗೆ ಬಂದು ನೋಡಿದಾಗ ಆಟೋ ರಿಕ್ಷಾ ಕಳವಾಗಿತ್ತು. ಆಟೋ ರಿಕ್ಷಾದ ಮೌಲ್ಯ 40 ಸಾವಿರ ರೂಪಾಯಿ ಎಂದು ಅಂದಾಜಿಸಲಾಗಿದೆ. ಈ ಬಗ್ಗೆ ಭುವನೇಶ್ವರ ಅವರು ನೀಡಿದ ದೂರಿನಂತೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂಡಿಎಂಎ ಸಹಿತ ಆರೋಪಿ ಸೆರೆ

ಮಂಜೇಶ್ವರ: ಆಪರೇಷನ್ ತೂಫಾನ್ ಕಾರ್ಯಾಚರಣೆಯ ಅಂಗವಾಗಿ ಮಂಜೇಶ್ವರ ಪೊಲೀಸರು ನಡೆಸಿದ ದಾಳಿಯಲ್ಲಿ ಎಂಡಿಎಂಎ ಸಹಿತ ಓರ್ವನನ್ನು ಸೆರೆ ಹಿಡಿಯಲಾಗಿದೆ. ಹೊಸಬೆಟ್ಟುವಿನಲ್ಲಿರುವ ಮಂಜೇಶ್ವರ ಗ್ರಾಮ ಪಂಚಾಯತ್ ಕಚೇರಿ ಸಮೀಪದ ಕ್ವಾರ್ಟರ್ಸ್‌ನಲ್ಲಿ ವಾಸಿಸುವ ಹಂಸ ನೀರಾಳ (46) ಸೆರೆಗೀಡಾದ ವ್ಯಕ್ತಿ. ಈತ ಬಂಟ್ವಾಳ ಪಾಂಡವರಕಲ್ಲು ನಿವಾಸಿಯಾಗಿದ್ದು, ಪ್ರಸ್ತುತ ಕ್ವಾರ್ಟರ್ಸ್‌ನಲ್ಲಿ ವಾಸಿಸುತ್ತಿದ್ದಾನೆ.

ಎಂಡಿಎಂಎ ಸಹಿತ ಬಂಧನ

ಕಾಸರಗೋಡು: ಚಟ್ಟಂಚಾಲ್ ಬಳಿಯ ವಲಸೆ ಕಾರ್ಮಿಕರು ವಾಸಿಸುತ್ತಿರುವ ಕ್ವಾರ್ಟರ್ಸ್ ಬಳಿ ಮೇಲ್ಪರಂಬ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ 0.17 ಗ್ರಾಂ ಎಂಡಿಎಂಎ ಪತ್ತೆಹಚ್ಚಿ ವಶಪಡಿಸಿಕೊಂಡಿದ್ದಾರೆ. ಇದಕ್ಕೆ ಸಂಬಂಧಿಸಿ ಮೇಲ್ಪರಂಬ ಮಸೀದಿ ಪರಿಸರದ ನಿವಾಸಿ ಚೆಂಬರಿಕ್ಕ ಹನೀಫ್ ಮಂಜಿಲ್‌ನ ಟಿ.ಎ.ಮೊಹಮ್ಮದ್ ಹನೀಫ್ (36) ಎಂಬಾತನನ್ನು ಬಂಧಿಸಿ ಕೇಸು ದಾಖಲಿಸಲಾಗಿದೆ.

ಸೌರದೀಪಗಳ ಬ್ಯಾಟರಿ ಕಳವು: ಮೂವರ ಸೆರೆ

ಕಾಸರಗೋಡು: ಸೌರದೀಪಗಳ ಪ್ಯಾನಲ್‌ಗಳಿಗೆ ಅಳವಡಿಸಲಾದ ಬ್ಯಾಟರಿಗಳನ್ನು ಕಳವುಗೈಯ್ಯುವ ತಂಡಕ್ಕೆ ಸೇರಿದ ಅಸ್ಸಾಂ ನಿವಾಸಿಗಳಾದ ಮೂವರನ್ನು ಬಂಧಿಸಲಾಗಿದೆ. ಅಸ್ಸಾಂ ನಿವಾಸಿಗಳು ಹಾಗೂ ಪಡನ್ನಕ್ಕಾಡಿನಲ್ಲಿ ವಾಸಿಸುವ ರೌಫಿಕುಲ್ ಇಸ್ಲಾಂ (41), ನಬಿಪರ ಮಾಣಿಕ್ (45), ಅಲ್ ಜಾಹಿದುಲ್ ಇಸ್ಲಾಂ (28) ಬಂಧಿತ ಆರೋಪಿಗಳು. ವಲಯಪರಂಬ ಗ್ರಾಮ ಪಂಚಾಯತ್‌ನ ವಿವಿಧೆಡೆಗಳಲ್ಲಿ ಸ್ಥಾಪಿಸಲಾದ ಸೌರವಿದ್ಯುತ್ ಪ್ಯಾನೆಲ್‌ಗಳಿಂದ 80,000 ರೂ. ಮೌಲ್ಯದ ಬ್ಯಾಟರಿಗಳನ್ನು ಕಳವುಗೈದ ಪ್ರಕರಣ ಇದಾಗಿದೆ.

ಭಕ್ತರಿಗೆ ಇನ್ನಷ್ಟು ಸೌಕರ್ಯ | ಡಿಸಿಎಂ ಡಾ. ಪರಮೇಶ್ವರ್ ಭರವಸೆ

ಕೊಲ್ಲೂರಿಗೆ ಮಾಸ್ಟರ್ ಪ್ಲಾನ್

ಬೈಂದೂರು: ಕೊಲ್ಲೂರು ದೇವಸ್ಥಾನಕ್ಕೆ ಬರುವ ಭಕ್ತರಿಗೆ ದರ್ಶನ, ಪಾರ್ಕಿಂಗ್, ವಸತಿ ಸೇರಿದಂತೆ ಎಲ್ಲ ರೀತಿಯ ಮೂಲಭೂತ ಸೌಕರ್ಯ ನೀಡುವ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ತಯಾರಿಸಲಾಗಿದ್ದು, ಮುಂದೆ ಅದನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ ಎಂದು ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

ಅವರು ಭಾನುವಾರ ಬೆಳಗ್ಗೆ ಪತ್ನಿಯೊಂದಿಗೆ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದರು.

ಮುಜರಾಯಿ ಇಲಾಖೆಯ ದೇವಸ್ಥಾನಗಳಿಗೆ ಸಂಬಂಧಿಸಿ ಒತ್ತುವರಿ ಯಾಗಿರುವ ಎಲ್ಲಾ ಜಮೀನನ್ನು ತೆರವುಗೊಳಿಸಲು ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಅದೇ ರೀತಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೂ ಸೂಚನೆ ನೀಡಲಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ತಿಳಿಸಿದರು.

ದೇವಾಲಯದ ಹಿರಿಯ ಅರ್ಚಕರಾದ ಡಾ. ಕೆ. ಎನ್. ನರಸಿಂಹ ಅಡಿಗ ಹಾಗೂ ಕೆ. ಎನ್. ಸುಬ್ರಮಣ್ಯ ಅಡಿಗ ಅವರ ನೇತೃತ್ವದಲ್ಲಿ ಚಂಡಿಕಾಹೋಮ ಸೇರಿದಂತೆ ಪೂಜಾ ವಿಧಿವಿಧಾನಗಳು ನೆರವೇರಿದವು. ಪೂಜೆ ಬಳಿಕ ದೇವಾಲಯದ ಆಡಳಿತ ಮಂಡಳಿಯ ವತಿಯಿಂದ ಉಪಮುಖ್ಯಮಂತ್ರಿಗಳಿಗೆ ದೇವಿಯ ಪ್ರಸಾದ ಹಾಗೂ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು. ದೇವಳದ ಕೆಲವು ಕಡತಗಳನ್ನು ಅವರು ಪರಿಶೀಲಿಸಿದರು.

ದೇವಸ್ಥಾನದ ಆವರಣದಲ್ಲಿರುವ ಉಗ್ರಾಣ, ಊಟೋಪಚಾರದ ಕೊಠಡಿ ಹಾಗೂ ಲಲಿತಾಂಬಿಕಾ ವಸತಿ ಗೃಹ ಸೇರಿದಂತೆ ಪ್ರಮುಖ ಸ್ಥಳಗಳಿಗೆ ಖುದ್ದು ಭೇಟಿ ನೀಡಿದ ಉಪಮುಖ್ಯಮಂತ್ರಿಗಳು ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು. ದೇವಸ್ಥಾನದ ಆಡಳಿತವನ್ನು ಮತ್ತಷ್ಟು ಬಲಪಡಿಸಲು ಮತ್ತು ಭಕ್ತರ ಸೇವೆಗಳನ್ನು ಸುಲಭಗೊಳಿಸಲು ಸುಧಾರಿತ ತಂತ್ರಜ್ಞಾನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಂತೆ ಈ ಸಂದರ್ಭದಲ್ಲಿ ಅವರು ಅಧಿಕಾರಿಗಳಿಗೆ ಮಹತ್ವದ ಸಲಹೆ ನೀಡಿದರು.

ಬೆಂಗಳೂರು ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಶರತ್ ಬಿ., ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ, ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ., ಕುಂದಾಪುರ ಉಪ ವಿಭಾಗಾಧಿಕಾರಿ ರಶ್ಮಿ ಎಸ್. ಆರ್., ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ತಗ್ಗರ್ಸೆ, ಸದಸ್ಯರಾದ ಅಭಿಲಾಷ್ ಪಿ. ವಿ., ಸುರೇಂದ್ರ ಶೆಟ್ಟಿ, ಆಲೂರು ರಘುರಾಮ ದೇವಾಡಿಗ, ಸುಧಾ ಕೆ., ಧನಾಕ್ಷಿ ಪೂಜಾರಿ, ಕಾಂಗ್ರೆಸ್ ಮುಖಂಡ ಹರಿಪ್ರಸಾದ್ ರೈ, ದಿನೇಶ್ ಹೆಗ್ಡೆ ಮೊಳಹಳ್ಳಿ, ಎಸ್. ರಾಜು ಪೂಜಾರಿ, ಎಸ್. ಪ್ರಕಾಶ್ಚಂದ್ರ ಶೆಟ್ಟಿ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.



ಕೊಲ್ಲೂರಿಗೆ ಆಗಮಿಸಿದ ಜಿ. ಪರಮೇಶ್ವರ್ ಪತ್ನಿ ಕನ್ನಿಕಾ ಜೊತೆ ಚಂಡಿಕಾಹೋಮ ನೆರವೇರಿಸಿದರು.

> ಕಳೆದ ಒಂದು ವಾರದಿಂದ ಆರೋಗ್ಯದಲ್ಲಿ ಏರುಪೇರಾಗಿದ್ದು, ಆರೋಗ್ಯ ಸುಧಾರಣೆಗೆ ಕೊಲ್ಲೂರಿನಲ್ಲಿ ಚಂಡಿಕಾಹೋಮ ಸೇವೆ ಸಲ್ಲಿಸುವಂತೆ ಹಿರಿಯರು ನೀಡಿದ ಸಲಹೆ ಹಿನ್ನೆಲೆಯಲ್ಲಿ ಪತ್ನಿಯೊಂದಿಗೆ ಕ್ಷೇತ್ರಕ್ಕೆ ಬಂದು ಶ್ರೀ ಜಗನ್ಮಾತೆ ಶ್ರೀ ಮೂಕಾಂಬಿಕಾ ಅಮ್ಮನವರಿಗೆ ಚಂಡಿಕಾಹೋಮ ಸಹಿತ ವಿಶೇಷ ಪೂಜೆ ಸಲ್ಲಿಸಿದ್ದೇನೆ
>
> ■ ಡಾ. ಜಿ. ಪರಮೇಶ್ವರ, ಉಪಮುಖ್ಯಮಂತ್ರಿ

ಕುಕ್ಕೆ ಕ್ಷೇತ್ರಕ್ಕೆ ಒಂದೇ ದಿನ 60000+ ಭಕ್ತರ ಭೇಟಿ!



ಸುಬ್ರಹ್ಮಣ್ಯ: ನಾಗಾರಾಧನೆಯ ಪುಣ್ಯ ಕ್ಷೇತ್ರ ಸುಬ್ರಹ್ಮಣ್ಯದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭಾನುವಾರ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು.

ಸುಮಾರು 60 ಸಾವಿರಕ್ಕೂ ಅಧಿಕ ಮಂದಿ ಬೆಳಗ್ಗಿನ ಉಪಹಾರ, ಮಧ್ಯಾಹ್ನ, ರಾತ್ರಿ ಭೋಜನ ಪ್ರಸಾದ ಸ್ವೀಕರಿಸಿದ್ದಾರೆ.

ನಿರಂತರ ಪ್ರಸಾದ ಭೋಜನ

ಭಾನುವಾರ ಬೆಳಗ್ಗೆ 7.30ಯಿಂದ 10 ಗಂಟೆ ತನಕ ಫಲಹಾರ ಪ್ರಸಾದ ಭಕ್ತರಿಗೆ ವಿತರಿಸಲಾಯಿತು. ಬಳಿಕ 10.30ಯಿಂದ ಸಂಜೆ 4 ಗಂಟೆ ತನಕ ನಿರಂತರವಾಗಿ ಭೋಜನ ಪ್ರಸಾದ ನೀಡಲಾಯಿತು. ಷಣ್ಮುಖ ಪ್ರಸಾದ ಭೋಜನ ಶಾಲೆ, ಆದಿಸುಬ್ರಹ್ಮಣ್ಯ ಕಲ್ಯಾಣ ಮಂಟಪ, ಶೃಂಗೇರಿ ಮಠ ಹಾಗೂ ಭಕ್ತರ ಬಿಡಾರದಲ್ಲಿ ಮಧ್ಯಾಹ್ನ ಪ್ರಸಾದ ಭೋಜನವನ್ನು ಭಕ್ತರು ಸ್ವೀಕರಿಸಿದರು. ರಾತ್ರಿ 7.30ರಿಂದ 11 ಗಂಟೆಯ ತನಕ ನಿರಂತರವಾಗಿ ಷಣ್ಮುಖ ಪ್ರಸಾದ ಭೋಜನಶಾಲೆಯಲ್ಲಿ ಭಕ್ತರು ರಾತ್ರಿಯ ಪ್ರಸಾದ ಭೋಜನ ಸ್ವೀಕರಿಸಿದರು. ಎಣಿಕೆಗೂ ಮೀರಿ ಬಂದ ಭಕ್ತ ಸಂದೋಹಕ್ಕೆ ಶ್ರೀ ದೇವಳದ ಆಡಳಿತ ಮತ್ತು ಸಿಬ್ಬಂದಿ ವರ್ಗ ಸೂಕ್ತ ವ್ಯವಸ್ಥೆ ಮಾಡಿತ್ತು. ಶ್ರೀ ದೇವಳದ ರಥಬೀದಿ ಹೊರಾಂಗಣ, ಒಳಾಂಗಣ, ಆದಿಸುಬ್ರಹ್ಮಣ್ಯದಲ್ಲಿ ಭಕ್ತರು ತುಂಬಿದ್ದರು.

ಪ್ರಮುಖ ಸೇವೆಗಳಾದ ನಾಗ ಪ್ರತಿಷ್ಠೆ, ತುಲಾಭಾರ, ಮಹಾಪೂಜೆ, ಶೇಷಸೇವೆ, ಕಾರ್ತಿಕಪೂಜೆ, ಮಹಾಭಿಷೇಕ ಮೊದಲಾದ ಸೇವೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ನೆರವೇರಿಸಿದರು.

ಪಾರ್ಕಿಂಗ್ ಫುಲ್

ಅತ್ಯಧಿಕ ಭಕ್ತರ ಆಗಮನದಿಂದ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದ ವಸತಿ ಗೃಹಗಳು ಹಾಗೂ ಖಾಸಗಿ ವಸತಿ ಗೃಹಗಳು ಭರ್ತಿಯಾಗಿತ್ತು. ಬಸ್ ನಿಲ್ದಾಣವು ಭಕ್ತರಿಂದ ತುಂಬಿ ತುಳುಕುತ್ತಿತ್ತು. ಭಕ್ತರನ್ನು ಕರೆದುಕೊಂಡು ಬಂದ ವಾಹನಗಳ ಸಂಖ್ಯೆಯೂ ಅಧಿಕವಿದ್ದ ಕಾರಣ ಪಾರ್ಕಿಂಗ್ ಸ್ಥಳಗಳು ತುಂಬಿದ್ದವು.

ಜು.6: ಮೀನುಗಾರಿಕಾ ಕಚೇರಿ ಮುಂಭಾಗ ಧರಣಿಗೆ ನಿರ್ಧಾರ

ಮೀನುಗಾರರ ಪರಿಹಾರ ವಿತರಣೆ ವಿಳಂಬ



ಕಾಸರಗೋಡು: ಮೂರು ಕಂತುಗಳಲ್ಲಿ ವಿತರಿಸಬೇಕಾಗಿದ್ದ ಪರಿಹಾರ ಮೊತ್ತದಲ್ಲಿ ಮೀನು ಕಾರ್ಮಿಕರ ಪಾಲಿನ ಒಂದು ಕಂತು ಮಾತ್ರ ಇದುವರೆಗೆ ವಿತರಣೆಯಾಗಿದ್ದು, ಈ ನಿಟ್ಟಿನಲ್ಲಿ ರಾಜ್ಯ ಸರಕಾರಕ್ಕೆ ಕೇಂದ್ರ ಸರಕಾರದ ಪಾಲು ಲಭಿಸಿದರೂ ರಾಜ್ಯದ ಪಾಲು ಸೇರಿ ಎರಡು ಕಂತು ಬಾಕಿ ಉಳಿದಿದೆ ಎಂದು ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಶೈಬು ಆರೋಪಿಸಿದ್ದಾರೆ.

ಒಬಿಸಿ ಮೋರ್ಚಾ ಕಾಸರಗೋಡು ಜಿಲ್ಲಾ ನಾಯಕತ್ವ ಸಭೆಯನ್ನು ಕಾಸರಗೋಡಿನಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ಆರ್ಥಿಕ ಮುಗ್ಗಟ್ಟಿಗೆ ತಳ್ಳುತ್ತಿದೆ

ಟ್ರೋಲಿಂಗ್ ನಿಷೇಧದ ಅವಧಿಯಲ್ಲಿ ಜೀವನೋಪಾಯ ಕಳೆದುಕೊಳ್ಳುವ ಮೀನುಗಾರ ಕುಟುಂಬಗಳಿಗೆ ಪರಿಹಾರ ಯೋಜನೆ ಮುಖ್ಯ ಆಸರೆಯಾಗಿದೆ. ಆದರೆ ಆರ್ಥಿಕ ನೆರವು ವಿತರಣೆಯಲ್ಲಿ ವಿಳಂಬ ಸಾವಿರಾರು ಕುಟುಂಬಗಳನ್ನು ತೀವ್ರ ಆರ್ಥಿಕ ಮುಗ್ಗಟ್ಟಿಗೆ ತಳ್ಳುತ್ತಿದೆ ಎಂದು ಕೆ.ಶೈಬು ಹೇಳಿದರು. ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಕೆ.ಪಿ. ವಲ್ಸರಾಜ್ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ ಪ್ರಧಾನ ಭಾಷಣ ಮಾಡಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಬಾಬುರಾಜ್, ಒಬಿಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ದಯಾನಂದ ಮುಜುಂಗಾವು, ಜಿಲ್ಲಾ ಉಪಾಧ್ಯಕ್ಷ ಮುರಳೀಧರ ಮತ್ತೂರು, ಕಾರ್ಯದರ್ಶಿಗಳಾದ ದಿನೇಶ್ ಚೆರುಗೋಳಿ, ಶ್ರೀಧರ ಪೈವಳಿಕೆ, ಕುಂಞಿಕಣ್ಣನ್, ಅಶೋಕ್ ಚೆಟ್ಟಿಯಾರ್, ಮಧುಸೂದನ ಮತ್ತಿತರರು ಈ ಸಂದರ್ಭದಲ್ಲಿ ಮಾತನಾಡಿದರು.

ಸರಕಾರದಿಂದ ವಂಚನೆ ಆಗುತ್ತಿದೆ

ಮೀನುಗಾರರ ಹಿತ ಕಾಪಾಡುವ ನಿಟ್ಟಿನಲ್ಲಿ ರಾಜ್ಯ ಸರಕಾರವು ನಿರಾಸಕ್ತಿಯನ್ನು ತೊಲಗಿಸಬೇಕು. ಕೇಂದ್ರ ಸರಕಾರದ ಫಂಡ್ ಹಂಚಿಕೆಯಾಗಿದ್ದರೂ ಅದನ್ನು ವಿತರಿಸದೆ ಮೀನುಗಾರರಿಗೆ ಯುಡಿಎಫ್ ಸರಕಾರ ಮಾಡುತ್ತಿರುವ ವಂಚನೆಯ ವಿರುದ್ಧ ಜುಲೈ 6ರಂದು ಕಾಸರಗೋಡು ಜಿಲ್ಲಾ ಮೀನುಗಾರಿಕಾ ಕಚೇರಿ ಮುಂಭಾಗದಲ್ಲಿ ಪ್ರತಿಭಟನಾ ಧರಣಿಯನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

ಬ್ರಹ್ಮರಕೂಟ್ಲು ಟೋಲ್ ಪ್ಲಾಝಾದಲ್ಲಿ ಗೇಟ್ ತುಂಡರಿಸಿ ಪರಾರಿಯಾದ ವಾಹನ

ಬಂಟ್ವಾಳ: ಬ್ರಹ್ಮರಕೂಟ್ಲು ಟೋಲ್ ಪ್ಲಾಝಾದಲ್ಲಿ ವಾಹನ ಚಾಲಕನೋರ್ವ ಶುಲ್ಕ ಪಾವತಿಸದೆ ಗೇಟ್ ತುಂಡರಿಸಿ ಪರಾರಿಯಾದ ಬಗ್ಗೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಬಗ್ಗೆ ಟೋಲ್ ಗೇಟಿನಲ್ಲಿ ಸಹ ವ್ಯವಸ್ಥಾಪಕನಾಗಿ ಕಾರ್ಯನಿರ್ವಹಿಸುವ, ಸುರತ್ಕಲ್ ನಿವಾಸಿ ಯಶವಂತ ಕುಂದರ್ ಅವರು ಪೊಲೀಸರಿಗೆ ದೂರು ನೀಡಿದ್ದು, ಜೂನ್ 26 ರಂದು ಬ್ರಹ್ಮರಕೂಟ್ಲು ಟೋಲ್ ಗೇಟಿನ 5ನೇ ಬೂತಿನಲ್ಲಿ ವಾಹನವೊಂದರ ಚಾಲಕನಲ್ಲಿ ಶುಲ್ಕ ಪಾವತಿಸುವಂತೆ ತಿಳಿಸಿದರೂ ಪಾವತಿಸದೆ ಇದ್ದರೆ ಏನು ಮಾಡುತ್ತೀಯಾ ಮಾಡು ಎಂದು ಗದರಿಸಿ ಗೇಟ್ ತುಂಡು ಮಾಡಿ ಪರಾರಿಯಾಗಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸೊತ್ತಾಗಿರುವ ಟೋಲ್ ಪ್ಲಾಝಾಕ್ಕೆ ಹಾನಿ ಮಾಡಿ ಸುಮಾರು 5 ಸಾವಿರ ರೂಪಾಯಿ ನಷ್ಟ ಉಂಟು ಮಾಡಿರುವುದಾಗಿ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪಾರಾರಿಯಾದ ವಾಹನಕ್ಕಾಗಿ ಶೋಧ ಕಾರ್ಯ ನಡೆಯುತ್ತಿದೆ.

ಮಂಗಳೂರಿನಲ್ಲಿ ಅನಧಿಕೃತ ಬೀದಿ ಬದಿ ವ್ಯಾಪಾರ ವಿರುದ್ಧ ಕಾರ್ಯಾಚರಣೆ

ವ್ಯಾಪಾರಿಗಳ ಪ್ರತಿಭಟನೆ, ಬಂಧನ, ಬಿಡುಗಡೆ

ಮಂಗಳೂರು: ಮಂಗಳೂರು ನಗರಪಾಲಿಕೆಯ ಸೂಚನೆಯನ್ನು ಮೀರಿ ನಗರದ ರಸ್ತೆಗಳ ಇಕ್ಕೆಲಗಳಲ್ಲಿ ಅನಧಿಕೃತವಾಗಿ ವ್ಯಾಪಾರ ಮಾಡುತ್ತಿದ್ದವರ ತೆರವು ಕಾರ್ಯಾಚರಣೆ ಭಾನುವಾರ ನಡೆಯಿತು.

ಈ ವೇಳೆ ಬೀದಿ ವ್ಯಾಪಾರಸ್ಥರು ರಸ್ತೆಗಿಳಿದು ಪ್ರತಿಭಟನೆ ನಡೆದಿದ್ದು, ಪೊಲೀಸರು ಹಲವು ಮಂದಿಯನ್ನು ವಶಕ್ಕೆ ಪಡೆಯುವ ಮೂಲಕ ಪರಿಸ್ಥಿತಿಯನ್ನು ನಿಯಂತ್ರಿಸಿದರು.

ಮಂಗಳೂರಿನ ಕೇಂದ್ರ ಮೈದಾನ ರಸ್ತೆ, ಲೇಡಿ ಘೋಷನ್ ಆಸ್ಪತ್ರೆ ರಸ್ತೆ, ಪುರಭವನದ ಬಳಿ ವ್ಯಾಪಾರ ಮಾಡುವ ಬೀದಿ ವ್ಯಾಪಾರಿಗಳನ್ನು ನಗರಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಪಾಲಿಕೆ ಅಧಿಕಾರಿಗಳು ತೆರವು ಕಾರ್ಯಾಚರಣೆ ಆರಂಭಿಸುತ್ತಿದ್ದಂತೆ ಬೀದಿಬದಿ ವ್ಯಾಪಾರಿಗಳು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ಆರಂಭಿಸಿದರು. ಪುರಭವನದ ಬಳಿ ವ್ಯಾಪಾರ ಮಾಡುವ ಜಾಗಕ್ಕೆ ಬ್ಯಾರಿಕೇಡ್ ಹಾಕಿ ವ್ಯಾಪಾರ ಆರಂಭಿಸದಂತೆ ತಡೆಯಲಾಗಿತ್ತು. ಪಾಲಿಕೆಯ ಕ್ರಮವನ್ನು ವಿರೋಧಿಸಿ ದಾಗ ದ.ಕ ಬೀದಿಬದಿ ವ್ಯಾಪಾರಸ್ಥರ ಸಂಘದ ಪ್ರಧಾನ ಕಾರ್ಯದರ್ಶಿ ಸಂತೋಷ್ ಆರ್.ಎಸ್., ಮುಖಂಡರಾದ ಸಿಕಂದರ್ ಬೇಗ್ ಸಹಿತ ಬೀದಿಬದಿ ವ್ಯಾಪಾರಸ್ಥರನ್ನು ಪೊಲೀಸರು ವಶಕ್ಕೆ ಪಡೆದರು.

ನಗರಪಾಲಿಕೆ ಆಯುಕ್ತರು ಕಾನೂನು ಪ್ರಕಾರ ಕಾರ್ಯಾಚರಿಸಬೇಕೆ ಹೊರತು ಯಾರದೇ ಒತ್ತಡಕ್ಕೆ ಮಣಿದು ಕಾರ್ಯ ನಿರ್ವಹಿಸುತ್ತಿರುವುದು ಸರಿಯಲ್ಲ, ಬೀದಿ ವ್ಯಾಪಾರಿಗಳ ಬದುಕುವ ಹಕ್ಕನ್ನು ಕಸಿಯುವ ಅಧಿಕಾರ ಯಾರಿಗೂ ಇಲ್ಲ. ಬಡವರ ಮೇಲೆ ಬ್ರಹ್ಮಾಸ್ತ್ರ ಬಳಸುವುದು ನಗರಕ್ಕೆ ಶೋಭೆ ತರುವುದಿಲ್ಲ. ಬೀದಿಬದಿ ವ್ಯಾಪಾರದ ಕಾನೂನಿಗೆ ವಿರುದ್ಧವಾದ ಏಕಪಕ್ಷೀಯ ಧಾಳಿಯನ್ನು ಪಾಲಿಕೆ ನಿಲ್ಲಿಸಬೇಕೆಂದು ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘ (ಸಿಐಟಿಯು) ಗೌರವಧ್ಯಕ್ಷ ಬಿ.ಕೆ. ಇಮ್ತಿಯಾಜ್ ಒತ್ತಾಯಿಸಿದ್ದಾರೆ.

ಸಿಐಟಿಯು ಖಂಡನೆ

ನಗರ ಪಾಲಿಕೆ ನಡೆಸಿರುವ ಕಾನೂನು ಬಾಹಿರ ಧಾಳಿಯನ್ನು ಸಿಐಟಿಯು ದ.ಕ ಜಿಲ್ಲಾ ಸಮಿತಿ ಖಂಡಿಸಿದೆ. ಪಾಲಿಕೆಯಲ್ಲಿ ಪಟ್ಟಣ ವ್ಯಾಪಾರ ಸಮಿತಿಯಲ್ಲಿ ಆಗಬೇಕಾದ ತೀರ್ಮಾನವನ್ನು ಶಾಸಕರು ಮಾಡುತ್ತಿದ್ದಾರೆ. ಬಡ ಬೀದಿಬದಿ ವ್ಯಾಪಾರಿಗಳ ಮೇಲೆ ಇದೇ ರೀತಿಯ ದಾಳಿ ಮುಂದುವರಿದರೆ ಸರಣಿ ಹೋರಾಟ ನಡೆಸಲಿದ್ದೇವೆ ಎಂದು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಎಚ್ಚರಿಕೆ ನೀಡಿದ್ದಾರೆ.



ಬಂಧಿತರ ಬಿಡುಗಡೆ

ಕಾರ್ಯಾಚಾರಣೆ ವೇಳೆ ವಶಕ್ಕೆ ಪಡೆದ ಮುಖಂಡರು ಮತ್ತು ಬೀದಿಬದಿ ವ್ಯಾಪಾರಸ್ಥರನ್ನು ಬೀದಿಬದಿ ವ್ಯಾಪಾರಿಗಳ ಸಂಘದ ನಾಯಕರು ಮತ್ತು ಪೊಲೀಸರ ಸಮ್ಮುಖದಲ್ಲಿ ಸಂಧಾನದ ನಂತರ ಬಂಧಿತರನ್ನು ಬಿಡುಗಡೆ ಮಾಡಲಾಯಿತು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.